
ಕುಚೋದ್ಯದ ಕಥೆಗಳು



ಶ್ರೀನಿವಾಸ ಹಾವನೂರ



ಕುಚೋದ್ಯದ ಕಥೆಗಳು

ಶ್ರೀನಿವಾಸ ಹಾವನೂರ

ಪ್ರಕಾಶಕರು:

ಹೇಮಂತ ಸಾಹಿತ್ಯ

ನಂ. 972-ಸಿ, 4ನೇ 'ಇ' ವಿಭಾಗ, 10-ಎ ಮುಖ್ಯರಸ್ತೆ

ರಾಜಾಜಿನಗರ, ಬೆಂಗಳೂರು-560 010

ದೂರವಾಣಿ: 23354619

KUCHODYADA KATHEGALU — A Collection of short stories by Dr. Shrinivasa Havanur and published by Hemantha Sahitya, No. 972-C, IV 'E' Block, 10th 'A' Main Road, Rajajinagar, Bangalore-560 010.

ಮೊದಲನೆಯ ಮುದ್ರಣ : ಫೆಬ್ರವರಿ 1983
ಎರಡನೆಯ ಮುದ್ರಣ : 2010

ಬಳಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಪ್‌ಲಿಥೊ

ಡೆಮ್ಮಿ 1/8, ಪುಟಗಳು : 112

ಬೆಲೆ : ರೂ. **60-00**

ಅಕ್ಷರ ಜೋಡಣೆ:
ಪ್ರಿಯ ಗ್ರಾಫಿಕ್ಸ್
ನಾಗರಭಾವಿ, ಬೆಂಗಳೂರು-72

ಮುದ್ರಣ:
ಪೂರ್ಣಿಮಾ ಪ್ರಿಂಟರ್ಸ್
POORNIMA PRINTERS
ನಂ. 1/2, 7ನೇ ಅಡ್ಡ ರಸ್ತೆ, ಆಜಾದ್‌ನಗರ
ಚಾಮರಾಜಪೇಟೆ, ಬೆಂಗಳೂರು-560 018.
ಫೋನ್ : 080-3292 4462, ಮೊ : 9341931668

ಉಡುಗೊರೆ

ತುಂಟತನದ, ವಿನೋದೀ ಸ್ವಭಾವವನ್ನು
ಸಾಕಷ್ಟು ಮೈಗೂಡಿಸಿಕೊಂಡಿರುವ
ನನ್ನ ಮಗಳು **ನಿವೇದಿತಾ**
ತಮ್ಮನ ಮಗ **ಜಯರಾಜ**
ಇವರಿಗೆ

ಮುನ್ನುಡಿ

ಈ ಕೃತಿಯ ಕಿರುಪರಿಚಯದ ಮೊದಲು ಲೇಖಕರ ಅಭಿಮಾನಿ ವೃಂದ ಕೇಳಬಹುದಾದ ಸಹಜ ಪ್ರಶ್ನೆಗೆ ಸಮಾಧಾನವೀಯುವೆ. ಡಾ. ಶ್ರೀನಿವಾಸ ಹಾವನೂರರು ಗಂಭೀರ ನಿಲುಮೆಯ ಸಂಶೋಧಕರಲ್ಲದೆ ಅಪ್ರತಿಮ ವಿದ್ವಾಂಸರು. ಇವರು ಕುಚೋದ್ಯದ ಕಥೆಗಳನ್ನು ಹೇಗೆ ಬರೆದರು? ಈ ಪ್ರಶ್ನೆ ಸರಿಯೇ.

ವಾಸ್ತವವಾಗಿ ಅವರ ಬರವಣಿಗೆ ಆರಂಭವಾದುದೇ ಲಲಿತ ಸಾಹಿತ್ಯ ದೊಂದಿಗೆ. ತಾರುಣ್ಯದಲ್ಲಿ ಅವರು ಬರೆದ 'ಅವರು ಮತ್ತು ದೇವಕ್ಕ' (೧೯೪೪) ಮತ್ತು 'ಕಾಗೆಗೆ ಹೇಳಿದ ಕತೆ' (೧೯೫೫) ಎರಡೂ ಅವರ ಕಥನ ಕಲೆಗೆ ಕನ್ನಡಿ ಹಿಡಿಯುತ್ತವೆ. ಮುಂದೆ ಅವರು ಸಂಶೋಧನೆಯ ಮಾರ್ಗವನ್ನು ಅನುಸರಿಸಿದರೂ ಕಲೆಗಾರಿಕೆಯ ಹವ್ಯಾಸವನ್ನು ಬಿಡಲಿಲ್ಲ. ಆದರೆ ಈಗ ಅವರ ಗಮನ ವಿಶ್ವ ಸಾಹಿತ್ಯದ ವಿವಿಧ ಮುಖಗಳನ್ನು ಓದುಗರಿಗೆ ಪರಿಚಯ ಮಾಡುವತ್ತ ಹರಿಯಿತು. ಅಂತೆಯೇ ಅವರು ಇಂಗ್ಲಿಷ್, ರಶಿಯನ್, ಜರ್ಮನ್, ಚೀನಿ ಇತ್ಯಾದಿ ಸಾಹಿತ್ಯದ ಕಥಾನಕಗಳನ್ನು ಕನ್ನಡಕ್ಕೆ ರೂಪಾಂತರ ಮಾಡಿದರು. ಇವು ಕಸ್ತೂರಿ ಮತ್ತು ಇತರ ನಿಯತ ಕಾಲಿಕಗಳಲ್ಲಿ ಪ್ರಕಟವಾದವು.

ಪ್ರಸ್ತುತ ಸಂಕಲನದಲ್ಲಿ ಇಂಥ ಏಳು ಕಥೆಗಳನ್ನು ನೋಡಬಹುದಾಗಿದೆ. ಇವುಗಳ ಮೂಲ ವಿದೇಶಿಯಾದರೂ ನಿರೂಪಣೆ ಅಪ್ಪಟ ಸ್ವದೇಶಿಯಾಗಿದೆ. ಲೇಖಕರೇ ಉಲ್ಲೇಖಿಸಿರದಿದ್ದಲ್ಲಿ ಇವು ರೂಪಾಂತರದ ಕತೆಗಳೆಂದು ಅನಿಸುವ ಹಾಗೆಯೇ ಇಲ್ಲ.

ಇಲ್ಲಿಯ ಹಲವು ಕತೆಗಳಲ್ಲಿ ಕಾಣುವ ಸಮಾನ ಗುಣಧರ್ಮವೆಂದರೆ ಅವುಗಳಲ್ಲಿಯ ವ್ಯಂಗ್ಯ ಅಥವಾ ಕುಚೋದ್ಯ. ಇದು ಆಯಾ ಪಾತ್ರದ ಸ್ವಭಾವದಿಂದಲೋ, ಸನ್ನಿವೇಶದಿಂದಲೋ ಮೂಡಿ ಬಂದುದು. ಮನಸ್ಸೆಂಬುದೇ ಮಾಯೆ. ಅದನ್ನು ಬಲ್ಲವರಾರು ? ಹಾಗೆಯೇ ವಿಧಿಯೆಂಬುದೂ ಮಾಯೆ. ಅದನ್ನು ಕಂಡವರಾರು ? ಅಂತೂ ಇವೆರಡರ ವ್ಯಂಗ್ಯ ನಾಟಕವನ್ನು ಈ ಕೃತಿಯಲ್ಲಿ ನೋಡಬಹುದು.

ಎಲ್ಲ ಬರವಣಿಗೆಯ ವಿವೇಚನೆಯನ್ನು ಈ ಕಿರು ಪರಿಚಯದಲ್ಲಿ ಮಾಡಲಾಗದ ಕಾರಣದಿಂದ ಇಲ್ಲಿ ಎರಡೇ ಕತೆಗಳನ್ನು ಉಲ್ಲೇಖಿಸುವೆ. ಅವೆಂದರೆ 'ಪ್ರತಿಬಿಂಬ' ಮತ್ತು 'ನಿಃಸಂತಾನ'.

ವಿಶೇಷತಃ 'ಪ್ರತಿಬಿಂಬ' ಗಹನವಾದ ತಾತ್ವಿಕ ವಸ್ತುವನ್ನು ಹೊಂದಿದೆ. ಗಂಡೇ ಆಗಲಿ, ಹೆಣ್ಣೇ ಆಗಲಿ ತನ್ನ ಸಹಜ ಕಾಮನೆಗಳನ್ನು ದಮನ ಮಾಡುವದು ವ್ಯರ್ಥ. ಅದು ನಿಸರ್ಗಕ್ಕೆ ಹೊರತಾದುದು ಎಂಬ ಭೂಮಿಕೆಯನ್ನು ಈ ಕಥಾವಸ್ತು ಮೊದಲು ಮಾಡಿಕೊಂಡು ಕೊನೆಗೆ ಎಲ್ಲವೂ ಕ್ಷಣ ಭಂಗುರವೆಂಬ ಸತ್ಯದಲ್ಲಿ ಪರ್ಯವಸಾನವಾಗುತ್ತದೆ. ಈ ಕಥೆಯ ಪೂರ್ವ ನಿರೂಪಣೆ ಸ್ವಲ್ಪ ದೀರ್ಘವೆನಿಸಿದರೂ ಕೊನೆಯವರೆಗೆ ಓದಿಸಿಕೊಂಡು ಹೋಗುತ್ತದೆ.

'ನಿಃಸಂತಾನ' ಲೇಖಕರದೇ ಸ್ವಂತ ಕೃತಿ. ಇದು ಉಳಿದೆಲ್ಲ ಕತೆಗಳಿಗೆ ಅಪವಾದವೆನಿಸುವಂತಿದೆ. ಇಲ್ಲಿಯ ಭಾವನಾತ್ಮಕ ನಿರೂಪಣೆಯನ್ನು ನೋಡಿದರೆ ಇದು ಹಿಂದೆ ಲೇಖಕರು ಬರೆದ 'ಕಾಗೆಗೆ ಹೇಳಿದ ಕತೆ'ಯ ಸಾಲಿಗೆ ಸೇರುವಂತಹದು. ಆದರೆ ಆ ಕತೆಗಳಲ್ಲಿ ಕಾಣುವ ದುರಂತ ಇಲ್ಲಿಲ್ಲ. ಯಾವ ಉಪದೇಶವನ್ನೂ ಮಾಡದೆ ಈ ಕತೆ ಒಂದು ಉದಾತ್ತ ಸತ್ಯವನ್ನು ಸಾರುತ್ತದೆ. ಜೀವನದಲ್ಲಿ ಎಲ್ಲಕ್ಕಿಂತ ಮಿಗಿಲಾದ ವಸ್ತು ಒಂದೇ. ಅದು ಅಂತಃಕರಣ.

ಹಿಂದೆ ಡಾ. ಶ್ರೀನಿವಾಸ ಹಾವನೂರರ ವಿದ್ವತ್ಪೂರ್ಣ ಬರವಣಿಗೆಯನ್ನು ಮೆಚ್ಚಿದ ಅಭಿಮಾನಿಗಳೂ, ಇಂದಿನ ಪೀಳಿಗೆಯ ಹೊಸ ಓದುಗರೂ ಈ ಸಂಕಲನವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವರೆಂದು ಆಶಿಸುವೆ.

ಈ ಕೃತಿಯ ದ್ವಿತೀಯ ಆವೃತ್ತಿಯ ಪ್ರಕಟನೆಗಾಗಿ ಅವಿರತವಾಗಿ ಶ್ರಮಿಸಿದ ಮಿತ್ರ ಶ್ರೀ ವಿ. ಕೃಷ್ಣ ಮತ್ತು ಆಸ್ಥೆಯಿಂದ ಅದನ್ನು ಹೊರತಂದ ಹೇಮಂತ ಸಾಹಿತ್ಯದ ಪ್ರಕಾಶಕರಿಗೆ ನಾನು ಋಣಿಯಾಗಿದ್ದೇನೆ.

—ಪ್ರಾ. ನಾಗೇಶ ಹಾವನೂರ, ಬೆಂಗಳೂರು

ಪರಿವಿಡಿ

ಸ್ಟೆಫಾನ್ ಝ್ವೈಗ್, ಜಾನ್ ಗಾಲ್ಸ್‌ವರ್ದಿ, ಸೋಮರಸೆಟ್ ಮಾಮ್ ಮುಂತಾದವರಿಂದ; ಅದರಂತೆ ಚೀನಿ, ರಶಿಯನ್, ಜರ್ಮನ್ ಭಾಷೆಗಳಿಂದ ಆಯ್ದ ಕುಚೋದ್ಯ ಪ್ರಧಾನ ಕತೆಗಳ ಆಧಾರ.

ಕುಚೋದ್ಯದ ಕಥೆಗಳು

ಪ್ರತಿಬಿಂಬ

ಸಾಮ್ರಾಟ್ ಅಶೋಕನು ಪಟ್ಟವೇರಿದ ಆರಂಭದ ವರ್ಷಗಳವು. ಅವನ ಬಳಿಯಲ್ಲಿದ್ದ, ಹೇಮಸಿಂಹನೆಂಬ ಯೋಧನು ತನ್ನ ದೊರೆಯ ಎದುರಾಳಿಗಳನ್ನು ಯುದ್ಧರಂಗದಲ್ಲಿ ಸೋಲಿಸಿ, ಅವನ ರಾಜ್ಯಪಥವನ್ನು ನಿರಾತಂಕಗೊಳಿಸುವ ಕಾರ್ಯದಲ್ಲಿ ನೆರವಾಗಿದ್ದನು.

ತತ್ಕಾಲಕ್ಕೆ ಯುದ್ಧದ ಸಂಭವವಿಲ್ಲವೆಂದು ಹೇಮಸಿಂಹನು ಸ್ವಗ್ರಾಮಕ್ಕೆ ಹಿಂತಿರುಗಿದನು. ಊರ ಹೊರಗಿನ ಎತ್ತರದ ಪ್ರದೇಶದಲ್ಲಿ ಒಂದು ಸೊಗಸಾದ ಪ್ರಾಸಾದವನ್ನು ಕಟ್ಟಿಸಿಕೊಂಡು ವಾಸವಾಗಿದ್ದನು.

ಆದರೆ ಅವನ ಯೌವನಕ್ಕೂ ಶ್ರೀಗೂ ತಕ್ಕವಳಾದ ಓರ್ವ ಕಾಂತೆಯು ಅವನಿಗಿನ್ನೂ ಲಭಿಸಿರಲಿಲ್ಲ. ಒಂದು ದಿನ, ಊರೊಳಗಿನ ಪೇಟೆಯ ಮಾರ್ಗವಾಗಿ ಸಾಗಿದ್ದಾಗ, ಒಂದು ಚಿಕ್ಕ ಜಿನಸಿನ ಅಂಗಡಿಯಲ್ಲಿ ತಕ್ಕಡಿಯನ್ನು ತೂಗುತ್ತಿದ್ದ ಓರ್ವ ಯುವತಿಯನ್ನು ಕಂಡನು. ಅದೇನೂ ಅವಳ ಇಡೀ ದಿನದ ಕಾಯಕವಲ್ಲ. ಅವಳ ಅಜ್ಜನು ಒಳಗೆ ಊಟ ಮಾಡುತ್ತಿದ್ದುದರಿಂದ, ಆ ಗಳಿಗೆಗೆ ಆಕೆ ಅಂಗಡಿಯ ಮಳಿಗೆಯಲ್ಲಿ ಕುಳಿತಿದ್ದಳು.

ಅವಳ ರೂಪವು ಹೇಮಸಿಂಹನ ಕಣ್ಣನ್ನು ಕೋರೈಸಿದವು. ಸೂಜಿಗಲ್ಲಿನಂತೆ ಅವನ ಮನವನ್ನು ಹಿಡಿದೆಳೆಯಿತು. ಅವಳಿಗಿಂತ ರೂಪವತಿಯರು ತನ್ನ ಊರಲ್ಲಿ ಇದ್ದಾರೆಯೆ? ಇಲ್ಲವೆಂದೇ ಹೇಮಸಿಂಹನಿಗೆ ತೋರಿತು ಅನ್ಯತ್ರ? ಊಂಹು! ಅವಳೇ ಹೈಮವತಿ.

ಹೇಮಸಿಂಹನು ತಡವಿಲ್ಲದೆಯೇ ಕನ್ಯಾರ್ಥಿಯಾಗಿ ಅವಳ ಅಜ್ಜನ ಬಳಿಗೆ ಹೋದನು. ತಂದೆ ತೀರಿಕೊಂಡಿದ್ದ, ಆ ಹೈಮವತಿಗೆ ಆ ಮುದುಕನೇ ಸರ್ವಸ್ವವಾಗಿದ್ದ. ಆದರೆ ಇವರು ವೃತ್ತಿಯಲ್ಲಿ ವೈಶ್ಯರು, ಬಡವರು. ಕನ್ಯಾರ್ಥಿಯಾಗಿ ಬಂದವನೋ ಕ್ಷತ್ರಿಯ; ಮತ್ತು ರಾಜಾಶ್ರಯಿ. ಆದರೂ ಕೆಲವೇ ದಿನಗಳಲ್ಲಿ ಮದುವೆ ಏರ್ಪಟ್ಟಿತು. ವೈಭವದಿಂದ ಕೂಡಿದ ಹೇಮಸಿಂಹನ ನಿವಾಸವನ್ನು ಆಕೆ ಸೇರಿದಳು.

ಮಳೆಗಾಲದ ದಿನಗಳವು. ಪರಸ್ಪರ ಪ್ರೇಮಪಾಶದಲ್ಲಿ ಬಂಧಿತರಾದ ಅವರಿಗೆ ಕಾಲದ ಪರಿವೆಯೇ ಉಳಿಯಲಿಲ್ಲ. ತಮ್ಮ ನಿವಾಸವನ್ನು ದಾಟಿ, ಹೊರಗೆ

ಜಗತ್ತೆಂಬುದು ಇದೆ, ಜನರಿದ್ದಾರೆ; ರಾಜನಿದ್ದಾನೆ; ಬದುಕಿನಲ್ಲಿ ಏರುಪೇರು ಗಳಿರುತ್ತವೆ—ಎಂಬ ಯಾವ ಮಾತೂ ಅವರ ಗಮನದಲ್ಲಿ ಉಳಿದಿರಲಿಲ್ಲ.

ಪ್ರಪಂಚದಲ್ಲಿ ಯಾವುದು ತಾನೇ ಸ್ಥಿರವಾದುದು? ಮಳೆಯ ಸೊಂಪಿನ ಕಾಲವು ಮುಗಿದು, ಹೊಲದಲ್ಲಿ ಹಸಿರು ಪೈರು ಕಾಣಿಸಿಕೊಂಡಿತು. ನಿಸರ್ಗ ದಲ್ಲಿಯೂ, ಜನಮನದಲ್ಲಿಯೂ ಚೇತನಾರಸವು ಹರಿದಾಡಿತು. ನವರಾತ್ರಿಯು ಸಮಿಾಪಿಸಿದ್ದಾಗ ಒಂದು ದಿನ ರಾಜದೂತರು ಬಂದು, ಹೇಮಸಿಂಹನ ಪ್ರಾಸಾದದ ಬಾಗಿಲನ್ನು ಬಡಿದರು.

ವಿಜಯದಶಮಿಯಂದು ದಂಡಯಾತ್ರೆಗೆ ಹೊರಡಬೇಕೆನ್ನುವ ರಾಜಾಜ್ಞೆಗೆ ಅವನು ತಲೆಬಾಗಬೇಕಾಯಿತು. ಸ್ವತಃ ಅವನಿಗೆ ಯುದ್ಧರಂಗವೆಂದರೆ, ಎಷ್ಟೊಂದು ಆಸಕ್ತಿ! ತನ್ನ ಪ್ರಿಯತಮೆಯಲ್ಲಿ ಅವನು ಅದೆಷ್ಟೇ ಲೋಲುಪನಾಗಿದ್ದರೂ, ಅವನಲ್ಲಿದ್ದ ಶೌರ್ಯ, ಸಾಹಸ ಪ್ರವೃತ್ತಿಗಳು, ಅವನನ್ನು ಅವಳ ಅಪ್ಪುಗೆಯಿಂದ ಅಗಲಿಸಿ, ಯುದ್ಧ ರಂಗಕ್ಕೆ ಕರೆದೊಯ್ಯಲು ಹಾತೊರೆದುವು. ಅವನ ವಿಯೋಗವನ್ನು ಸಹಿಸಲಾರದೆ ಗೋಗರೆದು, ತಾನೂ ಜೊತೆಗೂಡಿ ಬರುವೆನೆನ್ನುವ ಆ ಬಾಲೆಯನ್ನು ಸಾಂತ್ವನ ಗೊಳಿಸಿ, ಆ ವೀರನು ದಂಡಯಾತ್ರೆಗೆ ಹೊರಟನು.

ತನ್ನ ಜನರನ್ನು ಕೂಡ್ರಿಸಿಕೊಂಡು, ಅಶ್ವಗಳನ್ನೂ, ಶಸ್ತ್ರಾಸ್ತ್ರಗಳನ್ನೂ, ಇತರ ಸಾಮಗ್ರಿಗಳನ್ನೂ ಅಣಿಗೊಳಿಸಿಕೊಂಡು ರಾಜಧಾನಿಯನ್ನು ಸೇರಿದನು. ಅರಸನ ಆಣತಿಯಂತೆ ಪಶ್ಚಿಮ ದಿಕ್ಕಿನಲ್ಲಿ ಮಲೆತು ನಿಂತಿದ್ದ ವೈರಿಗಳ ಮೇಲೆ ಸಾಗಿಹೋದನು. ಇಮ್ಮಡಿ ಉತ್ಸಾಹದಿಂದ ಅವನು ಮಿಂಚಿನಂತೆ ಎರಗಿದ್ದಾಗ, ವಿಜಯಶ್ರೀ ಇವನಿಗಾಗಿ ಮಾಲೆಯನ್ನು ಹಿಡಿದು ನಿಂತೇ ಇದ್ದಳು. ವೈರಿಗಳನ್ನು ಮುಂದಕ್ಕೂ ಅಟ್ಟಿಕೊಂಡು ಹೋಗಿ, ಅವರ ನಗರಗಳಲ್ಲಿಯ ಅಪಾರ ಸಂಪತ್ತನ್ನು ವಶಪಡಿಸಿಕೊಂಡು, ಸ್ವದೇಶಾಭಿಮುಖನಾದನು.

ಹೇಮಸಿಂಹನ ಈ ಅಭೂತಪೂರ್ವ ವಿಜಯದಿಂದ ಸಂತುಷ್ಟನಾದ ಅಶೋಕನು, ಅವನು ಗೆದ್ದು ತಂದಿದ್ದ ಧನ-ಕನಕದಲ್ಲಿ ಅರ್ಧ ಭಾಗವನ್ನು ಬಿಟ್ಟುಕೊಟ್ಟುದಲ್ಲದೆ, ಹೊಸದಾಗಿ ಗೆದ್ದುಕೊಂಡಿದ್ದ ರಾಜ್ಯಕ್ಕೆ ಅವನನ್ನು ಸಾಮಂತ ಅಧಿಪತಿಯನ್ನಾಗಿ ಮಾಡಿದ್ದ ಅಜ್ಞಾಪತ್ರವನ್ನೂ ಆ ಕೂಡಲೇ ಹೇಮಸಿಂಹನ ಶಿಬಿರಕ್ಕೆ ಕಳುಹಿಸಿಕೊಟ್ಟನು.

ನಡುದಾರಿಯಲ್ಲಿಯೇ ಈ ವಿಶೇಷ ಸನ್ಮಾನದ ವಾರ್ತೆ ತಿಳಿದು ಬಂದಾಗ, ಹೇಮಸಿಂಹನಿಗೆ ಆನಂದವಾಗಿರಬೇಕಲ್ಲವೆ? ಸಾಮಾನ್ಯ ಸೈನಿಕನ ಸ್ಥಾನದಿಂದ ಸಾಮಂತಾಧಿಪತಿಯ ಅಧಿಕಾರವನ್ನು—ಅದೂ ಇಷ್ಟು ತರುಣವಯದಲ್ಲಿ ಪಡೆದವರು ಅದೆಷ್ಟು ಜನ? ಮುಂದಿನ ಜೀವನವನ್ನು ಸುಖವಾಗಿ ಸಮೃದ್ಧಿಯುತ ವಾಗಿ ಕಳೆಯಬಹುದಿತ್ತಲ್ಲವೆ?

ಊಂಹು ! ಹೇಮಸಿಂಹನ ಆತ್ಮ ಪ್ರೌಢಿಮೆಯು ಅವನ ನಿಜ ಯೋಗ್ಯತೆಯ ಸೀಮೆಯನ್ನು ದಾಟಿ ಮುಂದುವರಿಯಿತು. ಅಶೋಕ ದೊರೆಗೆ ದೊರೆತ ಈ ವಿಜಯ ತನ್ನಿಂದ, ತನ್ನ ಸಹಾಯದಿಂದಲೇ ಅಲ್ಲವೆ ? ಹೆಸರು ಮಾತ್ರ ಅವನದು. ಹಾಗೆ ನೋಡಿದರೆ ನಾನು ಯಾವ ದೃಷ್ಟಿಯಲ್ಲಿ ಕಡಿಮೆ ? ಇಲ್ಲ, ನನ್ನ ಶೌರ್ಯ ಸಾಹಸಗಳಿಗೆ ಇದಕ್ಕೂ ಹೆಚ್ಚಿನ ಪ್ರತಿಫಲ ದೊರೆಯಬೇಕಿತ್ತು. ಆ ಪ್ರತಿಫಲವೆಂದರೆ ರಾಜ ಮುಕುಟವೇ ಸೈ...!

ಅವನ ಮಹಾತ್ವಾಕಾಂಕ್ಷೆ ಅಲ್ಲಿಯವರೆಗೂ ಮೇಲೇರಿತು.

ಈ ವಿಚಾರದಿಂದ ಹೇಮಸಿಂಹನು ನಡುದಾರಿಯಲ್ಲಿಯೆ ಹೆಚ್ಚು ದಿನ ತಡೆದನು. ಒಳಗೊಳಗೆಯೆ ತನ್ನ ಸೈನಿಕರನ್ನು ಬಂಡೇಳುವುದಕ್ಕೆ ಅಣಿಗೊಳಿಸಿದನು. ಹೊಸದಾಗಿ ಸೈನ್ಯ ಮತ್ತು ಶಸ್ತ್ರಗಳ ಸಂಗ್ರಹಕ್ಕೆ ತೊಡಗಿದನು.

ಇನ್ನೇನು ರಾಜಧಾನಿಯತ್ತ ರಭಸದಿಂದ ಸಾಗಬೇಕೆನ್ನುವಾಗ ರಾಜ ಸೈನ್ಯವೇ ಇವನ ಮೇಲೆ ಏರಿ ಬರಬೇಕೆ ! ಹೇಮಸಿಂಹನ ಗುಪ್ತ ಸನ್ನಾಹವನ್ನು ಆದಾರೋ ರಾಜಧಾನಿಗೆ ಈ ಮುನ್ನವೇ ಮುಟ್ಟಿಸಿದ್ದರು. ಹೇಮಸಿಂಹನಿಗೆ ಅಲ್ಲಿಂದ ಕಾಲ್ದೆಗೆಯದೇ ಅನ್ಯಮಾರ್ಗ ಉಳಿಯಲಿಲ್ಲ. ಹೀಗೆ ದೇಶಬಾಹಿರನಾಗಿ ಅಲೆಯುತ್ತಿದ್ದಾಗ ರಾಜನಿಷ್ಠ ಜನರ ಕೈಯಲ್ಲಿ ಸಿಕ್ಕು ಹತನಾದನು. ಅವನ ದೇಹವನ್ನು ಅಲ್ಲಿಯೇ ಬಿಟ್ಟು, ಆ ಜನರು ಅವನ ಸಾವಿನ ಕುರುಹನ್ನಷ್ಟೇ ತೆಗೆದುಕೊಂಡು, ರಾಜನ ಬಳಿಗೆ ಹಿಂತಿರುಗಿದರು.

ಇತ್ತ ಹದ್ದು ನರಿಗಳು ಅವನ ದೇಹವನ್ನು ಕಿತ್ತಾಡಿಕೊಂಡು ತಿನ್ನುತ್ತಿದ್ದಾಗ, ಅತ್ತ ಇದಾವುದರ ಸುಳಿವು ಕೂಡ ತಿಳಿಯದೇ ಇದ್ದ ಅವನ ಪ್ರೇಯಸಿಯು ಪ್ರಸವವೇದನೆ ಯಿಂದ ಬಳಲುತ್ತಿದ್ದಳು. ಆಗ ಅವಳು ಹೆತ್ತುದು ಅವಳಿ ಜವಳಿಯಾದ ಹೆಣ್ಣು ಶಿಶುಗಳನ್ನು. ಊರವರನೇಕರು ಸಂಭ್ರಮದಿಂದ ನೆರೆದರು. ಆ ಶಿಶುಗಳ ತಂದೆ ಅಲ್ಲಿ ಪ್ರತ್ಯಕ್ಷ ಇರದಿದ್ದರೇನಾಯಿತು, ಅವನ ಸಾವು ಆ ಹೊಸ ಜೀವಿಗಳ ಜನ್ಮ ಕಾಲಕ್ಕೆ ಯಾವ ಕುಂದನ್ನೂ ತಂದೊಡ್ಡಲಿಲ್ಲ. ಆ ಮಕ್ಕಳಿಗೆ ಹೀರಾ ಮತ್ತು ತಾರಾ ಎಂದು ನಾಮಕರಣ ಮಾಡಲಾಯಿತು.

ಆದರೆ ಹೇಮಸಿಂಹನ ವಂಚನೆ ಹಾಗೂ ಅವನ ಭೀಕರ ಅಂತ್ಯದ ವಾರ್ತೆ ಬರಲು ತಡೆ ಹಿಡಿಯಲಿಲ್ಲ. ಹೈಮವತಿಗಂತೂ ಅದು ಬರಸಿಡಿಲಾಯಿತು. ಆ ಘೋರ ದುಃಖದ ಮೇಲೆ ಬರೆ ಎಳೆವಂತೆ ಕೆಲವೇ ದಿನಗಳಲ್ಲಿ ರಾಜದೂತರು ಬಂದು ಅವನ ಪ್ರಾಸಾದವನ್ನೂ ವಶಪಡಿಸಿಕೊಂಡು, ಅಲ್ಲಿದ್ದ ಧನ, ಕನಕ ಮತ್ತು ಇತರ ಬೆಲೆಯುಳ್ಳ ವಸ್ತುಗಳನ್ನು ರಾಜಭಂಡಾರಕ್ಕೆ ಸೇರಿಸಿದರು.

ಹೈಮವತಿಯು ತನ್ನ ಎಳೆಯ ಶಿಶುಗಳನ್ನು ಕಟ್ಟಿಕೊಂಡು ಅಲ್ಲಿಗೆ ತನ್ನ ಕ್ಷಣಿಕಾಲದ ಸುಖದ ದಿನಗಳ ಋಣ ತೀರಿತೆಂದು ಪರಿಭಾವಿಸಿ, ತನ್ನ ಮೊದಲಿನ ಮನೆಗೇ ಬಂದಳು. ಆ ವೇಳೆಗೆ ಅವಳ ಅಜ್ಜನೂ ಗತಿಸಿದ್ದನು. ಗಂಡಸಿಲ್ಲದ ತನ್ನದೆನ್ನುವ ಜೀವನಾಧಾರವಿಲ್ಲದ ಆಕೆ ಆ ಹಳೆಯ ಅಂಗಡಿಯನ್ನು ನಡೆಸಿಕೊಂಡು ಬಂದಳು.

ಬೆಳಗಿನಿಂದ ಕತ್ತಲಾಗುವವರೆಗೆ ಆಕೆ ಕಟ್ಟೆಗೆಯ ಒಂದು ಮುರುಕು ಆಸನದ ಮೇಲೆ ಕುಳಿತು, ಕೆಲವೇ ತಾಮ್ರದ ನಾಣ್ಯಗಳಿಗಾಗಿ ಬಾಯ್ದೆರೆದು ಕಾಯುವ ಅವಳ ಬದುಕು ಯಾರಿಗೂ ಮರುಕವನ್ನು ಹುಟ್ಟಿಸುವಂಥದಾಗಿತ್ತು. ಅವಳ ಮುಖದ ಚೆಲ್ವಿಕೆಯು ಬಲು ಬೇಗ ಕರಗಿತು. ಅವಳ ಸುಂದರವಾದ ಕಣ್ಣುಗಳು ಒಳಸೇರಿದವು. ಗಲ್ಲಗಳು ಕಾಂತಿಹೀನವಾದುವು. ಎಣ್ಣೆಯನ್ನು ಕಾಣದೇ, ಚಿಂತೆಯಿಂದ ಮಾತ್ರ ಪೋಷಿಸಲ್ಪಟ್ಟ ಅವಳ ತಲೆಗೂದಲು ನರೆಯತೊಡಗಿತು.

ಅವಳ ಜೀವಕ್ಕೆ ಚೈತನ್ಯವನ್ನು ತಂದು ಕೊಡುತ್ತಿದ್ದ ಒಂದೇ ಒಂದು ಅಂಶವೆಂದರೆ, ಆ ಎಳೆಯ ಮುಖಗಳು. ಎಷ್ಟೊಂದು ಮುದ್ದಾದ ಮಕ್ಕಳು ! ತಮ್ಮ ತಾಯಿಯ ಚೆಲ್ವಿಕೆಯನ್ನು ಧಾರಣಮಾಡಿದ್ದ ಅವೆರಡೂ ಶಿಶುಗಳು ತಮ್ಮ ಪರಿಸರದ ಯಾವ ಚಿಂತೆಯೂ ಇಲ್ಲದೆ ನಗುತ್ತ, ಕಲೆಯುತ್ತ ಬೆಳೆಯತೊಡಗಿದವು.

ಮೋಜೆಂದರೆ, ನೋಡುವುದಕ್ಕೆ ಅವೆರಡೂ ಅವಳಿ ಜವಳಿ ಮಕ್ಕಳು ಒಂದೇ ಆಗಿ ಕಾಣುತ್ತಿದ್ದುವು. ಅವರಲ್ಲಿ ರೂಪ ಭೇದವೇ ಇರಲಿಲ್ಲ. ಒಬ್ಬಳು ಇನ್ನೊಬ್ಬಳ ಪ್ರತಿಬಿಂಬದಂತೆಯೇ ಕಾಣುತ್ತಿದ್ದಳು. ಹೊರಗಿನವರು ಅವರಿಬ್ಬರನ್ನೂ ಪ್ರತ್ಯೇಕವಾಗಿ ಗುರುತಿಸವುದಂತಿರಲಿ; ಸ್ವತಃ ತಾಯಿಗೇ ಹೀರಾ ಯಾರು, ತಾರಾ ಯಾರು ಎಂದು ನಿಶ್ಚಿತವಾಗಿ ಹೇಳುವುದು ಸಾಧ್ಯವಿರಲಿಲ್ಲ. ಯಾವ ಮಗುವಿಗೆ ಮೊಲೆಯೂಡಿಸಿದ ಳೆಂದು ಹೇಗೆ ತಿಳಿಯಬೇಕು ? ಆದ್ದರಿಂದ ಆಕೆಯು ಹೀರಾಳ ರಟ್ಟೆಗೆ ಒಂದು ಅರಿವೆಯ ತುಂಡನ್ನು ಕಟ್ಟಿ, ಆ ಮೂಲಕ ಇನ್ನೊಂದು ಮಗುವಿನಿಂದ ಬೇರ್ಪಡಿಸಿ ಕೊಂಡಿದ್ದಳು. ಅವುಗಳ ದನಿಯ ಮೇಲಿಂದಲೂ ಅವರಿಬ್ಬರನ್ನು ಪ್ರತ್ಯೇಕಿಸುವುದು ಶಕ್ಯವಿದ್ದಿಲ್ಲ, ಅಷ್ಟರ ಮಟ್ಟಿಗೆ ಸಾಮ್ಯ !

ಆ ಮಕ್ಕಳು ತಾಯಿಯ ಸೌಂದರ್ಯವನ್ನು ಪಡೆದಿದ್ದುದರ ಜೊತೆಗೆ ತಮ್ಮ ತಂದೆಯ ಮಹತ್ವಾಕಾಂಕ್ಷೆಯನ್ನೂ ಈರ್ಷಾಮೂಲವಾದ ಸಾಹಸವೃತ್ತಿಯನ್ನೂ ಹೊಂದಿದ್ದವು! ತಮ್ಮ ಪರಿಸರದಲ್ಲಿ ಇತರರಿಗಿಂತ ತಾವು ಮುಂದುವರಿದಿರಬೇಕೆಂಬ ಆಕ್ಷಾಂಕ್ಷೆಯ ಜೊತೆಗೆ, ತಮ್ಮಲ್ಲಿಯೆ ಇನ್ನೊಬ್ಬಳನ್ನು ಹೇಗೆ ಹಿಮ್ಮೆಟ್ಟಿಸಬೇಕೆಂಬ ಯೋಚನೆಯಲ್ಲಿ ಅವರು ಸದಾ ತತ್ಪರರಾಗಿದ್ದರು. ಸಣ್ಣವರಿದ್ದಾಗ, ಮಕ್ಕಳಾಟದಲ್ಲಿ ತೊಡಗಿದ್ದಾಗ ಕೂಡ, ತುರುಸಿನ ಈರ್ಷೆಗೆ ಬಿದ್ದು ಒಬ್ಬರನ್ನು ಇನ್ನೊಬ್ಬರು ಸೋಲಿಸುವ ಛಲದಿಂದಲೇ ಆಟವಾಡುತ್ತಿದ್ದರು.

ಸೌಮ್ಯಸ್ವಭಾವದ ಹೈಮವತಿಯು ಮಾತ್ರ ಇದರಿಂದ ದಿನವಿಡೀ ಪರಿತಪಿಸು ವಂತಾಯ್ತು. ಮಕ್ಕಳಿಗೆ ಏನಾದರೂ ಮಾಡಿಮುಟ್ಟುವಲ್ಲಿ ಒಬ್ಬಳಿಗೆ ಹೆಚ್ಚಾದರೆ, ಇನ್ನೊಬ್ಬಳು ನೆಲದ ಮೇಲೆ ಹೊರಳಾಡುತ್ತ, ಆಕ್ರೋಶಗೈಯತೊಡಗಿದಳೆಂದರೆ ಅವಳನ್ನು ರಮಿಸುವಲ್ಲಿ ಹೈಮವತಿಯು ತಾನೇ ಅತ್ತು ನಿರ್ವಿಣ್ಣಳಾಗುತ್ತಿದ್ದಳು. ಆಕೆಯು ಒಬ್ಬಳಿಗೆ ಒಂದು ಮಮತೆಯ ಮಾತನ್ನಾಡಿದರೆ ಅಥವಾ ವಾತ್ಸಲ್ಯದಿಂದ ನಡೆದುಕೊಂಡರೆ ಅಷ್ಟೆ ಸಾಕು. ಇನ್ನೊಬ್ಬಳು ತಾಯಿಯನ್ನು ಚೆನ್ನಾಗಿ ಛೇಡಿಸುತ್ತಿದ್ದಳು.

ಅವರಿಬ್ಬರನ್ನೂ ಪರಸ್ಪರ ವಿಷಯದಲ್ಲಿ ಸಾಂತ್ವನಗೊಳಿಸಬೇಕು ಎಂದು ಆಕೆಯು ಬೇಕಾದಷ್ಟು ತಿಳಿ ಹೇಳಿದಳು. ರಮಿಸಿದಳು. ದೈನ್ಯದಿಂದ ಬೇಡಿಕೊಂಡಳು. ಆದರೆ, ಜನ್ಮಜಾತವಾಗಿ ಬಂದ ದುರ್ಗುಣವೆಂದು ಆ ಪ್ರಯತ್ನವನ್ನು ಹೈಮವತಿಯು ಬಿಟ್ಟು ಬಿಟ್ಟಳು.

ಹೀಗೆ ಮಾತ್ಸರ್ಯ ವೃತ್ತಿಯ ಬಿಂಬ ಪ್ರತಿಬಿಂಬಗಳಾಗಿ ಆ ಸೋದರಿಯರು ಬೆಳೆಯುತ್ತಿದ್ದರೂ ಅವರಲ್ಲಿ ಒಂದು ಮೆಚ್ಚತಕ್ಕ ಗುಣವಿದ್ದಿತು. ಅದೆಂದರೆ ಅವರ ನಿಶಿತವಾದ ಬುದ್ಧಿಮತ್ತೆ. ಅವರು ಉತ್ತಮ ದೇಹಪ್ರಕೃತಿಯವರೂ ಆಗಿದ್ದುದರಿಂದ ಆಗಿನ ಕಾಲದ ಹುಡುಗಿಯರು ಕಲಿಯಬೇಕಾದ ಬಟ್ಟೆಗಳನ್ನು ಹೊಲಿಯುವುದು, ಇತರ ಕಸಬುಗಳನ್ನು ಬಲು ಬೇಗ ಕಲಿತು, ತಮ್ಮ ವಯಸ್ಸಿನ ಇತರ ಹುಡಿಗೆಯರಿಗಿಂತ ಎಷ್ಟೋ ಪಟ್ಟು ಮುಂದೆ ಹೋದರು. ಸಾಮಾನ್ಯ ಕಾವ್ಯನಾಟಕ ಜ್ಞಾನವಲ್ಲದೆ, ಕಲೆಗಳಲ್ಲಿಯೂ ಬಲ್ಲಿದರಾದರು. ಕವಿತೆಯನ್ನು ರಚಿಸಿ, ಅದನ್ನು ವೀಣೆ ಅಥವಾ ಕೊಳಲ ಮೇಲೆ ನುಡಿಸುವುದಾಗಲೀ, ನೃತ್ಯಕ್ಕೆ ಅಳವಡಿಸುವುದಾಗಲೀ, ಅವರಿಗೆ ಬಲು ಬೇಗ ಕರಗತವಾಗಿದ್ದಿತು. ವಿದ್ವಾಂಸರ ಮನೆಗೆ ಆಗಾಗ ಹೋಗುತ್ತ ಪರಿಚಯ ಮಾಡಿಕೊಂಡು, ತಾಡವೋಲೆಗಳ ಸಹಾಯದಿಂದ ಧರ್ಮಶಾಸ್ತ್ರ ವಿಚಾರಗಳನ್ನೂ ಅವರು ಬಲು ಬೇಗ ಕಲಿತರು. ಅವರಲ್ಲಿಯ ಪರಸ್ಪರ ಈರ್ಷಾಬುದ್ಧಿಯು ಅವರ ಜ್ಞಾನ ಶಿಖಿಗೆ ಆಜ್ಯವನ್ನು ಹೊಯ್ದಂತಾಗಿ ಜ್ಞಾನಾರ್ಜನೆಯಲ್ಲಿ ಮತ್ತಷ್ಟು ಉಪಯೋಗಕ್ಕೆ ಬಿದ್ದಿತು. ತಮ್ಮ ನಗರದ ಮಾತಂತಿರಲಿ, ನೆರೆಯ ಪ್ರದೇಶದಲ್ಲಿಯೆ ಅವರಷ್ಟು ಅನೇಕ ವಿದ್ಯಾಕುಶಲೆಯರೂ, ಸರ್ವೋತ್ತಮ ಸುಂದರಿಯರೂ ಇನ್ನಾರೂ ಇಲ್ಲವೆಂಬುದು ಸರ್ವಶ್ರುತವಾಯಿತು.

ಈ ಸಹೋದರಿಯರು ಆಗಾಗ ನಗರದಲ್ಲಿ ನಡೆಯುತ್ತಿದ್ದ ಶಾಸ್ತ್ರ ವಿಚಾರದ ಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದರು. ಅದೆಂಥ ವಾಕ್ಚಾತುರ್ಯ! ಮಹಾನ್ ವಾಗ್ಮಿಗಳನ್ನೂ ನಾಚಿಸುವಂತಿದ್ದಿತು. ಸಂಗೀತ, ನೃತ್ಯದ ಕಚೇರಿಗಳಲ್ಲಿಯೂ ಅವರದೇ ಮೇಲುಗೈ. ಅಲ್ಲದೆ ತಮ್ಮ ತಮ್ಮಲ್ಲಿಯ ಸ್ಪರ್ಧಾಬುದ್ಧಿಯಿಂದಾಗಿ, ಇಂಥ ಕೂಟ-ಕಚೇರಿಗಳಲ್ಲಿ ಇವರ ಪರಿಣತಿಗೆ ಜನ ಇನ್ನಷ್ಟು ಬೆರಗಾಗುತ್ತಿದ್ದರು. ಆದರೆ, ಇಬ್ಬರಲ್ಲಿ ಯಾರೊಬ್ಬರು ಮೊದಲು ಬಂದಾಗ ಅವಳು ಹೀರಾದೇವಿಯೋ, ತಾರಾಮತಿಯೊ ಎಂಬುದೇ ತಿಳಿಯುತ್ತಿರಲಿಲ್ಲ. ದೊಡ್ಡವರಾದ ಮೇಲೂ ಅವರ ಅಂಗವಿನ್ಯಾಸ, ನಡೆ ಮತ್ತು ನುಡಿ ಎಲ್ಲದರಲ್ಲಿಯೂ ಅನಾದೃಶವಾದ ಸಾಮ್ಯವು ಯಥಾವತ್ತಾಗಿ ಉಳಿದುಕೊಂಡು ಬಂದಿದ್ದಿತು.

ಒಂದು ವಿಷಯದಲ್ಲಿ ಮಾತ್ರ ಅವರಲ್ಲಿ ಐಕಮತ್ಯವಿದ್ದಿತು. ಅದೆಂದರೆ ತಮ್ಮ ಕಡುಬಡತನದ ಶೋಚನೀಯ ಸ್ಥಿತಿಯನ್ನು ಕುರಿತು! ಈ ವಿಷಯದಲ್ಲಿ ತಾಯಿಯನ್ನು ನಿತ್ಯ ಹಳಿಯುತ್ತಲೇ ಇದ್ದರೆ, ಪಾಪ, ಆಕೆ ಏನು ಮಾಡಿಯಾಳು? ಈ ಹುಡುಗಿಯರು ಪ್ರತಿಷ್ಠಿತ ವರ್ತುಲದಲ್ಲಿ ಅನನ್ಯ ಮನ್ನಣೆಯನ್ನೂ, ಮೆಚ್ಚಿಕೆಯ ಮಾತುಗಳನ್ನೂ ಕೇಳಿ, ಹೆಮ್ಮೆಯಿಂದ ಬೀಗುತ್ತ ತಾವು ಮನೆಗೆ ಬಂದರೆಂದರೆ ಸಂತೋಷದಿಂದ ಸ್ವಾಗತಿಸು

ವುದಕ್ಕೆ ಈ ಭಂಡ ದರಿದ್ರತನವೇ ಮುಂದಾಗುವುದೆ? ಪುರುಷರೆಲ್ಲರ ಕಣ್ಣಿಗೆ ತಾವು ಎಷ್ಟೊಂದು ಆಕರ್ಷಣೀಯರೆಂಬುದರ ಅರಿವಿದ್ದ ಅವರಿಬ್ಬರೂ ರಾತ್ರಿ ಮಲಗುವಾಗ, ತಮ್ಮ ಅಮೃತಮಧುರ ಕಾಂತಿಯ ಅಂಗಸೌಷ್ಠವವನ್ನು ಹರಕಲು ಚಾಪೆಯ ಮೇಲೆ ಒರಗಿಸುವ ಹೊತ್ತು ಬಂತಲ್ಲ ಎಂಬ ಭಾವನೆಯಿಂದ ಅವರು ತಳಮಳಿಸುತ್ತಿದ್ದುದರಲ್ಲಿ ಏನಾಶ್ಚರ್ಯ! ತಮ್ಮನ್ನು ಇಂಥ ಹೀನಸ್ಥಿತಿಯಲ್ಲಿ ಉಳಿಯಗೊಟ್ಟ ತಾಯಿಯ ಮೇಲೆ ಇಬ್ಬರೂ ಕೋಪಗೊಳ್ಳುತ್ತಲೂ, ದೈವದ ಮೇಲೆ ಹೇಗೆ ಪ್ರತೀಕಾರ ಮಾಡಿಯೇವು ಎಂದು ಕುದಿಯುತ್ತಲೂ, ರಾತ್ರಿ ಬಲು ಹೊತ್ತಿನವರೆಗೆ ನಿದ್ರೆಯಿಲ್ಲದೆ ಹೊರಳಾಡುತ್ತಿದ್ದರು. ತಮ್ಮ ರೂಪ ಮತ್ತು ವಿದ್ಯೆ ಇವು ಯಾವ ರಾಜವಂಶೀಯಳಿಗೂ ಕಡಿಮೆಯಿಲ್ಲವಾಗಿ, ಚೀನಾಂಬರ ಮತ್ತು ರತ್ನಾಭರಣಗಳಿಂದ ಭೂಷಿತೆಯರಾಗಿ ದಾಸದಾಸಿಯರ ಸೇವೆಯನ್ನು ಸ್ವೀಕರಿಸುತ್ತ, ರಾಜಗೃಹದಲ್ಲಿ ವಾಸಿಸುವ ಯೋಗ್ಯತೆಯನ್ನು ಪಡೆದಿರುವಾಗ, ಈ ರೀತಿಯ ರೂಕ್ಷ ಜೀವನವನ್ನು ನಡೆಸುವುದೇ? ಇಷ್ಟಕ್ಕೂ ತಾವು ದೊಡ್ಡ ಸಾಮಂತಾಧಿಪತಿಯ ಮಕ್ಕಳೇ ಅಲ್ಲವೆ? ಯಾವಳೊಬ್ಬ ಉಚ್ಚಕುಲ ಪ್ರಸೂತೆಯು ಮೇಣೆಯಲ್ಲಿ ಕುಳಿತು, ವೈಭವದೊಂದಿಗೆ ಊಳಿಗದವರಿಂದ ಪರಿವೃತೆಯಾಗಿ ರಸ್ತೆಯಲ್ಲಿ ಸಾಗಿದ್ದುದನ್ನು ನೋಡಿದರಂತೂ, ಇವರ ಧಮನಿಗಳಲ್ಲಿ ತಂದೆಯ ಮಹತ್ವಾಕಾಂಕ್ಷೆಯ ಕಾಯ್ದ ರಸವೇ ಹರಿದಾಡುತ್ತಿತ್ತು. ಊಂಹು! ಇದರಿಂದ ಬೇಗ, ಬಲು ಬೇಗ ಮುಕ್ತರಾಗಲೇಬೇಕು ಎಂಬುದಾಗಿ ಅವರು ತಮ್ಮೊಳಗೆಯೆ—ಆದರೆ ಒಬ್ಬರೊಬ್ಬರಿಗೆ ಗೊತ್ತಾಗದಂತೆ ಯೋಚಿಸುತ್ತಿದ್ದುದು ಅದೆಷ್ಟು ಸಲವೋ!

ಒಂದು ದಿನ ಬೆಳಿಗ್ಗೆ ತಾರಾ ಎದ್ದು ನೋಡುತ್ತಾಳೆ, ಬದಿಯ ಹಾಸಿಗೆ ಬರಿದು! ಹೀರಾ ಹಿಂದಿನ ರಾತ್ರಿ, ಯಾರಿಗೂ ಹೇಳದೆ ಆ ಮನೆಯಿಂದ ಅದೃಶ್ಯಳಾಗಿ ಬಿಟ್ಟಿದ್ದಳು. ಹೈಮವತಿಯು ಮಗಳು ಎಲ್ಲಿ ಹೋದಳೆಂಬುದು ತಿಳಿಯದೆ ಹೌಹಾರಿದಳು. ಈ ಯುವತಿಯರ ಸೌಂದರ್ಯದಿಂದ ಮತಿಭ್ರಾಂತರಾಗಿ, ಹೊಂಚು ಹಾಕಿ ಕುಳಿತಿದ್ದ ಅನೇಕರಲ್ಲಿ ಯಾವನೊಬ್ಬ ಸಿರಿವಂತ ತರುಣನು ಅವಳನ್ನು ಅಪಹರಿಸಿಕೊಂಡು ಹೋಗಿರಬೇಕೆಂದು ನೆರೆಯವರು ಗುಜುಗುಜು ಮಾತನಾಡಿಕೊಂಡರು.

ಹೈಮವತಿಗೂ ಹಾಗೆಯೇ ಅನಿಸಿತು. ಕೂಡಲೇ ನಗರಾಧಿಪತಿಯ ಬಳಿಗೆ ಹೋಗಿ, ತನ್ನ ಅಳಲನ್ನು ತೋಡಿಕೊಂಡು, ಆ 'ದುಷ್ಟ'ನನ್ನು ಹಿಡಿದು ದಂಡಿಸಬೇಕೆಂದೂ ಕೇವಲ ೧೪ ವರ್ಷದ, ತನ್ನ ಹಸುಳೆಯನ್ನು ಮರಳಿ ತಂದು ಮುಟ್ಟಿಸಬೇಕೆಂದೂ ಅಂಗಲಾಚಿದಳು.

ಆದರೆ ಒಂದೆರಡು ದಿನದಲ್ಲಿಯೆ ನಿಜ ಸಂಗತಿ ಹೊರಬಿದ್ದಿತು. ಹೀರಾ, ತಾನಾಗಿ ಒಬ್ಬ ತರುಣನೊಂದಿಗೆ ಓಡಿಹೋಗಿದ್ದಳು. ಅವಳಿಗಾಗಿ ಪ್ರತ್ಯೇಕ ನಿವಾಸವನ್ನು ದೊರಕಿಸಿ, ಅದನ್ನು ಅಲಂಕರಿಸಲು ಆತನು ತನ್ನ ತಂದೆಯಿಂದ ಅಪಾರ ಹಣವನ್ನು ಸೆಳೆದಿದ್ದನಂತೆ.

ಕೆಲವು ವಾರಗಳ ಅನಂತರ ಬಂದ ಪಥಿಕರು ಬೇರೆ ಸುದ್ದಿಯೊಂದನ್ನು ತಂದರು: ಹೀರಾ ಆ ಯುವಕನನ್ನು ತ್ಯಜಿಸಿ, ಬೇರೊಬ್ಬನನ್ನು ಕೂಡಿಕೊಂಡಿದ್ದಾಳೆಂದು. ಈ ಎಲ್ಲ ವಾರ್ತೆಯನ್ನು ಕೇಳಿ, ಮಾನನಿಧಿಯಾದ ಹೈಮವತಿಯು ಮಗಳ ಲಜ್ಜೆಗೇಡಿತನಕ್ಕೆ ತಲೆತಗ್ಗಿಸಿದಳು.

ಅವಳ ತೊಳಲಾಟ ಅಷ್ಟಕ್ಕೇ ನಿಲ್ಲಲಿಲ್ಲ. ತನ್ನ ಮಗಳು ಆ ಎರಡನೆಯ ಯುವಕನನ್ನು ತ್ಯಜಿಸಿ, ಒಬ್ಬ ಸೇನಾಧಿಪತಿಯನ್ನು ಆಶ್ರಯಿಸಿದ್ದಾಳೆಂದು ಕೇಳಿಬಂದಿತು. ಮುಂದೆ ಅವನ ಸಂಪತ್ತಿನ ಸತ್ವವನ್ನೆಲ್ಲ ಹೀರಿಕೊಂಡು, ಅವನನ್ನು ಹಣ್ಣಿನ ಒಣಸಿಪ್ಪೆಯಂತೆ ಬಿಸುಟು, ಇನ್ನೊಬ್ಬನನ್ನು ಕೂಡಿಕೊಂಡಳು. ಈತನೋ ಮುದುಕ, ಅದರೆ ರಾಜಬೊಕ್ಕಸವನ್ನು ಕಾಯುವಾತ. ಹೀರಾ ತನ್ನ ಸುಖಸಂಪತ್ತು ಮತ್ತು ಅಧಿಕಾರ ಸಾಧನೆಗಾಗಿ ತನ್ನ ದೇಹವನ್ನು ಮಾರಿಕೊಳ್ಳುತ್ತಿದ್ದಾಳೆ ಎಂಬುದು ಡಂಗುರವಾಗಿಬಿಟ್ಟಿತು. ''ಅಯ್ಯೋ, ನನ್ನ ಮಗಳು ಜಾರೆಯಾದಳಲ್ಲ'' ಎಂಬುದಾಗಿ ಅತೀವ ಮನನೊಂದ ಹೈಮವತಿಯು, ಮಗಳಿಗೆ ಬುದ್ಧಿವಾದವನ್ನು ಹೇಳಿಕಳುಹಿಸಿದಳು. ಆದರೆ ಹೀರಾ ಅದನ್ನೆಲ್ಲ ಕೇಳುವ ಸ್ಥಿತಿಯಲ್ಲಿಯೇ ಇರಲಿಲ್ಲ.

ಹೀರಾಳ ಲಜ್ಜೆಗೇಡಿತನವು ಮೇರೆಯನ್ನು ಮೀರಿ, ತಾಯಿಯ ಮುಖಭಂಗವನ್ನು ಸಂಪೂರ್ಣವಾಗಿಸುವ ಘಟನೆಯೊಂದು ಜರುಗಿತು. ಒಂದು ದಿನ ಹೈಮವತಿಯ ಅಂಗಡಿ ಮಳಿಗೆಯ ಮುಂದೆ ಒಂದು ಸಾಲಂಕೃತ ಮೇಣೆಯು ಹಾಯ್ದುಹೋಯಿತು. ಅದರ ಮುಂದುಗಡೆ ಆರು ಜನ ಅಶ್ವಾರೋಹಿಗಳು. ಅವರಲ್ಲಿ ಇಬ್ಬರ ಬೋಯಿಗಳು ಹೊತ್ತಿದ್ದರು. ಮೇಣೆಯ ಹಿಂದೆ, ದೊಡ್ಡ ದೊಡ್ಡ ಪೆಟ್ಟಿಗೆಗಳನ್ನು ಪೊತ್ತಿದ್ದ ೮-೧೦ ಜನ ಊಳಿಗದವರು ಬರುತ್ತಲಿದ್ದರು. ಅವರ ಹಿಂದೆ ಇದ್ದ ಕುದುರೆಯ ಬಂಡಿಯಲ್ಲಿ ದಾಸಿಯರ ದೊಡ್ಡ ಪಡೆಯೇ ಕುಳಿತಿದ್ದಿತು.

ಪುರಜನರೆಲ್ಲ ಆ ಮೆರವಣಿಗೆಯನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದರು. ಅದಾವ ರಾಜಕುವರಿಯು ತಮ್ಮ ಊರ ಮಾರ್ಗವಾಗಿ ಸಾಗಿದ್ದಾಳೆಯೊ ಎಂದು ಕುತೂಹಲರಾಗಿದ್ದಾಗ ಆ ಮೆರವಣಿಗೆಯು ಊರ ಹೊರಗಿನ ಹೇಮಸಿಂಹನ ಪೂರ್ವ ನಿವಾಸದ ಮುಂದೆ ನಿಂತಿತು. ಮೇಣೆಯಿಂದ ಹೊರ ಬಂದ 'ರಾಜ್ಞಿ' ಯಾರೆಂದು ನೋಡುತ್ತಾರೆ—ಆಕೆ ಇನ್ನಾರೂ ಅಲ್ಲ, ತಮ್ಮ ಪೂರ್ವ ಪರಿಚಯದ ಹೀರಾದೇವಿ !

ಅವಳ ಪಾಶದಲ್ಲಿ ಸಿಲುಕಿದ್ದ ಒಬ್ಬ ಅಗರ್ಭ ಶ್ರೀಮಂತನಾದ ಶ್ರೇಷ್ಠಿಯು ಅಪಾರ ಬೆಲೆಯನ್ನು ತೆತ್ತು ಅದನ್ನು ರಾಜಸ್ವಾಮ್ಯದಿಂದ ಪಡೆದುಕೊಂಡು ಹೀರಾಳಿಗೆ ಒಪ್ಪಿಸಿದ್ದನು. ಒಂದೊಮ್ಮೆ ತಾನು ಜನ್ಮತಾಳಿ, ಈಗ ಅದೇ ಮನೆಯ ಒಡತಿಯಾಗಿ ಹೀರಾ ನಾಗರಹಾವಿನಂತೆ ತಲೆಯೆತ್ತಿಕೊಂಡು, ಅತಿ ಬಿಂಕದಿಂದ ಅತ್ತಿತ್ತ ನೋಡುತ್ತ ಆ ನಿವಾಸವನ್ನು ಪ್ರವೇಶಿಸಿದಳು.

ಇತ್ತ ಹೈಮವತಿಯು, ಶೀಲ ಪ್ರಾಮಾಣಿಕತೆಗಳೇ ತನ್ನ ಸರ್ವಸ್ವವೆಂದು ಬಗೆದು

ಹಗಲು ಹನ್ನೆರಡು ತಾಸು ಜಿನಸಿನ ಸಾಮಾನುಗಳನ್ನೂ, ಔಷಧೀ ಬೇರುಗಳನ್ನೂ ಮಾರುತ್ತ, ನಾಲ್ಕು ತಾಮ್ರದ ಕಾಸುಗಳನ್ನು ಗಳಿಸಲು ಒದ್ದಾಡುತ್ತಿರುವಾಗ, ನೆರೆಯಲ್ಲಿಯೇ ತನ್ನ ಮಗಳು ದೇಹವನ್ನು ವಿಕ್ರಯಿಸುತ್ತ ಸಕಲ ಸಂಪತ್ತನ್ನು ಗಳಿಸುತ್ತಿದ್ದುದು ಹೈಮವತಿಯು ಆಂತರಿಕ ದುಃಖವನ್ನು ಇನ್ನಷ್ಟು ದಾರುಣವಾಗಿಸಿತು. ಹೃದ್ರೋಗದಿಂದ ಆಕೆ ಸೊರಗಿ, ಕುಗ್ಗಿ ಸಾಯಲಾದಳು.

ತನಗೆ ಜನ್ಮವಿತ್ತಿದ್ದ, ಸದ್ಯ ಬರಿದಾಗಿದ್ದ ಆ ನಿವಾಸವನ್ನು ಹೀರಾ ಅಲಂಕರಿಸ ತೊಡಗಿದಳು. ನೆಲ ಹಾಗೂ ಗೋಡೆಗಳು ಸಂಗಮವರಿ ಕಲ್ಲಿನ ಆವರಣವನ್ನು ಪಡೆದವು. ನೆಲದ ಮೇಲೆ ರತ್ನಗಂಬಳಿಗಳು, ಗೋಡೆಗಳ ಮೇಲ್ಭಾಗವನ್ನು ರಸಪೂರ್ಣ ಚಿತ್ರಗಳು ಆಕ್ರಮಿಸಿದುವು. ರುಚಿಕರವಾಗಿ ಕೆತ್ತಲಾಗಿದ್ದ ಕಮನೀಯವಾದ ವಿಗ್ರಹಗಳು ಅಲ್ಲಲ್ಲಿ ನೆಲೆ ನಿಂತವು. ದೇಶದ ವಿವಿಧ ಕಡೆಗಳಲ್ಲಿದ್ದ ಅಮೂಲ್ಯ ಆಲಂಕಾರಿಕ ವಸ್ತುಗಳನ್ನು ಹೀರಾ ಕಲೆ ಹಾಕಿದಳು.

ಪಶುಪಕ್ಷಿಗಳಿಗೂ ಅವಳ ಮನೆಯು ಆಶ್ರಯ ಸ್ಥಾನವಾಗಿದ್ದಿತು. ಬೇಟೆಯ ನಾಯಿಗಳೂ ಅರಣ್ಯದ ಹಿಂಸ್ರಮೃಗಗಳೂ, ಗಿಳಿ, ಪಾರಿವಾಳ, ಮೈನಾಕ ಮೊದಲಾದ ಪಕ್ಷಿಗಳೂ ಅಲ್ಲಿ ಮೆರೆದಾಡುತ್ತಿದ್ದುವು.

ಆ ಭವ್ಯ ನಿವಾಸದ ಹಿಂದು ಮುಂದೆ ಭರದಿಂದ ನಿರ್ಮಿತವಾಗಿದ್ದ ಉದ್ಯಾನ ಗಳು ಅತ್ಯಂತ ಚಿತ್ತಾಕರ್ಷಕವಾಗಿದ್ದುವು. ಬಣ್ಣದ ನೀರಿನ ಕಾರಂಜಿಗಳ ಸೊಬಗು ನೋಟಕರ ಕಣ್ಮನಗಳನ್ನು ರಂಜಿಸುತ್ತಿದ್ದುವು. ಅಲ್ಲಿನ ಹೂಗಳ ಪರಿಮಳವಂತೂ ಇಡೀ ನಗರವನ್ನೇ ವ್ಯಾಪಿಸುವಷ್ಟು ದಟ್ಟವಾಗಿದ್ದಿತು.

ಆದರೆ ಅವಳ ಹೆಸರಿನ ಖ್ಯಾತಿಯು ಇದಕ್ಕೂ ದಟ್ಟವಾಗಿ, ದೇಶದಲ್ಲೆಲ್ಲ ಹಬ್ಬಿದ್ದಿತು. ಅವಳ ರೂಪ-ಯೌವನ, ರತಿಶಾಸ್ತ್ರ ಪರಿಣತಿ, ಕಲಾವಿದಗ್ಧತೆ ಇವುಗಳ ಬಗ್ಗೆ ಉತ್ಸುಕತೆಯಿಂದ ಕೇಳಿ ಕೇಳಿ ಕಳವಳಗೊಂಡ ರಸಿಕ ಸಿರಿವಂತರು, ತಮ್ಮ ಸಿರಿವಂತಿಕೆ ಹಾಗೂ ಪ್ರತಿಷ್ಠೆಗಳನ್ನು ಒರೆಗಲ್ಲಿಗೆ ಹಚ್ಚಲೋ ಎಂಬಂತೆ, ದೂರದ ಪ್ರದೇಶಗಳಿಂದ ಧಾವಿಸಿ ಬರುತ್ತಿದ್ದರು. ಸ್ವತಃ ಮಗಧದ ರಾಜಕುಮಾರನೇ ಒಮ್ಮೆ ಹೀರಾಳ ಸಹವಾಸವನ್ನು ಬಯಸಿ, ವೇಷಾಂತರದಿಂದ ಬಂದು, ಅವಳ ಮಧ್ಯವರ್ತಿಗಳಿಗೇನೆ ಹೇರಳ ಹಣವನ್ನು ತೆರಬೇಕಾಯಿತೆಂದೂ, ಕೊನೆಗೊಮ್ಮೆ ಅವಳನ್ನು ಕೂಡಿದವನಾಗಿ, ಒಂದು ತಿಂಗಳು ಕಳೆದರೂ, ಬಿಟ್ಟು ಹೋಗುವ ಮನಸ್ಸಾಗದೇ ಆ ನಿವಾಸದಲ್ಲಿಯೆ ಉಳಿದಿದ್ದನೆಂದೂ ಎಲ್ಲೆಡೆಗೆ ಸುದ್ದಿ ಹರಡಿತು.

ಇಂಥ ಸ್ಥಿತಿಯಲ್ಲಿ ಊರಿನ ಸಭ್ಯ ಹಾಗೂ ಪಾಪಭೀರುಗಳಾದ ಜನರು ಹೀರಾಳ ಬಗ್ಗೆ ಸಿಟ್ಟಿಗೆದ್ದಿದ್ದರೆ, ಅದು ಸಹಜವೇ ಆಗಿತ್ತು. ವಿಶೇಷತಃ ಆಗ ಪ್ರಚಾರದಲ್ಲಿದ್ದ ವೈದಿಕ ಮತ್ತು ಬೌದ್ಧ ಧರ್ಮಗಳ ಅಧ್ವರ್ಯುಗಳು ತಮ್ಮ ಕಣ್ಣು ಕಿವಿಯನ್ನು ಮುಚ್ಚಿಕೊಂಡರು. ಅವಳನ್ನು ಪಡೆಯುವದು ಈ ಜನ್ಮದಲ್ಲಿ ತಮಗೆ ಎಂದೂ ಸಾಧ್ಯವಿಲ್ಲವೆಂದು ಮನಗಂಡ ಮಧ್ಯಮ ಸ್ಥಿತಿಯವರು, ಅವಳನ್ನು ಊರು

ಬಿಟ್ಟು ಓಡಿಸುವುದಕ್ಕೆ ನಗರಾಧಿಪತಿಯನ್ನು ಕಾಡತೊಡಗಿದರು. ಆತನೂ ಏನನ್ನೂ ಮಾಡಲಾರದೆ ಹೋದನು. ಹತ್ತಾರು ಜನ ಸೇನಾಧಿಪರನ್ನೂ, ಲಕ್ಷಾಧೀಶರ ಪುತ್ರರನ್ನೂ ಏಕಕಾಲಕ್ಕೆ ಕುಣಿಸಬಲ್ಲವಳಾಗಿದ್ದ ಹೀರಾ ಎಲ್ಲರನ್ನು ಮಲೆತು ನಿಂತಿದ್ದಳು.

ಸ್ತ್ರೀಯರಂತೂ ಅವಳನ್ನು ಜರೆಯುವುದರಲ್ಲಿ ಹಿಂದೆ ಬಿದ್ದಿರಲಿಲ್ಲ. ಮುದಿ ಐದೆಯರಿಗೆ ಆ ಸ್ವಾತಂತ್ರ್ಯವೇ ಇದ್ದಿತೆನ್ನುವ ವಿಷಯದಲ್ಲಿ ಸಂಶಯವೇ ಇರಲಿಲ್ಲ. ಹೀರಾಳ ಮುಖದರ್ಶನವಾದರೂ ಸಾಕು ಎಂದು ಹಾತೊರೆಯುವ ಸಾಮಾನ್ಯ ಪುರುಷ ವರ್ಗದ ಗಮನವೆಲ್ಲ ಅತ್ತ ಕಡೆಗೆ ಹರಿಯುತ್ತಿದ್ದಾಗ, ಊರಲ್ಲಿಯ ಕುಮಾರಿಯರೂ, ಗೃಹಿಣಿಯರೂ, ಇತರ ಗಣಿಕೆಯರೂ ಹೀರಾಳ ಹೆಸರೆತ್ತಿದರೆ ಸಾಕು, ಉರಿದುಬೀಳುತ್ತಿದ್ದರು.

ಆದರೆ ತಾರಾಳ ಹೊಟ್ಟೆಯುರಿಯು ಮುಂದೆ ಇವರಾರದೂ ಸರಿಸಮವಲ್ಲ! ಮೊದಲೇ ತನ್ನ ಸೋದರಿಯನ್ನು ಹಿಂದೆ ಹಾಕಬೇಕೆಂಬುದು ಜನ್ಮಜಾತ ಪ್ರವೃತ್ತಿ. ಈಗಂತೂ ಹೀರಾ ಅದೆಷ್ಟು ಮುಂದುವರಿದಿದ್ದಾಳಲ್ಲ, ಎಷ್ಟೊಂದು ದೂರ ಅವಳ ಕೀರ್ತಿಯು ಹಬ್ಬಿದೆಯಲ್ಲ! ಅವಳ ಸಂಪತ್ತು, ದೌಲತ್ತು, ಆಢ್ಯತೆ-ಎಲ್ಲ-ಎಲ್ಲವೂ ಮೇಲೇರುತ್ತ ಸಾಗಿರುವಾಗ, ತಾನು? ಅದೇ ಹರಕಲು ಚಾಪೆ, ಮಾಸಲು ಹೊದಿಕೆಯಲ್ಲಿ ಮಲಗಿ, ಒಡೆತನದಲ್ಲಿಯೇ ಜೀವನವನ್ನು ಸವೆಯಿಸುತ್ತಿದ್ದೇನಲ್ಲ...?

'ಏನು ಮಾಡಲಿ? ಏನನ್ನು ಮಾಡಿದರೆ ನಾನು ಅವಳನ್ನು ಮೀರಿಸುವುದು ಸಾಧ್ಯ?' ಅನ್ನ, ನೀರಿನ ಪರಿವೆಯಿಲ್ಲದೆ ತಾರಾ ಅದನ್ನೇ ಚಿಂತಿಸುತ್ತಿದ್ದಳು. ಮಾತ್ಸರ್ಯಾಗ್ನಿಯಿಂದ ಅವಳ ಅಂಗಕಾಂತಿ ಮಲಿನಗೊಂಡಿತು.

ಅವಳ ಸಂತಾಪದ ಅತಿರೇಕಕ್ಕೆ ವಿಶೇಷ ಕಾರಣವೆಂದರೆ, ಹೀರಾಳನ್ನು ಪ್ರಥಮತಃ ಅಪಹರಿಸಿಕೊಂಡು ಹೋಗಿದ್ದ ತರುಣನನ್ನೇ, ಅದಕ್ಕೂ ಮೊದಲು ನಿರಾಕರಿಸಿದ್ದಳು. ಆಗೇ ತಾನು ಅವನೊಟ್ಟಿಗೆ ಪಲಾಯನಗೈದಿದ್ದರೆ, ಹಾಗೆ ಮಾಡಿದ್ದರೆ... ಇಂದು ಹೀರಾಳಾಗಿದ್ದ ಸರ್ವಸ್ವ ತನ್ನದೇ ಆಗುತ್ತಿತ್ತಲ್ಲವೇನು?

'ಈಗಾದರೂ ಏನಾಯಿತು?' ಅದೇ ಮಾರ್ಗವನ್ನು ತಾನು ಹಿಡಿದರೆ? ತನಗಾಗಿ ಪರಿಸರದಲ್ಲಿ ಕಾಯುತ್ತಿದ್ದ ಪ್ರೇಮ ಪಿಪಾಸುಗಳಿಗೇನೂ ಕಡಮೆಯಿದ್ದಿಲ್ಲ. ಆದರೆ ಹಾಗೆ ಮಾಡಿದ್ದಲ್ಲಿ ಸೋದರಿಯ ನಡೆಯನ್ನೇ ಅನುಸರಿಸಿದಂತಾಯ್ತು; ಪ್ರತೀಕಾರವಾಗುವುದಿಲ್ಲ ತಾನೆ! ಆ ದಾರಿಯನ್ನು ತಾರಾ ಹಿಡಿದರೆ, ಇವಳಿಗೆ ಹೀರಾ ನೆರವಾಗುವುದಕ್ಕೆ ಸಿದ್ಧಳೇ ಇದ್ದಳು! ಆ ದೃಷ್ಟಿಯಿಂದ ಹೀರೆಯು ತನ್ನ ಸಹಜಾತೆಗಾಗಿ ಅನೇಕ ಅಮೂಲ್ಯ ಉಡುಗೊರೆಗಳನ್ನು ಕಳಿಸಿಯೆ ಇದ್ದಳು. ತಾರಾ ಅವೊಂದನ್ನೂ ಸ್ವೀಕರಿಸಿರಲಿಲ್ಲ. ಹೀರಾಳಿಗಿಂತ ತಾನು ಶ್ರೇಷ್ಠವೆನ್ನಿಸಿಕೊಳ್ಳಬೇಕಾದರೆ, ಆ ದಾರಿಯನ್ನು ತುಳಿಯತಕ್ಕುದಲ್ಲ. ಎಂದಿಗೂ ದ್ವಿತೀಯಳಾಗತಕ್ಕುದಲ್ಲ!

ತಾರಾ ಹೀಗೆ ಯೋಚಿಸುತ್ತಿದ್ದಾಗ, ತನ್ನ ಕಡೆಗೆ ಆಸೆಗಣ್ಣುಗಳಿಂದ ನೋಡುತ್ತಿದ್ದ ರಸಿಕರ ಉದ್ವಿಗ್ನತೆಯು ಅರಿವಾಯಿತು. ಆದರೂ ತಾನು ಯಾರಿಗೂ ಮನಸೋತಿಲ್ಲ... ಅಂತೆಯೇ ಅವಳ ಅಚ್ಚಳಿಯದ ಕೌಮಾರ್ಯ ಹಾಗೂ ಶೀಲ

ಇವೆರಡೂ, ತನ್ನ ಸೋದರಿಗೆ ಇಲ್ಲವಾಗಿ-ತನ್ನ ಮಟ್ಟಿಗೆ ಭದ್ರನಿಧಿಯಂತಿದ್ದವು. ಇವನ್ನೇ ಮುಂದೊಡ್ಡಿ, ಹೀರಾಳನ್ನು ಹಿಂದೊತ್ತಬಹುದಲ್ಲ? ಹೌದು, ಬೇರೊಂದು ದಿಕ್ಕಿನಲ್ಲಿ ತನ್ನ ಮೇಲ್ಮೆಯನ್ನು ಸಾಧಿಸಬಹುದು !

ಅಂತೂ ಯಾವುದನ್ನು ಹೀರಾ ಎಸೆದೊಗೆದಿದ್ದಳೊ, ಆ ಶೀಲ ಸತೀತ್ವಗಳನ್ನು ತಾನು ಮೆರೆಯಿಸಬೇಕು. ಹೀರಾ ಸೊಕ್ಕಿನಿಂದ ನಡೆದುಕೊಳ್ಳುತ್ತಿದ್ದರೆ, ತಾನು ವಿನಯಶಾಲಿನಿಯಾಗಿರಬೇಕು. ಆಕೆ ಸ್ವಾರ್ಥಪರಾಯಣೆಯಾಗಿ ಸ್ವಂತ ಸುಖವೊಂದನ್ನೇ ನೋಡುವವಳಾಗಿದ್ದರೆ ತಾನು ನಿಸ್ವಾರ್ಥ ಬುದ್ಧಿಯಿಂದ ದೀನದಲಿತರ ಸೇವೆಯನ್ನು ಕೈಕೊಳ್ಳಬೇಕು !

ಹಾಗೆ ನಿರ್ಧರಿಸಿದ ಮರುದಿನವೇ ತಾರಾ ಬೌದ್ಧ ಧರ್ಮವನ್ನು ಸ್ವೀಕರಿಸಿ ಭಿಕ್ಷುಕಿಯಾದಳು! ಊರಲ್ಲಿಯ 'ವಿಹಾರ'ವನ್ನು ಸೇರಿದಳು.

ಇಂದಲ್ಲ ನಾಳೆ ತಮ್ಮಂಥ ರಸಿಕರ ದಾಹವನ್ನು ತಾರಾಮತಿಯು ತಣಿಸಿಯಾಳು ಎಂದು ಭಾವಿಸಿ ಕಾದುಕೊಂಡಿದ್ದ ಅನೇಕ ಪ್ರಣಯೀ ಜನರು ನಿರಾಶೆಯಿಂದ ತಲೆ-ತಲೆ ಜಜ್ಜಿಕೊಂಡರು. ಒಬ್ಬ ಸೋದರಿಯು ಭೋಗಲಾಲಸೆಯೇ ಪರಮ ಪುರುಷಾರ್ಥವೆಂದು ಬಗೆದಿದ್ದಾಗ, ಇನ್ನೊಬ್ಬಳು ದೀನ ದಲಿತರ ಸೇವೆಯನ್ನೇ ತನ್ನ ಬದುಕಿನ ಸರ್ವಸ್ವವೆಂದು ತಿಳಿದು ಅದರಂತೆ ಆಚರಿಸುತ್ತಿದ್ದುದು ನಗರವಾಸಿಗಳನ್ನು ಬೆರಗುಗೊಳಿಸಿದ್ದಿತು. ಇದರಿಂದಾಗಿ, ತಾರಾಳ ಸೇವಾತತ್ಪರತೆಯು ಮಲ್ಲಿಗೆಯ ಪರಿಮಳದಂತೆ ಕ್ರಮೇಣ ಹಬ್ಬತೊಡಗಿತು.

ಆಹಾ! ಅವಳ ದೈನಂದಿನ ಚಟುವಟಿಕೆಗಳನ್ನು ಏನೆಂದು ವರ್ಣಿಸುವುದು! ರೋಗ ಪೀಡಿತರಾದವರ ಸೇವೆ; ಸ್ವಂತದ ಜಪತಪಾನುಷ್ಠಾನ; ಸ್ವಧರ್ಮೀಯರೊಡನೆ ವ್ಯಾಸಂಗ ಮತ್ತು ಅಧ್ಯಾಪನ—ಇಂತಿವೆಲ್ಲ ಕಾರ್ಯವ್ಯಾಪ್ತಿಯಲ್ಲಿ ತೊಡಗಿದ್ದ ಅವಳಿಗೆ ಬಿಡುವೇ ಇರುತ್ತಿರಲಿಲ್ಲ. ಅವಳ ಸುಂದರ ಮುಖವೀಗ ವಿಶೇಷ ತೇಜಸ್ಸಿನಿಂದ ಕೂಡಿತ್ತು. ಅವಳು ಹೊರಬಿದ್ದರೆ ಅಷ್ಟು ದೂರದಿಂದಲೇ ಸಾಮಾನ್ಯ ಜನತೆ ಅವಳಿಗೆ ಸಾಷ್ಟಾಂಗವೆರಗುತ್ತಿತ್ತು. ಅವಳು ಅಡಿ ಇಟ್ಟಿದ್ದ ಜಾಗದ ಧೂಳಿಯನ್ನು ಭಾವುಕರು ತಮ್ಮ ಉತ್ತಮಾಂಗದಲ್ಲಿ ಧರಿಸುತ್ತಿದ್ದರು !

ಸಾಮಾನ್ಯ ಜನತೆಯು ಒಂದು ವಿಷಯದಲ್ಲಿ ಮಾತ್ರ ಗೊಂದಲದಲ್ಲಿ ಬಿದ್ದಿತು. ಸೋದರಿಯರಿಬ್ಬರ ಸ್ವಭಾವ ಮತ್ತು ಕಾರ್ಯಕ್ಷೇತ್ರಗಳು ಪರಸ್ಪರ ಸಂಪೂರ್ಣ ವಿರೋಧಿಯಾಗಿದ್ದರೂ, ಅವರ ರೂಪ, ಆಕಾರ, ಮಾತಿನ ರೀತಿ, ಎಲ್ಲವೂ ತದ್ವತ್ ಆಗಿದ್ದುದರಿಂದ, ಒಬ್ಬಳನ್ನು ನೋಡಿದಾಗ ಇನ್ನೊಬ್ಬಳ ನೆನಪು ಬಂದು ಭ್ರಾಂತಿಗೊಳಗಾಗುತ್ತಿದ್ದರು. ಒಂದೊಮ್ಮೆ ಹೀರಾಳ ಅಪ್ಪುಗೆಯ ಸುಖವನ್ನು ಸವಿದಿದ್ದ ಒಬ್ಬ ರಸಿಕನು ದಾರಿಯಲ್ಲಿ ತಾರಾಮತಿಯನ್ನು ಸಂಧಿಸಿದರೆ, ಕಾಮುಕ ವಿಚಾರಗಳು ಥಟ್ಟನೆ ಸ್ಫುರಿಸುತ್ತಿದ್ದವು. ಆದರೆ ಅವಳ ಶುಭ್ರವಸನವನ್ನೂ ಇತರರು ಅವಳೊಂದಿಗೆ ಪೂಜ್ಯ ಭಾವನೆಯಿಂದ ನಡೆದುಕೊಳ್ಳುವುದನ್ನೂ ನೋಡಿ, ಗಡಿಬಿಡಿಗೊಳ್ಳುವನು. ಹಿಂದಿನ

ರಾತ್ರಿ ತನ್ನ ಬಳಿಯಲ್ಲಿ ಬೆತ್ತಲೆ ಹೊರಳಾಡಿದ್ದ ಹೀರಾ ಎಲ್ಲಿ? ಇಂದು, ಕುಷ್ಠರೋಗಿಯೊಬ್ಬನನ್ನು ಮೆಲ್ಲನೆ ನಡೆಸಿಕೊಂಡು ಬಂದು, ಯಾವ ಸಂಕೋಚವೂ ಇಲ್ಲದೆ, ಅವನ ಮುಖದಿಂದ ಒಸರುವ ಜೊಲ್ಲನ್ನು ಒರೆಸುತ್ತ ಬರುತ್ತಿರುವ ತಾರಾ ಎಲ್ಲಿ? ಆ ವ್ಯಕ್ತಿಯ ಮನಸ್ಸಿನಲ್ಲಿ ಆಗ ತಾರೆಯ ನಗ್ನಸ್ವರೂಪವು ಕಣ್ಣಿಗೆ ಕಟ್ಟಿದಂತಾಗುತ್ತಿತ್ತು. ಮರುಕ್ಷಣ ಅಂಥ ಪಾಪ ವಿಚಾರವು ಬಂದುದಕ್ಕೆ ತನ್ನಲ್ಲಿಯ ಹೇಸಿಕೊಂಡು, ಆ ಜಾಗದಿಂದ ಪಲಾಯನ ಹೇಳುತ್ತಿದ್ದನು!

ಇತ್ತ 'ವಿಹಾರ'ದಲ್ಲಿ ತಾರೆಯ ಬೋಧಾಮೃತವನ್ನು ಕೇಳಿ ಅವಳ ವಿಷಯದಲ್ಲಿ ಆದರಭಾವವನ್ನು ಮೂಡಿಸಿಕೊಂಡವರು. ಅನೇಕರು ತಾನೇ. ಅವರು ಆಕಸ್ಮಾತ್ತಾಗಿ, ದಾರಿಯಲ್ಲಿ ಹೀರಾಳನ್ನು ಸಂಧಿಸಿದ್ದಾದರೆ ಅವರೂ ಗಲಿಬಿಲಿಗೊಳ್ಳುತ್ತಿದ್ದರು. ದೇಹದ ಆಕರ್ಷಣೆಯು ಎದ್ದು ಕಾಣುವಂತೆ ವೇಷ ಧರಿಸಿ, ರಸಿಕರಿಂದಲೂ, ದಾಸಿಯರಿಂದಲೂ ಓಲೈಸಿಕೊಳ್ಳುತ್ತ ಆಮೋದದಿಂದ ನರ್ತನ ಮಂದಿರದ ಕಡೆಗೆ ಹೊರಟಿದ್ದ ಅವಳನ್ನು ಕಂಡು, ಇದು ಹೊಲೆಗೆಲಸವೆಂದುಕೊಳ್ಳುವರು. ಮರುಕ್ಷಣ ಅವರಿಬ್ಬರೂ ಬೇರೆ ಬೇರೆ ಎಂಬ ವಿಚಾರ ಬರುತ್ತಲೂ ತಮ್ಮನ್ನೇ ನಿಂದಿಸಿಕೊಳ್ಳುವರು. ತಾರಾ 'ಭಿಕ್ಷುಕಿ'ಯಾಗಿ ಮನೆಮನೆಗೆ ಹೋಗುವಾಗ, ಗಂಡಸರಿಗೆ ಹೀರಾಳ ನೆನಪೇ ಉಕ್ಕಿ ಬಂದು ಅವಳ ಮೇಲೆ ಕಾಮುಕ ದೃಷ್ಟಿಯನ್ನು ಬಿರುವರು ಮತ್ತೆ ತಲೆ ತಗ್ಗಿಸುವರು.

ಹೀಗೆ ಆ ಊರಲ್ಲಿಯ ಸದ್ಭಾವ ಹಾಗೂ ಕಾಮುಕ ವೃತ್ತಿಗಳು ಪ್ರತಿ ಸಲವೂ ತಾಕಲಾಡುತ್ತಿದ್ದುವು. ಆ ಸಹಜಾತೆಯರ ದೇಹರೂಪಗಳಂಥ ಅನ್ಯೋನ್ಯ ಸಾಮ್ಯವೇ ಇಷ್ಟೆಲ್ಲ ಅಸ್ತವ್ಯಸ್ತತೆಗೆ ಕಾರಣವಾಗಿದ್ದಿತು.

ಏನಿದ್ದರೂ ಈ ಸೋದರಿಯರು ತಮ್ಮಷ್ಟಕ್ಕೆ ಬೇರೆ ಬೇರೆಯೆ! ಹಾಗೆಂದು ಭೋಗದ ಜೀವನ ಅವಳಿಗೆ; ತ್ಯಾಗದ ಜೀವನ ಇವಳ ಮಟ್ಟಿಗೆ ಉಳಿದು, ಅವರ ಬದುಕು ಮುಂದುವರಿಯಬೇಕಿದ್ದಿತು. ಅವರಲ್ಲಿಯ ಪರಸ್ಪರ ಮಾತ್ಸರ್ಯ ಹಾಗೆ ಉಳಿಯಗೊಟ್ಟೀತೆ? ಮಹಾತ್ವಾಕಾಂಕ್ಷೆಯೇ ಅವರ ಪ್ರತಿ ಕಾರ್ಯದ ಮೂಲ ಪ್ರೇರಣೆ ತಾನೇ, ವಿಶೇಷತಃ ಹೀರಾ, ತನ್ನ ಭಗಿನಿಯು ಸಮಾಜದಲ್ಲಿ ತನಗಿಂತ ಮುಂದೆ ಹೋದವಳಲ್ಲ ಎಂದು ಕರುಬುತ್ತಿದ್ದಳು. ಅವಳ ಅಸಹಾಯ ಸಂತಾಪವು ಸೇವಕಿ-ದಾಸಿಯರ ಮೇಲೆ ಪ್ರಕಟಗೊಂಡು, ಆಗಾಗ ಅವರನ್ನು ಥಳಿಸುತ್ತಿದ್ದಳು. ಇತ್ತ ತಾರಾ ನಿಸ್ವಾರ್ಥಿ ಜೀವನವನ್ನು ನಡೆಸುತ್ತಿದ್ದರೂ, ಹೀರಾಳ ಅತುಲೈಶ್ವರ್ಯ, ಪುರುಷರನ್ನು ಅಂಕಿತದಲ್ಲಿಟ್ಟುಕೊಂಡಿದ್ದ ಅವಳ ಸಾಮರ್ಥ್ಯಗಳನ್ನು ನೆನೆದಾಗಲೆಲ್ಲ ತನ್ನಲ್ಲಿಯೇ ಪಿಡುಗಟ್ಟುತ್ತಿದ್ದಳು. ಅವರಿಬ್ಬರೂ ತಂತಮ್ಮ ಕ್ಷೇತ್ರದಲ್ಲಿ ಮುಂದೆ ಹೋದಷ್ಟು ಪರಸ್ಪರರಲ್ಲಿಯ ಮಾತ್ಸರ್ಯಾಗ್ನಿ ಹಬ್ಬುತ್ತಲೇ ಹೋಯಿತು.

ಆದರೆ ಬಹಿರಂಗವಾಗಿ ?

ಹೀರಾ ಪಾನಗೋಷ್ಠಿಯಲ್ಲಿ ಪ್ರತಿಷ್ಠಿತ ಜನ ಸಮುದಾಯದಲ್ಲಿದ್ದಾಗ, 'ಅಯ್ಯೋ, ಈಕೆಯು ವ್ಯರ್ಥವಾಗಿ ತನ್ನ ಯೌವನವನ್ನು ಹಾಳು ಮಾಡಿಕೊಳ್ಳು

ತ್ತಿದ್ದಾಳಲ್ಲ' ಎಂದು ಗದ್ಗದ ಕಂಠದಿಂದ ತನ್ನ ಅನುತಾಪವನ್ನು ಸೂಚಿಸುತ್ತಿದ್ದಳು! ಇಂದಿಲ್ಲ, ನಾಳೆ ಸಾಯುವ ರೋಗಿಗಳ ಶುಶ್ರೂಷೆಯಿಂದ ಬರುವ ಭಾಗ್ಯವಾದರೂ ಏನು? ಪರಲೋಕದ ಚಿಂತೆಯನ್ನು ಮುಪ್ಪಿನ ಕಾಲದಲ್ಲಿ ವಾನಪ್ರಸ್ಥಾಶ್ರಮದಲ್ಲಿ ಮಾಡಬೇಕಲ್ಲದೆ, ಈಗಲ್ಲ. ತರುಣ ವಯಸ್ಸಿನಲ್ಲಿಯೆ ಹಾಗೆ ಮಾಡಲಾರಂಭಿಸಿದರೆ ಯೌವನದ ಸುಖವು ಕೈಬಿಟ್ಟು ಹೋಗುವುದಲ್ಲವೆ? ಹೋದ ಯೌವನ ಮತ್ತೆ ಬೇಕೆಂದರೆ ಸಿಗತಕ್ಕುದೆ? ಎಂಥ ದುರ್ದೈವ ಅವಳದು...

ಹೀರೆಯ ಮಾತಿನ ಸರಣಿ ಇದಾದರೆ, ಅತ್ತ ತಾರಾಮತಿಯು ತನ್ನ ಪ್ರವಚನದ ಅಂತ್ಯದಲ್ಲಿ, ಜೀವನದ ಶಾಶ್ವತ ಮೌಲ್ಯಗಳನ್ನು ಕಡೆಗಣಿಸಿ ಕ್ಷಣಿಕ ಸುಖದಲ್ಲಿ ತೊಳಲಾಡುವ ಪಾಪಿಷ್ಠ ಜನರ ಬಗ್ಗೆ ತುಂಬಾ ಕಳಕಳಿಯನ್ನು ವ್ಯಕ್ತಪಡಿಸುವಳು. ಬೋಧಿಸತ್ವನು ಅವರ ಮುಂದಿನ ಜನ್ಮದಲ್ಲಿಯಾದರೂ ಉದ್ಧಾರದ ಮಾರ್ಗವನ್ನು ಕರುಣಿಸಲೆಂದು ಪ್ರಾರ್ಥಿಸದೆ ಇರುತ್ತಿರಲಿಲ್ಲ.

ಪರಸ್ಪರರ ಈ ಬಗೆಯ ದೂರದ ಅನುಕಂಪೆಯಿಂದ ಏನಾದರೂ ಪ್ರಯೋಜನವಾಯಿತೆ? ಇಲ್ಲ. ಆದರೆ ತಾವಿಬ್ಬರೂ ಸಂಧಿಸಬೇಕು, ಶಕ್ಯವಾದರೆ ತಂತಮ್ಮ ಜೀವನದ ರೀತಿಗೆ ಇನ್ನೊಬ್ಬಳನ್ನು ಪರಿವರ್ತಿಸಬೇಕು ಎಂಬ ಛಲದ ಭಾವನೆ ಅವರಲ್ಲಿ ಮೂಡತೊಡಗಿತು-ಕುಸ್ತಿಯ ರಂಗದಲ್ಲಿ ಜಟ್ಟಿಗಳಿಬ್ಬರೂ ಬಳಿ ಸಾರ ಬೇಕೆನ್ನುವ ರೀತಿ ಅದು!

ಹೀರಾ ಮತ್ತು ತಾರಾ ದೌತ್ಯದ ಮೂಲಕ ಪರಸ್ಪರ ಸಂಧಾನ ನಡೆಸಿದರು. ಸೋದರೀ ಭಾವದ ಮಮತೆಯನ್ನು ತೋರಿದರು! ಆಗೀಗ ಭೆಟ್ಟಿಯಾಗುತ್ತಲೂ ಇದ್ದರು. ಒಂದು ದಿನ ತಾರಾ ತನ್ನ 'ಭಿಕ್ಷುಣಿ'ಯ ದೈನಂದಿನ ಪರಿಭ್ರಮಣದಲ್ಲಿ, ಹೀರಾಳ ನಿವಾಸಕ್ಕೇ ಬಂದಳು. ಪಾಪಿಷ್ಠರ ಉದ್ಧಾರವೇ ಅವಳ ಕಾಯಕವಲ್ಲವೆ?

''ದೇವರು ಕೊಟ್ಟಿದ್ದ ದೇಹವನ್ನು ಹೀಗೆ ಪಾಪಕೂಪವನ್ನಾಗಿ ಮಾಡದೇ ಸತ್ಕಾರ್ಯದಲ್ಲಿ ವಿನಿಯೋಗಿಸಿ, ಸದ್ಗತಿಯನ್ನು ಹೊಂದಬೇಕು' ಎಂದು ತಾರಾ ಮತಿಯು ಹೀರಾಳಿಗೆ ಉಪದೇಶ ಗೈಯತೊಡಗಿದಳು.

ಆ ವೇಳೆಗೆ ಹೀರಾ, ಅಲ್ಪ ವಸನಧಾರಿಣಿಯಾಗಿ, ಸೇವಕಿಯರಿಂದ ಅಭ್ಯಂಜನ ಲೇಪನದಲ್ಲಿ ಮಗ್ನಳಾಗಿದ್ದಳು. ತಲೆಬೇಸರ ಬರುವಂತೆ ಉಪದೇಶದ ಮಳೆಯನ್ನೇ ಸುರಿಸುತ್ತಿದ್ದ ಈ ತನ್ನ ಸಹಜಾತೆಯ ಮಾತುಗಳನ್ನು, ಕೇಳುತ್ತಿದ್ದಾಗ ಅವಳ ಮುಖದಲ್ಲಿ ಕುತ್ಸಿತ ನಗೆ ಮೂಡುತ್ತಿದ್ದಿತು. ಇವಳ ಕುತ್ತಿಗೆಯನ್ನು ಹಿಡಿದು, ಸೇವಕರಿಂದ ಹೊರದಬ್ಬಿಸಲೆ? ಅಥವಾ ದಾಸಿಯರೆಲ್ಲರನ್ನು ಸುತ್ತಾಗಿ ನಿಲ್ಲಿಸಿ ಅವರಿಂದ ಹೀನಾಯದ ಬೈಗುಳನ್ನು ಕೇಳಿಸಲೆ? ಇಲ್ಲವೆ, ಸುಂದರ ಸಬಲ ತರುಣರನ್ನು ಕರೆಯಿಸಿ ಅವಳ ಸತೀತ್ವ ಹರಣ ಮಾಡಿಸಲೆ? ಯಾವ ಪ್ರತೀಕಾರ ತೋರಿಸಲಿ, ಎಂದು ಹೀರೆಯ ರಕ್ತ ಕುದಿಯುತ್ತಲಿತ್ತು.

ಇತ್ತ ತಾರೆಯ ಹಿತವಚನವು ಕಾವುಗೊಂಡು ಮುಂದುವರಿಯುತ್ತಿದ್ದಾಗ, ಅವಳ ಸಹೋದರಿಯು ಮನದಲ್ಲಿ ದಿವ್ಯ ವಿಚಾರವೊಂದು ಸ್ಫುರಣಗೊಂಡಿತು. ತಾರೆಯ ಅಭಿಮಾನ ಭಂಗದ ಯೋಜನೆಯದು. ಅದು ಅವಳ ಹುಬ್ಬುಗಳಲ್ಲಿ ಮೊದಲು ತಲೆದೋರಿ, ಭ್ರಮರದಂತೆ ಆಕೆಯ ಮಿದುಳಿನಲ್ಲಿ ಸುತ್ತತೊಡಗಿತು. ಯೋಚಿಸಿದಂತೆಲ್ಲ, ಅದರ ಯಶಸ್ಸಿನ ಬಗ್ಗೆ ಆತ್ಮವಿಶ್ವಾಸ ಮೂಡಿತು. ಅದು ಯಶಸ್ವಿಯಾಗುವುದು ಖಂಡಿತವೆಂಬ ಭಾವನೆ ಬಂದೊಡನೆ, ಅವಳ ಮೈ ತಂತಾನೆ ಕಂಪಿಸಿತು. ಅಷ್ಟು ಕ್ರೂರವಾಗಿತ್ತು, ಹೀರೆಯ ಯೋಜನೆ!

ಹೀರಾ ಕೂಡಲೇ ತನ್ನ ಸುತ್ತಲಿರುವ ದಾಸಿಯರನ್ನು ಹೊರಕಳುಹಿಸಿದಳು. ಒಳ್ಳೇ ಮಾನವತಿಯಂತೆ ತನ್ನ ಸೆರಗನ್ನು ಸರಿಪಡಿಸಿಕೊಂಡಳು. ಕಣ್ಣಲ್ಲಿ ಉಕ್ಕುತ್ತಿದ್ದ ತನ್ನ ಅಂತರ್ಯದ ಉದ್ವೇಗವನ್ನು ಮರೆಮಾಡಿ, ಸೌಮ್ಯ ಸ್ವರದಿಂದ, ''ಅಕ್ಕಾ(!)'' ಎಂದು ಮಾತಿಗೆ ಮೊದಲು ಮಾಡಿದಳು.

''ನಾನು ಮಾಡುವ ಕೆಲಸ ಮನ ಮೆಚ್ಚಿಕೆಯದೆಂದು ತಿಳಿದಿದ್ದೀಯಾ? ಅದರಿಂದ ನನ್ನ ಮನಸ್ಸಿನಲ್ಲಿ ಉಂಟಾಗಿರುವ ಜಿಗುಪ್ಸೆಯನ್ನು ನೀನೇನು ಬಲ್ಲಿ? ಈ ಪುರುಷರ ದೈಹಿಕ ದಬ್ಬಾಳಿಕೆಗೆ ಮಣಿಯುವುದು ಇದೇ ಕಡೆಯದು; ನಾಳೆಯಿಂದಲೇ ಸಾದಾ, ಸರಳ ಜೀವನವನ್ನು ನಡೆಸಿ ತೀರುವವಳೆಂದು ನಾನು ಅದೆಷ್ಟು ಸಲ ನಿರ್ಧರಿಸಿದ್ದೆ! ಆದರೇನು, ನನ್ನ ದುರ್ದೈವ, ನನ್ನ ನಿರೋಧ ನಿರ್ಧಾರವೆಲ್ಲ ಮರುದಿನಕ್ಕೆ ನೀರಾಗಿ ಹೋಗುತ್ತಿತ್ತು. ಗಂಡಸರ ಆಕರ್ಷಣ ಶಕ್ತಿಯೇ ಅಂಥದು. ನೀನೊ, ಅದಕ್ಕೆ ಇದುವರೆಗೆ ಬಲಿ ಬಿದ್ದವಳಲ್ಲ. ಆದ್ದರಿಂದ ಅದರ ಬಲವೆಷ್ಟೆಂಬುದನ್ನು ಅರಿಯಲಾರಿ. ಆಹಾ ! ಗಂಡಸರು ನಮ್ಮನ್ನು ವಶಪಡಿಸಿಕೊಳ್ಳುವುದಕ್ಕೆ ಧಾವಿಸಿ ಬರುವ ಬಗ್ಗೆಯೊ ! ಅತಿ ಬಲವತ್ತರ. ಆ ಆಕರ್ಷಣೆಯ ಹಿಂಸೆಯೊ; ತಾಳಲಾರದಂತಹದು; ಆದರೂ ಬೇಡವೆನ್ನಿಸುವುದಿಲ್ಲ... ಅಂತೆಯೇ ಯಾವ ಹೆಂಗಸಾದರೇನು ಅದಕ್ಕೆ ಮಣಿಯಲೇಬೇಕು. ಹೀಗಿದೆ ನೋಡು, ನನ್ನ ಹಾಳು ಬಾಳುವೆ.''

ಈ ನಿವೇದನೆಯಿಂದ ತಾರಾ ಬೆರಗಾಗಿ ಬಿಟ್ಟಳು. ಈ ಧರತಿಯ ವಿಚಾರ ಸರಣಿಯನ್ನು ಅವಳು ತನ್ನ ದ್ರವ್ಯಾಭಿಲಾಷೆಯ, ಕಾಮುಕ ವೃತ್ತಿಯ ಸೋದರಿಯ ಬಾಯಿಯಿಂದ ಎಣಿಸಿದವಳೇ ಅಲ್ಲ. ಕೂಡಲೇ ತಾರೆಗೆ ಪ್ರತಿಸ್ಪರ್ಧಿತನವು ಮೇಲ್ವಾಯ್ದು ಬಂದಿತು.

''ತಂಗೀ, ಕೊನೆಗೊಮ್ಮೆ ಬುದ್ಧದೇವನು ನಿನ್ನ ಮೇಲೆ ದಯೆತೋರಿದನು! ಪಾಪಾಚರಣೆಯ ವಿಷಯದಲ್ಲಿ ನಿನ್ನಲ್ಲಿ ಮೂಡಿದ ಜಿಗುಪ್ಸೆಯು, ನಿನ್ನ ಉದ್ಧಾರ ಮಾರ್ಗದ ಪ್ರಥಮ ಸೋಪಾನವೆಂದೇ ತಿಳಿ. ನಿನ್ನಲ್ಲಿಯ ಒಂದೇ ಲೋಪವೆಂದರೆ, ಆತ್ಮವಿಶ್ವಾಸವಿಲ್ಲದಿರುವುದು. ಅಂತೆಯೇ ದೈಹಿಕ ಸುಖದ ಆಕರ್ಷಣೆಯಿಂದ ವಿಮುಖಳಾಗುವುದು ಶಕ್ಯವಿಲ್ಲ ಎಂದೆನ್ನುವಿ. ಸತ್ಪಥದಲ್ಲಿಯೆ ನಾನು ನಡೆಯುವವಳು

ಎಂದು ನಿರ್ಧಾರ ಮಾಡು. ಆಗ ತಂತಾನೆ ಆತ್ಮವಿಶ್ವಾಸವೂ, ಸ್ಥೈರ್ಯವೂ ಮೂಡುವುದು. ಜಗತ್ತಿನಲ್ಲಿ ಹಾಗೆ ಎಷ್ಟು ಜನ ನಡೆದಿಲ್ಲ. ನಮ್ಮ ಧರ್ಮದಲ್ಲಿಯೆ—''

''ಹೌದು, ಹೌದು. ನಿನ್ನ ಧರ್ಮದಲ್ಲಿಯ ಅಂಥವರು ತುಂಬಾ ಜನರ ಕತೆ ಕೇಳಿದ್ದೇನೆ. ಸನ್ಮಾರ್ಗಕ್ಕೆ ಹತ್ತಿದವರನ್ನೂ ಬಲ್ಲೆ, ಆದರೆ—''

ಹೀರಾ, ತನ್ನ ಮಾತನ್ನು ನಿಲ್ಲಿಸಿ ಒಂದು ದೊಡ್ಡ ನಿಟ್ಟುಸಿರನ್ನು ಬಿಟ್ಟು, ತಲೆತಗ್ಗಿಸಿಕೊಂಡೇ ಹೇಳತೊಡಗಿದಳು—

''ದೇವರು ಪುರುಷರಿಗೆ ಅಪಾರ ಶಕ್ತಿಯನ್ನೂ, ಚೈತನ್ಯವನ್ನೂ ಕೊಟ್ಟಿದ್ದಾನಲ್ಲವೆ? ಅದರ ಬಲದಿಂದ ಅವರು ಎಂಥ ಸ್ತ್ರೀಯನ್ನೂ ಬಲೆಯಲ್ಲಿ ಹಿಡಿಯಬಲ್ಲವರಾಗಿದ್ದಾರೆ. ಪುರುಷನ ಪ್ರೇಮಪಾಶದಿಂದ ಬಂಧಿತಳಾಗದ ಸ್ತ್ರೀ ಇಲ್ಲವೇ ಇಲ್ಲ. ಪ್ರಣಯಿ ಪುರುಷನ ಮೋಹದ ಮಾತುಗಳಿಗೂ ಆರ್ತತೆಯ ಕೇಳಿಕೆಗೂ ವಿರೋಧಿಯಾಗಿ ತನ್ನ ಮನಸ್ಸು, ದೇಹಗಳನ್ನು ಹತೋಟಿಯಲ್ಲಿಟ್ಟುಕೊಂಡ ಸ್ತ್ರೀ ಜಗತ್ತಿನಲ್ಲಿಯೇ ಯಾರೂ ಇಲ್ಲ!''

''ಇದೇನು ಹೇಳುತ್ತೀ! ಯಾಕೆ! ನಾನು ಇಲ್ಲವೆ? ಪ್ರತ್ಯಕ್ಷ ಪರಿಶುದ್ಧ ಸ್ವರೂಪದಲ್ಲಿ ನಿನ್ನೆದುರೇ ನಿಂತಿದ್ದೇನಲ್ಲವೆ? ಹೀರಾ, ಇದುವರೆಗೆ ಯಾವ ಪುರುಷನಿಗೂ ಮನಸೋತುದಿಲ್ಲ ಎಂಬ ಬಗ್ಗೆ ನಿನಗೆ ಸಂಶಯವಿದೆಯೆ?'' ತಾರಾ ಬಿಂಕದಿಂದ ದನಿಯೇರಿಸಿ ಪ್ರಶ್ನೆ ಮಾಡಿದಳು.

''ಛೇ, ಎಂದಿಗೂ ಆ ಸಂಶಯವಿಲ್ಲ...''

''ಮತ್ತೆ! ಪುರುಷನ ಪ್ರೇಮಪಾಶದಿಂದ ಬಂಧಿತಳಾಗದ ಸ್ತ್ರೀ ಇಲ್ಲವೆ ಇಲ್ಲ ಎಂದು ನೀನು ಹೇಳುವುದು ಶುದ್ಧ ಮತಿಗೇಡಿತನವೇ ಸೈ. ನಾನು 'ವಿಹಾರ'ದಲ್ಲಿ ಸೇರಿರುವಾಗಲೇ ಅದೆಷ್ಟು ಜನ ಪುರುಷರು ನನ್ನ ಬೆನ್ನ ಹಿಂದೆ ತಾಗಿದ್ದಾರೆ, ಬಲ್ಲೆಯಾ? ದಿನದ ಕಾಯಕವನ್ನು ಮುಗಿಸಿಕೊಂಡು ರಾತ್ರಿ ನನ್ನ ಕೋಣೆಯನ್ನು ಸೇರುವ ಗಳಿಗೆಯಲ್ಲೂ, ನಾನಾ ಕಡೆಗಳಿಂದ ಬಂದ ಸಿರಿವಂತರು, 'ಒಮ್ಮೆಯಾದರೂ ಮಾತನಾಡಲು ಅವಕಾಶ ಕೊಡು, ಇದು ನೋಡು, ನಿನಗಾಗಿ ನಾನು ಏನೇನು ತಂದಿದ್ದೇನೆ. ನನ್ನ ಸರ್ವಸ್ವವನ್ನೂ ಸೂರೆಗೈಯುವೆ...' ಎಂದೆಲ್ಲ ಒರಲುವರು. ಅದಕ್ಕೆ ಒಮ್ಮೆಯಾದರೂ ನಾನು ಮಣಿದುದುಂಟೆ? ಅವರತ್ತ, ನಾನು ಕಣ್ಣೆತ್ತಿ ಕೂಡಾ ನೋಡಿದುದಿಲ್ಲ. ಮುಖ್ಯ, ಆ ರೀತಿ ಸರಿಯಲ್ಲ ಎಂದು ಮನಸ್ಸಿಗೆ ಅನಿಸಬೇಕು. ಮನವಿದ್ದಲ್ಲಿ ಮಾರ್ಗ! ಆಗ ಲೈಂಗಿಕಾಕರ್ಷಣೆಯನ್ನು ತೊಡೆಯುವ ಆತ್ಮಸಾಮರ್ಥ್ಯ ತಾನೇ ಬರುತ್ತದೆ.

''ಹೌದೇ, ನೀನು ಇದುವರೆಗೆ ಲೈಂಗಿಕ ವಿಚಾರ ಮಾಡಿದವಳಲ್ಲ ಎಂಬುದನ್ನು ಚೆನ್ನಾಗಿ ಬಲ್ಲೆ'' ಎನ್ನುತ್ತ ಹೀರಾ ದೈನ್ಯತೆಯ ನೋಟವನ್ನು ಅವಳೆಡೆಗೆ ಬೀರಿದಳು. ತನ್ನ ಸಹಜಾತೆಯ ದೈವಿಕಳೇಯನ್ನು ತಾನು ಎದುರಿಸಲಾರೆ ಎಂಬಂತೆ, ಆ ನೋಟವನ್ನು ಬೇರೆಡೆ ತಿರುಗಿಸಿ ಹೇಳತೊಡಗಿದಳು:

"ಇಷ್ಟರವರೆಗೆ, ನೀನು ಈ ಬಲೆಯಿಂದ ತಪ್ಪಿಸಿಕೊಂಡುದಕ್ಕೆ ನಿನ್ನ ಸದ್ಯದ ಪರಿಸರವೇ ಕಾರಣ. ಸಾಮಾನ್ಯ ಸುಖದ ಲೌಕಿಕ ಜಗತ್ತಿಗೂ, ನಿಮ್ಮಂತಹವರ ಬದುಕಿಗೂ ಎಷ್ಟೋ ಅಂತರವಿದೆ, ನಿನ್ನ ಧಾರ್ಮಿಕ ಆಸಕ್ತಿ ಕಠಿಣ ಸೇವಾವ್ರತ, ರೋಗಿ ಜನ ಶುಶ್ರೂಷೆ, ಮತ್ತೆ ನಿನ್ನಂತಹವರೇ ಆದ ಭಿಕ್ಷುಣಿಯರ ಸಮುದಾಯ— ಈ ಕೋಟೆ-ಕೊತ್ತಲಗಳಲ್ಲಿ ನೀನು ಸುರಕ್ಷಿತವಾಗಿದ್ದೀಯಾ! ನಾನು ಅರಕ್ಷಣೀಯಳು! ಪುರುಷರ ಸಮ್ಮೋಹನಾಸ್ತ್ರಗಳಿಂದ ಹೋಗಲೆಡೆಯೇ ಇಲ್ಲದ ಏಕಾಂಗಿನಿ. ತಾರಾ ನೀನೇನೇ ಹೇಳು. ನಿನ್ನ ಮಾನಸಿಕ ಸ್ಥೈರ್ಯವೊಂದರಿಂದಲೇ ನೀನು ನಿನ್ನ ಸ್ತ್ರೀತ್ವವನ್ನು ಉಳಿಸಿಕೊಂಡಿಯೆಂಬುದರ ಬಗ್ಗೆ, ನನಗೇನೂ ನಂಬಿಕೆಯಿಲ್ಲ. ನೀನು ಒಬ್ಬ ಸುಂದರ ವ್ಯಕ್ತಿತ್ವದ ತರುಣನ ಸಮ್ಮುಖದಲ್ಲಿ ನಿಲ್ಲುವ ಪ್ರಸಂಗ ಬಂದರೆ, ನೀನು ಸಹಿತ ಅವನ ಪ್ರಣಯ ಯಾಚನೆಗೆ ಮನಸೋಲುವಿ ಎಂಬುದು ನಿಸ್ಸಂದಿಗ್ಧ."

"ಇಲ್ಲ! ಸರ್ವಥಾ ಇಲ್ಲ!" ಎಂದು ತಾರಾ ಚೀರುದನಿಯಲ್ಲಿ ನುಡಿದಳು. "ನನ್ನ ನಿತ್ಯದ ಪರಿಸರವನ್ನು ಬಿಟ್ಟು ಬಂದೂ, ಆತ್ಮ ಸಾಮರ್ಥ್ಯವೊಂದರ ಬಲದಿಂದಲೇ, ನಾನು ಪುರುಷರ ಪ್ರಣಯ ಶಕ್ತಿಯನ್ನು ಗೆಲ್ಲಬಲ್ಲೆ. ಬೇಕಾದರೆ ಅದರ ಪರೀಕ್ಷೆಯಾಗಿಬಿಡಲಿ!"

ಹೀರಾಳಿಗೆ ಬೇಕಾದದ್ದೇ ಅದು !!

"ನಿನ್ನ ಕಡೆಯಿಂದ ಅದು ಆಗದು, ಕಂಡೆಯಾ" —ಎಂದು ಹೇಳುತ್ತ ಹೇಳುತ್ತ ಅಂಥ ಒಂದು ಪಂಥಕ್ಕೆ ತನ್ನ ಒಡಹುಟ್ಟಿದವಳನ್ನು ಎಳೆದು ತಂದಳು— ಅದೂ ತಾರೆಯ ಅಪೇಕ್ಷೆಯ ಮೇರೆಗೆ ಎಂಬಂತೆ! ತಾರಾ ಅಂಥ ಒಂದು ಪಂಥದಲ್ಲಿ ಗೆದ್ದ ಮೇಲೆಯೇ ಅಲ್ಲವೆ, ಹೀರಾ ತನ್ನ ಪಾಪಾಚರಣೆಯಿಂದ ನಿವೃತ್ತಳಾಗುವುದು! ಹೀರಾ ನುಡಿದಳು:

"ಆಗಲಿ! ನೀನು ಬೇಡವೆಂದರೆ ಕೇಳಲೊಲ್ಲಿ ಇನ್ನೇನು ಮಾಡುವುದು? ನೋಡು, ಪ್ರಮೋದಸಾರನೆಂಬ ನನ್ನೊಬ್ಬ ವಲ್ಲಭನು ನಾಳೆ ರಾತ್ರಿ ತಾನು ಬರುವುದಾಗಿ ಹೇಳಿ ಕಳುಹಿಸಿದ್ದಾನೆ. ಅವನ ಭವ್ಯ ರೂಪವನ್ನೂ, ಸುಂದರ ಮೈಕಟ್ಟನ್ನು ನಾನು ಬೇರೆ ಯಾರಲ್ಲಿಯೂ ಕಾಣಲಿಲ್ಲ. ನನ್ನ ಎಲ್ಲ ಪ್ರಿಯಕರರಲ್ಲಿ ಆತನೇ ನನಗೆ ಅಚ್ಚುಮೆಚ್ಚು. ಬರುವಾಗ ಪ್ರತಿಸಲವೂ ಅವನು ನನಗೆ ನಾನಾ ವಿಧದ ಉಡುಗೊರೆಗಳನ್ನು ತರುತ್ತಾನೆ. ಇನ್ನವನು ಬರಿಗೈಯಿಂದ ಬಂದರೂ ನಾನು ಹಿಂದೆ ಕಳಿಸಿಯೇನೆ? ಇಲ್ಲ. ನಾನೇ ಹಣ ತೆತ್ತಾದರೂ ಅವನೊಡನೆ ಸುಖಿಸಬೇಕೆನ್ನುವಷ್ಟು ಪ್ರಮೋದನು ರೂಪಸುಂದರನೂ, ಪ್ರಣಯರಸಿಕನೂ ಆಗಿದ್ದಾನೆ."

"ಅವನನ್ನು ನಾನು ಜಯಿಸಬಲ್ಲೆ."

"ಹಾಗೇ ಮಾಡುವಿಯಂತೆ! ಹೇಗೂ, ನನ್ನ ನಿನ್ನ ರೂಪ ಒಂದೇ ಆಗಿದೆ. ನಾಳೆಯ ದಿನ ಅವನನ್ನು ಎದುರುಗೊಳ್ಳು. ಇಬ್ಬರೂ ಭೋಜನ ಮಾಡಿರಿ. ಆಮೇಲೆ, ಅವನು ನಿನ್ನನ್ನು ಹೀರಾ ಎಂದೇ ಭಾವಿಸಿ, ದೇಹ ಸಂಗವನ್ನು ಬಯಸಿದಾಗ, ನಿನ್ನ

ಸ್ತ್ರೀತ್ವವನ್ನು ಉಳಿಸಿಕೊಂಡು ತೋರಿಸು. ಇತ್ತ ನಾನು ನಿಮ್ಮ ಬದಿಯ ಕೋಣೆಯಲ್ಲಿ ಅಡಗಿರುತ್ತೇನೆ. ಮಧ್ಯರಾತ್ರಿಯವರೆಗೂ ಕಾಯುವೆ. ಆದರೂ ಈ ಪರೀಕ್ಷೆಯ ಹಟ ಬೇಡ, ತಾರಾ. ಆ ನಿಮಿತ್ತದಿಂದ, ಇಷ್ಟು ದಿನವೂ ಪರಿಶುದ್ಧಳಾಗಿ ಉಳಿದಿರುವ ನಿನ್ನ ಅಧಃಪತನಕ್ಕೆ ಕಾರಣವಾದೆನಲ್ಲ ಎಂದು ಭಯಪಡುತ್ತೇನೆ.''

''ಛೇ! ನನ್ನ ಉದ್ಧಾರದ ಯೋಚನೆ ನಿನಗೆ ಬೇಡ. ಇಕೋ, ನೀನು ಮಧ್ಯರಾತ್ರಿಯವರೆಗೆ ಏಕೆ, ಇಡೀ ರಾತ್ರಿ ಕಾಯ್ದರೂ ನಾನು ಆ ನಿನ್ನ ಪುರುಷನನ್ನು ದೂರವಿರಿಸಿ ತೋರಿಸುತ್ತೇನೆ.''

ಕುತ್ಸಿತ ನಗೆಯೊಂದು ಹೀರಾಳ ಮನದಾಳದಿಂದ ಹೊರಟು ಕಣ್ಣಿನಲ್ಲಿ ಮಿನುಗಿತು. ಅದನ್ನು ತಾರೆಗೆ ತೋರಗೊಡಬಾರದೆಂದು, ಅವಳು ಆಸನದಿಂದ ಇಳಿದು ತನ್ನ ಸಹೋದರಿಯ ಕಾಲನ್ನು ಹಿಡಿದಳು—ಅವಳ ಧೀ ಶಕ್ತಿಗೆ ಮಣಿವಳೊ ಎಂಬಂತೆ !

ಇತ್ತ ತಾರಾಳಿಗೆ ಒಂದು ಸಂಶಯ. ತಾನೇನೋ ಆ ಪುರುಷನ ವಶೀಕರಣದಿಂದ ಪಾರಾಗಿ ಶೀಲರಕ್ಷಣೆ ಮಾಡಿಕೊಳ್ಳಬಹುದು. ತನ್ನ ನಿರಾಕರಣ ದಿಂದ ಕುಪಿತನಾಗಿ, ಅವನು ತನ್ನ ಮೇಲೆ ಕೈಮಾಡ ಬಂದರೆ? ಅಂತಹ ಆಪತ್ಕಾಲ ಒದಗಿದ್ದೇ ಆದರೆ ಜೀವರಕ್ಷಣೆಗೆ ಇರಲೆಂದು ಒಂದು ಕಿರುಗತ್ತಿಯನ್ನು ಉಡಿಯಲ್ಲಿ ಇಟ್ಟುಕೊಳ್ಳಲು ಸಹೋದರಿಯಿಂದ ಅನುಮತಿ ಪಡೆದಳು. ಮರು ದಿನ ಸಂಜೆಗೆ ಮತ್ತೆ ಬರುವೆನೆಂದು ಹೇಳಿ ಅಲ್ಲಿಂದ ಹೊರಬಿದ್ದಳು.

ಮರುದಿನ ಸಂಜೆ ಸಮೀಪಿಸುವವರೆಗೂ ತಾರಾಮತಿಯು ಗ್ರಂಥಪಠಣ ದಲ್ಲಿಯೂ, ತಮ್ಮ ವಿಹಾರದ ಗುರುವಿನ ಬೋಧೆಯಲ್ಲಿಯೂ, ದ್ವಿಗುಣಿತ ಆಸಕ್ತಿ ಯಿಂದ ನಿರತಳಾದಳು, ತನ್ನ ಉಜ್ಜುಗಕ್ಕೆ ನೈತಿಕ ಧೈರ್ಯವನ್ನು ಗಳಿಸಲೆಂದು! ರೋಗಿಗಳನ್ನಂತೂ ಅತ್ಯಂತ ಕರುಣೆಯಿಂದ ಕಂಡು, ಶುಶ್ರೂಷೆಗೈದಳು. ಆ ರೋಗಿಗಳು ಕೂಡಾ ಒಂದು ಕಾಲಕ್ಕೆ ಪ್ರೇಮಪಾಶದಲ್ಲಿ ತೊಡಗಿಕೊಂಡು, ಬೇಸತ್ತು ಅದರಲ್ಲಿ ಈಗ ನಿಸ್ಸಾರವನ್ನು ಕಂಡವರೇ ಅಲ್ಲವೇ? ಪ್ರಕೃತ ಅವರ ಶರೀರದಲ್ಲಿ ಉಳಿದದ್ದೇನು? ತನ್ನ ಸಹಜಾತೆಯ ಹಣೆಬರವೂ ಹೀಗೆಯೇ ತಾನೇ. ಈಗ ಅವಳನ್ನು ತಾನು ಮೇಲೆತ್ತಿದುದಾದರೆ, ಅದರಂತಹ ಹೆಗ್ಗಳಿಕೆ, ಶ್ರೇಷ್ಠತ್ವ ತನ್ನ ಜೀವಮಾನದಲ್ಲಿ ಬೇರೊಂದಿಲ್ಲ... ಅಲ್ಲವೆ?

ಇತ್ತ ಹೀರಾ ಸುಮ್ಮನೆ ಕುಳಿತಿದ್ದಿಲ್ಲ. ಕಾಮೋದ್ದೀಪನದ ಸಮಸ್ತ ಕಲೆಗಳನ್ನು ಬಲ್ಲವಳಾದ ಆಕೆ, ತನ್ನ ಪ್ರತಿಸ್ಪರ್ಧಿನಿಯ ಹೆಮ್ಮೆಯನ್ನು ಇಳಿಸಲು ಒಂದೊಂದಾಗಿ ಅಸ್ತ್ರಗಳನ್ನು ಅಣಿಗೊಳಿಸತೊಡಗಿದಳು. ಬುದ್ಧಿಯ ಪ್ರಖರತೆಯು ಮಂದವಾಗುವಂತೆ ಮಸಾಲೆ, ಮತ್ತಿತರ ಪದಾರ್ಥಗಳನ್ನು ಅಡಿಗೆಯಲ್ಲಿ ಹಾಕಬೇಕೆನ್ನುವುದರ ಕುರಿತು ಅಡಿಗೆಯುವನಿಗೆ ಸಲಹೆ ಇತ್ತಳು. ತರತರಹದ ಪೇಯಗಳನ್ನು ಸಿದ್ಧಗೊಳಿಸಿದಳು. ಅಲ್ಲಿಂದ ಸಂಗೀತ ವ್ಯವಸ್ಥೆ. ಪಾರ್ಶ್ವದಲ್ಲಿ ಯಾರಿಗೂ ಕಾಣದಂತೆ, ಕೊಳಲು ವೀಣೆ

ಮುಂತಾದ ವಾದ್ಯಗಳ ಪ್ರವೀಣರನ್ನು ಕುಳ್ಳಿರಿಸಿ, ಹೃದಯದಲ್ಲಿ ಪ್ರೇಮರಸವುಕ್ಕಿ ಬರುವಂತೆ ಹಾಡಬೇಕಾದ ರಾಗಗಳನ್ನು ನಿರ್ದೇಶಿಸಿದಳು. ತನ್ನ ದಾಸಿಯರಿಗೆ ವಿವರವಾದ ಸೂಚನೆಗಳನ್ನಿತ್ತು, ಕಾತರದಿಂದ ಸೂರ್ಯಾಸ್ತವನ್ನು ಕಾಯುತ್ತ ಕುಳಿತಳು.

ತಾರಾ ಬಂದಳೆನ್ನುತ್ತಲೂ ಅವಳನ್ನು ಆತ್ಮೀಯತೆಯಿಂದ ಒಳಗೆ ಕರೆದೊಯ್ದಳು. ತಾರೆಯ ಮುಖವೂ ಉದ್ವಿಗ್ನತೆಯಿಂದ ಬಳಲಿ ಹೋಗಿದ್ದಿತು. ಕೂಡಲೇ ದಾಸಿಯರು ತಾರೆಯ ಸುತ್ತುವರಿದು, ಅವಳನ್ನು ಭವ್ಯವಾದ ಸ್ನಾನದ ಗೃಹಕ್ಕೆ ಕರೆದೊಯ್ದು, ಒಂದೊಂದಾಗಿ ಅವಳ ಮೈಮೇಲಿನ ವಸ್ತ್ರಗಳನ್ನು ಕಳಚಿದರು. ತಾರೆಗೂ ಅಲ್ಲಿರುವವರೆಲ್ಲ ಸ್ತ್ರೀಯರೇ ಆಗಿದ್ದರೂ ಮೈತುಂಬ ನಾಚಿಕೆ. ಇತ್ತ, ಅವರಲ್ಲಿ ಕೆಲವರು ಸೊಗಸಾದ ಸುಗಂಧಿತ ತೈಲವನ್ನು ಅವಳ ಸುಕೋಮಲವಾದ ಮೈಗೆ ಪೂಸಿ, ಮೆದುವಾಗಿ ತಿಕ್ಕಿದರು. ಆಮೇಲೆ ಉಳಿದವರು ಉಗುರು ಬೆಚ್ಚಗಿನ ಪನ್ನೀರಿನಿಂದ ಸ್ನಾನ ಮಾಡಿಸುತ್ತ, ಮತ್ತೊಮ್ಮೆ ಲಘುವಾಗಿ ಅವಳ ಮೈಯ ನರ, ಸ್ನಾಯುಗಳನ್ನು ನೀವಿದರು. ತಾರೆಗೆ ಸಂಕೋಚದಿಂದ ಇದೆಲ್ಲ ಬೇಡವೆನಿಸಿದರೂ, ಏನೂ ಹೇಳಲಾರದವಳಾದಳು. ಸ್ನಾನವನ್ನು ಮುಗಿಸಿ, ತೆಳು ಹಗುರು ಬಟ್ಟೆಗಳನ್ನು ಧರಿಸಿ ಆರಾಮವಾಗಿ ಕಾಲು ಚಾಚಿ ಕೂಡಬೇಕೆಂದಾಗ, ಇತ್ತ ವಾದ್ಯ ಸಂಗೀತದ ತಾನಗಳು ಒಂದೊಂದಾಗಿ ಕೇಳಿ ಬರತೊಡಗಿದವು. ಹಾಗೆ ವಿಶ್ರಾಂತಿಯನ್ನು ಪಡೆಯುತ್ತ ಕುಳಿತಿದ್ದಾಗ, ಎದುರಿಗಿನ ದೊಡ್ಡ ನಿಲುವುಗನ್ನಡಿಯಲ್ಲಿ ತನ್ನ ದೇಹದ ಆಕಾರವು ಇಡೀಯಾಗಿ ಕಾಣಿಸಿತು. ಎಂದಿನಕ್ಕಿಂತ ಇಂದು ತನ್ನ ಸ್ವರೂಪವೇ ಬದಲಾಗಿದೆ. ಇಷ್ಟೇ ಅಲ್ಲ, ತನ್ನ ಇಂದಿನ ರೂಪವು ಅತಿ ಸುಂದರವೆಂಬ ಭಾವನೆ ಬಂತು. ಪಕ್ಕಿಯಂತೆ ಹಾರಬಲ್ಲೆನೆನ್ನುವಷ್ಟು, ತನ್ನ ಸಮಸ್ತ ಶರೀರವು ಹಗುರಾಗಿ, ಅತೀವ ಚೈತನ್ಯದಿಂದ ಕೂಡಿದ್ದಾಗಿ ಮನಸ್ಸಿಗೆ ಅತ್ಯಂತ ಹಿತವೆನಿಸಿತು. ಛೀ, ದೈಹಿಕ ಸುಖದ ಈ ರೀತಿಯ ಕಲ್ಪನೆ ತನಗೆ ಬರಕೂಡದು—ಎಂಬುದಾಗಿ ತನ್ನನ್ನು ಬೈದುಕೊಂಡಳು.

ಇಷ್ಟರವರೆಗೆ ದೂರ ದೂರದಲ್ಲಿ ಸುಳಿಯುತ್ತಿದ್ದ ಹೀರಾ, ತನ್ನ 'ಮುದ್ದಿನ' ಸಹೋದರಿಯ ಬಳಿಗೆ ಬಂದು, ಅಚ್ಚೆಯಿಂದ ಅಪ್ಪಿಕೊಂಡು ಅವಳ ರೂಪ-ಲಾವಣ್ಯವನ್ನು ಮನಸಾರೆ ಹೊಗಳತೊಡಗಿದಳು. ಅದರಿಂದ ತಬ್ಬಿಬ್ಬಾದ ತಾರೆಯು, ಹೀರಾಳನ್ನು ಬೈದು ಸುಮ್ಮನಿರಿಸಬೇಕಾಯಿತು. ಪ್ರಮೋದಸಾರನು ಬರುತ್ತಿರುವ ವಿಷಯವನ್ನು ಮುಂದಾಗಿ ತಿಳಿದೊಡನೆಯೇ, ಹೀರಾ ತನ್ನ ನಿಯುಕ್ತ ಕೋಣೆಗೆ ಓಡಿದಳು.

ಹೀರಾ ಮಹಾ ಚತುರೆ! ಪ್ರಮೋದಸಾರನು ಇಲ್ಲಿ ಬಂದಾಗ ತಾರೆಯೊಡನೆ ಹೇಗೆ ನಡೆದುಕೊಳ್ಳುವ ಬಗ್ಗೆ ಮುನ್ಸೂಚನೆಗಳನ್ನು ಕಳಿಸಿಯೇ ಇದ್ದಳು.

ಪ್ರಮೋದಸಾರನು ಒಳಗೆ ಬಂದಾಗ, ತಾರೆಯ ಎದೆ ಢವಢವ ಎನ್ನುತ್ತಿತ್ತು. ಮೊದಲ ಮಟ್ಟಿಗೇ ತನ್ನನ್ನು ಹಿಡಿದುಕೊಂಡು ಮುದ್ದಿಡಬರುವನೆ? ಅಂತೆಯೇ ಅವಳ

ಎಡಗೈ ಉಡಿಯಲ್ಲಿಯ ಕಿರುಗತ್ತಿಯ ಮೇಲೆ ಆಡಿತು. ಪ್ರಮೋದಸಾರನೂ ಸೌಜನ್ಯದ ಪ್ರತಿಮೂರ್ತಿಯಂತಿದ್ದ! ಗೌರವದಿಂದ ಅವಳನ್ನು ವಂದಿಸಿದನು. ಬದಿಯಲ್ಲಿ ಕುಳಿತರೂ ಸಲಿಗೆಯನ್ನು ತೋರಿಸದೆ ಪರಸ್ಪರ ಕುಶಲ ಮಾತಿಗೆ ತೊಡಗಿದನು. ಆಮೇಲೆ, ತನ್ನ ಹಿಂದೆ ದಾಸಿಯೊಬ್ಬಳು ಹಿಡಿದುಕೊಂಡು ನಿಂತಿದ್ದ ಚಿನ್ನದ ಹರಿವಾಣಕ್ಕೆ ಕೈಹಾಕಿ, ತಾನು ಒಂದು ವಜ್ರದ ಹಾರವನ್ನೂ, ಚೀನಾಂಬರದ ಒಂದು ಶಾಲನ್ನೂ ಅವಳಿಗಾಗಿ ತಂದಿದ್ದು, ಅದನ್ನು ಅವಳಿಗೆ ಸ್ವಯಂ ಅರ್ಪಿಸಲು ಅನುಮತಿ ಬೇಡಿದನು.

ಅತ್ಯಂತ ನಯವಾಗಿ ಮಂಡಿಸಿದ ಆ ಕೋರಿಕೆಗೆ ಅಸಮ್ಮತಿಸುವುದು ತಾರೆಯಿಂದ ಸಾಧ್ಯವಾಗದೆ ಹೋಯಿತು. ಅದರಲ್ಲಿ ತಪ್ಪೇನೂ ಕಂಡುಬರಲಿಲ್ಲ. ಅವನು ಮೆಲ್ಲನೆ ಎದ್ದು ಪೊಟ್ಟಣವನ್ನು ಬಿಚ್ಚಿ ಆ ಸರವನ್ನು ಅವಳ ಕೊರಳಿಗೆ ಹಾಕಲೆಂದು ಅವಳ ಸನಿಹದಲ್ಲೇ ನಿಂತನು. ತಾರೆಯ ಮೈಯಲ್ಲಿ ನಡುಕ ಹುಟ್ಟಿತು. ಆ ಸರದ ಕೊಂಡಿಯನ್ನು ಕೂಡಿಸುವಾಗ ಅವಳ ಕುತ್ತಿಗೆಯ ಹಿಂಭಾಗಕ್ಕೆ ಅವನ ದೃಢ ಕೋಮಲ ಬೆರಳುಗಳ ಸ್ಪರ್ಶವಾಗಿ ಹೇಗೊ ಹೇಗೊ ಎನಿಸಿತು. ಆಕೆ ಅವನತ್ತ ಮುಖಿಯಾದಾಗ ಆ ಥಳಥಳಿಸುವ ವಜ್ರದ ಹರಳುಗಳು ಅವಳ ಕಣ್ಣುಗಳನ್ನು ಕೋರೈಸಿದುವು.

ಅನಂತರ ಪ್ರಮೋದನು ಆ ದಿವ್ಯ ಚೀನಾಂಬರವನ್ನು ಬಿಡಿಸಿ, ಅವಳ ಬೆನ್ನ ಮೇಲೆ ಹರಡಿ ಅವಳ ಭುಜಗಳ ಮೇಲೆ ಹೊದಿಸುವಾಗಿನ ಪ್ರಸಂಗದಲ್ಲೂ ಅವನು ಅವಳ ಮೇಲೆ ಯಾವ ಪ್ರಣಯೋತ್ಸುಕತೆಯನ್ನು ತೋರಲಿಲ್ಲ! ಇಷ್ಟೇ ಅಲ್ಲ, ತನ್ನ ಮಾತಿನಲ್ಲಿ ಅವಳಿಗೆ ಜಿಗುಪ್ಸೆ ಅಥವಾ ಅಸವಸವನ್ನುಂಟುಮಾಡಬಹುದಾದ, ಶೃಂಗಾರದ ಯಾವ ಮಾತನ್ನೂ ಅವನು ಆಡಲಿಲ್ಲ.

ಊಟದ ಸಮಯ ಸನ್ನಿಹಿತವಾಯ್ತೆಂದು ಚೇಟಿಯೊಬ್ಬಳು ಅರುಹಿದಾಗ, ಪ್ರಮೋದಸಾರನು "ನಾನು ೧೦-೧೨ ಮೈಲು ಅಶ್ವಾರೋಹಿಯಾಗಿ ಬಂದವ. ಮೈಯೆಲ್ಲ ಧೂಳುಮಯ. ಈ ಸ್ಥಿತಿಯಲ್ಲಿ ತಮ್ಮೊಟ್ಟಿಗೆ ಭೋಜನಕ್ಕೆ ಕುಳಿತುಕೊಳ್ಳಲು ನನಗೆ ಅತೀವ ಸಂಕೋಚವೆನಿಸುತ್ತದೆ" ಎಂದು ಚಡಪಡಿಸಿದನು. ತಾರೆಯು ಈಗ ಹಿರೆಯ ಸ್ಥಾನದಲ್ಲಿದ್ದವಳಲ್ಲವೆ! "ಯಾರಲ್ಲಿ? ಇವರ ಸ್ನಾನದ ವ್ಯವಸ್ಥೆ ಮಾಡಿರಿ" ಎಂದಳು.

ಕೂಡಲೆ ೨-೩ ಜನ ದಾಸಿಯರು ಬಂದು, ಇವಳಿಗೆ ಮಾಡಿದಂತೆಯೇ ಅವನ ಮೇಲುಬಟ್ಟೆಗಳನ್ನು ಕಳಚಿಬಿಟ್ಟರು. ಆಗ ತಾರಾ ತನ್ನೆದುರು ಕಂಡುದೇನು ಬಿಳಿಗೆಂಪು ಸಂಗಮವರಿ ಕಲ್ಲಿನಿಂದ ಮಾಡಿದ ಸಜೀವ ವಿಗ್ರಹ! ಆ ದೃಢಾಂಗನನ್ನು ಒಂದು ಕ್ಷಣವೆ ನೋಡಿ ಕೂಡಲೇ ದೃಷ್ಟಿಯನ್ನು ಬೇರೆಡೆ ತಿರುಗಿಸಿದ್ದರೂ, ಅದಿನ್ನೂ ಅವಳ ಕಣ್ಣನ್ನು ಕುಕ್ಕುತ್ತಿತ್ತು. ಅವಳು ಲಜ್ಜೆ ಮಾಡಿದ ಬಗೆಯೇ ಬೇರೆ. ಆದರೆ ಆ ದಾಸಿಯರು ಬೇಕೆಂದೇ ತಪ್ಪು ಅರ್ಥ ಮಾಡಿಕೊಂಡರೆಂಬುದು ಅವಳಿಗೆ, ಪಾಪ

ಹೇಗೆ ಗೊತ್ತಾಗಬೇಕು! ಇವಳಿಗೆ ಮಾಡಿಸಿದಂತೆಯೇ, ಅವನಿಗೂ ಪರಿಮಳದ ನೀರಿನ ಸ್ನಾನ ಮಾಡಿಸಿದರು. ಅನಂತರ ಅವನು ಶುಭ್ರ ವಸ್ತ್ರಗಳನ್ನು ಧರಿಸಿ ಬಂದು ಮಂದಹಾಸಯುಕ್ತನಾಗಿ, ಅವಳೊಡನೆ ಸಹ ಪಂಕ್ತಿ ಭೋಜನ ಮಾಡತೊಡಗಿದನು.

ಅದುವರೆಗೆ ಅವನ ರೂಪ, ಅವನ ನಡೆನುಡಿಗಳು ತನ್ನ ಮನಸ್ಸಿನ ಮೇಲೆ ವಿಶಿಷ್ಟ ಪ್ರತಿಕ್ರಿಯೆಯನ್ನುಂಟು ಮಾಡಿವೆ ಎಂಬುದನ್ನು ತಾರೆಯು ಅರಿತವಳಾಗಿ, ಅಧೀರೆಯಾದಳು. ಈಗ ತನಗಿರುವ ಆಧಾರವೆಂದರೆ ಹೇಗಾದರೂ ಮಾಡಿ ಪಂಥವನ್ನು ಗೆಲ್ಲುವ ಛಲ ಮತ್ತು ಆ ಕಿರುಗತ್ತಿ! ಆಗಾಗ ತನ್ನ ಉಡಿಯನ್ನು ತಟ್ಟಿ, ಅದರ ಸ್ಪರ್ಶವನ್ನು ಅನುಭವಿಸುತ್ತಿದ್ದಳು.

ಅದನ್ನು ಅವಳು ಉಪಯೋಗಿಸುವ ಪ್ರಸಂಗ ಬಾರದಂತೆಯೇ ಅವನ ನಡವಳಿಕೆ ಮುಂದುವರಿಯಿತು. ಇಬ್ಬರೂ ಶಯನಾಗಾರಕ್ಕೆ ಬಂದು ವಿವಿಧ ಪಾನೀಯಗಳನ್ನು ಸೇವಿಸುವಾಗಲೂ ಅವನು ಲೀಲಾಜಾಲವಾಗಿ ಮಾತನಾಡುತ್ತಿದ್ದ. ವಿಷಯ? ಯಾರೊ ಸೇನಾನಿಗಳ ಯುದ್ಧ ಪರಾಕ್ರಮ; ದೇಶವಿದೇಶಗಳ ವೈಚಿತ್ರ್ಯದ ಸುದ್ದಿಗಳು, ರತ್ನ ವೈಢೂರ್ಯಗಳ ಪರೀಕ್ಷೆ, ಲೋಕದ ಸ್ತ್ರೀ ಪುರುಷರ ನಡವಳಿಕೆಯ ಮೋಜು, ಸೌಂದರ್ಯದ ತಾತ್ವಿಕ ಮೀಮಾಂಸೆ ಇತ್ಯಾದಿ ಇತ್ಯಾದಿ!

ಅವರಿಬ್ಬರೂ ಆಡುತ್ತಿದ್ದ ಪ್ರತಿಯೊಂದು ಮಾತನ್ನೂ ಒಳ ಕೋಣೆಯಲ್ಲಿ ಹೀರಾ ಕೇಳುತ್ತಿದ್ದಳಲ್ಲವೇ? ಅವನು ತನ್ನ ಮೇಲೆ ಪ್ರಣಯೋತ್ಸುಕನಾಗಿ ಮುಂದುವರಿಯಬೇಕು; ಆಗ ತಾನು ಬಲವಾಗಿ ವಾದಿಸಿ, ಕುಲೀನ ಸ್ತ್ರೀ ಯಾವ ರೀತಿ ತನ್ನ ಶೀಲವನ್ನು ಎತ್ತಿ ಹಿಡಿಯುತ್ತಾಳೆ ಎಂಬುದನ್ನು ಮರೆಯಲ್ಲಿದ್ದ ಅವಳಿಗೆ ತೋರಿಸಬೇಕೆಂದರೆ ಅವಕಾಶವೇ ದೊರೆಯುತ್ತಿಲ್ಲ! ಇದು ತಾರೆಯ ಮನಃಸ್ಥಿಮಿತವನ್ನೇ ತಪ್ಪಿಸಿತು. ಅವಳ ತಾಳ್ಮೆಯು ವ್ಯಸ್ತವಾಯಿತು. ರಾತ್ರಿಯ ಹೊತ್ತು ಏರುತ್ತಲಿದ್ದರೂ ಅವಳ ಶೀಲವು ಸುಭದ್ರವಾಗಿಯೇ ಇದೆ. ನಿಜ. ಆ ಶೀಲದ ರಕ್ಷಣಾ ಸಾಮರ್ಥ್ಯ ತೋರಬೇಕಾದರೆ, ಅದರ ಮೇಲೆ ಧಾಳಿಯಾದಾಗ ತಾನೆ? ಅಂಥ ಧಾಳಿಯನ್ನು ಈ ಪುರುಷ ವ್ಯಕ್ತಿ ಮಾಡುತ್ತಲೇ ಇಲ್ಲವಲ್ಲ!

'ಆಯಿತು. ನಾನೇ ಆ ದಿಶೆಯಲ್ಲಿ ಮುಂದುವರಿಯುವೆ, ಅಲ್ಲಿಂದ ನನ್ನನ್ನು ರಕ್ಷಿಸಿಕೊಳ್ಳುವೆ' ಎಂದು ಯೋಚಿಸಿದಳು. ಪ್ರಣಯ ಚೇಷ್ಟೆಯಲ್ಲಿ ಮುಂದುವರಿಯುವ ಮಾನಸಿಕ ಸಿದ್ಧತೆಯನ್ನು ಅವಳ ಅಭ್ಯಂಜನ ಸ್ನಾನ, ಮಾದಕವಾದ ಊಟ, ಹಿನ್ನೆಲೆಯ ಸಂಗೀತ, ಮದಿರಾಯುಕ್ತ ಪೇಯ ಮುಂತಾದವುಗಳು ಅವಳಿಗರಿಯದಂತೆಯೇ ತಂದೊಡ್ಡಿದ್ದುವು.

ತಾರೆಯು ಅವನೆಡೆಗೆ ಕುಡಿನೋಟ ಬೀರಿದಳು. ಮುದದಿಂದ ನಕ್ಕಳು. ತಾನಾಗಿ ಅವನ ಕೈಬೆರಳನ್ನು ಹಿಡಿದಳು. ತಾನು ಇದೆಲ್ಲ ಮಾಡುವುದು ಕೃತ್ರಿಮವೆಂದು ಅಂದುಕೊಂಡಳು. ಹುಚ್ಚು ಹುಡುಗಿ! ಹಾಗೆ ಭಾವಿಸಿ ತನ್ನ ಹಾವಭಾವ ಮತ್ತು ವಿಲಾಸಗಳಿಂದ ಪ್ರಮೋದಸಾರನ ಬಳಿಯನ್ನು ಹೆಚ್ಚೆಚ್ಚು ಸಾರಿ ಹೋದಾಗ, ತನ್ನ

ದೇಹವು ಬುದ್ಧಿಯ ತರ್ಕಸರಣಿಯನ್ನು ಬದಿಗೊತ್ತಿ ಮೂಲ ಪ್ರಕೃತಿ ಗುಣವನ್ನು ಅರಸಿಕೊಂಡು ಹೋಗುತ್ತದೆ ಎಂಬುದನ್ನು ಆ ಗಳಿಗೆಗೆ ಅರಿಯದಾದಳು. ಅವಳೇನೂ ಅದು, ಇದು ಮಾತನಾಡುತ್ತಿದ್ದಳು. ಆದರೆ ಆ ಶಬ್ದಗಳಿಗೆ ಅರ್ಥ ವಿರಲಿಲ್ಲ. ತಾನು ಮಾಡುತ್ತಿರುವುದು ಮನಸ್ಸಿಗೆ ಬೇಕಾಗಿಯೊ, ಬೇಡವಾಗಿಯೊ ಎಂಬುದರ ಯುಕ್ತಯುಕ್ತತೆ ಉಳಿದಿರಲಿಲ್ಲ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಒಂದು ಗಂಡು ಮತ್ತು ಒಂದು ಹೆಣ್ಣು ಏಕಾಂತದಲ್ಲಿ ಸಂಧಿಸಿ ಮೋಹಪರವಶರಾದಾಗ ಆಗಬೇಕಾದ್ದೇ ಆಯಿತೆನ್ನಬಹುದು.

ಶಯನಾಗಾರದಲ್ಲಿ ಮಾತುಕತೆಯಾಗಲಿ, ರೋದನವಾಗಲಿ, ರಗಳೆಯಾಗಲಿ ಏನೊಂದೂ ಕೇಳಬರದಂತಾಗಲು ಇತ್ತ ಬದಿಯ ಕೋಣೆಯಲ್ಲಿದ್ದ ಹೀರೆಯ ಚಾಣಾಕ್ಷ ಬುದ್ಧಿಗೆ ಅಲ್ಲಿಯ ವಿದ್ಯಮಾನವು ತಿಳಿದುಹೋಯಿತು. ಮಧ್ಯ ರಾತ್ರಿ ಸಮೀಪಿಸುವುದಕ್ಕೆ ಎಷ್ಟೋ ಮುಂಚೆಯೆ ಅವಳ ವಿಜಯವು ಪರಿಪೂರ್ಣವಾಗಿತ್ತು! ಮಧ್ಯದ ಬಾಗಿಲನ್ನು ತೆರೆದು ಸಂಭ್ರಮದಿಂದ ಆ ಶಯನಾಗಾರವನ್ನು ಪ್ರವೇಶಿಸಿದಳು. ಅವಳ ಹಿಂದೆಯೇ ದಾಸಿಯರು ಏರು ನಡೆಯಿಂದ ಬಂದರು. ಹೀರಾ ತನ್ನ ಕೈಯಲ್ಲಿದ್ದ ದೀಪವನ್ನು ಮೇಲೆತ್ತಿ ಹಿಡಿದಳು. ಆಗ ಕಂಡುದೇನು? ತನ್ನ ಸಹೋದರಿಯು ಅರೆವಸ್ತ್ರೆಯಾಗಿ ಒರಗಿದ್ದಳು. ಅವಳ ಶೀಲ ರಕ್ಷಣೆಗೆಂದು ಇದ್ದ ಆ ಕಿರುಗತ್ತಿಯು ತನ್ನ ಒರೆ ಸಹಿತವಾಗಿ ಅವಳ ಉಡಿಯಿಂದ ಜಾರಿ ನೆಲಕ್ಕೆ ಬಿದ್ದಿದ್ದಿತು. ಕಾಮನ ಶರಗಳ ಮುಂದೆ ಅದು ಅಸಹಾಯವಾಗಿದ್ದಿತು.

ಆಗ ದಾಸಿಯರು ತಾರೆಯನ್ನು ಮೆಲ್ಲಗೆ ಮೇಲೆಬ್ಬಿಸಿದರು. ಸೋಲಿನ ಲಜ್ಜೆಯಿಂದ ಆಕೆ ನಡುಗುತ್ತಿದ್ದಳು. ತಾನಾಗಿ ಪುರುಷವಶೀಕರಣಕ್ಕೆ ಬಲಿಯಾಗಿದ್ದುದು, ಹೀರೆಗೆ ತಿಳಿದುಹೋಯಿತಲ್ಲ ಎಂಬ ಪ್ರಮೇಯವು ಅವಳನ್ನು ಅತಿ ಲಜ್ಜೆಗೊಳಿಸಿತು.

ಇತ್ತ ಹೀರಾ ಧಾವಿಸಿ ಬಂದು ತನ್ನ ಸಹೋದರಿಯನ್ನು ಬಲವಾಗಿ ತಬ್ಬಿ ಕೊಂಡಳು. ಸೋದರಿ ಭಾವದಿಂದಲ್ಲ ವಿಜಯದ ಉನ್ಮಾದದಿಂದ. ದಾಸಿ ಯರಲ್ಲಿಯೂ ಆ ಉನ್ಮಾದದ ಗಾಳಿ ಸೇರಿಕೊಂಡಿತೆನ್ನಬೇಕು. ಅವರೆಲ್ಲ ಸೇರಿ, ತಾರೆಯ ಸೆಜ್ಜೆಯನ್ನು ಹೂವು, ಸುಗಂಧ ದ್ರವಗಳಿಂದ ಸಜ್ಜುಗೊಳಿಸಿದರು. ತಮ್ಮ ಒಡತಿಯಂತೆಯೇ ಅವಳನ್ನೂ ವೇಷಭೂಷಣಗಳಿಂದ ಸಿಂಗರಿಸಿದರು. ಆ ಸಹಜಾತೆ ಯರನ್ನು ಜೊತೆಯಾಗಿ ನಿಲ್ಲಿಸಿ, ನರ್ತನಗೈದರು. ಇತ್ತ ಪ್ರಮೋದಸಾರನು ಒಮ್ಮೆ ಅವಳನ್ನು ಒಮ್ಮೆ ಇವಳನ್ನು ಇಮ್ಮಡಿ ಆಸೆಗಣ್ಣುಗಳಿಂದ ನೋಡುತ್ತಲಿದ್ದ. ಇದುವರೆಗೆ ತಾನು ಯಾರೊಡನೆ ಇದ್ದುದೆಂಬುದನ್ನು ತಿಳಿಯದಾದ! ಬೆಳಕು ಹರಿಯುವುದ ರಲ್ಲಿಯೇ ತಾರೆಯ ಕೌಮಾರ್ಯ ಹರಣದ ಹಾಗೂ ಹೀರೆಯ ಅಪ್ರತಿಮ ವಿಜಯದ ಸುದ್ದಿ ಎಲ್ಲೆಡೆಗೆ ಹರಡಿತು. ಅವಳ ಕೌಮಾರ್ಯದ ಜೊತೆಗೆ, ಇನ್ನೊಂದು ಅಂಶವು ಆ ರಾತ್ರಿಯಿಂದಲೆ ಕಣ್ಮರೆಯಾಯಿತು. ಅದುವೆ, ಪರಸ್ಪರರಲ್ಲಿದ್ದ ಮಾತ್ಸರ್ಯ ಮತ್ತು ಸ್ಪರ್ಧಾವೃತ್ತಿ!

ತಾರಾ ಬಲು ಬೇಗ ತನ್ನ ಹೊಸ ಜೀವನಕ್ಕೆ ಹೊಂದಿಕೊಂಡಳಲ್ಲದೆ, ಹೊರಗಿನ ಪುರುಷರನ್ನು ತೃಪ್ತಿಪಡಿಸುವಲ್ಲಿ ಹೀರೆಗೆ ಸರಿಮಿಗಿಲೆನಿಸಿದಳು. ಇಬ್ಬರೂ ಏಕತ್ರ ವ್ಯವಹಾರದ ಪಾಲುಗಾರರಂತೆ ನಡೆಯತೊಡಗಿದರು. ಅದರಲ್ಲಿಯೇ ಅವರು ಒಂದೇ ಬಗೆಯ ಹೆರಳು ಹಾಕಿಕೊಂಡು, ಅದೇ ಬಗೆಯ ಉಡಿಗೆ ಮತ್ತು ತೊಡಿಗೆಗಳನ್ನು ಧರಿಸಿಕೊಂಡು, ತಮ್ಮಲ್ಲಿಗೆ ಬರುವ ರಸಿಕ ಜನರನ್ನು ಯಾರು ಹೀರಾ, ಯಾರು ತಾರಾ ಎಂಬುದನ್ನು ತಿಳಿಯಗೊಡದೆ ಮರುಳು ಗೊಳಿಸುವುದು ಮೋಜೆನಿಸುತ್ತಿತ್ತು. ಪ್ರಣಯಿ ಜನಕ್ಕಂತೂ ಅದು ಹಿತಾವಹವೇ ತಾನೆ. ಅವರ ರೂಪ ಸಾದೃಶ್ಯವು ಇನ್ನೂ ಅಭೇದ್ಯವಾಗಿಯೇ ಉಳಿದಿದ್ದಿತು.

ಹೀಗೆ ಇಬ್ಬರೂ ಆ ಉದ್ಯೋಗಕ್ಕೆ ತೊಡಗಿದ ಮೇಲೆ ಕೇಳುವದೇನಿದೆ! ಹೊನ್ನಿನ ಹೊಳೆಯೇ ಇವರ ಆವಾಸದಲ್ಲಿ ಹರಿಯಿತು. ಯಾವ ಇತರ ಉದ್ಯೋಗಸ್ಥನೂ ಇವರಷ್ಟು ಲಾಭದಾಯಕವಾಗಿ ಸಂಪತ್ತನ್ನು ಗಳಿಸಿದುದಿಲ್ಲ; ತಾಯಿಯ ಸೌಂದರ್ಯದ ಜೊತೆಗೆ, ಅವಳ ವ್ಯಾಪಾರ ವೃತ್ತಿಯೂ ಅವರಲ್ಲಿ ಮೂಡಿ ಬಂದಿದ್ದಿತು. ತಂದೆಯ ಮಹತ್ವಾಕಾಂಕ್ಷೆಯಂತೂ ಇದ್ದೇ ಇದ್ದಿತು. ಚಿನ್ನದ ವರಹಗಳು, ಆಭರಣಗಳು, ಕತ್ತಲೆಯ ಮನೆಯಲ್ಲಿ ಇಲಿಗಳು ತೂರಿಕೊಂಡಂತೆ ಸೇರಿದವು. ಆ ನಾಡಿನಲ್ಲೇ ಅವರಷ್ಟು ಸಿರಿವಂತರು ಇನ್ನಾರೂ ಇಲ್ಲ ಎಂಬುದು ನಿರ್ವಿವಾದ ವಿಷಯವಾಗಿದ್ದಿತಾದರೂ ಆ ಸಂಪತ್ತಿನ ಲೆಕ್ಕ ಅವರಿಗೆಯೇ ಹತ್ತಿದ್ದಿಲ್ಲ! ಆದರೆ, ಈ ಸಂಪತ್ತಿಗೆ ಸೂಜಿಗಲ್ಲಿನಂತಿದ್ದ ಅವರ ಯೌವನವನ್ನು ಕಾಲರಾಯನು ಕ್ರಮೇಣ ಹರಣ ಮಾಡತೊಡಗಿದನು! ಅವರು ತಮ್ಮ ಕಣ್ಣಿನ ಕೆಳಗೆ ಕಾಣಿಸಿಕೊಂಡ ಕಪ್ಪು ಕಲೆಯನ್ನೂ, ಮೈಚರ್ಮದ ನುಣುಪು ಹೋಗಿ ಸುಕ್ಕುಗಟ್ಟುತ್ತಿರುವುದನ್ನೂ ಬಣ್ಣ ಹಚ್ಚಿ ಅಪೂರ್ವ ಕೌಶಲ್ಯದಿಂದ ಮರೆಮಾಚ ಬಯಸಿದರೂ, ಶೃಂಗಾರಿಕರಿಗೆ ಅದು ವೇದ್ಯವಾಗದೇ ಉಳಿಯಲಿಲ್ಲ. ಬರಬರುತ್ತ ಗಿರಾಕಿಗಳು ಕಡಿಮೆಯಾದರು. ತಮ್ಮ ವಾದ್ಯ ಸಂಗೀತವನ್ನು ಕೇಳುವವರು ಇಲ್ಲ ಎಂಬ ಪರಿಸ್ಥಿತಿ ಬಂತೆಂದು ವಾದ್ಯಗಾರರು ಹುಲಿಮನೆ ಆಟವನ್ನು ಆಡತೊಡಗಿದರು. ಆ ನಿವಾಸದ ಮಹಾದ್ವಾರದ ಕೀಲಗಳು ಜಂಗು ತಿನ್ನಹತ್ತಿದುವು. ದ್ವಾರಪಾಲಕನು ರಾತ್ರಿಯೆಲ್ಲ ನಿದ್ದೆ ಮಾಡುವವನೇ ಆಗಿ, ಬೊಜ್ಜು ಬೆಳಸಿಕೊಂಡನು. ದಾಸಿಯರ ಪಡೆ ಹೇಳ ಹೆಸರಿಲ್ಲದೆ ಕರಗಿಹೋಯಿತು.

ಇತ್ತ ಮಹಡಿಯ ಮೇಲಿನ ಕೋಣೆಯಲ್ಲಿ ಚಿಕ್ಕ ದೀಪವನ್ನು ತಮ್ಮ ಮಧ್ಯದಲ್ಲಿಟ್ಟುಕೊಂಡು ಕುಳ್ಳಿರುತ್ತಿದ್ದ ಸಹೋದರಿಯರಿಬ್ಬರೂ ರಾತ್ರಿಯ ನೀರವತೆಗೆ ಭಯಗೊಳ್ಳುವರು. ಆಗ ಹಳೆಯ ಸುದ್ದಿಗಳನ್ನು ಹೇಳಿಕೊಂಡು ಮಾತನಾಡುವರು. ವಿಶೇಷತಃ ತಾರೆಯು ತನ್ನ 'ವಿಹಾರ'ದಲ್ಲಿಯ ಬದುಕನ್ನು ಕುರಿತು ಹೇಳಿ ಮರುಗುವಳು.

ಸ್ತ್ರೀಯರಿಗೆ ಸೌಂದರ್ಯ, ಯೌವನಗಳು ಹೋಗುವ ಸಮಯ ಬಂದಂತೆ ದೇವರು, ಧರ್ಮಗಳ ನೆನಪಾಗುವುದೇನೊ! ಹೀರೆಯು ಆಗಾಗ ಧಾರ್ಮಿಕ ಗ್ರಂಥಗಳನ್ನು ಓದುವಳು ತಾರೆಯೊಡನೆ ಚರ್ಚಿಸುವಳು.

ಒಮ್ಮೆ ಏನಾಯಿತೆಂದರೆ, ಬೆಳಗಿನ ಜಾವದಲ್ಲಿ ತಾರೆಯು ಕಣ್ಣುಬಿಟ್ಟಾಗ ಹೀರೆಯ ಹಾಸಿಗೆ ಬರಿದಾಗಿ ಕಂಡಿತು. ಹಿಂದೊಮ್ಮೆ ಆಕೆ ಹೀಗೆಯೇ ಓಡಿ ಹೋಗಿದ್ದಳಲ್ಲವೆ, ಆದರೆ ಆ ದಿನ ಆಕೆ ಸೂರ್ಯೋದಯದ ಸಮಯಕ್ಕೆ ಹಿಂತಿರುಗಿದಳು. ''ಎಲ್ಲಿ ಹೋಗಿದ್ದೆಯೆ?'' ಎಂದು ತಾರೆಯು ಕೇಳಿದಾಗ, ''ಇಲ್ಲೇ ವಿಹಾರಕ್ಕೆ ಹೋಗಿ ಬಂದೆ'' ಎಂಬ ಉತ್ತರ ಬಂತು. ಅಲ್ಲಿಂದ ಇಬ್ಬರೂ ಆಗಾಗ ಅಲ್ಲಿಗೆ ಹೋಗಿ ಬರುವುದು ಕ್ರಮಪ್ರಾಪ್ತವಾಯಿತು.

ಕೊನೆಗೊಂದು ದಿನ ನಸುಕಿನಲ್ಲಿ ಅವರಿಬ್ಬರೂ ತಮ್ಮ ಸಾದಾ ಬಟ್ಟೆಗಳನ್ನಷ್ಟೆ ಕಟ್ಟಿಕೊಂಡು, ಬಾಗಿಲು ಕಾಯುವವನು ಗೊರಕೆ ಹೊಡೆಯುತ್ತಿದ್ದಾಗಲೇ ಆ ಬಾಗಿಲು ದಾಟಿದರು. ಹಿಂದಿನ ದಿನವೇ ತಮ್ಮ ಉಳಿದ ಆಸ್ತಿಯನ್ನೂ, ಆ ಮನೆಯನ್ನೂ 'ವಿಹಾರ'ಕ್ಕೆ ದಾನವೆಂದು ಧಾರೆಯೆರೆದಿದ್ದರು.

ಅವರು ಪೇಟೆಯ ಹತ್ತಿರ ಬಂದಾಗ ಒಬ್ಬಿಬ್ಬ ವಯೋವೃದ್ಧರು ಏನೋ ಗುರುತು ಹತ್ತಿದವರಂತೆ ಧೇನಿಸಿ ನೋಡುತ್ತಿದ್ದರೆ ಸುಮಾರು 50 ವರ್ಷಗಳ ಹಿಂದೆ ಆ ಹೆಣ್ಣುಮಕ್ಕಳ ತಾಯಿ ಹೈಮವತಿಯು ಹೀಗೆಯೇ ಆ ಪ್ರಾಸಾದದಿಂದ ಹೊರಬಿದ್ದುದನ್ನು ಜ್ಞಾಪಿಸಿಕೊಂಡಿರಬೇಕು !

(ವಿಶ್ವವಿಖ್ಯಾತ Stephen Zweigನ
ಕತೆಯೊಂದರ ಆಧಾರ.)

‘ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ’

ಒಂದು ಊರಲ್ಲಿ ಒಬ್ಬ ಸಾಹುಕಾರನಿದ್ದನು. ಅವನಿಗೆ ಅಪಾರ ಐಶ್ವರ್ಯವೂ ಮಾನ-ಮರ್ಯಾದೆಯೂ, ಆರೋಗ್ಯಭಾಗ್ಯವೂ ಅಖಂಡವಾಗಿ ಇದ್ದುವು. ಐಹಿಕ ಭೋಗಕ್ಕೆ ಬೇಕಾದ ಎಲ್ಲ ಅನುಕೂಲತೆಗಳಿಂದ ಯುಕ್ತನಾಗಿ ಆತನು ಅತ್ಯಂತ ಸುಖಿಯಾಗಿದ್ದನು. ಅವನಿಗೆ ಸಂತಾನ ಭಾಗ್ಯವೂ ಇದ್ದಿತು. ಒಬ್ಬನೇ ಮಗ. ಆ ಹುಡುಗನೋ ‘ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ’ ಎಂಬ ಉಕ್ತಿಗೆ ಅನುಗುಣನಾಗಿದ್ದವ. ಎಂದರೆ ಅವನ ಒಲವು ಪಾರಮಾರ್ಥದ ಕಡೆಗೆ ಇದ್ದಿತು.

ತನ್ನ ಶಿಕ್ಷಣ ಕಾರ್ಯವನ್ನು ಮುಗಿಸಿ, ಅವನು ಯೌವನ ಕಾಲಕ್ಕೆ, ರೂಪವತಿಯೂ, ವಿನಯಶೀಲಳೂ, ಆದ ಸುಕನ್ಯೆಯೋರ್ವಳನ್ನು ಮದುವೆಯಾದನು. ತಂದೆಯ ಉದ್ಯೋಗದಲ್ಲಿ ತಾನೂ ತೊಡಗಿದನು. ಮಗ ಬುದ್ಧಿವಂತ; ಸದ್ಗುಣಿ. ಮೇಲಾಗಿ ಏಕಮಾತ್ರ ಪುತ್ರ. ತಂದೆ-ತಾಯಿಗಳಿಗೆ ಇದಕ್ಕೂ ಹೆಚ್ಚು ಏನು ಬೇಕು? ಇವನು ಅವರಿಬ್ಬರ ಜೀವದ ಜೀವಾಳವಾಗಿದ್ದನು. ಅವನ ಧರ್ಮಪತ್ನಿಯಾದರೂ ಅವನ ಮೇಲೆ ಅಮಿತ ಪ್ರೀತಿಯನ್ನಿಟ್ಟುಕೊಂಡಿದ್ದಳು. ಸಕಲೈಶ್ವರ್ಯದಿಂದ ಪ್ರಾಪ್ತವಾಗುವ ಸುಖಸಾಧನೆಗಳೆಲ್ಲವೂ ಆ ವಣಿಕಸುತನಿಗೆ ಇದ್ದುವು.

ಆದರೆ ಅವನಿಗೋ ಇದಾವುದರ ಕಡೆಗೆ ವಿಶೇಷ ಆಸಕ್ತಿ ಇರಲಿಲ್ಲ. ಮನಸ್ಸಿನಲ್ಲಿ ಅವನು ಯಾವಾಗಲೂ ಉದಾಸೀನವಾಗಿರುತ್ತಿದ್ದನು. ಹಾಗೆಂದು ಅವನಲ್ಲಿ ವೈರಾಗ್ಯ ಭಾವವು ತೀವ್ರವಾಗಿ ಇರಲಿಲ್ಲ. ತಂದೆ-ತಾಯಿ ಮತ್ತು ಪತ್ನಿಯ ಪ್ರೇಮಾತಿಶಯದ ಬಂಧನವನ್ನು ಹರಿದೊಗೆಯುವ ಮನೋಧೈರ್ಯ ಅವನಲ್ಲಿರಲಿಲ್ಲ. ‘ಈ ಮೂವರೂ ನನ್ನ ಮೇಲೆಯೇ ಜೀವವಿರಿಸಿದ್ದಾರೆ. ನಾನೇನಾದರೂ ಇಲ್ಲಿಂದ ಹೋದರೆ ಅವರು ಎಷ್ಟೊಂದು ದುಃಖಕ್ಕೀಡಾಗುವರಲ್ಲ’ ಎಂದು ಅವನಿಗೆ ಅನಿಸುತ್ತಿದ್ದಿತು.

ತನ್ನ ವೇಳೆಯೆಲ್ಲವನ್ನು ಅವನು ಆಸ್ತಿಕ ಗ್ರಂಥವಾಚನದಲ್ಲಿ ಕಳೆಯುತ್ತಿದ್ದನು. ಸಾಧು, ಸಂತರು ಊರಿಗೆ ಬಂದದ್ದಾದರೆ ಅವರ ಪ್ರವಚನಗಳನ್ನು ಶ್ರವಣ ಮಾಡುತ್ತಿದ್ದನು. ಮನೆಯ ವಾತಾವರಣವು ಅವನಿಗೆ ಹಿಡಿಸದಾಯಿತು. ಕ್ರಮೇಣ ಅವನ ಮುಮುಕ್ಷು ಭಾವವು ಬೆಳೆಯತೊಡಗಿತು.

ಆ ಸಮಯದಲ್ಲಿ ಅವನ ಊರಿಗೆ ಓರ್ವ ಸಾಧುವು ಬಂದನು. ಸಾಧುವು ಬ್ರಹ್ಮನಿಷ್ಠನೂ, ಪಂಡಿತನೂ, ಸ್ವಾರ್ಥರಹಿತನೂ ಆಗಿದ್ದನಾದ್ದರಿಂದ, ಊರಲ್ಲಿ ಅವನ ಪ್ರಸಿದ್ಧಿಯು ಹರಡಿತು. ಪ್ರತಿದಿನ ಸಾಯಂಕಾಲ ಅವನು ಆಸ್ತಿಕ ಜನರಿಗೆ ಆರ್ಷೇಯ ತತ್ವಜ್ಞಾನದ ತಿರುಳನ್ನು ತಿಳಿಸಿ ಹೇಳುತ್ತಿದ್ದನು. ಸಾಹುಕಾರ ಪುತ್ರನೂ ಅಲ್ಲಿಗೆ ಹೋಗುತ್ತಿದ್ದನು. ಆ ಸಾಧುವಿನ ಉಕ್ತಿ ಮತ್ತು ವೃತ್ತಿ ಅವನ ಮೇಲೆ ಸತ್ಪರಿಣಾಮವನ್ನುಂಟು ಮಾಡಿದವು. ಸಾಧುವಿನ ವಿಷಯದಲ್ಲಿ ಅವನ ಶ್ರದ್ಧೆ ಭಕ್ತಿಗಳು ಹೆಚ್ಚಿದುವು. ಆದರೆ ತನ್ನ ಮನದಲ್ಲಿಯ ಈ ತೊಳಲಾಟವನ್ನು ತೋಡಿಕೊಳ್ಳಲು ಸಂಕೋಚವಾಯಿತು. ಒಂದು ದಿನ ಧೈರ್ಯ ತಂದುಕೊಂಡು, ವೇದಾಂತ ಶ್ರವಣಕ್ಕೆಂದು ಬಂದಿದ್ದ ಎಲ್ಲರೂ ಹೋದ ಮೇಲೆ ಸಾಧುವನ್ನು ಏಕಾಂತದಲ್ಲಿ ಸಂಧಿಸಿದನು. ಸಾಂಸಾರಿಕ ಹಾಗೂ ಐಹಿಕ ಭೋಗಗಳ ಬಗ್ಗೆ ತನಗಿರುವ ನಿರಾಸಕ್ತಿ ಮತ್ತು ತನ್ನ ಕುಟುಂಬದ ಜನರ ಪ್ರೇಮಾತಿಶಯ ಇವುಗಳ ಮಧ್ಯೆ ತಾನು ತೊಳಲುತ್ತಿರುವೆನೆಂಬುದನ್ನು ಸಹಜ ಸ್ವರದಲ್ಲಿ ನೇರವಾಗಿ ನಿವೇದಿಸಿದನು. ಅವನ ನಿಷ್ಕಪಟ ವೃತ್ತಿಗೆ ಮನಸೋತಿದ್ದ ಸಾಧುವು—

''ಬಾಬಾ, ನಿನ್ನ ತಂದೆ-ತಾಯಿ, ಪತ್ನಿಯರು ನಿನ್ನ ಮೇಲೆ ಅತಿಶಯವಾದ ಪ್ರೇಮನ್ನಿಟ್ಟಿರುವರೆಂದು ನಿನಗೆ ಅನಿಸುವದಲ್ಲವೆ. ಆದರೆ ಅದರ ಪ್ರೇಮವು ಕೇವಲ ನಿನಗಾಗಿ ಅಲ್ಲ; ತಮಗಾಗಿ, ತಮ್ಮ ಸ್ವಾರ್ಥಕ್ಕಾಗಿ ಇದೆ. ಕುದುರೆಯ ಬಂಡಿಯವನು ತನ್ನ ಕುದುರೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಎಳೆಯ ಹುಲ್ಲನ್ನು ತಿನಿಸುತ್ತಾನೆ. ಮೈ ತಿಕ್ಕುತ್ತಾನೆ. ಮೈದಡವುತ್ತಾನೆ. ಅದರ ಮೇಲಣ ಪ್ರೀತಿಯಿಂದ ಹಾಗೆ ಮಾಡುವುದಿಲ್ಲ. ಬದಲು, ತನ್ನ ಹೊಟ್ಟೆಯನ್ನು ಹೊರೆಯುವಲ್ಲಿ ಉಪಯೋಗ ಬೀಳಲೆಂದು ಹಾಗೆ ಮಾಡುತ್ತಾನೆ. ಅದೇ ಕುದುರೆಯು ಮುಂದೆ ಮುಪ್ಪಿನಿಂದ ನಿರ್ಬಲವಾದರೆ ಅದರ ಪರಿಸ್ಥಿತಿ ತಿಳಿದದ್ದೇ ಇದೆ.''

''ಇರಬಹುದು. ಆದರೆ ರಕ್ತ ಸಂಬಂಧಕ್ಕೂ, ಇದಕ್ಕೂ ಹೋಲಿಕೆ ಹೇಗೆ ಸರಿಯಾದೀತು?''

''ಆಗದೆ ಏನು? ನೋಡು, ತಂದೆಯ ಗಡ್ಡ-ಮೀಸೆಯ ಸೂಜಿಯಂತಹ ಕೂದಲುಗಳು ಮಗುವಿನ ಎಳೆಯ ಮುಖಕ್ಕೆ ಒತ್ತಿ, ಅದು ಒಲ್ಲೆನೆಂದು ಗೋಗರೆಯುತ್ತಿದ್ದರೂ, ತಂದೆಯು ಒಂದೇ ಸಮನೆ ಮುದ್ದಿಡುತ್ತಾನೆ. ತಂದೆಯ ಈ ಮಮತೆಯ ಆವಿರ್ಭಾವವು ಮಗುವಿಗಾಗಿಯೋ, ತನಗಾಗಿಯೋ?'' —ಇದೇ ರೀತಿ ಸಾಧುವು ಸಂಸಾರ ಮೋಹ, ವಿರಕ್ತಿಗಳ ಪರಸ್ಪರ ಸಂಬಂಧವನ್ನು ವಿವರಿಸಿ, ಒಂದು ತತ್ಕಾಲೀನ, ಇನ್ನೊಂದು ಚಿರಂತನ; ಎಂಬುದಾಗಿ ಉಪದೇಶಿಸಿದನು. ಸಾಹುಕಾರನ ಮಗನಿಗೆ ಆ ಉಪದೇಶವೇನೊ ನಾಟಿತು. ಆದರೆ ತಂದೆ-ತಾಯಿ, ಹೆಂಡತಿಯರ ಮೋಹವು ಅವನಲ್ಲಿ ಅತ್ಯಂತ ದೃಢವಾಗಿ ಮೂಡಿತ್ತಾದರಿಂದ ಅದಕ್ಕೂ ಮುಂದೆ ಅವನು ಹೆಜ್ಜೆ ಇಡುವ ಧೈರ್ಯ ತೋರಲಿಲ್ಲ.

ಸಾಧುವು ಅವನ ಮನಸ್ಸಿನ ಒಳತೋಟಿಯನ್ನು ಸರಿಯಾಗಿಯೇ ಗ್ರಹಿಸಿದನು. ಮರುದಿನ ಮತ್ತೆ ಅವನು ಬಂದಾಗ ಸಾಧುವು—

"ಅಯ್ಯಾ, ನಮಗಾಗಿ, ನಮ್ಮ ಅನುಕೂಲತೆಗಾಗಿಯೇ ನಮಗೆ ಇತರ ವಸ್ತುಗಳು ಪ್ರಿಯವೆನಿಸುತ್ತವೆ. ನಿನ್ನ ಮಾತಾಪಿತೃಗಳು ತಮ್ಮ ಜೀವಕ್ಕಿಂತಲೂ ನಿನ್ನನ್ನು ಹೆಚ್ಚಿಗೆ ಪ್ರೀತಿಸುತ್ತಾರೆಂದು ನಿನಗನಿಸುವದಲ್ಲವೆ? ಒಳ್ಳೆಯದು, ಅವರ ಪ್ರೇಮದ ಇನ್ನೊಂದು ಬದಿಯನ್ನು ನೀನು ಕಾಣಬಹುದಾದ ಒಂದು ಉಪಾಯ ಹೇಳುತ್ತೇನೆ. ಮಾಡುವಿಯಾ...? ನಾಳೆ, ನಾನು ಇಲ್ಲಿಂದ ಹೊರಟುಹೋಗುತ್ತೇನೆ. ಅಲ್ಲಿಂದ ಕೆಲ ದಿನಗಳ ಅನಂತರ ನೀನು ಬೇನೆ ಬಂದವರಂತೆ ನಟಿಸು. ಅನ್ನ ನೀರುಗಳನ್ನು ತ್ಯಜಿಸು. ಹಾಸಿಗೆಯ ಮೇಲೆಯೆ ಮಲಗಿಕೊಂಡು ಕೇವಲ ಜೀವಧಾರಣೆಗೆ ಬೇಕಾಗುವಷ್ಟೇ ಗಂಜಿ, ಹಾಲುಗಳನ್ನು ಸೇವಿಸು. 'ಏನು ಜಡ್ಡು' ಎಂದು ವಿಚಾರಿಸಿದಲ್ಲಿ, ಹೊಟ್ಟೆ ಅಥವಾ ಎದೆಯಲ್ಲಿ ನೋಯುತ್ತದೆ ಎಂದು ಹೇಳು. ಔಷಧ...? ತೆಗೆದುಕೊಂಡರೂ ಸರಿ, ಬಿಟ್ಟರೂ ಸರಿ, ಹೀಗೆ ೨-೩ ತಿಂಗಳು ಅದೆಷ್ಟೊಂದು ಉಪಚಾರ ಮಾಡಿದರೂ ಗುಣವಾಗಲಿಲ್ಲ; ಅದು ಗುಣವಾಗುವ ಜಡ್ಡೆ ಅಲ್ಲ—ಎಂಬ ಭಾವನೆ ಎಲ್ಲರಲ್ಲಿ ಬರುವವರೆಗೆ ಕಾಯ್ದಿರು. ಆ ಸಮಯಕ್ಕೆ ನಾನು ಬರುತ್ತೇನೆ. ಎಲ್ಲವನ್ನೂ ಸರಿಪಡಿಸುತ್ತೇನೆ" ಎಂದನು.

ಸಾಹುಕಾರ ಪುತ್ರನಿಗೆ ಈ ವಿಚಾರವು ಬಲು ಒಪ್ಪಿಗೆಯಾಯಿತು. ಸಾಧುವು ಊರಿಗೆ ಹೊರಟುಹೋದ ೪-೫ ದಿನಗಳ ಮೇಲೆ ಇವನು ಹಾಸಿಗೆ ಹಿಡಿದನು. ಬೇನೆಯ ನಟನೆಯನ್ನು ಚೆನ್ನಾಗಿಯೆ ಮಾಡಿದನು. ಡಾಕ್ಟರರು, ವೈದ್ಯರು, ಹಕೀಮರು, ಮಂತ್ರವಾದಿಗಳು ಎಲ್ಲರೂ ಉಪಚರಿಸಿದರು.

ಈ ಅವಧಿಯಲ್ಲಿ ತನ್ನ ತಂದೆ-ತಾಯಿ, ಹೆಂಡತಿಯರ ಮನೋವ್ಯಾಕುಲತೆಯನ್ನು ಕಂಡು ಇವನ ಮನಸ್ಸಿಗೆ ತುಂಬಾ ನೋವಾಯಿತು. ತಾನು ಹೀಗೆ ಮಾಡಿದುದು ತಪ್ಪಾಯಿತೇ ಎಂಬ ಸಂದೇಹ ಬಾಧಿಸಿತು. ಆದರೂ ಸಾಧುವಿನ ಸದಿಚ್ಛೆಯ ಬಗ್ಗೆ ಅವನಿಗೆ ಬಲವಾದ ನಂಬಿಕೆ ಮೂಡಿತ್ತಾದ್ದರಿಂದ, ತನ್ನ ಬೇನೆಯನ್ನು ಇನ್ನೂ ಮುಂದುವರಿಸಿದನು.

ಇತ್ತ ಅವನ ತಂದೆಯು ನೀರಿನಂತೆ ಹಣವನ್ನು ವೆಚ್ಚ ಮಾಡಿದನು. ಹೆಂಗಸರಿಬ್ಬರೂ ಅವನ ಶುಶ್ರೂಷೆಯಲ್ಲಿ ಸೊರಗಿಹೋದರು. ಆದರೂ ಜಡ್ಡು ಗುಣವಾಗುವ ಬಗೆಯೆಂತು? ಮಗನ ರೋಗದ ಕಾರಣವೇ ಬೇರೆಯಿದ್ದಿತು. ಅದು ಲೌಕಿಕ ವಿಧಾನದಿಂದ ಗುಣವಾಗುವಂತಹದಿರಲೇ ಇಲ್ಲ. ಸಾಹುಕಾರನಾದರೂ, ಔಷಧೀ ಪ್ರಯತ್ನವಲ್ಲದೆ ದೇವಿಯು ಉಪಾಸನೆಯನ್ನು ಮಾಡಿದನು. ದಾನ-ಧರ್ಮವನ್ನು ನೀಡಿದನು. ತಾಯಿ, ಹೆಂಡತಿಯರೂ ವಿವಿಧ ದೇವತೆಗಳಿಗೆ ಹರಕೆ ಹೊತ್ತರು. ವ್ರತದ ನಿಯಮಗಳನ್ನು ಹಿಡಿದರು. ಊಂಹು! ಅವನೋ ದಿನದಿನಕ್ಕೆ ಸೊರಗುತ್ತ ಮೃತಾವಸ್ಥೆಗೆ ಬಂದನು. ಆ ಮೂವರೂ ಹೌಹಾರಿ ಹೋದರು.

ಗೊತ್ತು ಪಡಿಸಿದಂತೆ ಸಾಧುವು ಮತ್ತೆ ಆ ಊರಿಗೆ ಬಂದನು. ಈ ವಿಷಯ ಸಾಹುಕಾರನಿಗೆ ಗೊತ್ತಾಯಿತು. ಈ ಸಾಧುವಿನ ಪ್ರಸಾದದಿಂದಾದರೂ ತನ್ನ ಮಗನಿಗೆ ಗುಣವಾಗಬಹುದೇ ನೋಡೋಣ ಎಂಬ ಭಾವನೆಯಿಂದ, ಸಾಧುವಿನ ವಾಸಸ್ಥಾನಕ್ಕೆ ಬಂದು ತನ್ನ ಮನೆಗೆ ಆಗಮಿಸಿ, ತನ್ನ ಮಗನನ್ನು ಒಮ್ಮೆ ನೋಡಬೇಕೆಂದು ಬಿನ್ನವಿಸಿದನು.

ಮರುದಿನ ಸಾಧುವು ಮನೆಗೆ ಬರುತ್ತಲೂ, ಸಾಹುಕಾರನೂ, ಇತರರೂ ಭಯಭಕ್ತಿಯಿಂದ ಅವನನ್ನು ಆದರಿಸಿ ಒಳಗೆ ಕರೆದೊಯ್ದರು. ಸಾಧುವು ಮೊದಲ ರೋಗಿಯನ್ನು ಒಮ್ಮೆ ಅವಲೋಕಿಸಿ, ಹೊರಗೆ ಬಂದು ಸಾಹುಕಾರನಿತ್ತ ಆಸನದಲ್ಲಿ ಮಂಡಿಸಿದನು. ಅವನ ಮುಂದೆ ಇತರರು ವಿನೀತಭಾವದಿಂದ ನಿಂತುಕೊಂಡರು. ಆಗ ಸಾಹುಕಾರನೂ, ಅವನ ಪತ್ನಿಯೂ ಕಣ್ಣೀರು ಕರೆಯುತ್ತ—

''ಸಾಧೂ ಮಹಾರಾಜ, ಮಗನ ಸಂಕಟವನ್ನು ಕಣ್ಣಿನಿಂದ ನೋಡುವುದಕ್ಕಿಂತ, ದೇವರು ನಮ್ಮ ಕಣ್ಣು ಮುಚ್ಚಿಬಿಟ್ಟರೆ ನಿಶ್ಚಿಂತರಾಗುವೆವು'' ಎಂದರು. ಅವರ ಸೊಸೆಯು, ''ನನ್ನ ಗಂಡನನ್ನು ಬಿಟ್ಟು ನಾನು ಹೇಗೆ ಬದುಕಿರಲಿ? ಆಮೇಲೆ ದುಃಖಪಡುವುದಕ್ಕಿಂತ, ಈಗಲೇ ನನಗೆ ಮುತ್ತೈದೆಯ ಸಾವು ಬರಲಿ'' ಎಂದಳು. ಇದೇ ರೀತಿಯಾಗಿ, ಬಹುವಿಧದಲ್ಲಿ ಶೋಕಪಡುತ್ತಿದ್ದ ಆ ಮೂವರನ್ನೂ, ಇತರ ಬಂಧು-ಬಳಗದವರನ್ನೂ ಸಾಂತ್ವನಗೊಳಿಸುತ್ತ ಸಾಧುವು ಹೇಳಿದುದೇನೆಂದರೆ—

''ನಾನು ಒಂದು ಉಪಾಯವನ್ನು ಮಾಡಿ ನೋಡುತ್ತೇನೆ.''

''ಏನು ಹೇಳಿ, ಅಗತ್ಯವಾಗಿ ನೀವು ಸೂಚಿಸಿದ್ದನ್ನು ಮಾಡುತ್ತೇನೆ'' ಎಂದು ಸಾಹುಕಾರನು ಆತುರವನ್ನು ತೋರಿಸಿದನು. ಸಾಹುಕಾರ ಪುತ್ರನು ಒಳಗಿನಿಂದಲೇ ಎಲ್ಲವನ್ನೂ ಕೇಳುತ್ತಲಿದ್ದನು.

''ಏನಿಲ್ಲ, ಒಂದು ಅರ್ಧ ಸೇರು ಇದೀಗ ಹಿಂಡಿದ ಆಕಳ ಹಾಲನ್ನು ತರಿಸುವಿರಾ?'' ಎಂದು ತಾನು ತಂದಿದ್ದ ಒಂದು ಥಾಲಿಯನ್ನು ಅವರ ಕೈಗಿತ್ತನು.

ಕೂಡಲೇ ಸಾಹುಕಾರನು ಆಕಳ ಹಾಲನ್ನು ಹಿಂಡಿಸಿ ತರಿಸಿಕೊಟ್ಟನು. ಸಾಧುವು ಆ ಹಾಲಿನ ಪಾತ್ರೆಯನ್ನು ಹಿಡಿದುಕೊಂಡು ಎಲ್ಲರನ್ನು ಹೊರಗೆ ಕಳಿಸಿ ಬಾಗಿಲನ್ನು ಇಕ್ಕಿಕೊಂಡನು. ಅರ್ಧ ತಾಸಿನ ನಂತರ, ಬಾಗಿಲನ್ನು ತೆರೆದು ಹಸನ್ಮುಖದಿಂದ, ಅವರನ್ನು ಕುರಿತು—

''ಅಯ್ಯಾ, ಇನ್ನು ನೀವು ಹೆದರುವ ಕಾರಣವಿಲ್ಲ. ನಿಮ್ಮ ಮಗನು ತನ್ನ ಬೇನೆಯಿಂದ ಚೇತರಿಸಿಕೊಳ್ಳುವನು. ನಿಮ್ಮ ಕುಲದೇವತೆಯು ನಿಮ್ಮ ಮನೆತನದ ಮೇಲೆ ಕೋಪಗೊಂಡಿದ್ದರಿಂದ ಹೀಗಾಯಿತು. ನಾನೀಗ ಈ ಹಾಲನ್ನು ಮಂತ್ರಿಸಿ ತಂದಿದ್ದೇನೆ. ಯಾರಾದರೂ ಈ ಹಾಲನ್ನು ಕುಡಿದು ಬಿಟ್ಟರೆ ಅವನು ಕ್ರಮೇಣ ಗುಣಹೊಂದಿ ಮೇಲಕ್ಕೇಳುವನು. ಮಾತ್ರ, ಇದನ್ನು ಕುಡಿದವರು ಎರಡು ದಿನದಲ್ಲಿ ಸಾಯುವರು. ನಿಮ್ಮ ಕುಲದೇವತೆಯು ಕೋಪಶಮನಾರ್ಥವಾಗಿ ಒಂದು ಜೀವದ

ಬಲಿಯಾಗಬೇಕಾಗುತ್ತದೆ. ಅದು ಅನಿವಾರ್ಯ. ಹೇಳಿ, ನಿಮ್ಮ ಪೈಕಿ ಈ ಹಾಲನ್ನು ಕುಡಿಯಲು ಯಾರು ಸಿದ್ಧರಿದ್ದೀರಿ?'' ಎಂದು ನಿಶಾಂತ ಸ್ವರದಿಂದ ಕೇಳಿದನು.

ಸಾಧುವಿನ ಮಾತನ್ನು ಕೇಳಿ ನೆರೆದವರೆಲ್ಲ ಸ್ತಂಭೀಭೂತರಾದರು. ಕುಮಾರನ ಜೀವವೇನೊ ಅತಿ ಪ್ರಿಯವಾದುದು. ಆದರೆ ಅದಕ್ಕಾಗಿ ತಮ್ಮ ಜೀವನವನ್ನು ಕಳೆದುಕೊಳ್ಳಬೇಕೆ? ಸಾಧುವು ಸಾಹುಕಾರನತ್ತ ಪ್ರಶ್ನಾರ್ಥಕ ಮುದ್ರೆಯಿಂದ ನೋಡಿದನು. ಆಗ ಸಾಹುಕಾರನು ಹೇಳಿದುದೇನೆಂದರೆ—

''ಮಹಾರಾಜ, ನಾನು ಸತ್ತುದಾದರೆ ನನ್ನ ಮಗನು ಎದ್ದು ಕೂಡುವನೆಂಬುದು ಸರಿ. ಆದರೆ ನಾನು ಜೀವಂತವಿದ್ದುದಾದರೆ, ಈ ಅಪಾರ ಸಂಪತ್ತಿಗೆ ಯಾರನ್ನಾದರೂ ದತ್ತಕ ತೆಗೆದುಕೊಂಡಾದರೂ ವಾರಸುದಾರನನ್ನು ಪಡೆಯಬಹುದು. ಜಗತ್ತಿನಲ್ಲಿ ಎಲ್ಲರಿಗೂ ಎಲ್ಲಿ ಹೊಟ್ಟೆಯ ಮಕ್ಕಳಿರುತ್ತಾರೆ? ಆದ ಕಾರಣ ನಾನು ಜೀವ ಕಳೆದು ಕೊಳ್ಳುವುದು ಅಷ್ಟು ಸರಿ ಕಾಣುವುದಿಲ್ಲ.''

ಸಾಹುಕಾರನ ತಾಯಿ ಹೇಳಿದಳು, ''ಜಗತ್ತಿನಲ್ಲಿ ಪುತ್ರಶೋಕವೆಂಬುದು ಇದ್ದುದೇ. ಭಗವಾನ್ ಶ್ರೀಕೃಷ್ಣನೇ ಖಾಸಾ ಅಣ್ಣನಾಗಿರುವಾಗಲೂ ಸುಭದ್ರೆಗೆ ಪುತ್ರ ಶೋಕವು ತಪ್ಪಲಿಲ್ಲವಂತೆ. ನಮ್ಮದೇನು ಮಹಾ. ಮಗನನ್ನು ಕಳೆದುಕೊಳ್ಳುವುದೇ ನನ್ನ ಹಣೆಯಲ್ಲಿ ಇದ್ದುದಾದರೆ, ಅದು ಹೇಗೆ ತಪ್ಪೀತು? ನಾನು ಸತ್ತರೆ, ನನ್ನ ಮಗನನ್ನು ನೋಡುವುದೆಂದಾದರೂ ಸಾಧ್ಯವೇ ಹಾಗಿದ್ದರೆ ಜೀವಕೊಟ್ಟು ಏನು ಪ್ರಯೋಜನ?''

ಇವರಿಬ್ಬರೂ ಹೀಗೆ ಹೇಳಿದ ಮೇಲೆ, ಸಾಹುಕಾರನ ಸೊಸೆಗೆ ಧೈರ್ಯ ಬಂತು! ''ನಾನೇನೊ ಪತಿಗಾಗಿ ಪ್ರಾಣ ಕೊಡಲು ಸಿದ್ಧಳಿದ್ದೇನೆ. ಯಾವಾಗ? ಅದರಿಂದ ನನಗೆ ಪತಿಯ ಸಹವಾಸ ಘಟಿಸುವುದು ಸಾಧ್ಯವೆ? ಇಲ್ಲ, ಎಂದ ಮೇಲೆ ಸುಮ್ಮನೆ ಯಾಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು? ಇಷ್ಟಕ್ಕೂ ನನ್ನ ಪತಿ ಬೇನೆಯಿಂದ ಮೇಲಕ್ಕೇಳುವುದೇ ಇಲ್ಲವೆಂದು ಹೇಗೆ ಹೇಳುವುದು? ಅವರ ಆಯುಷ್ಯ ಗಟ್ಟಿ ಇದ್ದರೆ, ಅವರು ಬದುಕಲೂಬಹುದು. ಹಾಗಾಗದೆ ಹೋದರೆ ನನ್ನ ದುರ್ವಿಧಿಯೆಂದು ಕೊಂಡು ಹತ್ತು ಜನರ ಹಾಗೆ ನನ್ನದು ಒಂದು ಬಾಳುವೆ ಎಂದು ತಿಳಿಯುತ್ತೇನೆ'' ಎಂದು ನುಡಿದಳು.

ಆಯಿತೆ? ಸಾಹುಕಾರ ಪುತ್ರನ ಮೂವರು ಆತ್ಯಂತಿಕರೇ ಹೀಗೆ ಹೇಳಿದ ಮೇಲೆ, ಇತರ ಪ್ರೀತ್ಯಾಸ್ಪದ ಬಳಗದವರು ಹಾಲನ್ನು ಕುಡಿಯಲು ಮುಂಬರುವ ಪ್ರಶ್ನೆಯೇ ಉಳಿಯಲಿಲ್ಲ. ಮುಂದೆ ಸಾಧುವು ತಾಸೆರಡು ತಾಸು ದಾರಿ ಕಾಯ್ದನು. ಎಲ್ಲರೂ ಮುಖವನ್ನು ಕೆಳಗೆ ಹಾಕಿ, ಸುಮ್ಮನೆ ಕುಳಿತಿದ್ದರು. ಹಾಲಿನ ಪಾತ್ರೆ ಅವರ ಮುಂದೆ ಹಾಗೆಯೇ ಇದ್ದಿತು.

ಆಗ ಸಾಧುವು ಹೇಳಿದನು— ''ಕುಮಾರನ ಜೀವವನ್ನುಳಿಸಲು, ನಿಮ್ಮ ಪೈಕಿ ಯಾರೂ ಜೀವ ಕೊಡಲು ಸಿದ್ಧ ಇಲ್ಲ. ಅದನ್ನು ನಾನು ತಪ್ಪೆಂದು ಹೇಳುವುದಿಲ್ಲ. ಪ್ರತಿಯೊಬ್ಬರಿಗೂ ಅವರವರ ಜೀವ ಹೆಚ್ಚಿನದು. ಎಲ್ಲರಿಗೂ ತಾವು ಮೊದಲು

ಬದುಕಬೇಕೆಂಬ ಆಸೆ ಇರುತ್ತದೆ. ನೀವು ಕುಟುಂಬಸ್ಥರಿದ್ದೀರಿ. ಬೇಕಾದಷ್ಟು ಆಸ್ತಿಪಾಸ್ತಿ ಇದೆ. ನಾಲ್ಕು ಜನರಲ್ಲಿ ಮಾನ-ಮರ್ಯಾದೆ ಇದೆ. ನೀವು ಬದುಕಬೇಕೆನ್ನುವುದು ಸಹಜವಾದುದೇ ಆಗಿದೆ. ನಾವೋ ಹೇಳಿಕೇಳಿ ಬೈರಾಗಿಗಳು. ನಮಗೆ ಹಿಂದಿಲ್ಲ, ಮುಂದಿಲ್ಲ. ಇಂದಲ್ಲ, ನಾಳೆ ನಮ್ಮೀ ಜೀವನ ಕುಡಿ ಮುರುಟಿ ಬೀಳುವಂಥಾದ್ದೇ. ಅದು ನಾನೇನೋ ಆಗಿ ಸುಮ್ಮನೆ ಬಿದ್ದು ಹೋಗುವುದಕ್ಕಿಂತ, ನಮ್ಮ ಮರಣದಿಂದ ಇನ್ನೊಬ್ಬರಿಗೆ ಒಳ್ಳೆಯದಾಗುತ್ತಿದ್ದರೆ, ಅದರಿಂದ ಹತ್ತು ಜನಕ್ಕೆ ಹಿತವಾಗುತ್ತಿದ್ದರೆ ಹೀಗೇ ಹೋಗುವುದೇಕೆ ಬೇಡ? ಆದುದರಿಂದ ನಾನೇ ಈ ಮಂತ್ರಿಸಿದ ಹಾಲನ್ನು ಕುಡಿದು ಬಿಡುತ್ತೇನೆ! ನಿಮ್ಮ ಮಗನಂಥ ಸದ್ಗುಣಿಯು ಬದುಕುವುದರಿಂದ ನನಗೂ ಅದರಿಂದ ಸಂತೋಷವೇ ಆಗುವುದು.''

ಸಾಧುವಿನ ಈ ಮಾತನ್ನು ಕೇಳಿ ಇತರರಿಗೆ ಏನೆನಿಸಿರಬೇಡ! ಆದರೆ ಯಾರೂ ನಮ್ಮ ಹುಡುಗನಿಗಾಗಿ ನೀವು ಪ್ರಾಣ ಕೊಡುವುದು ಬೇಡ ಎನ್ನಲಿಲ್ಲ. ಸಾಧುವು ಮಂತ್ರೋಚ್ಚಾರ ಮಾಡಿದ ಹಾಗೆ ಮಾಡಿ, ಪುರ್ವಾಭಿಮುಖವಾಗಿ ಕುಳಿತು, ಆ ಹಾಲನ್ನು ಧೀರತನದಿಂದ ಕುಡಿದುಬಿಟ್ಟನು. ಅವನ ಬಾಯಿಂದ, ''ಜೈ ರಘುವೀರ'' ಎಂಬ ಉದ್ಗಾರ ಹೊರಟಿತು. ಅಲ್ಲಿಂದ ಸಾಧುವು ಮೇಲಕ್ಕೆದ್ದನು.

''ಸಾಹುಕಾರನೇ, ಇನ್ನು ನೀನು ಯೋಚಿಸಬೇಕಾದ ಕಾರಣವಿಲ್ಲ, ನಿನ್ನ ಮಗನು ಇಂದು ಸಂಜೆಯಿಂದ ಎದ್ದು ಕೂಡುವನು. ನಾವಿನ್ನು ಹೊರಡುವೆವು'' ಎಂದನು.

ಕೂಡಲೇ ಸಾಹುಕಾರನು ಒಂದು ಬೆಳ್ಳಿಯ ತಟ್ಟೆಯಲ್ಲಿ ಹಣ್ಣು ಮಿಠಾಯಿ ಗಳನ್ನು, ಒಂದು ಚೀಲದ ತುಂಬ ನಾಣ್ಯಗಳನ್ನು ತರಿಸಿ, ಸಾಧುವಿಗೆ ಕೊಡ ಹೋದಾಗ, ಅವನು ನಸುನಕ್ಕು, ''ಅಯ್ಯಾ, ನನಗೇಕೆ ಇದೆಲ್ಲ ಇನ್ನೆರಡು ದಿನಕ್ಕೆ ಸಾಯುವವನಿಗೆ!'' ಎಂದು ಹೇಳಿ, ಏನೊಂದನ್ನೂ ಸ್ವೀಕರಿಸದೇ ಹೊರಟುಬಿಟ್ಟನು. ಅಂದೇ ರಾತ್ರಿ ಆ ಊರನ್ನೂ ಬಿಟ್ಟು, ಬೇರೊಂದೆಡೆ ಪಾದವನ್ನು ಬೆಳೆಸಿದನು.

ಇತ್ತ ಸಾಹುಕಾರನ ಮಗನು ನಡೆದುದೆಲ್ಲವನ್ನೂ ಕೇಳಿ, ನೋಡಿದ ಮೇಲೆ, ಸಾಧುವಿನ ಮಾತಿನ ಮನವರಿಕೆಯಾಯಿತು. ತನ್ನ ತಂದೆ, ತಾಯಿ ಬಂಧು-ಬಳಗದವರ ಪ್ರೀತಿಯ ನಿಜಸ್ವರೂಪ ದರ್ಶನವಾಯಿತು. ಅದು ಮನುಷ್ಯ ಸಹಜ ವೆನ್ನುವುದನ್ನೂ ಸಾಧುವು ಅವನಿಗೆ ತಿಳಿಸಿಯೆ ಇದ್ದನು.

ಸಾಧುವು ಹೇಳಿದಂತೆ ಅಂದು ಸಂಜೆಯಿಂದಲೇ, ಅವನ ಬೇನೆ ಗುಣವಾಗ ತೊಡಗಿತು! ಆ ರಾತ್ರಿ ಹಣ್ಣಿನ ರಸವನ್ನು ಸೇವಿಸಿದನು. ಮರುದಿನ ಸ್ವಲ್ಪ ಹಾಲನ್ನು ಸ್ವೀಕರಿಸಿದನು. ಅಲ್ಲಿಂದ ಅನ್ನವನ್ನೂ ಉಣ್ಣತೊಡಗಿದನು. ಏರಿಕೆಯ ರಕ್ತವಾದುದ ರಿಂದ ಅವನ ಪ್ರಕೃತಿಯು ಗುಣವಾಗಲು ತಡಹಿಡಿಯಲಿಲ್ಲ. ಅವನ ತಂದೆ-ತಾಯಿಗಳ ಹಿಗ್ಗಿಗೆ ಮಿತಿಯುಳಿಯಲಿಲ್ಲ. ತಮ್ಮ ಮಗನನ್ನು ಬದುಕಿಸಿ ಕೊಟ್ಟ ಸಾಧುವನ್ನು ಆಗಾಗ ನೆನೆಸುತ್ತಿದ್ದರು. ಆದರೆ ಅವನು ಎಲ್ಲಿರುವ, ಜೀವಂತನಿಲ್ಲವೆ? —ಇದಾವುದನ್ನೂ ವಿಚಾರಿಸುವ ಗೊಡವೆಗೆ ಹೋಗಲಿಲ್ಲ.

"ನನು ಸ್ವಾರ್ಥ ಪರೋಮೋಕೋ ನ ವೇದ ಪರ ಸಂಕಟಮ್" ಎಂಬ ಉಕ್ತಿ ಸತ್ಯವಾದುದೇ ಆಗಿದೆ.

ಸಾಹುಕಾರನ ಪುತ್ರನು ದಿನವೂ ಸಂಜೆಗೆ ತಿರುಗಾಡಲಿಕ್ಕೆ ಹೋಗತೊಡಗಿದನು. ಆಗ ಅವನ ಸಂಗಡ ಒಬ್ಬ ಆಳು ಯಾವಾಗಲೂ ಇರುತ್ತಿದ್ದನು. ಹೀಗೆಯೇ ಒಂದು ತಿಂಗಳು ಕಳೆಯಿತು. ಒಂದು ಸಂಜೆ, ನಡುದಾರಿಯಲ್ಲಿ ತನ್ನ ಸೇವಕನನ್ನು ಹಿಂದೆ ಕಳುಹಿಸಿ ತಾನು ಮುಂದೆ ನಡೆದನು. ನಡೆದವ ಹಿಂದಿರುಗಿ ಬರಲೇ ಇಲ್ಲ!

(ಮಹಾರಾಷ್ಟ್ರದ ಓರ್ವ ಸಂತರು ಹೇಳುತ್ತಿದ್ದ ಕತೆ ಇದು)

ಪ್ರತಿಭಾಶಾಲಿ

ಇಂದು ಕನ್ನಡದಲ್ಲಿ ಅನೇಕ ಸಾಹಿತಿಗಳ ಸ್ಥಿತಿಗತಿ ಶೋಚನೀಯವಿದ್ದು ಅವರು ಪಡುವ ಶ್ರಮಕ್ಕೆ ಏನೂ ಪ್ರತಿಫಲ ದೊರೆಯದೇನೆ 'ಸಾಯತೀ' ಎಂದು ಹೇಳುವ ಪ್ರಸಂಗ ಕೂಡ ಬಂದೊದಗಿದ್ದರೂ, ಪ್ರತಿಭಾಶಾಲಿಯಾದವನಿಗೆ ಒಂದಿಲ್ಲೊಂದು ದಿನ ಊರ್ಜಿತಾವಸ್ಥೆ ಖಂಡಿತ ಬರುವುದು ಎಂಬುದಕ್ಕೆ ನನ್ನ ಗುರುಗಳಾಗಿದ್ದ ಸುಧಾಮ ಶಾಸ್ತ್ರಿಗಳ ಜೀವನದಲ್ಲಿನ ಒಂದು ಘಟನೆ ಸಾಕಾದೀತು.

ಶಾಸ್ತ್ರಿಗಳು ಇಷ್ಟರತನಕ ಮಾಡಿದ ಸಾಹಿತ್ಯ ಸೇವೆಯ ಪರಿಚಯ ನಿಮಗಿರ ಬೇಕು. ಕೊನೆಯ ಪಕ್ಷ ಹೆಸರನ್ನಾದರೂ ಚೆನ್ನಾಗಿ ಕೇಳಿ ಬಲ್ಲಿರಿ, ತಾನೇ. ಆದರೂ ಮಾನ್ಯ ಅಧ್ಯಕ್ಷರ ಪರಿಚಯ ಸಭಿಕರಿಗಿದೆಯೆಂದು ಹೇಳಿಯೇ, ಪರಿಚಯ ಭಾಷಣಕ್ಕೆ ತೊಡಗುವ ಉಪನ್ಯಾಸಕರಂತೆ, ನಾನೇನು ಅವರನ್ನು ಹೆಚ್ಚು ಹೊಗಳಹೋಗುವ ದಿಲ್ಲ! ಅವರ ಕೃತಿಗಳನ್ನು ನೀವು ಓದಿದ್ದೀರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ, ಆದರೆ ಅವರು ಇಲ್ಲಿಯವರೆಗೆ ಹತ್ತು ನಾಟಕಗಳನ್ನು (೬ ಪೌರಾಣಿಕ, ೪ ಐತಿಹಾಸಿಕ) ಮೂರು ಖಂಡ ಕಾವ್ಯಗಳನ್ನೂ, ದ್ರಾವಿಡ ಸಂಸ್ಕೃತಿಯನ್ನು ಕುರಿತು ಒಂದು ಉದ್ಗ್ರಂಥವನ್ನೂ, ಮಕ್ಕಳಿಗಾಗಿ ಎಲ್ಲ ದೇವತೆಗಳ ಉದ್ಬೋಧಕ ಕತೆಗಳನ್ನೂ ಬರೆದಿದ್ದಾರೆ. ಇವಲ್ಲದೆ ಕೆಲ ಹಸ್ತಪ್ರತಿಗಳು ಅವರ ಮನೆಯಲ್ಲೇ ಬಿದ್ದಿವೆ.

ಅವರ ಸಾಹಿತ್ಯ ಕೃತಿಗಳನ್ನು ಓದಿ, ನಿಮ್ಮ ಮನಸ್ಸು ಇವರೆಡೆಗೆ ಅಪಹೃತ ವಾಗಿರಲಿಕ್ಕಿಲ್ಲ. ಆದರೆ ಅವರು, ಓದುಗರ ಮೆಚ್ಚಿಗೆಯನ್ನು ಪಡೆದೇ ನಾ ಬರೆಯುವವ ಎಂದು ಗಣಿಸಿದವರೇ ಅಲ್ಲ! ನಿಮಗಾಗಿ, ನಿಮ್ಮ ಅಭಿರುಚಿಗೆ ತಕ್ಕ ಹಾಗೆ ತಪ್ಪಿಯೂ ಬರೆಯ ಹೊರಟವರಲ್ಲ.

ಆದರೆ ಅವರ ಜೀವನಕ್ಕೆ ಬೇರೆ ಗತಿಯಿಲ್ಲ, ನೋಡಿ. ಬರವಣಿಗೆಯಿಂದಲೇ ಹೊಟ್ಟೆ ತುಂಬಬೇಕು. ಆದರೂ ಓದುಗ ಪ್ರಕಾಶಕರ ತಾತ್ಸಾರದಿಂದ ಅವರು ಅಧೀರರಾಗಲಿಲ್ಲ. ಇಂದಿನ ಜನತೆಯ ಸ್ವಾರ್ಥ, ಅಜ್ಞಾನ, ಬಡತನ, ನೋವು ನಲಿವುಗಳ ಕಡೆ ಅವರ ಸಾಹಿತ್ಯ ದೃಷ್ಟಿ ತಿರುಗಿದರೆ, ಅವರ ಮಾರ್ಮಿಕ ಹಾಗೂ ಪ್ರಭಾವಪೂರ್ಣ ಲೇಖನಿ ಏನೆಲ್ಲ ಬರೆದುಬಿಡುತ್ತಿತ್ತೋ! ಎಂದು ಕೇಳಿದಾಗ ಶಾಸ್ತ್ರಿಗಳು ತುಚ್ಛತೆಯಿಂದ ನಕ್ಕುಬಿಟ್ಟಿದ್ದರು! ಏಕೆಂದರೆ ಅವರ ದೃಷ್ಟಿಯಲ್ಲಿ ನಾಟಕವೊಂದೇ ಎಲ್ಲ ಕಲೆಗಳ ನೆಲೆವೀಡಾಗಿ ಕಾಣುತ್ತಿತ್ತು.

ಹೀಗಿರುತ್ತ ಅವರ ಐವತ್ತು ವರ್ಷದ ಜೀವನ ಹೇಗಾದರೂ ಸಾಗಿದೆ ಎಂಬುದು, ಅವರ ಕೆಲವೇ ನಿಕಟ ವರ್ತಿಗಳಲ್ಲೊಬ್ಬನಾದ ನನಗೂ ತಿಳಿಯದು. ನನ್ನ ಅವರ ಬಾಂಧವ್ಯ ಅವರು ಶಾಲೆಯಲ್ಲಿ ಕನ್ನಡವನ್ನು ಕಲಿಸುವುದರ ಮೂಲಕ. ಪಾಠ ಹೇಳುತ್ತಿದ್ದರೆ ಅವರ ಪಾಂಡಿತ್ಯಕ್ಕೆ ನಾವು ಬೆರಗು ಪಡುತ್ತಿದ್ದೆವು. ಅವರು ನಿರರ್ಗಳವಾಗಿ ಹಳಗನ್ನಡ ಪದ್ಯಗಳನ್ನು ಅನ್ನುವಾಗ, ಬಳಕೆಯ ಈ ನಮ್ಮ ಕನ್ನಡ ಎಷ್ಟು ಆಳವಾಗಿದೆಯೆಂದು ಯೋಚಿಸುತ್ತಿದ್ದೆವು! ಮಧ್ಯೆ ಮಧ್ಯೆ ಪಾಠ ಹೇಳುವಾಗ, ನವಯುಗದ ಅವಹೇಳನೆ, ಹೊಸ ಹುಡುಗಿಯರ ಬೆಡಗು ಬಿನ್ನಾಣ, ಸಿನೆಮಾ ಮುಂತಾದ ಐಷಾರಾಮುಗಳು, ತರುಣ ಲೇಖಕರ ಶಬ್ದ ದಾರಿದ್ರ್ಯ ಇವೇ ಮೊದಲಾದವುಗಳ ವಿಡಂಬನೆಯಲ್ಲಿ ತುಂಬಾ ನಗಿಸುವುದೂ ಉಂಟು.

ಅವರ ಹಿಂದಿನ ಚರಿತ್ರೆ ಕೇಳುತ್ತೀರೊ? ಅದೊಂದು ದುರಂತ ಚಿತ್ರ ನೆಲೆಯಿಲ್ಲದೆ, ಹೊಟ್ಟೆಗೂ ಇಲ್ಲದೆ, ಆದರೂ ಹಾರಾಡುವ, ಹಾಡುವ ಹಕ್ಕಿಯ ಬಾಳು ಇದ್ದ ಹಾಗೆ ಅದು. ಶಾಸ್ತ್ರಿಗಳು ಒಬ್ಬಂಟಿಗರು. ಅಖಂಡ ಇಪ್ಪತ್ತು ವರ್ಷ ಇಂಥ ಒಂಟಿ ಜೀವನ ನಡೆಸಿದ್ದಾರೆ. ಆದಾವಾಗೋ ಮದುವೆಯಾಗಿತ್ತಂತೆ. ಆಕೆ, ಬಂದ ಎರಡು ಮೂರು ವರ್ಷದಲ್ಲೇ ತೀರಿಕೊಂಡಳಂತೆ. ಅಲ್ಲಿಂದ ಅವರ ಜೀವನದಲ್ಲಿ ಯಾವ ಹೆಣ್ಣೂ ಸುಳಿಯಲಿಲ್ಲ. ಅವರ ಸಾಹಿತ್ಯದಲ್ಲಿಯೂ ಹೆಣ್ಣು ಹೀಗೆ ಗೌಣ ಸ್ಥಾನದಲ್ಲಿದ್ದುದರಿಂದಲೋ ಏನೋ, ಅವರು ಅಷ್ಟು ಜನಪ್ರಿಯರಾಗಿರಲಿಕ್ಕಿಲ್ಲ.

ಅವರ ಸ್ವಚ್ಛಂದ ಮನೋವೃತ್ತಿ ಅವರನ್ನು ಯಾವ ವೃತ್ತಿಯಲ್ಲೂ ಬಹಳ ಕಾಲ ಇರಗೊಡಲಿಲ್ಲ. ಮಾಸ್ತರಿಕೆಯೂ ಹಾಗೆಯೇ. ಇನ್ನು ಹಳ್ಳಿಯಲ್ಲಿದ್ದ ದೂರದ ಸಂಬಂಧಿಕನೊಬ್ಬ ಇವರಿಗೆ ಒಂದು ಚೀಲ ಅಕ್ಕಿ, ತುಸು ಜೋಳ ಕಳುಹಿಸುತ್ತಿದ್ದನಂತೆ. ಆದರೂ ಇದು ಬೇಕು ಎಂದು ಯಾರನ್ನೂ ಕೇಳಿಕೊಂಡು ಹೋದವರಲ್ಲ. ಹುಡುಗರೊಬ್ಬಿಬ್ಬರು ಸಂಸ್ಕೃತ ಹೇಳಿಕೊಳ್ಳಲು ಬಂದರೆ ಹಣ ಕೊಡಲೇಬೇಕೆಂದಿಲ್ಲ!

ಈಗ ಮುಂಬಯಿಗನಾಗಿರುವ ನಾನು ನಾಲ್ಕು ವರ್ಷದ ಅನಂತರ ಊರ ಕಡೆ ಹೋದಾಗ ಅವರ ಮನೆಗೊಮ್ಮೆ ಹೋಗಿ ಬಂದೆ. ಶಾಲಾ ಜೀವನದಲ್ಲಿದ್ದಾಗ ನನಗೆ ಕನ್ನಡದಲ್ಲಿ ತುಸು ಅಭಿಮಾನ ಹೆಚ್ಚೆಂದು ಗುರುತಿಸಿದ್ದರು. ಆಗಾಗ ಕತೆ ಕವಿತೆಗಳನ್ನು ಹೊಸದು ಅವರಿಗೆ ತೋರಿಸುತ್ತಿದ್ದೆ. ಅವರೋ ಈಗಿನ ಕಾಲದ ಕೆಲವು ಹಿರಿಯ ಸಾಹಿತಿಗಳಂತೆ, "ಪರವಾಯಿಲ್ಲ. It's good in its own way. ಬರೆಯುತ್ತ ಹೋದಂತೆ, ಅನುಭವ ಬಂದಂತೆ, ಬರವಣಿಗೆ ಒಳ್ಳೆಯದಾಗುತ್ತದೆ" ಎಂದಿಷ್ಟು ಆಶೀರ್ವದಿಸಿ ಹಸ್ತಪ್ರತಿಯನ್ನು ಮರಳಿ ಕೊಟ್ಟವರೇ ಅಲ್ಲ! ಅದರ ಪ್ರತಿಯೊಂದು ವಾಕ್ಯವನ್ನು ಓದಿಸಿ, ವ್ಯಾಕರಣ ದೋಷ ಹೇಳಿ, ಆಯ್ದುಕೊಂಡ ವಸ್ತುವಿನ ಲಘುತ್ವವನ್ನು ಎತ್ತಿ ತೋರಿಸುತ್ತಿದ್ದರು. ಕೊನೆಗೆ ಅದೇ ವಿಷಯವನ್ನು ಇಟ್ಟುಕೊಂಡು ತಾವೇ ಒಂದು ಬರೆದುಬಿಡುತ್ತಿದ್ದರು! ನನ್ನ ಎಳೆ ವಯಸ್ಸಿನಲ್ಲಿ ಈ ಬಗೆಯ ಖಂಡನೆ ನನಗೆ ಎಂತು ಹಿಡಿದೀತು! ಅಲ್ಲಿಂದ ಅವರಿಗೆ ತೋರಿಸುವುದನ್ನೂ ಬಿಟ್ಟು ಬಿಟ್ಟೆ ಅನ್ನಿ. ಆದರೆ ಬಹಳ ದಿನಗಳವರೆಗೆ ನನ್ನ ಸಾಹಿತ್ಯಿಕ ಗೀಚು ಗೆರೆಗಳು ತಮ್ಮ ಕಣ್ಣಿಗೆ

ಬೀಳದುದು ಅವರಿಗೆ ಅನಿಸಿ ನನ್ನನ್ನು ಕೇಳುವಷ್ಟರಲ್ಲಿ, ನಾನು ಒಟ್ಟು ಬರೆಯುವುದನ್ನೇ ನಿಲ್ಲಿಸಿದ್ದೆ! ಅದಕ್ಕೆ ಅವರು, ''ಒಳ್ಳೆಯದೇ ಆಯಿತು. ನಿನ್ನಂಥ ಅಯೋಗ್ಯರು ಬರೆಯದಿರುವುದೇ ನೆಟ್ಟಗೆ!'' ಎಂದು ಹೇಳಿದ್ದರು.

ನನ್ನ ಈಗನ ಸಿನೆಮಾ ರಂಗದಲ್ಲಿನ 'ಎಡಿಟಿಂಗ್' ವೃತ್ತಿಯನ್ನೂ ಅವರು ಮೆಚ್ಚಿದವರಲ್ಲ. ಸಿನೆಮಾ ಎಂದರೇ ಅವರಿಗೆ ಬಹು ಸಿಟ್ಟು. ಶಾಲೆ ತಪ್ಪಿಸಿ ಕದ್ದು ಸಿನೆಮಾ ನೋಡುತ್ತಿದ್ದ ನನಗೆ ಏನೆಲ್ಲ ಶಿಕ್ಷೆ ವಿಧಿಸಿರಲಿಲ್ಲ? ಎಷ್ಟು ಸಲ ನಮ್ಮ ತಂದೆಯನ್ನೇ ಅದಕ್ಕಾಗಿ ಬೈಯಲಿಲ್ಲ? ಆದರೂ ನನ್ನ ದಾರಿ ನಾ ಬಿಡಲಿಲ್ಲ. ಮುಂದೆ ಮುಂಬಯಿಗೆ ಹೇಳದೆ, ಕೇಳದೆ, ಓಡಿಹೋಗಿ, ಹಿಂದೀ ಚಲಚ್ಚಿತ್ರದ ಕಾಡಿನಲ್ಲಿ ಅಲೆದು, ದುಡಿದು ಕ್ರಮೇಣ 'ಎಡಿಟರ್' ಪದವಿಗೆ ಏರಿದುದು ಅವರಿಗೆ ಒಂದು ಸಾಹಸವಾಗಿ ಕಂಡಿರಬೇಕು. ಎಂತಲೇ ನನ್ನ ಅವರ ಸಂಬಂಧಕ್ಕೆ ಚ್ಯುತಿ ಬರಲಿಲ್ಲ.

ಈಚೆಗೆ ನಾ ಅವರ ಮನೆಗೆ ಹೋದಾಗ, ''ಸಿನೆಮಾದಲ್ಲಿ ಏನು ಗುಡ್ಡ ಕಡಿಯೋದು?'' ಎಂದು ಕೇಳಿದ್ದರು.

''ಇಲ್ಲಾ ಸರ್. ಸಿನೆಮಾ ರೀಲು ಉದ್ದವಾಗಿದ್ದರೆ, ಅದನ್ನು ಹರೀತೇನೆ, ಅರ್ಥಾತ್ ಕತ್ತರಿಸಿ ಜೋಡಿಸುತ್ತೇನೆ'' ಎಂದೆ.

ಮುಂದೆ ನಾನು, ಈ ಜೋಡಣೆಯ ಕೆಲಸ ಎಂದರೇನು; ೨೦-೮೦ ಫೂಟಿನ ಸಾವಿರ ಕಚ್ಚಾ ಫಿಲ್ಮನ್ನು ಕತ್ತರಿಸಿ ಕತ್ತರಿಸಿ ೧೧ ಸಾವಿರಕ್ಕೆ ಇಳಿಸುವುದರಲ್ಲಿ ಪಾತ್ರ ಪೋಷಣೆ, ಕಥಾ ಸಂವಿಧಾನ ಇವುಗಳನ್ನು ಅಚ್ಚಳಿಯದೆ ಕಾಯ್ದುಕೊಂಡು ಹೋಗ ಬೇಕಾದ ವಿಶೇಷ ಕಲಾಭಿಜ್ಞತೆ ಎಂತಹದು, ಎಂದು ತಿಳಿಸಿ ಅಂಥಲ್ಲಿ ಬಂದಿದ್ದ ಕೆಲ ತೊಡಕುಗಳ ವಿವರಣೆಯನ್ನು ಕೊಟ್ಟೆ.

ಅಷ್ಟೊಂದು ಚಿತ್ರಗೊಟ್ಟು ಅವರು ನನ್ನ ಯಾವ ಮಾತನ್ನೂ ಈ ಹಿಂದೆ ಕೇಳಿರಲಿಲ್ಲ! ಆದರೂ—

''ಅದೆಲ್ಲ ಕೃತಕಮಯ. ಕಲೆ ಏನಾದರೂ ಇದ್ದರೆ ಅದು ನಾಟಕದಲ್ಲಿ. ಬೇಕಾದಷ್ಟು ನಿನ್ನ ಹಾಳು ಸಿನೆಮಾ ಬರಲಿ, 'ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ' ಎಂಬ ಮಾತು ತ್ರಿಕಾಲಕ್ಕೂ ಸತ್ಯ. ಅದನ್ನು ಇಂದು ಹಾಳು ಮಾಡುತ್ತಿರುವ ಈ ಸಿನೆಮಾ ಸಹವಾಸ ಎಂದಿಗೂ ಬೇಡ'' ಎಂದರು.

''ಹಾಗಿದ್ದರೆ ನಾನೂ ಬೇಡ ಎಂದಂತಾಯಿತಲ್ಲ ಹೋಗುತ್ತೇನೆ, ಇನ್ನು ಮನೆಗೆ!'' ಎನ್ನುತ್ತ ಇನ್ನೊಮ್ಮೆ ಗಡಿಯಾರ ನೋಡಿದೆ. ಆಗವರು ನನ್ನನ್ನು ಬೈದು ಕೊಡ್ರಿಸಿಕೊಂಡು, ''ನನಗೆ ಚಹಾ ಬೇಕಾಗಿದೆ. ಹಾಲು ತಗೊಂಡು ಬಾ'' ಎಂದು ಹೇಳಿ, ಅಂಥ ಮಧ್ಯಾಹ್ನದಲ್ಲಿ ನನಗೆ ಚಹ ಸಲ್ಲಿಸಿದರು !

೫-೬ ದಿನಗಳ ಅನಂತರ ಸಂಜೆ, ಅವರ ಮನೆಯ ಕಡೆಗೆ ಮತ್ತೊಮ್ಮೆ ಹೊರಟಾಗ ಅಂದಿನ ಪ್ರಸಂಗ ಕಣ್ಣ ಮುಂದೆ ಸುಳಿದುಹೋಯ್ತು. ಅವರದು ಎಂಥ ವ್ಯಕ್ತಿತ್ವ, ಎಂಥ ಬಡತನ ಎಂದು ಮನಸ್ಸು ಮರುಗಿತು.

ಅಂದು ನಾ ಒಳಕ್ಕೆ ಹೋದಾಗ, ತಮ್ಮ ಕೋಣೆಯಲ್ಲಿ ಮಾಸಿದ ಗುಡಾರದ ಮೇಲೆ ಕುಳಿತು, ಆನಿಕೆಯ ಲೋಡನ್ನು ಎತ್ತರವಾಗುವಂತೆ ತೊಡೆಯ ಮೇಲೆ ಇಟ್ಟುಕೊಂಡು ಏನನ್ನೋ ಬರೆಯುತ್ತಿದ್ದರು. ಕೆಳಗಡೆ ಬರೆದು ಮುಗಿಸಿದ್ದ ಹಾಳೆಗಳು ಹರಡಿದ್ದವು.

''ಬಾ ಕುಳಿತುಕೋ'' ಎಂದು ಹೇಳಿ ಮತ್ತೆ ಬರವಣಿಗೆಯಲ್ಲಿ ತಲ್ಲೀನರಾದರು. ಕೊನೆಗೆ ೧೦-೧೫ ನಿಮಿಷ ಕಳೆದ ಮೇಲೆ, ಮುಗಿತದ ಗೀರನ್ನು ಎಳೆದು, ದಿಂಬನ್ನು ಕೆಳಗಿರಿಸುತ್ತ—

''ಎಲೋ! ಮೊನ್ನೆ ನಿನ್ನ ಪರಾಕ್ರಮ ನೋಡಲಿಕ್ಕೆ ಹೋಗಿದ್ದೆ!'' ಎಂದರು.

ನನಗರ್ಥವಾಗಲಿಲ್ಲ.

''ಸಿನೆಮಾ ನೋಡಲಿಕ್ಕೆ ಹೋಗಿದ್ದೆನೋ—ಸಿನೆಮಾ!'' ಎಂದು ಹೇಳುತ್ತ ನಗತೊಡಗಿದರು.

''ಯಾವುದು ?''

''ಮಧ್ಯ ರಾತಕಾ ಮಹೆಮಾನ್!''

''ಎಲ್ಲ ಬಿಟ್ಟು ಅದನ್ನು ಯಾಕೆ ನೋಡಹೋಗಿದ್ದಿರಿ?'' ಎಂದು ಕೇಳುತ್ತ ನನ್ನ ಸಮಾಧಾನವನ್ನು ವ್ಯಕ್ತಪಡಿಸಿದೆ. ಏಕೆಂದರೆ ಅದೊಂದು ಕೆಳತರಗತಿಯ ಚಿತ್ರ. ಅದೇ ಪ್ರೇಮದ ತ್ರಿಕೋಣ. ಪ್ರೇಮಿ, ಪ್ರೇಮಿನಿ, ಖಳನಾಯಕ! ಅದೊಂದು ಹಳ್ಳಿಯ ಹುಡುಗಿ ಬಣ್ಣ ಬಣ್ಣದ ಸೀರೆ ಉಟ್ಟು, ಕಂಡಲ್ಲಿ ಅಲೆದಾಡುವ ಬಾವಿಕಟ್ಟೆಯ ಬಳಿ ನೃತ್ಯ ಮಾಡುವ ಪೋರಿಯ ಕತೆ, ಮಧ್ಯ ರಾತ್ರಿಯಲ್ಲಿ ಅವಳ ಮನೆಗೆ ಒಬ್ಬ ಅತಿಥಿ ಬರುತ್ತಾನೆ! ಆದರೆ ಅದೇ ಊರಲ್ಲಿ ಪೋಲಿ ತಿರುಗುವ ಉಂಡಾಡಿಗ, ಬೆಳೆದ ಇವರ ಪ್ರಣಯಕ್ಕೆ ಅಡ್ಡಿ ಬರುತ್ತಾನೆ. ಅವನ ಬೆದರಿಕೆಗೆ ಹೆದರಿ ಪ್ರೇಮಿಯು ತನ್ನ ಶಹರಿಗೆ ಓಡುವ... ಹೀಗೇ ಕಥೆ.

ಮೊದಲೇ ಸಿನೆಮಾ ಎಂದರೆ ಉರಿದು ಬೀಳುವರು ಅವರು. ಈಗ ಇಂಥ ಚಿತ್ರ ನೋಡಿದರಲ್ಲ. ಕಲಾ ಸೇವೆಗೆ ಆ ರಂಗದಲ್ಲಿಯೂ ಅವಕಾಶವಿದೆ ಎಂದು ಮೊನ್ನೆ ನಾ ಮನವರಿಕೆ ಮಾಡುವ ಪ್ರಯತ್ನ ತೊಳೆದು ಹೋದಂತಾಯಿತಲ್ಲ ಎಂದು ಬೇಜರಾಯಿತು.

''ಇದು ಏನು ಗೊತ್ತೆ? ನಿಮ್ಮ ಈ ಸಿನೆಮಾ ಕತೆಗಳ ಮೇಲೆ ಒಂದು ವಿಡಂಬನೆ!'' ಎಂದು ಹೊಟ್ಟೆ ಕುಲುಕುಲು ಅಲುಗಾಡುವಂತೆ ನಗುತ್ತ ಹಾಳೆಗಳನ್ನು ಜೋಡಿಸತೊಡಗಿದರು.

''ನಾನು ಓದಲೇ?'' ಎಂದೆ—ನನಗಾಗಿಯೆ ಬರೆದದ್ದಿದು ಎಂದು ತಿಳಿದಿದ್ದೂ ಕೂಡಾ.

ಉಕ್ಕಿ ಬರುವ ನಗೆಯನ್ನು ಹತ್ತಿಕ್ಕಿಕೊಂಡು ಹೇಳತೊಡಗಿದರು.

''ಕಥೆ ಹೇಳತೇನಿ ಕೇಳೋ. ಇದೂ ಸಿನೆಮಾ ಕಥೇನೇ. ಒಬ್ಬ ಹಳ್ಳಿಯ ಹುಡುಗಿ ಇದರ ನಾಯಕಿ. ಆವಳಿಗೊಬ್ಬ ಶ್ರೀಮಂತ ತಂದೆ. ಆವಳನ್ನು ಮದುವೆ

ಯಾಗಬಯಸಿದ ಒಬ್ಬ ಬಡ ತರುಣ. ಇನ್ನೊಬ್ಬ ಸಿರಿವಂತ ಮುದುಕನಿಗೆ ಇವಳನ್ನು ಕೊಡಬೇಕೆಂದು ಆ ತಂದೆಯ ಹಟ... ಕಥೆ ಭರದಿಂದ ಓಡುತ್ತದೆ. ನಿಜ ಸಂಗತಿ ಏನು ಗೊತ್ತೋ? ಆ ಹುಡುಗಿಯ ತಂದೆ ಅವಳ ತಂದೆಯಲ್ಲ! ಆ ಹುಡುಗ ಬಡವನಲ್ಲ! ಹುಡುಗಿಯ ವಯಸ್ಸೋ ಹುಡುಗನಿಗಿಂತ ತುಸು ಹೆಚ್ಚೇ! ಮುದುಕ ವರ ಎಂದೆನಲ್ಲ, ಆದೂ ಸುಳ್ಳೇನೇ! ಎಲ್ಲವೂ ಕೃತ್ರಿಮದ ಕಂತೆ...! ಇದುವರೆಗೆ ಇಂಥ ಕಚಡಾ ನಾ ಬರೆದದ್ದೇ ಇಲ್ಲ. ನಿನ್ನ ಬಾಯಿ ಬಡಾಯಿ ಕೇಳಿ, ಏನೋ ನೋಡಲಿಕ್ಕೆ ಹೋಗಿದ್ದೆ. ಬರೆಯುಬೇಕು ಅಂತ ಏನೋ ಅನಿಸ್ತು. ಗೀಚಿದ್ದೇನೆ. ತಗೊಂಡು ಹೋಗು'' ಎಂದರು. ನಾನೋ ಕಳೆದುಹೋದ ಮಾನವನ್ನು ಮುಚ್ಚಲೆಂದು—

''ನೀವು ನೋಡಿದ್ದು ಒಂದು ಹೊಲಸು ಚಿತ್ರ. ಇದಕ್ಕೂ ಒಳ್ಳೆಯ ಚಿತ್ರ ಇವೆ. ವಿಶೇಷತಃ ಹಳ್ಳಿಯ ಅಥವಾ ಶಾಮ್ ಬೆನಗಲ್ಲರ ನ್ಯೂ ಥಿಯೇಟರ್ಸಿನವರ ಯಾವದಾದರೂ ಹಿಂದೀ ಚಿತ್ರವನ್ನೋ, ಸೆಲ್ಜ್ನಿಕ್‌ನಂತವರ ಇಂಗ್ಲಿಷ್ ಚಿತ್ರಗಳನ್ನೊ ನೋಡಿದ್ದರೆ ಖಂಡಿತ ಹೀಗೆ ನೀವು ನಗಾಡುತ್ತಿರಲಿಲ್ಲ'' ಎಂದೆ.

ಮತ್ತೆ ಮನೆಗೆ ಬಂದು ಅದನ್ನು ಓದಲು ತೊಡಗಿದಂತೆಲ್ಲ ನನ್ನ ಆಶ್ಚರ್ಯ, ಸಂತೋಷಗಳಿಗೆ ಮಿತಿಯೇ ಇರಲಿಲ್ಲ! ಏಕೆಂದರೆ ಅವರು ಸಿನೆಮಾದ ಮೇಲೆ ಬರೆದ ವಿಡಂಬನೆ ಒಂದು ಸುಂದರ ಸಿನೆಮಾ ಕಥೆಯಾಗುವಂತಿತ್ತು. ತುಸು ಬದಲಿಸಿದರೆ. ತದ್ರೂಪ ಸಿನೆಮಾ ದೃಶ್ಯ ಸಂಭಾಷಣೆಗಳ ಹಾಗೇ ಇತ್ತು! ಅಲ್ಲಲ್ಲಿ ತುಸು ಕೈಯಾಡಿಸಿದರೆ, ಅದರ ಬೆಲೆ ಸಾವಿರಾರು ರೂಪಾಯಿಗಳದ್ದು!

ಹೌದು, ಇಳಿವಯಸ್ಸಿನಲ್ಲಿ ದಾರಿದ್ರ್ಯದಿಂದ ಅತಿ ಬಳಲುತ್ತಿದ್ದ ಅವರ ಹೆಸರಿನಲ್ಲಿ, ಬ್ಯಾಂಕಿನೊಳಗೆ ಹತ್ತಿಪ್ಪತ್ತು ಸಾವಿರ ರೂಪಾಯಿ ಇದ್ದರೆ! ನನ್ನ ಮನಸ್ಸು ಉದ್ವೇಗದಿಂದ ಕುಣಿದಾಡಿತು.

ಮುಂಬಯಿಗೆ ಹೊರಡುವದಕ್ಕೆ ಮುಂಚೆ ಇನ್ನೊಮ್ಮೆ ಅವರ ಮನೆಗೆ ಕಾಲಿರಿಸಿದಾಗ ಅವರು ಅದನ್ನು ಮರೆತೇಬಿಟ್ಟಿದ್ದರು. ನಾನಾಗಿ ಅದರ ಪ್ರಸ್ತಾಪ ವೆತ್ತಿದಾಗ, ''ಯಾವುದು? ಅದೋ? ನಾ ಏನು ಮಾಡುವುದು, ಅದನ್ನು ತೆಗೆದುಕೊಂಡು ಓದಿ ಮೋಜಿನಿಸಿತಿಲ್ಲವೋ?'' ಎಂಧು ಮುಗಿಸಿಬಿಟ್ಟರು!

ಇರಲಿ, ಎಂದುಕೊಂಡು ಮುಂಬಯಿಗೆ ಬಂದ ಮರುದಿನವೇ ಅದರ ಹಿಂದೀ ಅನುವಾದ ಕೈಕೊಂಡು, ನನ್ನ ಪರಿಚಿತ ನಿರ್ಮಾಪಕರಾದ ತೋತಾರಾಮರ ಕಡೆ ತೆಗೆದುಕೊಂಡು ಹೋದೆ. ಅದು ಯಾರು ಬರೆದುದು ಎಂದು ಹೇಳಬೇಕು? ಅವರ ಹೆಸರನ್ನೇ ಹೇಳುವುದೇ? ನಿಜಸ್ಥಿತಿ ತಿಳಿದು ಬಂದರೆ, ನನ್ನ ಪ್ರಾಣವನ್ನೇ ಹಿಂಡಿಯಾರು. ಯಾರೋ ಒಬ್ಬರು ಬರೆದದ್ದು ಎಂದರೆ ಯಾರೊಬ್ಬನಿಗೆ ಸಿಕ್ಕುವ ಮಟ್ಟಿಗೆ ಮಾತ್ರ ಅದರ ಬೆಲೆ ಇಳಿಯುತ್ತದೆ... ಎಂದೆಲ್ಲ ರಾತ್ರಿಯಿಡೀ ಯೋಚಿಸಿ, ಕೊನೆಗೆ ಹಸ್ತಪ್ರತಿಯನ್ನು ಸೇಠ ತೋತಾರಾಮರ ಕೈಗೆ ಕೊಡುವಾಗ—

''ಇದು ಹತ್ತಾರು ಪುಸ್ತಕಗಳನ್ನು ಕರ್ನಾಟಕ ಭಾಷೆಯಲ್ಲಿ ಬರೆದು ಪ್ರತಿಭಾಶಾಲಿ ಎನಿಸಿಕೊಂಡ, ಶ್ರೀ ಸುಧಾಮಶಾಸ್ತ್ರಿ ಎಂಬ ಸ್ವಯಂಸಿದ್ಧ ಸಾಹಿತಿಗಳದು. ಆದರೆ ಕೆಲವೊಂದು ಕಾರಣದಿಂದ ಅವರು, ರಜತ ಪರದೆಯ ಮೇಲೆ ತಮ್ಮ ಹೆಸರು ಬರಬಾರದಾಗಿ ಅಪೇಕ್ಷಿಸುತ್ತಾರೆಂದೂ ತಿಳಿಸಿದೆ.

''ಈಗ ತುಂಬಾ ಗಡಿಬಿಡಿ. ಒಂದು ೧೫-೨೦ ದಿನ ಹೋಗಲಿ ಆಮೇಲೆ ಹೇಳುತ್ತೇನೆ'' ಎಂದರು.

ನಮ್ಮ ಚಲನಚಿತ್ರಗಳಲ್ಲಿ ಹೊಸ ನಮೂನೆಯ, ಮೌಲಿಕವಾಗಿದ್ದ ಕಥಾವಸ್ತು ಬೇಕೆನ್ನುವವರಲ್ಲಿ ತೋತಾರಾಮರಿಗೆ ಅಗ್ರಪಟ್ಟ. ಅವರೇನೋ ವ್ಯವಹಾರದ ಗತ್ತಿನಲ್ಲಿ ಹಾಗೆಂದರೂ ಬಲು ಬೇಗ ಅವರು ಓದುವುದಾಗಿಯೂ, ಮೆಚ್ಚುವುದಾಗಿಯೂ ನನಗೆ ತುಂಬಾ ಭರವಸೆ ಇತ್ತು. ಅವರ ಕೈಯಲ್ಲಿ ಸದ್ಯ ಯಾವ ಚಿತ್ರವೂ ಇದ್ದಿರಲಿಲ್ಲ.

''ನನ್ನಣಿಕೆ ಸುಳ್ಳಾಗಲಿಲ್ಲ. ಅವರಿಗೆ ಹಸ್ತಪ್ರತಿಯ ಆ ಕಾಗದಗಳು ಸಾವಿರ ಸಾವಿರಗಳ ಕಂತೆಯಂತೆ ಕಂಡಿರಬೇಕು ! ತಕ್ಷಣ ಕರಾರಾಗಿ ಹೋಯಿತು. ಎಷ್ಟಕ್ಕೆ ಗೊತ್ತೆ ! ಹದಿನೆಂಟು ಸಾವಿರಕ್ಕೆ. ಕೊನೆಗೂ ಆಸಾಮಿ ಇಪ್ಪತ್ತರ ಅಂಕೆಗೆ ಒಪ್ಪಲಿಲ್ಲ. ಚಿಂತೆಯಿಲ್ಲ,'' ಎಂದು ಶಾಸ್ತ್ರಿಗಳ ಹೆಸರಿನಲ್ಲಿ ಹತ್ತು ಸಾವಿರಕ್ಕೆ ಒಂದು ಚೆಕ್ಕನ್ನು ತೆಗೆದುಕೊಂಡು, ಕರಾರು ಪತ್ರವನ್ನು ಇಸಿದುಕೊಂಡು ಬಂದು ಬಿಟ್ಟೆ. ಅವರು, ''ಲತಾಳೊಟ್ಟಿಗೆ ಹಾಡಿಗಾಗಿ ಮಾಡಿಕೊಂಡ ಕಂಟ್ರಾಕ್ಟು ಇದ್ದೇ ಇದೆ. ಪಾತ್ರಗಳನ್ನು ಹೊಂದಿಸುತ್ತೇನೆ. ಮುಹೂರ್ತ ಸಮಾರಂಭಕ್ಕೆ ನಿಮ್ಮ ಮಿ. ಶಾಸ್ತ್ರಿ ಬರುತ್ತಿದ್ದರೆ ಕರೆತನ್ನಿ'' ಎಂದು ಹೇಳಿದರು.

ಇದೆಲ್ಲ ಸರಿ, ಶಾಸ್ತ್ರಿಗಳಿಗೆ ಇವನ್ನೆಲ್ಲ ಒಪ್ಪಿಸುವುದು ಹೇಗೆ ಎಂದು ತಲೆ ಕೆಳಗು ಮಾಡಿಕೊಂಡೆ. ಆ ನೀತಿಯಿಂದ ಬಂದ ಹಣವನ್ನು ಅವರು ಎಂದಾದರೂ ಸ್ವೀಕರಿಸಿಯಾರೆ ? ಚಲಚ್ಚಿತ್ರಕ್ಕೆ ಬರವಣಿಗೆಯನ್ನು ಮಾಡಿದಂತಾಯಿತು. ಎಂದು ತಿಳಿಯಕ್ಕಿಲ್ಲದೆ ? ಅವರ ವಿಚಾರವೇ ಅವರಿಗೆ ಹಿಡಿಸದೆ, ಬರಿ ಚೆಕ್ಕು ಏಕೆ, ಕರೆನ್ಸಿ ನೋಟನ್ನು ಸಹಿತ ಹರಿಹೊಗೆಯದೆ ಇರುವರೆ ? ಹಾಗಾದರೆ ಯಾಕೆ ಇಷ್ಟೆಲ್ಲ ಉಸಾಬರಿ ಮಾಡಬೇಕಿತ್ತು ಎಂದು ಬೇಜಾರಾದರೂ ಸಮಕ್ಷಮ ಕಂಡೇ ಮನವೊಲಿಸಿ, ಸಾಧ್ಯವಾಗದಿದ್ದರೆ ಇನ್ನೊಬ್ಬರಿಂದ ಹೇಳಿಸಿಯಾದರೂ ನೋಡುವಾ ಎಂದು ಊರಿಗೆ ಮತ್ತೆ ಹೊರಟೆ.

ಬಂದ ಸಂಜೆಗೇ ಅವರ ಮನೆಗೆ ಹೋದೆ. ''ಯಾಕೋ ಒಂದೇ ತಿಂಗಳಲ್ಲಿ ಮರಳಿ ಬಂದಿ ? ಹೆಣ್ಣು ನೋಡಲೆಂದು ನಿಮ್ಮಪ್ಪ ವಾಯರ್ ಕೊಟ್ಟಿದ್ದರೆ'' ಎಂದು ಸ್ವಾಗತವಾಯಿತು.

''ಇಲ್ಲ. ನಿಮಗಾಗಿ ಮತ್ತೆ ಬರಬೇಕಾಯಿತು. ನಿಮ್ಮ ಸಿನೆಮಾದ ಮೇಲಿನ ಬಿಡಂಬನೆ ಇತ್ತಲ್ಲ... (''ಹೂಂ?'')... ಆ ವಿಚಾರದಲ್ಲಿ ನಿಮಗೆ ಹೇಳದೇ ಒಂದು ಅವಿಚಾರದ ಕೆಲಸ ಮಾಡಿದ್ದೇನೆ.

—ಎಂದು ಚೆಕ್ಕನ್ನು ಹೊರ ತೆಗೆದು ಅವರ ಮುಂದೆ ಹಿಡಿದೆ.

''ಅದನ್ನು ನಾನು ಭಾಷಾಂತರ ಮಾಡಿ ಮುಂಬಯಿ ತಯಾರಕರೊಬ್ಬರಿಗೆ ತೋರಿಸಿದೆ. ಅವರು ಅವರದೇ ಸಿನೆಮಾ ಮಾಡುತ್ತಾರಂತೆ.''

''ಅದರದೇ ಸಿನಿಮಾ ? ಹುಚ್ಚೇನು ನಿನಗೆ ?''

ಎಳೆದು ತಂದಿದ್ದ ಧೈರ್ಯವೆಲ್ಲ, ಈ ಮಾತಿನಿಂದ ಉಡುಗಿಹೋಯಿತು. ''ಇಲ್ಲ, ಅದು ಅವರಿಗೆ ಮೆಚ್ಚಿಕೆಯಾಯಿತು. ಇದುವರೆಗೆ ಅಂಥ ಸಿನೆಮಾ ಕಥೆಯೇ ಬರಲಿಲ್ಲವೆನ್ನುತ್ತಾರೆ. ಅಲ್ಲ, ನೀವು ನನ್ನನ್ನು ಬೈದರೂ ಚಿಂತಿಲ್ಲ, ನಿರಾಕರಿಸಬೇಡಿ. -Please! ಇನ್ನೂ ಎಂಟು ಸಾವಿರ ಬರಲಿದೆ. ಸಿನೆಮಾದಿಂದ ಬಂದು ದುಡ್ಡು ನಿಜ, ಆದರೆ ಅನ್ಯಾಯದ್ದಲ್ಲ. ಸಿನೆಮಾ ಸೃಷ್ಟಿಯಲ್ಲಿಯೂ ಕಲೆ ಇದೆ.''

ಅವರು ತೆರೆದ ಕಣ್ಣು ಬಾಯಿಗಳಿಂದ ಕೇಳುತ್ತಿದ್ದರೂ, ನನ್ನ ಪ್ರಮಾದ ಭಯ ಇನ್ನೂ ಹೆಚ್ಚಿತು.

''ಅಲ್ಲ ನಿಮ್ಮ ಹೆಸರನ್ನು ಎಲ್ಲಿಯೂ ಪ್ರಕಟ ಮಾಡಬಾರದೆಂದೂ ಹೇಳಿದ್ದೇನೆ.''

ಈಗ ಅವರು ನನ್ನ ಮಾತನ್ನು ಪ್ರಯತ್ನಪೂರ್ವಕವಾಗಿ ತಡೆದರು.

''ಏ ರಾಯಾ ! ನೀ ಮಾಡಿದ್ದು ತಪ್ಪು ಅಂತ ಯಾರು ಹೇಳಿರು ನಿನಗೆ ? ನನಗೆ ನಿನ್ನ ಸಿನೆಮಾ ಸೇರುವುದಿಲ್ಲವೆಂದು ತಿಳಿದಿಯೇನು? ಆಗಿನಿಂದ ತುಂಬಾ ಚಲಚ್ಚಿತ್ರಗಳನ್ನು ನೋಡಿದ್ದೇನೆ. ಇಂಗ್ಲಿಷ್, ಹಿಂದಿ ಎರಡೂ !''

ಇನ್ನಷ್ಟು ಪೆಚ್ಚು ಮುಖವಾಗಿತ್ತು ನನ್ನದು. ಸುಮ್ಮನೆ ಚೆಕ್ಕನ್ನು ಅವರ ಕೈಯಲ್ಲಿಟ್ಟು ತಂದಿದ್ದ ಕರಾರು ನಾಮೆಗೆ ಒಂದು ಸಹಿ ತೆಗೆದುಕೊಳ್ಳಲು ಮರೆತು, ಹೊರಬಂದು ಬಿಟ್ಟೆ.

(**Galsworthy**ಯ ಕಥೆಯೊಂದನ್ನು ಆಧರಿಸಿದೆ.)

ನಿಃಸಂತಾನ

ಚಿಕ್ಕಂದಿನಲ್ಲಿ ತಾಯಿಯನ್ನು ಕಳೆದುಕೊಂಡಿದ್ದ ಯಶವಂತನು ಧಾರವಾಡದ ಪವಾರ ಮಾಸ್ತರ ಒಬ್ಬನೇ ಮಗನು. ವಿದ್ಯಾರ್ಜನೆಯಲ್ಲಿ ತಮ್ಮ ಮಗನು ಯಾವಾಗಲೂ ಮುಂದೆ ಇರಬೇಕು; ಕಾಲೇಜಿನಲ್ಲಿ ದೊಡ್ಡ ಪ್ರೊಫೆಸರನಾಗಬೇಕು ಎಂಬುದು ಅವರ ಸುದೈವ ಬಯಕೆಯಾಗಿದ್ದಿತು, ಶಾಲೆಯಲ್ಲಿ ಅವನು ಒಂದನೆಯ ನಂಬರನ್ನೇ ಪಡೆಯಬೇಕೆಂದು ಅವರ ಹಠ.

ಮಟ್ರಿಕ್ ಪರೀಕ್ಷೆಯಲ್ಲಿ ಕೇಂದ್ರಕ್ಕೆ ಮೊದಲಿಗನಾಗಿ ತೇರ್ಗಡೆ ಹೊಂದಿ ಯಶವಂತನು ಕಾಲೇಜಿನಲ್ಲಿ 'ಇಂಟರ್'ನಲ್ಲಿ ಇರುವಾಗ, ೧೯೪೨ರ ಚಳುವಳಿ ಬಂದಿತು. ತರುಣನೂ ಸೂಕ್ಷ್ಮವೇದಿಯೂ ಆದ ಅವನು ಅದರಿಂದ ಅಲಿಪ್ತನಾಗಿರುವುದು ಸಾಧ್ಯವೇ ಇರಲಿಲ್ಲ. ಅಲ್ಲದೆ ವಿದ್ಯಾರ್ಥಿ ಚಳುವಳಿಗಾರರಲ್ಲಿ ಮುಂದಾಳಾದ್ದರಿಂದ ಕೆಲವು ತಿಂಗಳುಗಳ ಜೇಲುವಾಸವನ್ನು ಕಂಡು ಹೊರಬಂದನು. ಆ ವರುಷವಂತೂ ಅವನು ಕಾಲೇಜಿನ ಕಟ್ಟೆಯನ್ನು ಹತ್ತುವಂತಿರಲಿಲ್ಲ. ಮನೆಗೆ ಬಂದಾಗ, ಮಾಸ್ತರರು ಕೇವಲ ಒಂದು ದಿನದವರೆಗೆ ಮನೆಯಲ್ಲಿ ಇರಗೊಟ್ಟಿದ್ದರು. ಅದೂ ಬೈಯುವುದಕ್ಕೆಂದು! ತಾವಿಟ್ಟುಕೊಂಡಿದ್ದ ನಿರೀಕ್ಷೆಯೆತ್ತ, ಇವನ ಕಾರಭಾರವೆತ್ತ? 'ಇಂದಿನಿಂದ ನೀನು ನನ್ನ ಮಗನಲ್ಲ; ನಾನು ತಂದೆಯಲ್ಲ' ಎಂದರು.

ಯಶವಂತ ಮುಂಬೈಗೆ ಬಂದ ಏಶಿಯನ್ ಬ್ಯಾಂಕಿನಲ್ಲಿ ಕಾರಕೂನನಾಗಿ ಕೆಲಸಕ್ಕೆ ಸೇರಿದ. ವರ್ಷಕ್ಕೊಮ್ಮೆ ಧಾರವಾಡಕ್ಕೆ ಹೋಗಿ ಬರುತ್ತಿದ್ದ. ಪವಾರ ಮಾಸ್ತರು ತೀರಿದ ಮೇಲೆ, ಮನೆಯ ಋಣ ತೀರಿತೆಂದು ತಿಳಿದ.

ಆದರೆ ವಿದ್ಯಾರ್ಥಿ ದೆಸೆಯಲ್ಲಿ ಅವರು ಅವನಿಗೆ ಕೊಟ್ಟಿದ್ದ ತೊಂದರೆ ವ್ಯರ್ಥವಾಗಲಿಲ್ಲ. ಲೆಕ್ಕ ಮತ್ತು ಇಂಗ್ಲಿಷ್ ಅವನ ಪರಿಣತಿಯ ವಿಷಯಗಳಾಗಿದ್ದುವು. ಕೂಡಲೆ ಅವನನ್ನು ಜನರಲ್ ಮ್ಯಾನೇಜರರ ಆಪ್ತ ಕಾರ್ಯದರ್ಶಿ ಎಂದು ನಿಯಮಿಸಲಾಯಿತು. ಕೆಲವು ವರ್ಷಗಳ ನಂತರ, ಜನರಲ್ ಮ್ಯಾನೇಜರರು ಅಕಸ್ಮಾತ್ ತೀರಿಕೊಂಡಾಗ, ಇವನ ಬುದ್ಧಿಮತ್ತೆಯ ಪ್ರಾಮಾಣಿಕತೆಯ ಅರಿವಾಗಿದ್ದ ಡೈರೆಕ್ಟರ್ ಮಂಡಳಿಯವರು, ಇವನನ್ನೇ ಆ ಸ್ಥಳಕ್ಕೆ ನಿಯಮಿಸಿದರು.

ಮಾಸ್ತರರು ಬದುಕಿ ಇದ್ದಿದ್ದರೆ ಮಗನ ಈ ಸ್ವಯಂ ಯೋಗ್ಯತೆಯ ಸಾಧನೆಗೆ ಏನು ಹೇಳುತ್ತಿದ್ದರೋ!

ಯಶವಂತನ ಮದುವೆಯಾದರೂ ಹೀಗೆಯೇ ಅನಿರೀಕ್ಷಿತ ಸಾಧನೆಯಾಗಿದ್ದಿತು. ಹನ್ನೊಂದು ವರ್ಷಗಳ ಹಿಂದಿನ ಮಾತು ಇದು. ಬ್ಯಾಂಕಿನ ಹಿರಿಯ ಸ್ಥಾನವನ್ನು ಪಡೆದ ಹೊಸತರಲ್ಲಿ ಯಶವಂತನು ಪುಣೆಯಲ್ಲಿಯ ತಮ್ಮ ಶಾಖೆಯ ಕಚೇರಿಗೆ ಹೋಗಬೇಕಾಗಿ ಬಂದಿತು. ಅಲ್ಲಿಯ ಸ್ಥಳಿಕ ಮ್ಯಾನೇಜರನ ಕನ್ನಡಿಯ ಕೋಣೆಯಲ್ಲಿ ಕುಳಿತಾಗ ಹೊರಗಡೆ ಒಬ್ಬ ಇಳಿವಯಸ್ಸಿನವನೂ, ಓರ್ವ ತರುಣಿಯೂ ನಿಂತದ್ದು ಕಂಡಿತು. ಆ ವನಿತೆಯ ಆಕೃತಿ ಹಾಗೂ ಮುಖದ ಲಾವಣ್ಯ ಅವನ ಮನಸ್ಸನ್ನು ಆಕರ್ಷಿಸಿತು. ಅವಳನ್ನು ಇನ್ನೂ ನೋಡಬೇಕೆಂದು ಕಣ್ಣು ತ್ವವಕಿಸಿದವು.

ಅವರೇನೋ ತಮ್ಮ ಬ್ಯಾಂಕಿನ ಕೆಲಸವನ್ನು ಮುಗಿಸಿಕೊಂಡು ಹೋಗಿಬಿಟ್ಟರು. ಸಂಜೆಯಾದ ಮೇಲೆ ಯಶವಂತನು ತಾನು ಇಳಿದುಕೊಂಡಿದ್ದ 'ಲಕ್ಷರಿ' ಹೋಟೆಲಿಗೆ ಹೋದಾಗ, ಅವರೂ ಅಲ್ಲಿಯೇ ಇಳಿದುಕೊಂಡದ್ದು ನೋಡಿ ಅವನಿಗೆ ಅಚ್ಚರಿ, ಅದಕ್ಕೆ ಯೌವನದ ಉತ್ಸಾಹವೂ ಸೇರಿದ್ದಾಗ, ಊಟವನ್ನೂ ಮುಗಿಸಿಕೊಂಡವನೇ, ತಾನಾಗಿ ಅವರ ಕೋಣೆಗೆ ಹೋದನು. ತನ್ನ ಹೆಸರು, ಗುರುತು ಹೇಳಿದನು. ಬಾರಾಮತಿ ನಗರದಲ್ಲಿ ಅವನು ಸಕ್ಕರೆ ಕಾರ್ಖಾನೆಯೊಂದರ ಒಡೆಯನೆಂದೂ ಆಕೆ ಆತನ ಮಗಳೆಂದೂ ತಿಳಿದುಕೊಂಡನು.

ಗಂಡಸರಿಬ್ಬರ ಮಾತು ನಡೆದಾಗ ಆ ಕನ್ಯೆ ವಿಮನಸ್ಕಳಾಗಿ ಇದ್ದುದು ಯಶವಂತನ ಗಮನಕ್ಕೆ ಬಾರದಿರಲಿಲ್ಲ. ಆ ಮುದುಕನೂ ನಡತೆಯಲ್ಲಿ ಆದರವನ್ನು ತೋರಿದರೂ ಮಾತಿನಲ್ಲಿ ಉತ್ಸುಕನಾಗಿದ್ದಂತೆ ಕಾಣಲಿಲ್ಲವಾದ್ದರಿಂದ ಯಶವಂತನು ಅಲ್ಲಿಂದ ಎದ್ದು ಬಂದನು. ಪುಣೆಯಿಂದ ಹೊರಟು ಮುಂಬೈಗೆ ಬಂದ ಮೇಲೂ ಅವನ ಮನಸ್ಸು ಅವಳನ್ನೇ ಧೇನಿಸುತ್ತಿತ್ತು. ಅವಳನ್ನು ತಾನು ಏಕೆ ಮದುವೆಯಾಗಬಾರದು? 'ಆಯುಷ್ಯದಲ್ಲಿ ನಾನು ಎರಡನೆಯ ಬಾರಿ ದುಡುಕುತ್ತಿದ್ದೇನೆ.' ಆದದ್ದಾಗಲಿ ಎಂದುಕೊಂಡು ಅವರಿಗೆ ಪತ್ರ ಮುಖೇನ ತನ್ನ ಮನದಿಂಗಿತವನ್ನು ತಿಳಿಸಿದನು. ಹಣವಂತನೂ, ಅಧಿಕಾರಸ್ಥನೂ, ಸ್ವಜಾತಿಯವನೂ ಆದ ಅವನ ಈ ಯಾಚನೆಗೆ ಬಂದ ಉತ್ತರವೆಂದರೆ, ತನ್ನ ಮಗಳೇ ಉತ್ತರ ಬರೆಯುತ್ತಾಳೆ ಎಂದು.

ಮಗಳು ಏಕೆ ಬರೆಯಬೇಕೊ? ಅವಳು ಅಷ್ಟು ಸ್ವತಂತ್ರ ಪ್ರವೃತ್ತಿಯವಳೆ? ತಂದೆ-ಮಗಳಲ್ಲಿ ಈ ವಿಷಯವಾಗಿ ಭಿನ್ನಾಭಿಪ್ರಾಯವಿರಬಹುದೆ? ಅವಳ ಉತ್ತರಕ್ಕಾಗಿ ಅವನು ದಿನವೂ ಕಾಯ್ದನು; ಬಂದೇ ಬರುವುದೆಂಬ ಆಶೆಯದಿಂದ ಹೆಚ್ಚೆಚ್ಚು ಆತುರನಾದನು. ಕೊನೆಗೊಮ್ಮೆ ಬಂದಿತು;

'ಮಾನ್ಯರೇ, ನಮ್ಮ ತಂದೆಯವರಿಗೆ ನೀವು ಬರೆದ ಪತ್ರವನ್ನು ಓದಿದ್ದೇನೆ ಕ್ಷಮಿಸಬೇಕು

ಇತಿ ಮೋಹಿನಿ.'

ಆಶಾಭಂಗದ ಜೊತೆಗೆ, ಅವನಿಗೆ ಇದೊಳ್ಳೆ ಮೋಜೆನಿಸಿತು. ಅವಳು ತನ್ನಲ್ಲಿ ಏನು ಕುಂದನ್ನು ಎಣಿಸಿದಳೋ ಎಂಬ ಬೇಸರವನ್ನು ತಳ್ಳಿ ಹಾಕಿ, 'ಬಹುಶಃ ಅವಳ ಹೃದಯದಲ್ಲಿ ಬೇರೊಬ್ಬನಿಗೆ ಸ್ಥಾನವಿರಬೇಕು' ಎಂದು ಯೋಚಿಸಿ, ಅವಳ ವಿಷಯವನ್ನು ಮರೆಯಬಯಸಿದನು.

ಆದರೆ ದೈವವು ಹಾಗೆ ಮಾಡಗೊಡಲಿಲ್ಲ. ಕೆಲವು ತಿಂಗಳುಗಳ ನಂತರ ಮತ್ತೊಮ್ಮೆ ಪುಣೆಗೆ ಹೋಗಿದ್ದಾಗ, ಆ ಮುದುಕನು ತನ್ನ ವ್ಯವಹಾರದಲ್ಲಿ ಅತೀವ ಹಾನಿಗೊಳಗಾಗಿ ಮನೆಯಲ್ಲಿಯ ೩-೪ ಸೇರು ಬಂಗಾರವನ್ನು ತಮ್ಮ ಬ್ಯಾಂಕಿನಲ್ಲಿ ಅಡವಿಟ್ಟು ಸಾಲವನ್ನೊಯ್ದ ವಿಷಯ ತಿಳಿದು ಬಂತು. ವ್ಯವಹಾರದ ಮೇಲಿಂದ ಆ ಮುದುಕನ ದುರ್ದೆಸೆಯ ಸ್ಪಷ್ಟ ಕಲ್ಪನೆ ಮೂಡಿತು.

ಒಮ್ಮೆ ಬಾರಾಮತಿಗೆ ಹೋಗಿ ಬಂದರೆ ತಪ್ಪೇನು? ಅವಳು ನಿರಾಕರಿಸಿದ್ದರ ಕಾರಣವನ್ನು ತಿಳಿಯುವ, ಅವಳ ಮದುವೆಯಾಗಿರದಿದ್ದರೆ ಇನ್ನೊಮ್ಮೆ ಕೇಳುವಾ. ಇಂಥ ವಿಪತ್ತಿನ ಪ್ರಸಂಗದಲ್ಲಿ ಅವರಿಗೆ ಪರ್ಯಾಯವಾಗಿಯಾದರೂ ನೆರವಾದಂತಾಗುತ್ತದೆ.

ತನಗೆ ಬಹು ವರ್ಷಗಳ ಸಂಬಂಧವಿದ್ದ ಬ್ಯಾಂಕಿನ ಹಿರಿಹುದ್ದರಿಯೇ ಮನೆತನಕ ಬಂದಾಗ ಆ ಯಜಮಾನನು ಆದರದಿಂದ ಬರಮಾಡಿಕೊಂಡನು. ಯಶವಂತನು ಬ್ಯಾಂಕಿನ ಮೂಲಕ ತನ್ನ ನೆರವಿನ ಭರವಸೆಯನ್ನು ಕೊಟ್ಟನು. ತನ್ನನ್ನು ನಿರಾಕರಿಸಿದ್ದರ ಕಾರಣ ತಿಳಿಯಬಯಸಿ, ಈಗಲೂ ತಾನು ಮದುವೆಗೆ ಸಿದ್ಧ ಎಂದು ಹೇಳಿದನು.

''ನಮ್ಮ ಕಷ್ಟ ಸ್ಥಿತಿಯಲ್ಲಿ ಪುನಃ ನೀವು ಕೇಳಬಂದಿದ್ದೀರಿ. ನನಗೆ ನಿಮ್ಮ ಸಜ್ಜನಿಕೆ, ಸೌಮ್ಯ ಸ್ವಭಾವಗಳ ಅರಿವಾಗಿದೆ. ನಮ್ಮ ಅಡಚಣೆಯಲ್ಲಿ ತನ್ನ ಮದುವೆಯು ಭಾರವಾಗಬಾರದು, ಮದುವೆಯಾಗದೆ ನೌಕರಿ ಮಾಡುತ್ತೇನೆ ಎನ್ನುತ್ತಾಳೆ. ಅವಳೀಗ ಊರಲ್ಲಿಲ್ಲ. ನೀವು ಇನ್ನೊಂದು ಆರು ತಿಂಗಳು ತಡೆಯಬಲ್ಲಿರಾದರೆ, ಅವಳನ್ನು ಒಪ್ಪಿಸಿಯೇನು. ಅಷ್ಟರಲ್ಲಿ ನಿಮ್ಮ ಮದುವೆ ಬೇರೊಂದೆಡೆ ನಿಶ್ಚಿತವಾದರೆ ನನಗೆ ಸಂತೋಷವೇ'' ಎಂದನು.

ಆರು ತಿಂಗಳಲ್ಲವೆ? ಕಾಯುವೆನೆಂದುಕೊಂಡ.

ಈ ಅವಧಿ ಕಳೆದ ಮೇಲೆ ಅವರ ಒಪ್ಪಿಗೆಯ ಪತ್ರ ಬಂದಿದ್ದಿತು. ಮತ್ತೆ ೫-೬ ತಿಂಗಳು ಅವಧಿಯ ನಂತರದ ಲಗ್ನಮಾಸದಲ್ಲಿ ಮೋಹಿನಿಯು ಯಶವಂತನ ಮಡದಿಯಾಗಿ ಮುಂಬೈಯನ್ನು ಸೇರಿದ್ದಳು. ಮದುವೆಯ ಕಾಲದಲ್ಲಿಯೂ ತಮ್ಮ ದಾಂಪತ್ಯದ ಆರಂಭದ ದಿನಗಳಲ್ಲಿಯೂ ಅವಳ ಮುಖದಲ್ಲಿ ಗೆಲುವಿರಲಿಲ್ಲ ವೆಂಬುದನ್ನು ಯಶವಂತನು ಕಂಡುಕೊಂಡಿದ್ದನು. ಆದರೆ ತಾನಾಗಿ ಅರಸಿಕೊಂಡು ಹೋದ ಅವಳನ್ನು ಸುಖಿಯಾಗಿ ಇಡಬೇಕೆಂಬ ಅವನ ಧೋರಣೆಯೂ ಸುಸ್ವಭಾವವೂ ಅವಳಲ್ಲಿ ಪರಿವರ್ತನೆಯನ್ನು ಮಾಡದಿರಲಿಲ್ಲ.

ಕೈತುಂಬ ಸಂಬಳ, ಸಮಾಜದಲ್ಲಿಯ ಪ್ರತಿಷ್ಠಿತ ಸ್ಥಾನ, ವಾಸಿಸಲು ನೇಪಿಯಸ್ ಸೀ ರೋಡ್‌ನಲ್ಲಿ ಸುಸಜ್ಜಿತ ಬಂಗಲೆ ಸಂಗಾತಿಯಾಗಿ ರೂಪವಂತೆಯೂ, ಅನುವರ್ತಿನಿಯೂ ಆದ ಮಡದಿ. ಯಶವಂತನು ಯಾವುದರ ಕೊರತೆಯೂ ಇಲ್ಲದೆ, ಇದುವರೆಗಿನ ತನ್ನ ಬಾಳಿನ ಹತ್ತು ವರ್ಷಗಳನ್ನು ನಿರಾತಂಕವಾಗಿ ಕಳೆದಿದ್ದನು.

ಒಂದು ವಿಷಯದಲ್ಲಿ ಮಾತ್ರ ಕೊರತೆಯಿದ್ದಿತು. ಅದೇಂದರೆ ಅವರಿಗೆ ಮಕ್ಕಳಾಗಿರಲಿಲ್ಲ. ಮನೆಯಲ್ಲಿ ೪-೫ ಜನರೂ ಆಗಾಗ ಬರುವ ಗೆಳೆಯರೂ ಇರುವಾಗ ಯಶವಂತನಿಗೆ ತನ್ನ ಮನೆ ಬರಿದಾಗಿಯೇ ಕಾಣುತ್ತಿತ್ತು. ಒಂದು ಮಗು ಮನೆಯ ಮೂಲೆ ಮೂಲೆಗಳಲ್ಲಿ ಹರಿದಾಡಿದಷ್ಟು ದೊಡ್ಡವರು ಓಡಾಡುತ್ತಾರೆಯೆ?

ಸಂಜೆಗೆ ತಾನು ಮನೆಗೆ ಬರುವಾಗ ಮೋಹಿನಿಯು ಮಂದಸ್ಮಿತೆಯಾಗಿ ಸ್ವಾಗತಿಸುತ್ತಿದ್ದಳೇನೋ ನಿಜ. ಆದರೆ ಅವಳ ಬಗಲಲ್ಲಿ ಕುಳಿತ ಮಗುವೊಂದು 'ಪಪ್ಪಾ' ಎನ್ನುತ್ತ ತನ್ನ ಪುಟ್ಟ ಕೈಗಳನ್ನು ಚಾಚಿ, ತನ್ನೆಡೆಗೆ ಬರಲು ಧಾವಿಸುತ್ತಿದ್ದರೆ ಎಷ್ಟು ಚೆನ್ನ! ಮನೆಯ ಪ್ರತಿಯೊಂದು ವಸ್ತುವೂ ಅತ್ಯಂತ ಓರಣವಾಗಿ, ಅಚ್ಚುಕಟ್ಟಾಗಿ ಇರುತ್ತಿತ್ತು. ಯಶವಂತನಿಗೆ ಅದು ಬೇಡವಾಗಿತ್ತು! ಮನೆಯಲ್ಲಿ ತುಂಟ ಮಗುವೊಂದು ಅವನ್ನೆಲ್ಲ ಅಲ್ಲಿ, ಇಲ್ಲಿ ಚೆಲ್ಲಾಡಬೇಕು, ತಾಯಿಯೊ, ದಾಸಿಯೊ ಬಂದು ಅದನ್ನು ಗದರಿಸುವಾಗ ತಾನು ಬದಿಯಲ್ಲಿ ನಗುತ್ತಾ ನಿಂತಿರಬೇಕು!

ತನಗೆಯೆ ಮಕ್ಕಳ ವಿಷಯವಾದ ಕೊರಗು ಹೀಗೆ ಇರುವಾಗ ಮೋಹನಿಯು ಅದೆಷ್ಟು ನೊಂದುಕೊಂಡಿದ್ದಾಳೆಯೋ! ಆದರೆ ಅವಳ ಬಾಯಿಂದ ಆ ಕೊರಗು ಹೊರಬಂದಾಗ ಮಾತ್ರ ತಾನು ಬಾಯ್ತುಂಬ ಸಮಾಧಾನಪಡಿಸಬೇಕು ಎಂದು ಯಶವಂತನು ಹಾತೊರೆಯುತ್ತಿದ್ದ. ಬ್ಯಾಂಕಿನ ಮಹತ್ವದ ಕಾಗದ ಪತ್ರಗಳ ಪರಿಶೀಲನೆಯಲ್ಲಿ ಒಮ್ಮೊಮ್ಮೆ ರಾತ್ರಿ ೧೦-೧೨ ಗಂಟೆಯವರೆಗೆ ತನ್ನ ಕೋಣೆಯಲ್ಲಿ ಕುಳಿತಿರುತ್ತಿದ್ದ. ಅಲ್ಲಿಂದ ಮಲಗುವ ಕೋಣೆಗೆ ಬರುವಾಗ 'ಮೋಹಿನಿಯು ಈಗ ಬಿಸುಸುಯ್ಯುತ್ತಿರಬಹುದು' ಎಂಬ ಭಾವನೆಯಿಂದ ಮೆಲ್ಲಗೆ ಹೆಜ್ಜೆಯಿಡುತ್ತ, ಅವಳ ಹಾಸಿಗೆಯ ಹತ್ತಿರ ಬರುವಾಗ, ಅವಳೂ ಅವನ ಎಣಿಕೆಗೆ ವಿರುದ್ಧವಾಗಿ ನಿದ್ದೆಯಲ್ಲಿ ಮುಳುಗಿರುತ್ತಿದ್ದಳು. ಅದರಿಂದ ಅವನಿಗೆ ನಿರಾಶೆಯೆನಿಸಿದರೂ ಹೆಂಡತಿಯ ಬಗ್ಗೆ ಮರುಕವೂ ಇಮ್ಮಡಿಸುತ್ತಿತ್ತು.

ಒಂದು ಸಲ ಅವನು ತನ್ನ ಸ್ನೇಹಿತನೊಬ್ಬನ ಮನೆಗೆ ಸಪತ್ನೀಕನಾಗಿ ಭೋಜನಕ್ಕೆ ಹೋಗಿದ್ದನು. ಆ ಸ್ನೇಹಿತನ ಮೂವರು ಮಕ್ಕಳಲ್ಲಿ ಕಿರಿಯವ, ಅತಿ ತುಂಟ. ಅವನು ಯಶವಂತನ ಹೆಗಲನ್ನೇರಿ ಅವನನ್ನು ಕುದುರೆಯನ್ನಾಗಿ ಮಾಡಬಯಸಿದ ಸರಿ, ಯಶವಂತನು ತನ್ನ ಉಲನ್ ಪ್ಯಾಂಟಿನಲ್ಲಿಯೇ ನೆಲಕ್ಕೆ ಮೊಳಕಾಲು, ಅಂಗೈಗಳನ್ನು ಊರಿ, ಕುದುರೆಯಾಗಿ ಹರಿದಾಡಿದನು. ಮಕ್ಕಳಿಲ್ಲದೆ ಯಶವಂತನು ಆಡಲಿ— ಎಂಬ ಮರುಕದ ಭಾವನೆಯಿಂದ ಅವನ ಗೆಳೆಯನು ನೋಡುತ್ತಿದ್ದರೆ, ಮೋಹಿನಿಯು ದಿಟ್ಟಿಸಿ ನೋಡುತ್ತಲಿದ್ದಳು. ಒಮ್ಮೆ ಅವಳ ದೃಷ್ಟಿಯನ್ನು ಎದುರಿಸಿದ

ಕೂಡಲೇ ಯಶವಂತನಿಗೆ ತನ್ನ ತಪ್ಪಿನ ಅರಿವಾಯಿತು. ಅವಳೆದುರಿಗೆ ತಾನು ತನ್ನ ಪುತ್ರಕಾಮೇಷ್ಟಿಯನ್ನು ಇಷ್ಟೊಂದು ಪ್ರದರ್ಶಿಸಬಾರದು; ತನ್ನ ಬಸುರಿನಿಂದ ಹುಟ್ಟುವ ಮಗುವನ್ನು ಬಿಟ್ಟು ಅನ್ಯರ ಮಗುವನ್ನು ಈ ರೀತಿ ಮುದ್ದಾಡಿದರೆ ಮಾಯದ ಗಾಯದ ಮೇಲೆ ಬರೆಯನ್ನು ಎಳೆದಂತೆ ಆದೀತು ಎಂದೆಣಿಸಿ, ಆ ಸವಾರನನ್ನು ಕೆಳಗಿಳಿಸಿದನು.

ಮೋಹಿನಿ ಸರಸಗಾತಿಯಾದರೂ ಮಾತುಗಾರ್ತಿಯಲ್ಲ. ಈ ವಿಷಯವನ್ನು ಅವಳು ಗಂಡನೊಂದಿಗೆ ಮಾತಾಡುತ್ತಲೇ ಇರಲಿಲ್ಲ. ಅವನಾಗಿ ಪ್ರಸ್ತಾಪಿಸಿದರೆ, ''ನಿಮಗಿರುವ ಅವಸರ ನನಗಿಲ್ಲ. ನನಗೇನು ವಯಸ್ಸು ಮೀರಲಿಲ್ಲ. ಆಮೇಲೆಯೂ ಮಕ್ಕಳಾಗದಿದ್ದರೆ, ನಿಮ್ಮನ್ನೇ ಮಗುವೆಂದು ತಿಳಿಯುತ್ತೇನೆ'' ಎಂದು ಒಮ್ಮೆ ನಗೆಯಾಡಿದ್ದಳು.

ಅವಸರವೇನು ಬಂತು! ಹತ್ತು ವರ್ಷದ ದಾಂಪತ್ಯದ ಬೆಸುಗೆಯಲ್ಲಿ ಒಂದಾದರೂ ಮಗು ಆಗಿಲ್ಲವೆಂದರೆ ಏನಾದರೂ ದೈಹಿಕ-ದೋಷವಿರಬೇಕಲ್ಲವೇ? ತನ್ನ ಆರೋಗ್ಯದಲ್ಲಿ ಹೆಚ್ಚು ಕಡಿಮೆಯಿದೆಯೆ? ತನ್ನ ಗುರುತಿನ ಡಾಕ್ಟರರೊಬ್ಬರ ಸಲಹೆಯನ್ನು ಕೇಳಿದಾಗ, ಅವನನ್ನು ಪರೀಕ್ಷಿಸಿ ಅವರು, 'ನಿಮ್ಮ ಹೆಂಡತಿಯನ್ನು ಒಬ್ಬ ಲೇಡಿ ಡಾಕ್ಟರಿಗೆ ತೋರಿಸಿರಿ' ಎಂದು ಹೇಳಿದ್ದರು. ಅದಕ್ಕೆ ಅವಳು 'ಈಗೇಕೆ ಗಡಿಬಿಡಿ? ಸ್ವಲ್ಪ ಕಾಲ ಹೋಗಲಿ, ತೋರಿಸಲೇಬೇಕೆಂದಾದರೆ, ಆಗಲಿ' ಎಂದಿದ್ದಳು. ಆಮೇಲೆ ಯಶವಂತನು ಒತ್ತಾಯ ಮಾಡಿರಲಿಲ್ಲ. ಒಂದು ವೇಳೆ ಮೆಡಿಕಲ್‌ನಲ್ಲಿ ಅವಳದೇ ದೋಷ ಎಂದು ಸಿದ್ಧವಾದರೆ ಹೊಸತೊಂದು ಕೊರಗು ಉಂಟಾಗುವುದು ಬೇಡ. ಇಂದಿಲ್ಲ ನಾಳೆ ಮಕ್ಕಳಾಗುವ ಆಸೆ ಹಿಡಿದಿದ್ದಾಳೆ. ಅದೇ ವಾಸಿ.

೨

ತನ್ನ ಕಚೇರಿಯ ಕೆಲಸದ ಒತ್ತಡ ಎಷ್ಟೇ ಇರಲಿ, ಅವನು ವರುಷಕ್ಕೆ ಒಂದು ತಿಂಗಳ ರಜೆ ಪಡೆದು, ಮುಂಬಯಿ ಬಿಟ್ಟು ಹೊರಟು ತಿರುಗಾಡಿಕೊಂಡು ಬರುತ್ತಿದ್ದ. ಮೋಹಿನಿಗೆ ಇವನಷ್ಟು ಪ್ರವಾಸದ ಹುಚ್ಚು ಇರಲಿಲ್ಲ. ಆಕೆ ಆ ಅವಧಿಯಲ್ಲಿ ಕೆಲವೊಂದು ದಿವಸ ತನ್ನ ತವರು ಮನೆಗೆ ಹೋಗಿ ಬರುತ್ತಿದ್ದಳು. ಅವಳನ್ನು ಕಳಿಸಲಿಕ್ಕೆಂದು ತಾನೂ ಹೋಗಿ ಒಂದೆರಡು ದಿನ ಮಾತ್ರ ಅಲ್ಲಿ ಉಳಿಯುತ್ತಿದ್ದನು.

ಯಥಾಪ್ರಕಾರ ಈ ವರುಷದ ಬೇಸಗೆಯ ರಜೆಯ ದಿನಗಳು ಹತ್ತಿರ ಬಂದವು. ಈ ಸಲ ಮಹಾಬಳೇಶ್ವರಕ್ಕೆ ಹೋಗಬೇಕೆಂದು ಅವನ ಯೋಜನೆಯಾಗಿದ್ದಿತು. ಅದಕ್ಕಾಗಿ ೧೫ ದಿನಗಳ ಮಟ್ಟಿಗೆ ಕೋಣೆಯೊಂದನ್ನು ಕಾಯ್ದಿರಿಸಿದ್ದನು. ಬಾರಾಮತಿಯಲ್ಲಿ ಕೆಲವು ದಿನ ಇರಲೆಂದು, ಅವಳನ್ನು ಅಲ್ಲಿ ಬಿಟ್ಟು ತಾನು

ಧಾರವಾಡಕ್ಕೆ ಹೋಗಿ ಬರಬೇಕು; ಅಲ್ಲಿಂದ ಮಹಾಬಳೇಶ್ವರ ವಾಸ್ತವ್ಯ ಇದು ಅವನ ರಜಾ ಯೋಜನೆ.

ಬಾರಾಮತಿಗೆ ಹೊರಡಬೇಕು ಎನ್ನುವ ಮುನ್ನಾ ದಿನವೇ ರಿಸರ್ವ್ ಬ್ಯಾಂಕಿನವರು ಪೂರ್ವ ಸೂಚನೆಯಿಲ್ಲದೆ ಯಶವಂತನ ಬ್ಯಾಂಕಿನ ಲೆಕ್ಕ ತಪಾಸಣೆಗೆಂದು ಬಂದರು. ಹಾಗಾಗಿ ಯಶವಂತನ ರಜೆ ಎರಡು ವಾರ ಮುಂದೆ ಹೋಯಿತು. ತಾವು ಹೊರಡುವ ದಿನವನ್ನು ಮುಂದೆ ಹಾಕಿ, ಅವಳಿಗೇಕೆ ನಿರಾಶೆಯನ್ನುಂಟು ಮಾಡುವುದೆಂದು ಅವನು ಅವಳೊಬ್ಬಳನ್ನೇ ಕಳಿಸಲು ನಿರ್ಧರಿಸಿ ಗಾಡಿಯಲ್ಲಿ ಕೂಡ್ರಿಸಿ ಬಂದನು.

ಆಫೀಸಿನ ಕೆಲಸ ಮಾತ್ರ ಒಂದು ವಾರದಲ್ಲಿಯೇ ಮುಗಿದುಹೋಯಿತು. ಕಛೇರಿಯ ಕೆಲಸವು ಇನ್ನೊಂದು ವಾರ ಇದ್ದೇ ಇತ್ತೆಂದು, ಮುಂಬಯಿಯಲ್ಲೇ ಉಳಿದನು. ಮೋಹಿನಿಯಿಲ್ಲದ ಮನೆ ಭಣಭಣ ಎನ್ನುತ್ತಿತ್ತು. ಈ ಮಧ್ಯದಲ್ಲಿ ಒಂದು ದಿನ ಬ್ಯಾಂಕಿನ ಸಾರ್ವತ್ರಿಕ ಸೂಟಿ ಬೇರೆ. ಆ ದಿವಸ ಮಧ್ಯಾಹ್ನ ಊಟ ಮಾಡಿ, ವಾಮಕುಕ್ಷಿಯನ್ನು ಮುಗಿಸಿದ ಮೇಲೆ, ಸಹಜವಾಗಿ ತನ್ನ ಹೆಂಡತಿಯ ಕೋಣೆಗೆ ಬಂದನು. ಅವಳ ಬಟ್ಟೆಗಳ ಗೋದ್ರೆಜ ಕಪಾಟು, ಆ ಮೂಲೆಯಲ್ಲಿ ಒಂದು ಚಿಕ್ಕ ಮಂಚವಾದರೆ, ಈ ಮೂಲೆಗೆ ಒಂದು ಆರಾಮ ಕುರ್ಚಿ, ಎಡ ಮಧ್ಯದಲ್ಲಿ ಅಂದವಾದ ಒಂದು ಮೇಜು, ಕುರ್ಚಿ... ಆ ಕೋಣೆಯ ಪ್ರತಿಯೊಂದು ವಸ್ತುವಿನಲ್ಲಿಯೂ ಹೆಂಡತಿಯ ಅಸ್ತಿತ್ವವನ್ನು ಕಾಣುತ್ತ ಈ ಸಾಮಾನುಗಳನ್ನು ಎತ್ತಿ ನೋಡಿ ಇಡುತ್ತ ಕೆಲ ಸಮಯವನ್ನು ಕಳೆದನು.

ಮೋಹಿನಿಯು ಓದು ಬರೆಯಲು ಕುಳ್ಳಿರುತ್ತಿದ್ದ ಆ ಮೇಜಿನ ಡ್ರಾವರ್‌ನ ಕಡೆಗೆ ಅವನ ಲಕ್ಷ್ಯ ಹೋಯಿತು. ಬಲಬದಿಯಲ್ಲಿರುವ ಅದರ ಮೂರು ಡ್ರಾವರ್‌ಗಳಲ್ಲಿ ಕೆಳಗಿನದು ಕಿಂಚಿತ್ ಹೊರಬಂದಿದ್ದಿತು. ಮೇಲಿನ ಡ್ರಾವರ್‌ಗೆ ಕೀಲಿ ಹಾಕಿಬಿಟ್ಟರೆ, ಉಳಿದೆರಡಕ್ಕೂ ಆ ಕೀಲಿ ಕೂಡ್ರುವಂತೆ ಅದರ ಯೋಜನೆ, ಕೆಳಗಿನ ಡ್ರಾವರ್ ತುಸು ಹೊರಗೆ ಬಂದಿದ್ದರಿಂದ ಅದಕ್ಕೆ ಕೀಲಿಯು ಕೂತಿರಲಿಲ್ಲ. ಇದರಲ್ಲಿ ಏನೇನು ಇಟ್ಟುಕೊಂಡಿದ್ದಾಳೊ ಎಂದು ಸಹಜ ಕುತೂಹಲದಿಂದ, ಅದನ್ನು ಹೊರತೆಗೆದನು. ವಿವಿಧ ಬಗೆಯ ವಸ್ತುಗಳು, ಅವರಿವರ ಛಾಯಾ ಚಿತ್ರಗಳು— ಅಲ್ಲಲ್ಲಿ ಚೆಲ್ಲಾಡಿದ್ದವು. ವಿಶೇಷವಾಗಿ ಅವನ ಗಮನವನ್ನು ಸೆಳೆದುದೆಂದರೆ ಒಂದು ಚಿಕ್ಕ ಸಂದುಕ. ಅದನ್ನು ತೆಗೆದಾಗ ಅದರಲ್ಲಿ ಅವಳ ತಂದೆ-ತಾಯಿಗಳ, ಗೆಳತಿಯರ ಪತ್ರಗಳಿದ್ದವು. ಮೋಹಿನಿಗೆ ಪ್ರಿಯವಾದ ಆ ಪತ್ರಗಳಲ್ಲಿ ಕೆಲವನ್ನು ಅವನು ನೋಡಿಯೇ ಇದ್ದನು.

ಯಶವಂತನಿಗೆ ಒಂದು ಯೋಚನೆ ಹೊಳೆಯಿತು. ಮದುವೆಗೆ ಪೂರ್ವದಲ್ಲಿ ತಾನು ಬರೆದ ಎರಡು ಪತ್ರಗಳು ಈ ಆತ್ಮೀಯ ಕಾಗದಗಳ ಕಟ್ಟಿನಲ್ಲಿ ಇವೆಯೆ? ಅವು ಇಲ್ಲಿ ಕಾಣಲಿಲ್ಲ. ಛೆ, ಅವಳು ಇಲ್ಲೆಲ್ಲಿಯಾದರೂ ಇಟ್ಟಿರಲೇಬೇಕು. ಅವಳೇ

ಬರೆದಿದ್ದ ಮೂರು ಸಾಲಿನ ಪತ್ರ-ಅದೂ ತನ್ನನ್ನು ನಿರಾಕರಿಸಿ ಬರೆದುದು-ಅದು ಇಂದಿಗೂ ತನ್ನ ಮೇಜಿನ ಡ್ರಾವರ್‌ನಲ್ಲಿ ಇದ್ದಿತಲ್ಲವೇ? ಛಕ್ಕನೆ ಅವನಿಗೆ ನೆನಪಾಯಿತು. ಆ ಸಂದುಕದ ತಳದಲ್ಲಿ ಇನ್ನೊಂದು ಖಾನೆಯಿತ್ತು ಎಂದು. ಆ ಸಂದುಕವನ್ನು ೭-೮ ವರ್ಷಗಳ ಹಿಂದೆ ತಾನೇ ಕೊಂಡು ತಂದು ಅವಳಿಗೆ ಕೊಟ್ಟಿದ್ದನು. ಮೇಲುನೋಟಕ್ಕೆ ಆ ತಳ ಖಾನೆಯ ಕಲ್ಪನೆ ಕೂಡಾ ಬರುವಂತಿದ್ದಿಲ್ಲ. 'ಇಲ್ಲಿವೆ ನನ್ನ ಪತ್ರ' ಎಂಬ ಭರವಸೆಯಿಂದ ಅದನ್ನು ಹೊರತೆಗೆದನು.

ಅದರಲ್ಲಿ ಕೆಲವು ಪತ್ರಗಳೇನೋ ಇದ್ದುವು. ಇವನ ಪತ್ರಗಳಿರಲಿಲ್ಲ!

ಆದರೆ ಇವು ಯಾರ ಪತ್ರಗಳು? ಶಾಲೆಗೆ ಹೋಗುವ ಮಗುವು ಬರೆದ ರೀತಿಯಲ್ಲಿ ಅಕ್ಷರಗಳಿವೆ. ಕುತೂಹಲ ಮೀರಿ ಒಂದರ ಮಡಿಕೆಯನ್ನು ಬಿಡಿಸಿ ನೋಡಿದನು. 'ನಿನ್ನ ಪ್ರೀತಿಯ ಮಮ್ಮಿ'—ಎಂದು ಅದರ ಆರಂಭದ ಒಕ್ಕಣಿಕೆ.

ತಾನು ಏನೋ ಕಳ್ಳತನದ ಕೆಲಸ ಮಾಡುತ್ತಿದ್ದೇನೆ ಎಂದು ಯಶವಂತನಿಗೆ ಭಾವನೆ ಬಂದಿತು. ಪರಿಚಾರಿಕೆಯಾಗಲಿ, ಸೇವಕನಾಗಲಿ ತಾನಿರುವದನ್ನು ನೋಡಿಲ್ಲವಷ್ಟೆ. ಅವನು ಕೂಡಲೇ ಬಾಗಿಲನ್ನು ಮುಚ್ಚಿ ಬಂದು, ಆ ಪತ್ರವನ್ನು ಓದತೊಡಗಿದನು.

"ನನ್ನ ಪ್ರೀತಿಯ ಮಮ್ಮಿ—

ನಾನು ಇಲ್ಲಿ ಆರಾಮ ಇದ್ದೇನೆ. ನೀನು ನನಗೆಂದು ಕಳಿಸಿಕೊಟ್ಟಿದ್ದ ಫೌಂಟನ್ ಪೆನ್ ಮತ್ತು ಹಂಣು ಅಜ್ಜ ತಂದುಕೊಟ್ಟರು. ನೀನೂ ಬೇಗ ಬರುತ್ತೀಯೆಂದೂ ಹೇಳಿದರು. ನೀನು ಎಂದು ಬರುತ್ತೀ ತಿಳಿಸು. ನೀನು ಪುಣೆಗೆ ಬಾ. ಇಬ್ಬರೂ ಬಾರಾಮತಿಗೆ ಹೋಗೋಣ. ನನ್ನ ಅಭ್ಯಾಸದ ಬಗ್ಗೆ ನೀ ಬಹಳ ಕಾಳಜಿ ಮಾಡುತ್ತೀಯೆಂದು ಅಜ್ಜ ಹೇಳಿದರು. ನೀನು ಕಾಳಜಿ ಮಾಡಬೇಡ. ನಾನು ಅಭ್ಯಾಸ ಮಾಡುತ್ತೇನೆ. ನೀನು ಹೇಳಿದಂತೆ ೧ನೇ ನಂಬರು ಬರುತ್ತೇನೆ. ಆದರೆ ಮಮ್ಮಿ—ನಿನ್ನ ನೆನಪು ಆದ ಕೂಡಲೇ ನನಗೆ ಅಭ್ಯಾಸ ಮಾಡುವ ಹಾಗೆ ಆಗುವದಿಲ್ಲ. ಅಳುತ್ತೇನೆ. ನೀನು ವರ್ಷಕ್ಕೆ ಒಮ್ಮೆ ನನ್ನ ಕಡೆ ಬರುತ್ತೀ. ಕೆಲವೇ ದಿವಸ ಇರುತ್ತೀ. ಎಲ್ಲ ಹುಡುಗಿಯರೂ ರಜೆಯಲ್ಲಿ ಅವರ ಅಮ್ಮ, ಅಪ್ಪನ ಹತ್ತಿರ ಇರುತ್ತಾರೆ. ನಾನು ಯಾಕೆ ಇರಬಾರದು? ನಾನು ಮುಂಬಯಿಗೆ ಬರುತ್ತೇನೆಂದರೆ ಬೇಡ ಎನ್ನುತ್ತೀ. ನನ್ನ ಅಪ್ಪನಂತೂ ನಾ ಹುಟ್ಟುವುದಕ್ಕೆ ಮುಂಚೆ ಸತ್ತುಹೋಗಿದ್ದಾರೆ. ಅವರ ಹತ್ತಿರ ಇರುವುದಂತೂ ಆಗುವುದಿಲ್ಲ. ನಿನ್ನ ಹತ್ತಿರ ಯಾಕೆ ಹೋಗಬಾರದೆಂದು ನಿನ್ನ ಅಜ್ಜನ ಸಂಗಡ ಜಗಳ ಮಾಡಿದೆನು. ಹಟ ಮಾಡಿದೆನು. ನೀನು ಯಾರ ಮನೆಯಲ್ಲಿ ಕೆಲಸ ಮಾಡುತ್ತೀ—ಆ ಮನೆ ಮಾಲೀಕರು, ನಾ ಬಂದರೆ ಸಿಟ್ಟಿಗೇಳುತ್ತಾರೆ. ನಿನ್ನನ್ನು ಹೊರಗೆ ಹಾಕುತ್ತಾರೆ, ಎಂದು ಅಜ್ಜ ಹೇಳಿದರು. ಹೌದೇ? ನಿನ್ನ ಮಾಲೀಕರು ಅಷ್ಟು ಕೆಟ್ಟವರೇ? ನನ್ನ ಪ್ರೀತಿಯ ಮಮ್ಮಿ,

ಅವರಿಗೆ ಸಿಟ್ಟು ಬರುವ ಹಾಗೆ ನಾನು ಏನೂ ಮಾಡುವುದಿಲ್ಲ. ಒಳ್ಳೆಯ ಹುಡುಗಿಯಾಗಿ ಇರುತ್ತೇನೆ. ನಿನ್ನ ಮಾಲೀಕರು ಬಂದಾಗ ಒಳಗೆ ಮಂಚದ ಬುಡ ಹೌವಗೆ ಹೊರಬಂದು ನಿನ್ನ ಮುಸುಕಿನಲ್ಲಿ ಮಲಗಿಬಿಡುತ್ತೇನೆ. ಮಮ್ಮೀ, ಬೇಗ ಬಾ, ಯಾವಾಗ ಬರುತ್ತೀ ತಿಳಿಸು

—ಬೇಬಿ.''

ಆ ಪತ್ರದ ತಾರೀಖು ಕೇವಲ 3 ವಾರಗಳು ಹಿಂದಿನದು. ಬರೆದುದು ಪುಣೆಯ ನವರೋಜೀ ಗರ್ಲ್ಸ್ ಬೋರ್ಡಿಂಗ್ ಶಾಲೆಯಿಂದ. ಯಾರು ಬೇಬಿ? ಇದು ಮೋಹಿನಿಗೆ ಬಂದ ಪತ್ರವೇ? ಅವಳ 'ಮಮ್ಮಿ' ಆದುದು ಯಾವಾಗ? ಯಶವಂತನ ಎದೆಯುಸಿರು ಜೋರಾಯಿತು, ತಲೆ ದಿಮ್ ಎನ್ನತೊಡಗಿತು.

ಆ ಪತ್ರದ ಜೊತೆಗೇ ಇನ್ನೊಂದು ಪತ್ರವಿತ್ತು. ದೊಡ್ಡವರ ಹಸ್ತಾಕ್ಷರವನ್ನು 'ಪ್ರಿಯ ಮೋನೀ' ಎಂದು ಆರಂಭಿಸಿ ಸಾಂಪ್ರದಾಯದ ಕುಶಲೋಪರಿಯಾದ ಮೇಲೆ—

'ಬೇಬಿ ಆರಾಮ ಇದ್ದಾಳೆ. ಮುಂಬೈಗೆ ಹೋಗಲು ತುಸು ಹಟ ಮಾಡಿದಳು. ಸಮಾಧಾನ ಮಾಡಿದ್ದೇನೆ. ಈ ಸಲದ ರಜೆಯಲ್ಲಿ ೪-೫ ದಿನದ ಮಟ್ಟಿಗೆ ನಿನ್ನ ಗಂಡ ಧಾರವಾಡಕ್ಕೆ ಹೋದಾಗ, ಮುಂಬೈಗೆ ಕರಕೊಂಡು ಬರುವ ವಿಚಾರವಿದೆ. ನೀನು ಇಲ್ಲಿ ಬಂದಾಗ ಮಾತಾಡೋಣ—

ನಿನ್ನ ದಾದಾ.'

ಹೌದು, ಅವರದೇ, ತನ್ನ ಮಾವನದೇ ಅಕ್ಷರ !

ಯಶವಂತನ ಕಾಲುಗಳು ಥರಥರ ನಡುಗ ಹತ್ತಿದವು; ನಿಂತ ನೆಲವೆ ಅದುರುವಂತೆ ಭಾಸವಾಯಿತು. ಆ ಪತ್ರವನ್ನು ಇನ್ನೊಮ್ಮೆ ಲಕ್ಷಪೂರ್ವಕವಾಗಿ ಉಸಿರಾಡುವುದನ್ನು ಮರೆತು ಓದಿದನು.

'ನನ್ನ ಮಮ್ಮೀ, ಬೇಗ ಬಾ, ಯಾವಾಗ ಬರುತ್ತೀ ತಿಳಿಸು.'

—ಎಂದರೆ ಮೋಹಿನಿಯು ನಿಸ್ಸಂತಾನಿಯಲ್ಲ! ಶೀಲವಂತೆಯೂ ಅಲ್ಲ! ಕುಲಟೆ. ಇನ್ನೊಬ್ಬ ಗಂಡಸಿನೊಡನೆ ಸುಖಿಸಿದಳು. ಇದನ್ನು ಅಖಂಡ ೧೦ ವರ್ಷಗಳವರೆಗೆ ಬಚ್ಚಿಟ್ಟಿದ್ದಾಳೆ. ತನ್ನನ್ನೇ ನಂಬಿದ ಗಂಡನಿಗೆ, ಹೆಣ್ಣು ಇದಕ್ಕಿಂತ ಹೆಚ್ಚಿನ ಮೋಸವನ್ನು ಬಗೆಯುವುದುಂಟೆ?

ಈ ಸಂದುಕದಲ್ಲಿ ಬೇಬಿಯ ಇನ್ನೂ ಹಲವು ಪತ್ರಗಳಿದ್ದವು. ಅವುಗಳು ಮೊದಲಿನಷ್ಟು ದೊಡ್ಡವಲ್ಲ. ಪ್ರಯಾಸದಿಂದ ಮೂಡಿಸಿದ ದೊಡ್ಡ ಸಣ್ಣ ಅಕ್ಷರಗಳಿದ್ದವು. ಯಶವಂತನು ಇನ್ನೊಂದು ಪತ್ರವನ್ನು ಬಿಡಿಸಿದನು. ಮೊದಲ ಪತ್ರಕ್ಕಿಂತ ಸುಮಾರು ಒಂದು ತಿಂಗಳ ಹಿಂದೆ ಅಂದರೆ ಮಾರ್ಚ್ ತಿಂಗಳಲ್ಲಿ ಬರೆದುದಾಗಿದ್ದಿತು.

'ಪ್ರಿಯ ಮಮ್ಮೀಗೆ ನಮಸ್ಕಾರಗಳು—

ಎಳ್ಳು ಕೊಡುವ ಹಬ್ಬಕ್ಕೆ ಅಜ್ಜ-ಅಜ್ಜಿ ಬಂದಿದ್ದರು. ಎರಡು ದಿನ ಇಲ್ಲೇ ಇದ್ದರು. ನೀನೂ ಬರುತ್ತೀ ಎಂದು ಮಾಡಿದ್ದೆನು. ನೀನು ಯಾಕೆ ಬರಲಿಲ್ಲ? ಮುಂದಿನ ವಾರ ನನ್ನ ಹುಟ್ಟಿದ ದಿನವಂತೆ. ಆಗ ನನಗೆ ಹತ್ತು ವರುಷ ತುಂಬುತ್ತವಂತೆ. ಅಜ್ಜಿ ಹೇಳಿದಳು. ನೀನು ಆ ದಿವಸಕ್ಕೆ ಏನಾದರೂ ಕಳಿಸಿಕೊಡುತ್ತೀ, ನೀನು ಬರುವುದೇ ಇಲ್ಲ. ನಿನಗೆ ರಜೆಯೇ ಸಿಗುವುದಿಲ್ಲಾ ಎಂದು ಅಜ್ಜ ಹೇಳುತ್ತಾರೆ. ಮಗಳ ಹುಟ್ಟಿದ ದಿನ ಆದೆ ಎಂದು ನಿನ್ನ ಮಾಲೀಕರಿಗೆ ಹೇಳಿ ಬಾ.'

ಆ ಪತ್ರದ ಅಡಿಯಲ್ಲಿಯೇ ದಾದಾ ಬರೆದಿದ್ದರು—

'ತಾರೀಖಿನ ಪ್ರಕಾರ ಮುಂದಿನ ವಾರ ಅವಳ ಹುಟ್ಟಿದ ದಿವಸವಾದರೂ ನಿನ್ನ ಅಪೇಕ್ಷೆಯ ಪ್ರಕಾರ ನೀನು ಬಂದಾಗ ಅವಳ ಹುಟ್ಟಿದ ಹಬ್ಬವನ್ನು ಈ ಸಲ ಖಾಸಗಿಯಾಗಿ ಬಾರಾಮತಿಯಲ್ಲೇ ಮಾಡೋಣ. ಅನುಕೂಲ ಮಾಡಿಕೊಂಡು ನೀನು ಆದಷ್ಟು ಬೇಗ ಬಂದುಬಿಡು.''

ಅದರಂತೆ ಅವಳು ಹೋಗಿದ್ದಾಳೆ. ತನ್ನ ಗಂಡನ ಪರಿವೆಯಿಲ್ಲದೆ, ಅಲ್ಲಿ ಸುಖವಾಗಿ ಮಗಳ ಹುಟ್ಟಿದ ದಿನವನ್ನು ಜರುಗಿಸುವ ಸಂಭ್ರಮದಲ್ಲಿದ್ದಾಳೆ. ಏನಿಲ್ಲ, ನಾನು ಅವಳನ್ನು ಈ ೧೫ ದಿನ ನಿಲ್ಲಿಸಿಕೊಂಡು ಬಿಡಬೇಕಾಗಿತ್ತು; ಬಾರಾಮತಿಯಲ್ಲಿ ಅವಳು ಇರುವಷ್ಟು ದಿನ ನಾನೂ ಅಲ್ಲಿಯೇ ಉಳಿದಿದ್ದರೆ ಏನಾಗುತ್ತಿತ್ತು?

ಯಶವಂತನು ಮತ್ತೊಂದು ಪತ್ರವನ್ನು ಓದತೊಡಗಿದನು.

''ಪ್ರಿಯ ಮಮ್ಮೀ—

ನಾನು ಬಹಳೇ ಚೆನ್ನಾಗಿ ಪತ್ರ ಬರೆಯುತ್ತೇನೆಂದು ನೀನು ಅಜ್ಜನಿಗೆ ಹೇಳಿದ್ದೀಯಂತೆ. ನನಗೆ ಈಗ ಇಂಗ್ಲೀಷಿನಲ್ಲಿ ಪತ್ರದ ಮೇಲೆ ನಿನ್ನ ವಿಳಾಸವನ್ನು ಬರೆಯಲಿಕ್ಕೆ ಬರುತ್ತದೆ. ಆದರೆ ಅಜ್ಜನು ನಿನ್ನ ವಿಳಾಸವನ್ನು ನನಗೆ ಕೊಟ್ಟಿಲ್ಲ. ನೀನು ನಿನ್ನ ವಿಳಾಸವನ್ನು ತಿಳಿಸು. ನನ್ನ ಕಡೆ ಪಾಕೀಟು ಅವೆ. ನನ್ನ ಜೊತೆಗೆ ರೂಮಿನಲ್ಲಿ ಇರುವ ಮೇರಿಗೆ ಮೊನ್ನೆ ಅವಳ ಅಪ್ಪನಿಂದ ಒಂದು ಪತ್ರ ಬಂದಿತ್ತು. ಅಕ ಎಲ್ಲರಿಗೂ ತೋರಿಸಿ ಹುಣಿದಾಡಿದಳು. ನಾನೂ ಅದನ್ನು ಓದಿದೆನು. ನನಗ ಅಳು ಬಂತು. ನೀನು ಯಾಕೆ ನನಗೆ ಬರೆಯುವುದಿಲ್ಲ? ಅಜ್ಜನಿಗೆ ಬರೆಯುತ್ತೀ, ನನಗೆ ಒಂದೂ ಇಲ್ಲ. ನಾನು ಏನಾದರೂ ತಪ್ಪು ಮಾಡಿರುವೆನೇನು? ಹಾಗಿದ್ದರೆ ಕ್ಷಮಾ ಮಾಡು. ನೀನು ಬರೆಯದೇ ಇದ್ದರೆ ನಾನು ನಿನಗ ಪತ್ರವನ್ನೇ ಹಾಕುವುದಿಲ್ಲ

—ನಿನ್ನ ಬೇಬಿ.'

ತನ್ನ ಬೇಬಿಗೆ ಮೋಹಿನಿ ಪತ್ರ ಬರೆಯುತ್ತಿರಲಿಲ್ಲ; ಅಜ್ಜನು ವಿಳಾಸ ಕೊಟ್ಟಿಲ್ಲ. ಯಾಕೆ? ಯಾವ ಲೇಖೀಪುರಾವೆ ಸಿಗಬಾರದೆಂದೇ? 'ತಾಯಿ ಪತ್ರ ಬರೆಯದಿದ್ದರೆ

ತಾನು ಪತ್ರ ಹಾಕುವುದೇ ಇಲ್ಲವೆಂದು ಆ ಮಗು ಸಿಟ್ಟು ಮಾಡಿಕೊಂಡರೂ ಇವಳು ಬರೆಯುವವಳಲ್ಲ. ಹೇಗೆ ಬರೆದಾಳು?

ಇನ್ನೊಂದು ಪತ್ರ. ಇದಕ್ಕೂ ಹಿಂದೆ ಬರೆದುದು.

'ಪ್ರಿಯ ಮಮ್ಮೀಗೆ ಮಾಡುವ ನಮಸ್ಕಾರಗಳು.

ನಮ್ಮ ಆರು ತಿಂಗಳ ಪರೀಕ್ಷೆಯು ಮುಗಿಯಿತು. ನಾನು ೪ನೇ ನಂಬರು ಬಂದಿದ್ದೇನೆ. ಲೆಕ್ಕದಲ್ಲಿ ನಾನು ನಪಾಸಾದೆನು. ಇಲ್ಲವಾದರೆ ನಾನೇ ೧ನೇ ನಂಬರು ಇದ್ದೇನೆ. ಮೊನ್ನೇ ಟೀಚರ್ ನಮ್ಮ ಕೋಣೆಗೆ ಬಂದಿದ್ದರು. ಎಲ್ಲರೂ ಅವರಿಗೆ ತಮ್ಮ ಅಪ್ಪ ಅಮ್ಮನ ಫೋಟೋ ತೋರಿಸಿದರು. ನನ್ನ ಹತ್ತಿರ ಇದ್ದಿಲ್ಲ. ನನ್ನ ಅಪ್ಪನು ವಿಮಾನದಿಂದ ಬಿದ್ದು ಸತ್ತನು ಎಂದು ಹೇಳಿದೆ. ನಿನ್ನ ಫೋಟೋ ತೋರಿಸಬೇಕೆಂದರೆ, ಫೋಟೋ ತೆಗಿಸಿಯೇ ಇಲ್ಲ ಎಂದು ನೀನು ಹೇಳುತ್ತೀ, ಫೋಟೋ ತೆಗಿಸಲಿಕ್ಕೆ ಬಹಳ ಹಣ ಬೇಕಾಗುವುದೆಂದು ಅಜ್ಜ ಹೇಳುತ್ತಾರೆ. ಅದು ಸುಳ್ಳು. ಅವತ್ತು ಟೀಚರನ್ನು ಕೇಳಿದೆ. 1 ರೂ.ಗೂ ಫೋಟೋ ತೆಗೆಯುತ್ತಾರಂತೆ. ದೀಪಾವಳಿ ಹಬ್ಬಕ್ಕೆ ನನಗೆ ಏನು ಕಳಿಸಬೇಕು ಎಂದು ನೀನು ಆಜ್ಜನ ಕಡೆಯಿಂದ ಹೇಳಿ ಕಳಿಸಿದಿ. ನನಗೆ ನಿನ್ನ ಫೋಟೋ ಬೇಕು. ಈಗ ನಮಗೆ ರಜೆ, ಕೋಣೆಯಲ್ಲಿ ನನಗೆ ಬಹಳೇ ಬೇಸರ ಬರುತ್ತದೆ. ಮಮ್ಮೀ, ನೀನು ಎಂದು ಬರುತ್ತೀ ತಿಳಿಸು.'

ಮೋಹಿನಿ ಫೋಟೋ ತೆಗೆಸಿಲ್ಲ? ಮನೆಯಲ್ಲಿ ೩-೪ ಅಲ್ಬಮಗಳು ಅವಳ ಚಿತ್ರಗಳಿಂದಲೇ ತುಂಬಿವೆ. ಅವುಗಳಲ್ಲಿ ಒಂದನ್ನಾದರೂ ಕಳಿಸಬಹುದಿತ್ತು. ಹೇಗೆ ಕಳಿಸಿಯಾಳು? ಆ ಮಗು ಇದು ತನ್ನ ತಾಯಿ ಎಂದು ಹೇಳುತ್ತ ಓಡಾಡಿದರೆ!

ಆ ಪತ್ರದ ಬುಡದಲ್ಲಿಯೂ ದಾದಾನ ಒಕ್ಕಣಿಕೆ:

'ನೀನೇನು ಫೋಟೋದ ಬಗ್ಗೆ ಕಾಳಜಿ ಮಾಡಬೇಡ. ಇದೇ ರವಿವಾರ ಬಾರಾಮತಿಗೆ ಬಂದಿದ್ದಳು. ಆವಾಗ ನಿನ್ನದೊಂದು ಹಳೆಯ ಫೋಟೋ-ನಮ್ಮ ಫ್ಯಾಕ್ಟರಿಯ ವಾರ್ಷಿಕ ಪೂಜಾದ ದಿನ-ನಾವೆಲ್ಲಾ ನಿಂತುಕೊಂಡು ತೆಗಿಸಿದ್ದನ್ನೇ ಅವಳು ತಗೊಂಡು ಹೋಗಿದ್ದಾಳೆ.'

ದೀಪಾವಳಿಯ ಹಬ್ಬಕ್ಕೆ ಮಗು ಕೇಳುವ ಉಡುಗೊರೆಯೆಂದರೆ ತಾಯಿಯ ಒಂದು ಫೋಟೋ. ಆ ನಿರ್ಜೀವ ಛಾಯಾ ಚಿತ್ರವೂ ದೊರೆಯದಿದ್ದಾಗ, ತನ್ನ ತಾಯಿ ಹತ್ತಾರು ಜನರೊಡನೆ ನಿಂತಿರುವ ಚಿತ್ರವೊಂದನ್ನು ಅಪಹರಿಸಲೂ ಅದು ಸಿದ್ಧ! ಮೋಹಿನಿ ಮತ್ತು ದಾದಾ—ಇವರ ನಡವಳಿಕೆಯು ಒಂದೇ ಒಂದು ಸೂತ್ರವೆಂದರೆ ಗೌಪ್ಯರಕ್ಷಣೆ! ತನ್ನಿಂದ, ಸಮಾಜದಿಂದ, ಆ ಮಗುವಿನ ಜನನದ, ಅಸ್ತಿತ್ವದ ಕುರುಹುಗಳೆಲ್ಲವನ್ನೂ ಮುಚ್ಚಿಡಬೇಕೆನ್ನುವ ಧೂರ್ತ ಯೋಜನೆ!

ಕಾರ್ಮೋಡಗಳ ಓಡಾಟ, ಬಿರುಗಾಳಿಯ ಅಬ್ಬರ, ಗುಡುಗಿನ ಆರ್ಭಟ ಇವುಗಳಿಂದ ಮುಕ್ತವಾದ ಆಗಸದಂತೆ ಯಶವಂತನ ತಲೆ ಅಲ್ಲೋಲಕಲ್ಲೋಲ

ವಾಗಿದ್ದಿತು. ಅಲ್ಲಿ ಹರಿದಾಡುವ ತೀಕ್ಷ್ಣ ವಿಚಾರಗಳ ಭೀಕರ ತಾಕಲಾಟದ ಮಧ್ಯೆ, ಮಗುವೊಂದರ ತಾಯ ಹಂಬಲಿಕೆಯ ಆರ್ತನಾದವು ಎಳೆಮಿಂಚಿನ ರೇಖೆಯಂತೆ ಮತ್ತೆ ಮತ್ತೆ ಹೊಯ್ಯುತ್ತಿತ್ತು.

ಅಷ್ಟರಲ್ಲಿ ಬಾಗಿಲು ಬಡಿದ ಸದ್ದು! ಯಶವಂತನು ಗಾಬರಿಯ ದನಿಯಲ್ಲಿಯೆ ಗದ್ದರಿಸಿದ— 'ಯಾರದು?' ಎಂದು.

'ನಾನು, ಚಹ ತರಲೇ? ಎಂದು ಕೇಳಬಂದಿದ್ದೆ' ಪರಿಚಾರಿಕೆಯ ಸಣ್ಣ ದನಿ.

'ಹೂಂ, ನನ್ನ ಖೋಲಿಯಲ್ಲಿ ಇಡು. ಈಗ ಬಂದೆ.'

ಯಶವಂತನು ಆ ಪತ್ರಗಳೆಲ್ಲವನ್ನು ಮೊದಲಿನಂತೆ ಇಟ್ಟು, ತನ್ನ ಕೋಣೆಗೆ ಬಂದು ಚಹ ಕುಡಿದ ಮೇಲೆ ತಲೆಯ ಬಿಸಿ ಕಿಂಚಿತ್ ಕಡಿಮೆಯಾಯಿತು. ಆದರೂ ಮನೆಯ ವಾತಾವರಣ ಹಿಡಿಸದೇ, ಅಲ್ಲಿಂದ ಹೊರ ಬಿದ್ದನು.

೩

ಸಮುದ್ರದ ಗಾಳಿಯನ್ನು ಬರಮಾಡಿಕೊಳ್ಳುತ್ತ ಕುಳಿತಿದ್ದಾದರೂ ಅವನ ವಿಚಾರಗಳು ಅವನನ್ನು ಸುಮ್ಮನೇ ಕೂಡಗೊಡಲಿಲ್ಲ.

ತಾನು ಅವಳನ್ನು ಮೊದಲ ಸಲ ಪುಣೆಯಲ್ಲಿ ಕಂಡಿದ್ದನಷ್ಟೆ. ಆಗ ಅವಳು ಕಿಂಚಿತ್ ಮೈ-ಕೈ ತುಂಬಿಕೊಂಡು ಇದ್ದುದು ಈಗ ಅವನ ಲಕ್ಷ್ಯಕ್ಕೆ ಬಂದಿತು. ಆ ಕಾಲಕ್ಕೆಯೆ ಅವಳು ಗರ್ಭಿಣಿ ಇರಬೇಕು ಮತ್ತು ಅವಳ ಪುರುಷನು ತೀರಿಕೊಂಡಿರ ಬೇಕು. ಅವರಿಬ್ಬರೂ ಆಗ ದುಃಖದಲ್ಲಿದ್ದುದು, ತನ್ನ ಉತ್ಸಾಹದಲ್ಲಿ ಗೊತ್ತಾಗದೆ ಹೋಯಿತು. ಅವಳು ತನ್ನನ್ನು ಮದುವೆಯಾಗಲು ಒಲ್ಲೆನೆಂದುದು, ಆಮೇಲೆ ಸುಮಾರು ೧೦-೧೨ ತಿಂಗಳು ಕಾಯಿಸಿದುದು, ಮದುವೆಯಾದ ಹೊಸತರಲ್ಲಿ ಅವಳು ದುಃಖಿಸಿಯಾಗಿಯೇ ಇದ್ದುದು—ಇವೆಲ್ಲದರ ಕಾರಣ ಸ್ಪಷ್ಟವಾಯಿತು.

ಆದರೆ ಅನಂತರದ ಹತ್ತು ವರುಷ ? ಅದೆಷ್ಟು ಪ್ರೀತಿಯಿಂದ ನನ್ನೊಡನೆ ನಡೆದುಕೊಂಡಳು. ಅವಳು ಅಭಿಮಾನಿನಿ ಎಂಬುದನ್ನು ಬಿಟ್ಟರೆ, ಅವಳ ಸ್ವಭಾವ, ನಡತೆಗಳಲ್ಲಿ ಯಾವ ದೋಷ ಕಂಡುಬಂದಿತು? ಪರಪುರುಷರ ವಿಷಯವಾಗಿ ಅವಳ ಮಾತು, ರೀತಿಗಳಲ್ಲಿ ಯಾವ ಸಂಶಯವನ್ನೂ ತಾಳದಷ್ಟು ಅದು ಶುದ್ಧವಾದು ದೆಂಬುದೂ ಅವನ ಮನಕ್ಕೆ ವೇದ್ಯವಾಯಿತು. ಸಮಾಧಾನದ ಸಂಗತಿಯೆಂದರೆ, ಅವಳ ಹಿಂದಿನ ಪ್ರಿಯಕರನು ಇಂದು ಜೀವಂತವಿಲ್ಲ. ಬೇಬಿ ಹುಟ್ಟುವುದಕ್ಕೆ ಮುಂಚೆಯೇ ಸತ್ತಿದ್ದಾನೆ. ಅದು ಹೇಗೆ ಸತ್ತನೋ? ಕಳಿಯುವಾಗಲೊ, ಅಪಘಾತ ದಿಂದಲೊ?

ಮುಂದೇನು? ಮುಂದೆ ತಾನು ಏನು ಮಾಡಬೇಕು—ಎಂಬ ಪ್ರಶ್ನೆಗೆ ಪರಿಹಾರವನ್ನು ಹುಡುಕಲೇಬೇಕೆಂದು ಎಣಿಸುತ್ತಿರುವಾಗ, ಒಂದು ಮಾತು ಸ್ಪಷ್ಟ ರೂಪವನ್ನು ತಾಳಿತು. ಏನಾದರೂ ಮೋಹಿನಿ ತನ್ನ ಕೈಬಿಟ್ಟ ಹಾಗೆಯೇ ಎಂದು ಅವನಿಗೆ ಅನಿಸತೊಡಗಿತು. ಅವಳಿಂದ ತಾನು ವಂಚಿಸಲ್ಪಟ್ಟೆ ಎಂಬ ಭಾವನೆಯ ಜೊತೆಗೆ, ತಾನು ಅವಳಿಂದ ದೂರವಾದಂತೆಯೇ ಎಂಬ ಭಾವನೆಯಿಂದ ಅವನು ನಿರ್ವಿಣ್ಣನಾದನು. ತನ್ನ ಜೀವನದಲ್ಲಿ ಅವಳೊಬ್ಬಳನ್ನೇ ನೆರೆನಂಬಿ ಅತಿಯಾದ ಆತ್ಮೀಯತೆಯಿಂದ ಇರುವಾಗ, ಈ ಬರಸಿಡಲು ಅವನ ಮೇಲೆ ಎರಗಿದ್ದಿತು. 'ಮೋನಿ, ಇದೇನು ಮಾಡಿದೆ?' ಎಂದು ಅವನ ಒಳಮನಸ್ಸು ಕೂಗಿತು.

ಯಶವಂತನ ಪ್ರಶಾಂತ ಜೀವನದಲ್ಲಿ ಇದು ಎರಡನೆಯ ದೊಡ್ಡ ಆಘಾತ. ಅಂದು ಅವನ ತಂದೆಯು ಅವನನ್ನು ಮನೆಬಿಟ್ಟು ಹೊರಗೆ ಹಾಕಿ ಏಕಾಕಿಯನ್ನಾಗಿ ಮಾಡಿದ್ದರು. ಇಂದೂ ಸ್ವಲ್ಪ ಮಟ್ಟಿಗೆ ಅದೇ ಸ್ಥಿತಿ. ಮೋಹಿನಿಯನ್ನು ಅಗಲುವು ದೆಂದರೆ, ಮನೆಯನ್ನು ಮುರಿದಂತೆಯೇ ಸೈ. ಈ ಪ್ರಸಂಗದಲ್ಲಿ ತಂದೆಯುವರು ಜೀವಂತವಾಗಿ ಇದ್ದಿದ್ದರೆ, ಏನು ಹೇಳುತ್ತಿದ್ದರು? ಕರ್ತವ್ಯ ನಿಷ್ಠುರರೂ ಅತಿಪ್ರಾಮಾಣಿಕರೂ ಆದ ಅವರು ಮಗನ ತಪ್ಪನ್ನೇ ಕ್ಷಮಿಸಿರಲಿಲ್ಲ; ಇನ್ನು ಸೊಸೆಯ ವಿಷಯದಲ್ಲಿ ಕನಿಕರ ತೋರಿಯಾರೆ?

ಮತ್ತೆ ಅದೇ ಪ್ರಶ್ನೆ, ಮುಂದೇನು? ಇದ್ದ ಸ್ಥಿತಿಯಲ್ಲಿಯೇ ಮುಂದುವರಿಯು ವುದಂತೂ ಸಾಧ್ಯವಿಲ್ಲ. ಅವಳನ್ನು ಬಿಡುವುದಕ್ಕೆ ಕಾನೂನಿನ ಮಾರ್ಗವಂತೂ ಅತಿ ಸುಲಭ.

ಹಾಗೆ ಬಿಡುಗಡೆ ಹೊಂದಿದರೆ ಅವಳೇನು ಮಾಡುವಳು? ಅವಳ ತಂದೆ ಜೀವಂತನಿದ್ದಾನೆ. ಹೊಟ್ಟೆಗೆ ಹಾಕುತ್ತಾನೆ. ಅವಳು ತನ್ನ ಮಗಳ ಮೇಲಿನ ಮಮತೆ ಯಲ್ಲಿ ಸುಖವಾಗಿ ಇರುತ್ತಾಳೆ. ಈ ಗಳಿಗೆಗೆ ಕೂಡಾ ಅವಳು ಗಂಡನ ನೆನಪನ್ನೂ ತಾರದೇ, ೧೦-೧೨ ದಿನ ಮಗಳ ಸಾಮೀಪ್ಯದಲ್ಲಿ, ಅವಳನ್ನು ಮುದ್ದಾಡುತ್ತಾ, ಅವಳ ಚಿಕಿತ್ಸಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಸುಖವಾಗಿಯೇ ಇದ್ದಾಳೆ.

ಆದರೆ ಮೋಹನಿಯಿಂದ ವಿಚ್ಛೇದನೆಯನ್ನು ಪಡೆದ ಮೇಲೆ ತನ್ನ ದಾರಿ? ಮೊದಲಿಗೆ ತನ್ನ ದಾಂಪತ್ಯದ ವಿಷಯವು ಬೀದಿಬಯಲಾಗಿ, ಸಮಾಜದಲ್ಲಿ ಸರಿಕರಲ್ಲಿ ಹರಡಬೇಕು. ಆ ವ್ಯಾಪದಲ್ಲಿಯೆ ಮೋಹಿನಿಯನ್ನು ಮರೆಯಲೆತ್ನಿಸಬೇಕು. ಹೊಸತೊಂದು ಹೆಣ್ಣನ್ನು ಹುಡುಕಬೇಕು. ಈ ವಯಸ್ಸಿನಲ್ಲಿ ತನ್ನ ಹೊಸ ಸಂಸಾರದ ಆರಂಭವಾಗಬೇಕು.

ಅದೆಲ್ಲ ಸರಿ, ಹತ್ತು ವರ್ಷಗಳ ಒಡನಾಟದಲ್ಲಿ ಅನ್ಯೋನ್ಯವಾಗಿದ್ದ ಮೋಹಿನಿ ಯನ್ನು ಬಿಡುವುದೆಂತು? ಮರೆವುದೆಂತು? ಆದರೂ ಬಿಡಲೇಬೇಕು... ಎನ್ನುವ ವಿಚಾರದಿಂದಾಗಿ ಅವನ ಕರುಳನ್ನೇ ಕಿವುಚಿದಂತಾಯಿತು. ಸಮುದ್ರದ ತೆರೆಗಳಂತೆಯೇ ಅಪ್ಪಳಿಸುತ್ತಿದ್ದ - ಕೆಲ ವಿಚಾರಗಳನ್ನು ಸರಿಸಲೆಂಬಂತೆ, ಯಶವಂತನು

ಮೇಲೆದ್ದನು. ಮುಂದೆ ಸಾಗಿದನು. ರಸ್ತೆಯ ಅಕ್ಕಪಕ್ಕದ ಜನರ ಪರಿವೆಯಿಲ್ಲದೆ ಹೆಜ್ಜೆ ಹಾಕತೊಡಗಿದನು. ಹೊರಬರುವ ಜನರ ಮತ್ತು ವಾಹನಗಳ ಮಿತಿಮೀರಿದ ದಟ್ಟಣೆಯತ್ತ ಅವನ ಗಮನವೇ ಇರಲಿಲ್ಲ. ಮನೆಗೆ ಬಂದ ಮೇಲೆ ಊಟದ ಶಾಸ್ತ್ರವನ್ನು ಮಾಡುವಾಗಲೂ ಅವನು ಚಿತ್ತಶುದ್ಧಿಯಲ್ಲಿರಲಿಲ್ಲ.

ರಾತ್ರಿಯಾಗುತ್ತಿದ್ದಂತೆ ಅವನ ಅಂಗಾಂಗದಲ್ಲೆಲ್ಲ ಉರಿ ಹೆಚ್ಚಾಯಿತು. ಕೈಕಾಲುಗಳಲ್ಲಿ ನಿತ್ರಾಣವೆನಿಸಿದ್ದರಿಂದ ಮಲಗಬಯಸಿದನು. ಅರ್ಧ ತಾಸು ಹಾಗೆಯೇ ಹೊರಳಾಡುತ್ತ ಇರುವಾಗ ಟೆಲಿಫೋನಿನ ಕರೆ. ಯಶವಂತನು ದೀಪ ಹತ್ತಿಸಿ, ಗಡಿಯಾರವನ್ನು ನೋಡಿದನು. ರಾತ್ರಿ ೧೦ ಗಂಟೆ. ರಿಸೀವರನ್ನು ಎತ್ತಿದಾಗ ಆ ತುದಿಯಿಂದ ಮೋಹಿನಿ ಮಾತನಾಡುತ್ತಿದ್ದಳು!

''ಹಲೋ, ನಾ ಮೋಹಿನಿ. ನಾಳೆ ಸಂಜೆಯ ಗಾಡಿಗೆ ಬರತೇನಿ. ಅದನ್ನು ತಿಳಿಸಲಿಕ್ಕೆ ಫೋನ್ ಮಾಡಿದೆ.''

ಯಶವಂತನಿಂದ ಯಾವ ದನಿಯೂ ಬಾರದಿದ್ದಾಗ ಮೋಹನಿ ಕೇಳಿದಳು,

''ನಾ ಹೇಳಿದ್ದು ಕೇಳಿಸಿತಲ್ಲ, ಯಾಕೆ? ಆರಾಮ ಇಲ್ಲೇನು?''

''ಇದ್ದೇನೆ.''

''ಸೈ, ಹಾಗಾದರೆ, ನಾಳೆ ಹೇಗೂ ಬರತೇನಲ್ಲ, ಗುಡ್‌ನೈಟ್.''

ಮೋಹನಿಯು ಹೀಗೆ ಬರುವುದು ತನಗೆ ಸಮಾಧಾನದ ಸಂಗತಿಯೊ ದುಃಖದಾಯಕದ್ದೊ ಎಂಬುದನ್ನು ಗೊತ್ತುಪಡಿಸುವ ಸ್ಥಿತಿಯಲ್ಲಿ ಅವನು ಇರಲೇಯಿಲ್ಲ. ದೀಪವನ್ನಾರಿಸಿ ಮುಸುಕನ್ನೆಳೆದುಕೊಂಡನು. ಮೋಹಿನಿಯು ಬಂದರೆ ಅವಳಿಗೆ ಏನು ಹೇಳಬೇಕು? ಈ ವಿಷಯವನ್ನು ಎಂದು, ಮತ್ತು ಹೇಗೆ ಪ್ರಾರಂಭಿಸ ಬೇಕು? ಇಲ್ಲ, ಪತ್ರವನ್ನು ಅವಳ ಮುಖಕ್ಕೆ ಹಿಡಿದುಬಿಟ್ಟರೆ...

ಆ ಪತ್ರಗಳು, ಯಾರ ಅಂತಃಕರಣವನ್ನಾದರೂ ಕಲಕುವಂತೆ ಇದ್ದ ಆ ಬರವಣಿಗೆ; ಕೋಣೆಯ ಮಬ್ಬುಗತ್ತಲಲ್ಲಿ ಮಗುವಿನ ಅಸ್ಪಷ್ಟ ಆಕೃತಿಯು ಮೂಡಿ ಬಂದಂತಾಯಿತು. ಅಖಂಡ ಹತ್ತು ವರ್ಷಗಳವರೆಗೆ ತಂದೆ-ತಾಯಿಗಳಿಂದ ದೂರವಿದ್ದಿತಲ್ಲವೆ-ಆ ಮಗು. ತಂದೆಯ ಧ್ಯಾಸವಂತೂ ಇಲ್ಲ. ಜೀವಂತವಿದ್ದೂ ತನ್ನ ತಾಯಿ ದೂರವಿರುವಾಗ ಆ ಮಗು ಅದೆಷ್ಟೊಂದು ಪರಿತಪಿಸಿದೆಯೊ. 'ಮಮ್ಮೀ, ನೀ ಎಂದು ಬರುತ್ತೀ? ನಿನ್ನ ಮಾಲೀಕರು ಅಷ್ಟು ಕೆಟ್ಟವರೇ...? ಹೇಳಿದ ಹಾಗೆ ಕೇಳಿ ಕೊಂಡು ಇರುತ್ತೇನೆ. ಅವರು ಬಂದಾಗ ಮಂಚದ ಬುಡದಲ್ಲಿ ಅಡಗಿ ಕುಳಿತಿರುವೆ?' ಆ ಪತ್ರದ ವಿವಿಧ ವಾಕ್ಯಗಳು ಅವನ ಮುಚ್ಚಿದ ಕಣ್ಣು ಮುಂದೆ ಸುಳಿದಾಡ ತೊಡಗಿದವು.

ಈಗ ಮಂಚದ ಬುಡದಲ್ಲೇ ಇರಬಹುದೆ? ನೋಡಲೇ...? ಎನ್ನುವಷ್ಟರಲ್ಲಿ ಮೋಹಿನಿಯೆ ಮಗಳ ಪಕ್ಷವನ್ನು ವಹಿಸಿ ಅವನ ಹತ್ತಿರ ಬಂದಂತೆ ಭಾಸವಾಯಿತು! ಹೌದು ಅವಳು ಬಂದೇಬಿಟ್ಟಳು.

"ಮೋನಿ, ನೀ ನನಗೆ ಮೋಸ ಮಾಡಿದಿ. ನನ್ನ ಜೀವನವನ್ನೇ ಹಾಳು ಮಾಡಿದಿ" ಎಂದು ಯಶವಂತನು ಚೀರಿದನು.

"ಇಲ್ಲ, ನಾನು ಮೋಸ ಮಾಡಿಲ್ಲ. ನಿನ್ನೊಡನೆ ಮದುವೆಯಾದಂದಿನಿಂದ, ನಿಮ್ಮನ್ನು ಸುಖಿಯಾಗಿಡಲಿಕ್ಕೆ ಸರ್ವಪ್ರಯತ್ನ ಮಾಡಿದ್ದೇನೆ, ನಮ್ಮ ದಾಂಪತ್ಯದ ಅವಧಿಯಲ್ಲಿ ನಾನೇನು ಅನ್ಯಾಯ ಮಾಡಿದ್ದೇನೆ, ಹೇಳಿರಿ."

"ನಾನು ಹೇಳುವುದು, ಅದಕ್ಕೂ ಮುಂಚಿನದು."

"ನಿಜ, ನಾನು ಒಬ್ಬರನ್ನು ಪ್ರೀತಿಸಿದ್ದೆ-ಅದೂ ಹಿರಿಯರ ಒಪ್ಪಿಗೆ ಪಡೆದು. ಅವರು ಪೈಲಟ್ ಶಿಕ್ಷಣ ಪಡೆಯುತ್ತಿರುವಾಗಲೇ ತೀರಿಕೊಂಡರು. ಹರೆಯದ ಅವಸರದಲ್ಲಿ ನಾವು ಮಾಡಿದ ತಪ್ಪಿಗಾಗಿ ಬೇಬಿ ಹುಟ್ಟಿದಳು."

"ಅಂಥ ಪರಿಸ್ಥಿತಿ ಗೊತ್ತಿದ್ದೂ ನೀನು ನನ್ನನ್ನು ಮದುವೆಯಾದಿ. ಅದು ಮೋಸವಲ್ಲವೆ?"

"ನಾನು ಒಲ್ಲೆಂದು ಹೇಳಿಯೇ ಇದ್ದೆ. ನೀವಾಗಿ ಬಂದು ಪುನಃ ನನ್ನನ್ನು ಕೇಳಿದಿರಿ."

"ಅಂದರೆ? ಆಗ ನಿನಗೆ ಮಗುವಿರುವ ವಿಷಯ ಗೊತ್ತಿದ್ದರೆ ನಾನು ನಿನ್ನ ಮದುವೆಯಾಗುತ್ತಿದ್ದೆನೆಂದು ತಿಳಿದೆಯಾ? ಅದನ್ನು ಮುಚ್ಚಿ ಇಟ್ಟುದು ಮೋಸವಲ್ಲದೆ ಇನ್ನೇನು?"

"...ಅದೇ ನಾನು ನಿಮಗೆ ಹೇಳುವವಳಿದ್ದೆ. ನಮ್ಮ ತಂದೆ ಅದು ಕೂಡದೆಂದು ಹಟ ಹಿಡಿದರು... ಮಗುವನ್ನು ನಮಗೆ ಒಪ್ಪಿಸು. ಅವರನ್ನು ಮದುವೆಯಾಗು-ಎಂದು ಒತ್ತಾಯಿಸಿದರು."

"ನಿಮ್ಮಪ್ಪ ಒಬ್ಬ ನೀಚ! ತಿಳಿದೂ ತಿಳಿದೂ ನನ್ನನ್ನು ವಂಚಿಸಿದರು."

"ಆದರೆ ಅದೆಲ್ಲವನ್ನೂ ಮಗಳ ಕಲ್ಯಾಣಕ್ಕಾಗಿ, ಒಂದು ಎಳೆಯ ಜೀವ ಬದುಕುವುದಕ್ಕಾಗಿ ಮಾಡಿದ್ದು ನಿಜ. ಅವನಿಗೆ ನಿಮ್ಮ ಸಜ್ಜನಿಕೆಯಲ್ಲಿ ಅಪಾರವಾದ ನಂಬಿಕೆ. ವಿಷಯ ತಿಳಿದು ಬಂದದ್ದಾದರೆ, ನೀವು ಎರಡು ಹೆಣ್ಣು ಜೀವಗಳ ವಿನಾಶಕ್ಕೆ ಎಳಸಲಿಕ್ಕಿಲ್ಲವೆಂದೂ ಕಾಲ ಸರಿದಂತೆ ಏನಾದರೂ ದಾರಿ ತೋಚೀತು ಎಂದೂ ಅವನು ಭಾವಿಸಿದ್ದ."

"ಅಂತೂ ನನ್ನ ಹಣದಿಂದ ಆ ಹುಡುಗೆಯನ್ನು ಬೆಳೆಸಿ ಮುಂದೆಯೂ ನನ್ನ ಮೇಲೆಯೇ ಅದರ ಹಾಗೂ ನಿನ್ನ ಹೊಣೆಯನ್ನು ಹೊರಿಸುವ ವಿಚಾರ ಇದ್ದಿತೆನ್ನು."

"ಇಲ್ಲ, ಇಲ್ಲ, ತನ್ನ ಹಣದಿಂದೇ ಈ ಮಗುವನ್ನು ಪೋಷಿಸುತ್ತಿದ್ದಾನೆ. ನಾನಾದರೂ ಪ್ರತಿ ತಿಂಗಳು ಒಂದು ನೂರು ರೂಪಾಯಿಗಳನ್ನು ನಿಮಗೆ ಕಲ್ಪನೆಯೇ ಬರದಂತೆ ಕಳಿಸಬಹುದಿತ್ತು. ಈಗಾಗಲೇ ನಾನು ನಿಮಗೆ ಅನ್ಯಾಯ ಮಾಡಿದ್ದೇನೆಂಬ

ಪ್ರಜ್ಞೆ ಹಾಗೆ ಮಾಡಿಸಗೊಟ್ಟಿಲ್ಲ. ನಾನು ಇಲ್ಲಿ ಸಕಲ ಸುಖ-ಭೋಗಗಳನ್ನು ಪಡೆದಿದ್ದರೂ ನನ್ನ ಮಗಳು, ಬಡತನದಿಂದಲೇ ಬಾಳುತ್ತಿದ್ದಾಳೆ. ನನ್ನಂಥ ಪಾಪಿಯ ಹೊಟ್ಟೆಯಲ್ಲಿ ಹುಟ್ಟಿದ ತಪ್ಪಿಗೆ ಅದು ಕಷ್ಟವನ್ನು ಅನುಭವಿಸುತ್ತ ಇದೆ. ಒಂದು ವರುಷ ಕೂಡಾ ತುಂಬಿರದ ಎಳೆಯ ಶಿಶುವನ್ನು ಬಿಟ್ಟು ಕೊಡುವಾಗ ಎಷ್ಟೊಂದು ಗೋಳಿಟ್ಟೆ. ಕೇವಲ ೪ ತಾಸಿನ ಹಾದಿಯಲ್ಲಿ, ನನ್ನ ಮಗು ವಾಸವಾಗಿದ್ದರೂ ನಾನು ಅದನ್ನು ಅಕ್ಷರಶಃ ಬಿಟ್ಟುಕೊಟ್ಟು ತಬ್ಬಲಿಯನ್ನಾಗಿ ಮಾಡಿದ್ದೇನೆ. ಯಾಕೆ? ನನ್ನಿಂದ ನಿಮಗೆ ಅದಕ್ಕೂ ಹೆಚ್ಚಿನ ಅನ್ಯಾಯವಾಗಬಾರದೆಂದು. ನನ್ನ ನೊಂದ ಕರುಳಿನ ನೋಟವನ್ನು ಒಳಗೆ ಹುದುಗಿಸಿಕೊಂಡು, ಈ ಮನೆಯಲ್ಲಿ ನಿಮ್ಮೆದುರು ಇರುವುದು ನನಗೆಷ್ಟು ತಾಪದಾಯಕವಾಗಿತ್ತೆಂಬುದನ್ನು ಹೇಗೆ ಹೇಳಲಿ, ಯಶವಂತ.''

ಮೋಹಿನಿಯ ಕಂಠ ತುಂಬಿ ಬಂದು, ಮುಂದೆ ಮಾತನ್ನಾಡಲಾಗಲಿಲ್ಲ.

''ಮುಂದೇನು ಮಾಡಬೇಕೆನ್ನುತ್ತೀ'' ಎಂದ ಯಶವಂತ.

''ಅದು ಸ್ಪಷ್ಟವೇ ಇದೆ. ಈ ದಿನಕ್ಕಾಗಿ ಕಾಯುತ್ತಿದ್ದೇನೆಂದೇ ಹೇಳಬಹುದು. ಈ ಗುಟ್ಟನ್ನು ಒಳಗಿಟ್ಟುಕೊಂಡು ನಟನೆ ಮಾಡುವುದು ನನಗೂ ಸಾಕಾಗಿ ಹೋಗಿತ್ತು. ಅದೇ ಹೊರಗೆ ಬಂದು ನನ್ನ ಮನಸ್ಸು ಅದೆಷ್ಟು ನಿರಂಬಳವಾಗಿದೆ. ನೀವು ನನಗೆ ಬೇಕಾದ ಶಿಕ್ಷೆ ವಿಧಿಸಿರಿ. ಆದರೆ ನಾಲ್ಕು ಜನರಲ್ಲಿ ಬೊಬ್ಬಾಟವಾಗುವ ಹಾಗೆ ಏನೂ ಮಾಡಬೇಡಿರಿ. ಅದರಿಂದ ನಿಮ್ಮ ಪರಿಶುದ್ಧ ಚಾರಿತ್ರ್ಯಕ್ಕೆ ಮಸಕಾಗುವುದು ಬೇಡ. ಅದಕ್ಕಾಗಿ ನಾನೇ ಸದ್ದಿಲ್ಲದೆ ಮನೆಬಿಟ್ಟು ಹೋಗಬೇಕೆಂದಿದ್ದೇನೆ. ಮಗುವಿನೊಂದಿಗೆ ಅಜ್ಞಾತವಾಗಿ ಇರುವೆ. ಅದೇ ನನ್ನ, ನಿಮ್ಮ ಮುಂದಿರುವ ಮಾರ್ಗ'' ದುಃಖವು ಏರಿ ಬಂದುದರಿಂದ ಮೋಹಿನಿ ಬಿಕ್ಕತೊಡಗಿದಳು.

''ಆದರೆ, ನಿಮ್ಮನ್ನು ಬಿಟ್ಟು ಹೇಗೆ ಇರಲಿ, ಯಶವಂತ? ನನ್ನ ಕಡೆಯಿಂದ ಸಾಧ್ಯವೆ? ನೀವೇಕೆ ನನ್ನನ್ನು ಅತಿಯಾಗಿ ಹಚ್ಚಿಕೊಂಡಿರಿ?''

ಮೋಹಿನಿಯ ಬಾಯಿಂದ ಮಾತುಗಳು ತುಂಡುತುಂಡಾಗಿ ಬರತೊಡಗಿದುವು ಅವಳ ಒಂದೊಂದು ಉಮ್ಮಳದ ಆವಿರ್ಭಾವವು ಯಶವಂತನ ಹೃದಯವನ್ನು ಶಲ್ಯದಿಂದ ತಿವಿದಂತಾಯಿತು. ಅದನ್ನು ಸಹಿಸಲಾರದೆ ''ಮೋಹಿನೀ'' ಎಂದು ಚೀರಿದನು.

ಎಲ್ಲಿದ್ದಾಳೆ ಮೋಹಿನಿ? ಇಲ್ಲ. ಅವಳು ನಾಳೆ ರಾತ್ರಿ ಬರುತ್ತೇನೆಂದು ಹೇಳಿದ್ದಾಳೆ. ಇವತ್ತಲ್ಲ. ಎಂದರೆ ಅವಳು ತನ್ನ ಕನಸಿನಲ್ಲಿ ಬಂದಿದ್ದಳೆ ? ಕನಸು ಬೀಳುವಷ್ಟಾದರೂ ತನಗೆ ನಿದ್ರೆ ಹತ್ತಿತ್ತಲ್ಲಿ? ತನ್ನ ಮನಸ್ಸಿನ ಹಳವಂಡವೆ, ವಿಚಾರಗಳ ತಾಕಲಾಟಗಳ ಈ ವಿಚಿತ್ರ ದಸೆಯನ್ನು ನೆನೆದುಕೊಳ್ಳುತ್ತ ಮೇಲೆದ್ದನು. ದೀಪ ಹಚ್ಚಿದನು.

೪

ಮರುದಿನ ಸಂಜೆ ಬಂತು, ಮೋಹಿನಿ ಎ.ಟಿ. ಸ್ಟೇಷನ್ನಿನಲ್ಲಿ ನಗು ನಗುತ್ತ ಇಳಿದಳು. ಅವಳನ್ನು ಬರಮಾಡಿಕೊಳ್ಳುತ್ತ ಯಶವಂತ ಕೇಳಿದ:

''ಏನು ಬೇಗ ಬಂದುಬಿಟ್ಟೆಯಲ್ಲ.''

''ಮತ್ತೇನು ಮಾಡಲಿ. ನಿಮ್ಮ ಆಫೀಸ್ ಕೆಲಸ ಬೇಗ ಮುಗಿದು ನೀವು ಒಬ್ಬರೇ ಇದ್ದೀರೆಂದು ತಿಳಿಯಿತು. ಬಂದುಬಿಟ್ಟೆ''

ಎಂದಿನಂತೆಯೇ ಮಾತು, ವ್ಯವಹಾರ ಸಾಗಿದ್ದಿತು.

ಮರುದಿನ ಬೆಳಿಗ್ಗೆ ಚಹ ಕುಡಿಯುತ್ತ ಕುಳಿತಾಗ ಮೋಹಿನಿ ಕೇಳಿದಳು,

''ಈ ೫-೬ ದಿನ ಒಬ್ಬರೇ ಮನೆಯಲ್ಲಿ ಕುಳಿತು ಏನಾದರೂ ಮಾಡಿದಿರಿ...? ಯಾರಾದರೂ ಮನೆಗೆ ಬಂದಿದ್ದರೆ?''

''ಒಬ್ಬ ಜ್ಯೋತಿಷಿ ಬಂದಿದ್ದ''

''ಹೌದೆ? ನೀವೆಂದು ಭವಿಷ್ಯದಲ್ಲಿ ನಂಬಿಕೆ ಇಟ್ಟವರು?''

''ನಿನಗೆ ಇನ್ನು ಮಕ್ಕಳಾಗುವುದಿಲ್ಲ ಎಂಬ ವಿಚಾರ ಬಂದಂದಿನಿಂದ!''

ಮೋಹಿನಿಯ ಮುಖದ ಬಣ್ಣ ಬಿಳುಪಾಯಿತು. ''ಹೂಂ! ಏನು ಹೇಳಿದರು?'' ಎಂದಳು.

''ನಿಮಗೆ ಮಕ್ಕಳಾಗುವುದಿಲ್ಲ. ಇದ್ದ ಹೆಂಡತಿಯನ್ನು ಬಿಡಿರಿ. ಮತ್ತೊಂದನ್ನು ಮದುವೆಯಾಗಿರಿ—ಎಂದು ಹೇಳಿದರು.''

''ಛೆ, ಇದೇನು ಮಾತನಾಡುತ್ತಿದ್ದಾರೆ-ಇವರು? ನಿಜವೇ? ಜ್ಯೋತಿಷಿ ಬಂದುದು, ಇರಲಾರದು. ಅಗೋ ಅವರ ಕಣ್ಣಿನಲ್ಲಿ ತುಂಟತನ!''

ಮೋಹಿನಿ ಹೇಳಿದಳು: ''ಆಯಿತು, ಹಾಗಿದ್ದರೆ ಇನ್ನೊಂದು ಮದುವೆಯಾಗಿರಿ. ಸ್ವಖುಷಿಯಿಂದ ನಾನು ಇದಕ್ಕೆ ಒಪ್ಪಿದ್ದೇನೆಂದು ಬೇಕಾದರೆ ನಾನು ಲೇಖಿ ಕೊಡುತ್ತೇನೆ. ಆದರೆ ನಾನೂ ಇಲ್ಲಿಯೇ ಇರುವಾಕೆ!''

ವಾತಾವರಣ ಚೇಷ್ಟೆಯದು. ಮಾತಿನ ವಿಷಯವೋ ಗಂಭೀರ!

''ಹೂಂ ಅಂದರೆ ನಿಮ್ಮಿಬ್ಬರ ಜಗಳದಲ್ಲಿ ನಾನು ಬಿದ್ದು ಒದ್ದಾಡಲೇನು? ಅದಕ್ಕೆ ನಾನು ಬೇರೊಂದು ಉಪಾಯ ಹೂಡಿದ್ದೇನೆ.''

''ನಿಮ್ಮ ಯಾವ ಯೋಜನೆಗೂ ನನ್ನ ಒಪ್ಪಿಗೆ ಇದೆ.''

''ಹೌದೆ? ಹಾಗಿದ್ದರೆ ಯಾರನ್ನಾದರೂ ದತ್ತಕ ತೆಗೆದುಕೊಳ್ಳಬೇಕೆಂದಿದ್ದೇನೆ.''

ಮೋಹಿನಿ ಮೌನ! ಅಂಗೈಯ ಮೇಲೆ ತನ್ನ ಗದ್ದವನ್ನಿರಿಸಿಕೊಂಡು, ಗಂಡನ ಮುಖವನ್ನೇ ನೋಡುತ್ತ, ಅವನ ಮನಸ್ಸಿನಲ್ಲಿರುವುದನ್ನು ತಿಳಿಯದೇ, ಗರಬಡಿದವರಂತೆ ಕುಳಿತಿದ್ದಾಳೆ.

“ಆದರೆ ಒಂದೇ ಕಷ್ಟ. ಒಳ್ಳೆಯ ಗಂಡು ಹುಡುಗ ಸಿಕ್ಕಬೇಕು. ಮುಪ್ಪಿನ ಕಾಲಕ್ಕೆ ಅವ ನಮಗೆ ತಿರುಗಿ ಬೀಳಬಾರದು. ಈ ದೃಷ್ಟಿಯಿಂದ ಹೆಣ್ಣು ಹುಡುಗಿ ಅಡ್ಡಿಯಿಲ್ಲ. ಆದರೆ ದತ್ತು ತೆಗೆದುಕೊಳ್ಳುವ ಸಂಪ್ರದಾಯ ನಮ್ಮಲ್ಲಿಲ್ಲವಲ್ಲ... ಇದ್ದರೂ, ಬೇಡ, ಏಕೆಂದರೆ ನಾಳೆ ಆ ಹುಡುಗ ನಿನ್ನ ಮಾತನ್ನೇ ಕೇಳುತ್ತ, ನನ್ನನ್ನು ಕಡೆಗಣಿಸಿದರೆ? ನಮ್ಮ ಪೈಕಿಯ ಜನವನ್ನೇ ನೋಡುತ್ತೇನೆ. ಧಾರವಾಡದಲ್ಲಿ ವಿದ್ಯಾವಂತ ಬಡ ಹುಡುಗರಿಗೆ ಕೊರತೆಯಿಲ್ಲ.”

ಗಂಡನ ಮಾತನ್ನು ಕೇಳುತ್ತ, ತದೇಕವಾಗಿ ನೋಡುತ್ತಿರುವಾಗ ಅವಳ ಕಣ್ಣಲ್ಲಿ ನೀರು ತುಂಬಿದವು. ಕೆಲವು ಹನಿ ಕೆಳಗಿಳಿದು, ಗದ್ದದ ಅಂಚಿನಿಂದ, ಆಕೆಯ ಅಂಗೈಯ ಮೇಲೆ ಒರಗಿದವು.

ಅಳುತ್ತಿರುವ ಅವಳನ್ನು ಸಮಾಧಾನ ಪಡಿಸಲೆಂಬಂತೆ ಯಶವಂತ ಹೇಳಿದ.

“ಅಥವಾ ಹೀಗೆ ಮಾಡೋಣ. ಈ ಸಲ ಧಾರವಾಡಕ್ಕೆ ಹೋದಾಗ ೭-೮ ವರ್ಷದ ಓರ್ವ ಸುರೂಪಿಣಿಯಾದ ಹುಡುಗನನ್ನು ನೋಡಿಕೊಂಡು ಬರುತ್ತೇನೆ. ಈಗೇ ಅವನನ್ನು ದತ್ತಕ ತೆಗೆದುಕೊಳ್ಳೋಣ, ಬೇಡ. ಫಕ್ಕನೆ, ನಿನಗೂ ಒಂದು ಮಗು ಆದರೆ? ಅದ್ದರಿಂದ ಅವನನ್ನು ನಮ್ಮ ಮನೆಯಲ್ಲಿ ಇಟ್ಟುಕೊಳ್ಳೋಣ, ಶಿಕ್ಷಣ ಕೊಡಿಸೋಣ. ಆಮೇಲೆ ದತ್ತಕ. ಒಟ್ಟೇ ನಿನಗೆ ಆ ಹುಡುಗ ಪಸಂದು ಬರದಿದ್ದರೆ ಬಿಟ್ಟುಬಿಡೋಣ. ಏನು ಹೇಳುತ್ತೀ?”

ಏನು ಹೇಳಬೇಕು ಮೋಹಿನಿ! ಗಂಡನು ಇಂದೇಕೆ ಹೀಗೆ ಮಾತನಾಡು ತ್ತಿದ್ದಾನೆಂಬುದರ ನೆಲೆಯೇ ಹತ್ತದ ದಿಙ್ಮೂಢಳಾಗಿಬಿಟ್ಟಿದ್ದಳು. ಅವನ ಸಂತಾನ ಬಯಕೆಯ ಈ ನೇರವಾದ ಪ್ರಸ್ತಾಪ ಅವಳ ಹೃದಯವನ್ನು ಗಾಸಿ ಗೊಳಿಸಿದ್ದಿತು. “ಮಹಾಬಳೇಶ್ವರಕ್ಕೆ ನಾವು ಯಾವಾಗ ಹೊರಡುವುದು?” ಎಂದು ಕೇಳಿ ವಿಷಯ ಬದಲಿಸಿದಳು.

ಉತ್ತೇಜಿತ ಸ್ವರದಲ್ಲಿ ಯಶವಂತ ಹೇಳಿದ, “ಇವತ್ತು ಶನಿವಾರವಲ್ಲವೆ, ಬುಧವಾರ ಹೊರಡೋಣ. ನಾನು ಧಾರವಾಡಕ್ಕೆ ಹೋಗಿ ಬರುತ್ತೇನೆ.”

ಅಂದೇ ಸಂಜೆ ಯಶವಂತನು ಮುಂಬಯಿಯಿಂದ ಹೊರಟೇಬಿಟ್ಟನು. ಅವನ ಬೆಳಗಿನ ಮಾತಿನ ಧರತಿಯಿಂದ ಮೋಹಿನಿಗೆ ಚೇತರಿಸಿಕೊಳ್ಳುವುದೇ ಆಗಲಿಲ್ಲ. ಅದು ಹೇಗೋ ಎರಡು ದಿನಗಳನ್ನು ಕಳೆಯುವಷ್ಟರಲ್ಲಿ, ಮಂಗಳವಾರದ ಬೆಳಗ್ಗೆ ಎಕ್ಸ್‌ಪ್ರೆಸ್ ತಂತಿ ಬಂದಿತು— ‘ಈ ದಿನ ಮೇಲಿಗೆ ಬರುತ್ತೇನೆ. ಮಗುವೊಂದನ್ನು ಸಂಗಡ ಕರೆತಂದಿದ್ದೇನೆ.’

ಇದೇನು! ಆಡಿದಂತೆ ಮಾಡಿಬಿಟ್ಟರೆ? ಮಗುವನ್ನು ಕರೆತಂದರೆ? ಮೋಹಿನಿ ಅತ್ಯಂತ ಕಳವಳಿಸಿದ್ದಳು. ತಾನೇನು ಮಾಡಬೇಕು ಆ ಮಗುವನ್ನು ತೆಗೆದುಕೊಂಡು? ಅವರು ಆರಿಸಿ ತಂದು ಪ್ರೀತಿಯನ್ನು ತೋರುವ ಆ ಮಗುವಿನೊಂದಿಗೆ ತಾನು ಹೇಗೆ ನಡೆದುಕೊಳ್ಳಬೇಕು? ಇದರ ಪರಿಣಾಮವೆಂತಾದೀತೋ? ಬೇಬಿಯ ಗತಿಯೇನಾ

ದೀತು? ತಂದೆಯನ್ನಾದರೂ ಕರೆಸಿಕೊಳ್ಳಲೆ? ಯಾಕಾದರೂ ನಾನು ಇವರೊಬ್ಬರನ್ನೇ ಬಿಟ್ಟು ಊರಿಗೆ ಹೋದೆ...? ಈ ಉಲ್ಬಣಾವಸ್ಥೆಯಲ್ಲಿಯೇ ಆಕೆ ಅವನನ್ನು ಕರೆತರಲು ತಾನೆ ಕಾರು ನಡೆಸಿಕೊಂಡು ಹೋದಳು. ಅತ್ಯಂತ ದುಗುಡದಿಂದ ಪ್ಲ್ಯಾಟ್‌ಫಾರ್ಮ್ ಹೊರಗೆ ಕಾಯ್ದು ನಿಂತಳು.

ಗಾಡಿ ಬಂದು ನಿಂತಿತು. ಇವಳ ಎದೆ ಒಂದೇ ಸಮನೆ ಹಾರತೊಡಗಿತು. ಜನ ಒಬ್ಬೊಬ್ಬರಾಗಿ ಇವಳ ಮುಂದೆಯೇ ಹಾಯ್ದು ಹೋಗತೊಡಗಿದರು. ಆದರೆ ಇದೇನು? ಇವರು ಬರಲೇ ಇಲ್ಲವಲ್ಲ! ಇದೂ ವಿಪರ್ಯಾಸ ಚೇಷ್ಟೆಯ ಒಂದು ರೀತಿಯೆ? ಇರಲಾರದು. ಒಟ್ಟೇ ನನಗೆ ಹುಚ್ಚು ಹಿಡಿಸುತ್ತಿದ್ದಾರೆ. ಇಲ್ಲ, ಇದನ್ನು ತಾನು ಚೆನ್ನಾಗಿ ಎದುರಿಸಬೇಕು—ಎಂದುಕೊಳ್ಳುತ್ತ ಮನೆಗೆ ಹಿಂತಿರುಗಿದಳು.

ಆದರೆ, ಮನೆಯ ಒಳಗೆ ಕಾಲಿಡಬೇಕೆನ್ನುವಷ್ಟರಲ್ಲಿಯೆ ಬಾಗಿಲಲ್ಲಿಯೆ ಯಶವಂತ ನಿಂತಿದ್ದಾನೆ! ಇದೇನು ಹುಡುಗಾಟ? ಯಾವಾಗ ಇವರು ಬಂದದ್ದು?

''ಕ್ಷಮಿಸು, ಮೋನಿ, ನನಗೆ ಮೇಲ್‌ಗಿಂತ ಮುಂಚಿನ 'ಡೆಕ್ಕನ್ ಕ್ವೀನ್' ಗಾಡಿ ಸಿಕ್ಕಿತಾದ್ದರಿಂದ, ಅದಕ್ಕೇನೆ ಬಂದುಬಿಟ್ಟೆ. ಬಂದು ಅರ್ಧ ತಾಸು ಆಗಿರಬೇಕು ಅಷ್ಟೇ. ನಿನ್ನನ್ನು ಸುಮ್ಮನೆ ಸ್ಟೇಷನ್ನಿಗೆ ಎಡತಾಕಿಸಿದೆ. ಅದಿರಲಿ, ಬೇಗ ಒಳಗೆ ಬಾ, ಮಗುವನ್ನು ನೋಡೀಯಂತೆ! ನಿನ್ನ ಕೋಣೆಯಲ್ಲೇ ಕೂಡ್ರಿಸಿದ್ದೇನೆ.''

ಆ ಮಾತು ಕೇಳಿ, ಕಾಲಲ್ಲಿಯ ಅವಳ ತ್ರಾಣವೇ ಉಡುಗಿತು. ಗಂಡನ ಹಿಂಬದಿಗೆ ಒಲುಮೆಯಿಂದ ನಡೆದು ಬಂದು ತನ್ನ ಕೋಣೆಯನ್ನು ಪ್ರವೇಶಿಸಿದಳು. ಅವಳ ಮಂಚದ ಒಂದು ಬದಿಗೆ ಮುದ್ದೆಯಾಗಿ ಕುಳಿತಿದ್ದ 'ಮಗು'ವನ್ನು ನೋಡಿದಳು. ಆ ಮಗು ಮತ್ತಾರೂ ಅಲ್ಲ, ಬೇಬಿಯೇ!

''ಒಳ್ಳೆಯ ಗಂಡು ಹುಡುಗ ಯಾರೂ ಸಿಕ್ಕಲಿಲ್ಲ, ಮೋನೀ, ಅದಕ್ಕಾಗಿ ಇವಳನ್ನು ಕರತಂದೆ. ಹಾಗೇಕೆ ದಿಟ್ಟಿಸಿ ನೋಡುತ್ತೀ? ನಾನೇನು ಇವಳನ್ನು ಅಪಹರಿಸಿ ಕೊಂಡು ಬರಲಿಲ್ಲ, ಅವಳ ಪಾಲಕರ ತನಕ ಹೋಗಿ ಅವರ ಪರವಾನಗಿಯನ್ನೂ ಪಡೆದಿದ್ದೇನೆ.''

ಅವಳ ಮೈಯೆಲ್ಲ ಕಂಪಿಸಿತು. ಅವಳಿನ್ನು ಜೋಲಿ ಹೋಗಿ ಬೀಳುವಳೆಂಬ ಯೋಚನೆಯಿಂದ ಯಶವಂತನು ತನ್ನ ಕೈಯ ಆಸರೆಯನ್ನು ಕೊಟ್ಟನು.

''ನಿಮಗೆ... ಇದು... ಹೇಗೆ ಗೊತ್ತಾಯಿತು? ಯಾ... ಯಾರು ಹೇಳಿದರು?''

''ಯಾರೂ ಹೇಳಲಿಲ್ಲ ನಿನ್ನ ಕಳ್ಳತನ ತಾನೇ ಹೊರಬಿತ್ತು. ಇದಕ್ಕೂ ಇನ್ನು ಮುಂದೆಯೂ ನೀನು ನನಗೆ ಸುಳ್ಳು ಹೇಳಿ, ವಂಚಿಸಬಾರದೆಂದು ಕರೆತಂದೆ. ಆದರೂ ಈ ಹುಡುಗಿ ಮೊದಲು ಬರಲೊಪ್ಪಲಿಲ್ಲ. ನಿನ್ನ ಫೋಟೋ ತೋರಿಸಿ, 'ನಿಮ್ಮ ಅವ್ವನ ಕಡೆ ಕರೆದುಕೊಂಡು ಹೋಗುವೆ' ಎಂದೆ, ಆಗ ಬಂದಳು! ನಿನ್ನ ಅವ್ವನ ಗಂಡನಾದ ನಾನು ನಿನಗೆ ಅಪ್ಪನಾಗಬೇಕು ಎಂದೆ. ಈ ಹುಡುಗಿ ಒಪ್ಪುತ್ತಿಲ್ಲ. ನೀನೇ ತಿಳಿಸಿ ಹೇಳು.''

''ನೀವು! ಈ ಹುಡುಗಿಗೆ ತಂದೆ, ತಂದೆಯಾಗಬಯಸುವಿರಾ! ನೀವು!''

ಕೃತಜ್ಞತೆಯ ಭಾರದಿಂದ ಮೋಹಿನಿ ಕುಸಿದು ನೆಲಕ್ಕೆ ಕುಳಿತಳು. ಕಣ್ಣಿನಿಂದ ನೀರು ಧಾರೆ ಧಾರೆಯಾಗಿ ಹರಿಯಿತು. ಅವನ ಮುಂಗೈ ಶರ್ಟನ್ನು ತೋಯಿಸಿತು. ಅಳುವಿನ ಭರ ಕಡಿಮೆಯಾದಾಗ, ಅವಳಿಗೆ ತನ್ನ ಗಂಡನ ಉದಾರಭಾವದ ನಡುವಳಿಕೆಯ ಹಲವಾರು ನೆನಹುಗಳು ಉಕ್ಕಿ ಬಂದವು.

''ಹೇಳಿ, ನಾನು ನಿಮಗಾಗಿ ಏನು ತ್ಯಾಗ ಮಾಡಬೇಕು, ಹೇಳಿರಿ. ನನ್ನ ಜೀವನವನ್ನೇ ತೆಯ್ಟರೂ ನಿಮ್ಮ ಋಣವನ್ನು ತೀರಿಸಲಾರೆನೇನೋ'' ಎಂದಳಾಕೆ.

''ಮೊದಲು ಆ ಮಗುವನ್ನು ನಿನ್ನ ಬಳಿ ಕರೆ. ಗಾಬರಿಗೊಂಡಿದೆ; ನೀ ಅಳುವುದನ್ನು ಕಂಡು ಅದೂ ಬಿಕ್ಕಳಿಸುತ್ತಿದೆ.''

ಮೋಹಿನಿ ಬೇಬಿಯತ್ತ ನೋಡಿದಳು. ಅಪರಿಚಿತ ಸ್ಥಳದಲ್ಲಿ, ಆ ವಿಚಿತ್ರ ಸನ್ನಿವೇಶದಲ್ಲಿ ತನ್ನ ತಾಯಿಯ ಸಾಂತ್ವನಕ್ಕಾಗಿ ಆ ಮಗು ಕಾದಿದ್ದಿತು. ಮಂಚದಿಂದ ಕೆಳಗಿಳಿದು, ಒಂದೆರಡು ಮೆಲ್ಲಡಿಯಿಟ್ಟು, ಅಲ್ಲಿಂದ ಧಾವಿಸಿದ ಬೇಬಿಯು ತನ್ನ ತಾಯಿಯ ಅಪ್ಪುಗೆಯಲ್ಲಿ ಅವಿತುಕೊಂಡಳು. ಆ ವಾತ್ಸಲ್ಯಮಯ ವಾತಾವರಣದಲ್ಲಿ ತಾನೂ ಪಾಲುಗಾರನಾಗಿ ಯಶವಂತನು ಹೆಂಡತಿಯ ತಲೆಗೂದಲನ್ನು ನೇವರಿಸುತ್ತ ಹೇಳುತ್ತಲಿದ್ದ ; ''ಸಂನ್ಯಾಸಿಯ ಸಂಸಾರದಂತೆ ನಮ್ಮ ಸ್ಥಿತಿಯಾಯಿತೀಗ. ಈ ಮಗುವಿಗೆ ಹೆಸರನ್ನು ಇಡುವುದರಿಂದ ಆರಂಭ! ಏನೆಂದು ಹೆಸರಿಡೋಣ? ಅಂದಹಾಗೆ, ಅವಳನ್ನೇ ಕೇಳೋಣ, ತನಗೆ ಯಾವ ಹೆಸರು ಇಷ್ಟವೆಂದು.''

ಇರುವೆ ಮತ್ತು ಜಿಟ್ಟೆ

ಇಸೋಪನು ಹೇಳಿದ ನೀತಿ ಕಥೆಗಳಲ್ಲಿ ಇರುವೆ ಜಿಟ್ಟೆಯ ಕಥೆಯೂ ಒಂದಾಗಿದೆ. ಈ ಕಥೆಯ ನೀತಿಯೇನೆಂದರೆ, ಸಮೃದ್ಧಿಯಿದ್ದಾಗ ಸಂಗ್ರಹಿಸಿ ಇಡಬೇಕು ಮತ್ತು ಮನುಷ್ಯ ಆಲಸಿಗನಾಗದೇ ಸತತೋದ್ಯೋಗದಲ್ಲಿ ಇರಬೇಕು. ಆಲಸಿಗನಾದರೆ ಅದರ ಕಹಿ ಫಲವನ್ನು ಅನುಭೋಗಿಸಬೇಕು ಎಂಬುದಾಗಿದೆ.

ಈ ಕಥೆಯನ್ನು ನನ್ನಂತೆ ನೀವೂ ಸಣ್ಣವರಿದ್ದಾಗ ಕಲಿತಿರಬಹುದು. ಆದರೂ ಸ್ವಲ್ಪದರಲ್ಲಿ ಹೇಳುತ್ತೇನೆ: ಇರುವೆಗಳು ಬೇಸಿಗೆಯಲ್ಲಿ ತುಂಬಾ ಓಡಾಡಿ ಆಹಾರವನ್ನು ಸಂಗ್ರಹಿಸಿದವು. ಜಿಟ್ಟೆ ಟೊಂಗೆಗಳ ಮೇಲೆ ಕುಳಿತು ಬಿಸಿಲ ಕಿರಣಗಳಿಗೆ ತನ್ನ ಬಣ್ಣ ಬಣ್ಣದ ಮೈಯನ್ನೊಡ್ಡಿ 'ಚಿವ್, ಚಿವ್' ಎಂದು ಕೇಕೆ ಹಾಕುತ್ತ ಕಾಲ ಕಳೆಯಿತು. ಯಾವಾಗ ಬೇಸಗೆ ಮುಗಿದು, ಮಳೆಗಾಲ ಪ್ರಾರಂಭವಾಯಿತೋ, ಆಗ ಇರುವೆಗಳ ಬಳಿ ತುಂಬಿದ ಕಣಜವಿದ್ದರೆ, ಜಿಟ್ಟೆಯ ಹೊಟ್ಟೆ ಬರಿದಾಗಿದ್ದಿತು. ಆಗ ಜಿಟ್ಟೆಯು ಸ್ವಲ್ಪ ಆಹಾರಕ್ಕಾಗಿ ಇರುವೆಗಳನ್ನು ಬಾಯಿ ಬಿಟ್ಟು ಕೇಳಿದರೆ ಇರುವೆಗಳು,

''ಇಡೀ ಬೇಸಗೆಯಲ್ಲೆಲ್ಲ ಏನು ಮಾಡಿದೆ?'' ಎಂದು ಕೇಳಿದವು.

''ಇಲ್ಲೇ ಟೊಂಗೆಯ ಮೇಲೆ ಹಾಡುತ್ತಾ ಕುಳಿತಿದ್ದೆ.''

''ಸರಿ ಮತ್ತೆ. ಈಗ ಹೋಗಿ ಜಿಗಿದಾಡು, ನೃತ್ಯ ಮಾಡು'' ಎಂದು ಇರುವೆಗಳು ಉತ್ತರ ಕೊಟ್ಟವು.

ಈ ಕಥೆಯಿಂದ ಹೊರಡುವ ನೀತಿ ಬೋಧೆಯು ಆಗಿನ ನನ್ನ ಚಿಕ್ಕ ವಯಸ್ಸಿನಲ್ಲೇ ತಾಕಲೇ ಇಲ್ಲ. ಬದಲಾಗಿ ಕೂಳಿಲ್ಲದೆ, ಕೂಳು ದೊರೆಯದೆ, ಅದಕ್ಕಾಗಿ ಅವಮಾನವನ್ನು ಹೊಂದಿ ಮಳೆಗಾಲ-ಚಳಿಗಾಲಗಳನ್ನು ಕಳೆದ ಜಿಟ್ಟೆಯ ಬಗ್ಗೆ ಒಂದಿನಿತು ಸಹಾನುಭೂತಿಯೇ ಮೂಡಿದ್ದಿತು. ಆ ಗಳಿಗೆಗೆ ನಾನು ಹಾದಿಯ ಬದಿಯಲ್ಲಿ ಹೊರಟಿದ್ದ ಇರುವೆಗಳ ಸಾಲನ್ನು ಕಾಲಿನಿಂದ ತುಳಿದಿದ್ದರೂ ತುಳಿದಿರಬೇಕು.

ಹೋದ ವರುಷ ನನ್ನ ಮಿತ್ರ ಡಾ|| ಕುಲಕರ್ಣಿಯವರ ದವಾಖಾನೆಗೆ ಹೋದಾಗ ಈ ಕತೆ ನನಗೆ ಥಟ್ಟನೆ ನೆನಪಾಯಿತು. ಆಗ ದವಾಖಾನೆ ಮುಚ್ಚುವ ವೇಳೆಯಾಗಿದ್ದಿತು. ಕಾಂಪೌಡರನ್ನು ಬಿಟ್ಟರೆ ಇನ್ನ್ಯಾರೂ ಇರಲಿಲ್ಲ. ಡಾಕ್ಟರರ ಮುಖ ಅತ್ಯಂತ ಚಿಂತಾಕುಲವಾಗಿದ್ದಿತು. ಕಣ್ಣ ನೋಟ ಸಂತಾಪವನ್ನು ವ್ಯಕ್ತಪಡಿಸುತ್ತಿದ್ದಿತು.

ಅವರ ಈ ಸ್ಥಿತಿಯನ್ನು ನೋಡಿ ನನಗೆ ಕೆಡೆಕೆನಿಸಿತು. ಅವರ ಇಂಥ ಚಿಂತೆಗೆ ಅವರ ಸುಪ್ರಸಿದ್ಧ ತಮ್ಮನೇ ಕಾರಣನಾಗಿರಬೇಕು ಎಂಬುದನ್ನು ತಿಳಿಯಲು ತಡೆಹಿಡಿಯಲಿಲ್ಲ.

''ಏನು ನಡೆದಿದೆ?'' ಎಂಬುದಾಗಿ ಸಹಾನುಭೂತಿಯ ದನಿಯಲ್ಲಿ ಮಾತಿನ ಪೀಠಿಕೆಯನ್ನು ಹಾಕಿದೆ.

''ಹೀಗೇ ನಡೆದಿದೆ. ಆಯ್ತು'' ಎಂದು ಅವರು ದನಿಯೆಳೆದರು.

''ಏನನ್ನುತ್ತಾನೆ ವಿಠ್ಠಲರಾಯಾ?'' ಎಂದು ನಾನಾಗಿ ಅವರ ತಮ್ಮನ ಪ್ರಸ್ತಾಪವನ್ನು ತೆಗೆದೆ.

''ಭಂಡ ಶಿರೋಮಣಿ! ಅವನ ಹೆಸರನ್ನು ಸಹಿತ ಎತ್ತುವುದು ಬೇಡ'' ಎಂದು ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದರು.

''ಅವನ ಸಂಬಂಧವನ್ನು ನೀವು ಸಂಪೂರ್ಣ ಕಡಿದುಕೊಳ್ಳಬಾರದೇಕೆ? ಒಳ್ಳೆಯತನಕ್ಕೆ ಬಿದ್ದು ನೀವೂ ಅವನ ಭಂಡತನಕ್ಕೆ ಪ್ರೋತ್ಸಾಹವನ್ನು ಕೊಟ್ಟಿದ್ದೀರಿ'' ಎಂದೆ.

ಹತ್ತು-ಹನ್ನೆರಡು ವರ್ಷಗಳಿಂದ ವಿಠ್ಠಲರಾಯ ಈ ರೀತಿಯಾಗಿ ಪಿತೃಸಮಾನನಾದ ತನ್ನ ಹಿರಿಯಣ್ಣನನ್ನು ಗೋಳು ಹುಯಿದುಕೊಂಡಿದ್ದ. ಇವರು ದವಾಖಾನೆಯನ್ನು ತೆರೆದು, ತಮ್ಮ ವೃತ್ತಿಯ ಏರಿಕೆಯ ಮೆಟ್ಟಿಲುಗಳನ್ನು ಏರುತ್ತಿರುವಾಗ, ಅವನೂ ಒಂದು ನೌಕರಿಯಲ್ಲಿದ್ದ. ಮದುವೆಯೂ ಆಗಿತ್ತು. ಒಬ್ಬ ಸದ್ಗೃಹಸ್ಥನಂತೆ ಬಾಳುವೆಯನ್ನು ನಡೆಸುತ್ತಿದ್ದಾಗ, ಅವನ ಹೆಂಡತಿ ತೀರಿಕೊಂಡಳು. ಮುಂದೆ ತಲೆಯಲ್ಲಿ ಏನು ಹೊಕ್ಕಿತೋ ಏನೋ ಇದ್ದ ನೌಕರಿಗೆ ರಾಜೀನಾಮೆಯನ್ನು ಕೊಟ್ಟನು. ಯಾರು ಎಷ್ಟು ಹೇಳಿದರೂ ಕೇಳಲಿಲ್ಲ. ಪಗಾರದಲ್ಲಿ ಉಳಿದ ಹಣವನ್ನು ಬ್ಯಾಂಕಿನಲ್ಲಿ ಇಟ್ಟಿದ್ದ. ಅದು ತೀರಿದ ಮೇಲೆ ತಾನಾಗಿ ಹಾದಿಗೆ ಬರುವನೆಂದು ಡಾಕ್ಟರರೂ, ಬಂಧು-ಬಳಗದವರೂ ತಿಳಿದುಕೊಂಡಿದ್ದರು. ಆದರೆ ಹಾಗೇನಾಗಲಿಲ್ಲ. ಮುಂದೆಯೂ ಅವನ ಅಡಾಲುಡಿ ಜೀವನ. ಊರೂರು ತಿರುಗಾಟ ಇವು ನಡೆದೇ ಇದ್ದುವು. ಬ್ಯಾಂಕಿನಲ್ಲಿ ಹಣ ತೀರಿದ್ದರೂ ಗೆಳೆಯರಲ್ಲಿ ಹಣ ಇತ್ತಲ್ಲ! ಅವನಿಗೆ ಕೈಗಡ ನಾಲಗಳನ್ನು ನಿರಾಕರಿಸುವದು ಅವನ ಗೆಳೆಯರಿಗೂ, ಗುರುತಿನವರಿಗೂ ಕಷ್ಟದ ಮಾತಾಗಿದ್ದಿತು; ಅವನ ಮಾತು, ನಡತೆಗಳು ಅಷ್ಟು ಮೋಹಕವಾಗಿದ್ದವು.

ಮನೆಯಲ್ಲಿ ಆತ ನೇಮದಿಂದ ಇರುತ್ತಿರಲಿಲ್ಲ. ಆಗೊಮ್ಮೆ ಈಗೊಮ್ಮೆ ಬರುತ್ತಿದ್ದ. ಬಂದಾಗೊಮ್ಮೆ 'ಇನ್ನು ಮುಂದೆ ಸುಧಾರಿಸುತ್ತೇನೆ' ಎಂಬ ಧರ್ತಿಯಲ್ಲಿ ಮಾತಾಡಿ, ಹಣ ಪಡೆಯುತ್ತಿದ್ದ. ಹಲವಾರು ಬಾರಿ ಆ ವಚನ ಡಾಕ್ಟರರ ಕಿವಿಯಲ್ಲೇ ಉಳಿಯಿತು. ಇವನ ಕೃತಿಯಲ್ಲಿ ಒಡಮೂಡಲಿಲ್ಲ. ಆಗ ಡಾಕ್ಟರರು ಚೆನ್ನಾಗಿ ಬೈದರು. ಅವನ ಸುದೀರ್ಘ ನಿವೇದನೆಯ ಸಾರಾಂಶ 'ಹಳೆಯ ರಾಡಿಯನ್ನು ತೊಳೆದುಕೊಳ್ಳದೆ ನಾನು ಮನುಷ್ಯನಾಗಲೆಂತು' ಎಂಬುದಾಗಿತ್ತು. ಡಾಕ್ಟರರು ಅವನ ಸಾಲಗಳ ವಿವರಗಳನ್ನು ಕೇಳಿದರು. ಬುದ್ಧಿ ಹೇಳುತ್ತ ಅಷ್ಟೂ ಹಣವನ್ನು ಕೊಟ್ಟರು. ಬೇಗ

ಮನೆಗೆ ಮರಳಿ ಬಾ ಎಂದು ಕಳುಹಿಸಿಕೊಟ್ಟರು. ವಿಠ್ಠಲರಾಯ ಬೇಗ ಬರಲಿಲ್ಲ. ಆ ಹಣ ತೀರುವ ತನಕವೂ ಮತ್ತೆ ನಿರಂತಾಕವಾಗಿ ಕಾಲ ಕಳೆದ.

ಆ ಮುಂದೆ, ಅಣ್ಣನ ಹೆಸರಿನ ದುರಪಯೋಗ ಮಾಡಿಕೊಂಡೂ, ಹಣ ಸಂಪಾದಿಸುವುದಕ್ಕೆ ವಿಠ್ಠಲರಾಯ ಹಿಂದುಮುಂದೆ ನೋಡಲಿಲ್ಲ. ಪಾಪ, ಡಾಕ್ಟರರು ತಮ್ಮ ಸ್ವಂತದ, ಮನೆತನದ ಗೌರವಪಾಲನೆಗೆ ಕಟ್ಟುಬಿದ್ದು ಅದಕ್ಕೂ ಹಣವನ್ನು ತೆರಬೇಕಾಯಿತು.

ಒಂದು ಸಲವಂತೂ ವಿಠ್ಠಲರಾಯನ ಮೇಲೆ ಕೋರ್ಟಿನಲ್ಲಿ ದಾವೆಯೇ ನಡೆದು, ಪ್ರಸಂಗ ಮೈಮೇಲೆ ಬಂದಿತ್ತು. ವ್ಯಾಪಾರೀ ಗೆಳೆಯನೊಬ್ಬ ದಾವೆ ಹೂಡಿದ್ದ. ಆದರೆ ಅಷ್ಟು ದೊಡ್ಡ ರಕಮನ್ನು ವಿಠ್ಠಲರಾಯ ಕೊಡಬೇಕೆಲ್ಲಿಂದ? ಇನ್ನು ಅವನು ಜೇಲಿನ ಕಡೆಗೇ ಮುಖ ಮಾಡುವ ಹೊತ್ತು ಬಂದಾಗ ಡಾಕ್ಟರರಿಗೆ ತಡೆಯಲಾಗಲಿಲ್ಲ. ಉಭಯ ಪಕ್ಷವರನ್ನು ಮನೆಗೆ ಕರೆಸಿಕೊಂಡು ಇಬ್ಬರನ್ನು ಬೈದು ಒಂದು ಸಾವಿರ ರೂ.ಗಳಿಗೆ ಬಗೆಹರಿಸಿಕೊಳ್ಳಬೇಕು ಎಂದು ಹೇಳಿ ಚೆಕ್ಕನ್ನು ಒಗೆದರು. ಆದರೆ ಆ ಚೆಕ್ಕನ್ನು ಮುರಿಸಿ, ಹಣ ಕೈಗೆ ಬಂದಾಗ, ವಿಠ್ಠಲರಾಯನೂ ಆ ಗೆಳೆಯನೂ ಇಬ್ಬರೂ ಸೇರಿ ಆ ಹಣದಲ್ಲಿ ಕಾಶ್ಮೀರ ಯಾತ್ರೆಯನ್ನು ಕೈಕೊಂಡದ್ದು ತಿಳಿದು ಬಂದ ಮೇಲೆ, ಡಾಕ್ಟರ ಮನಃಸ್ಥಿತಿ ಹೇಗಾಗಿರಬೇಕೆಂಬುದನ್ನು ನೀವೇ ಊಹಿಸಬೇಕು.

ಹೀಗೆಯೇ ವಿಠ್ಠಲರಾಯನು, ೮-೧೦ ವರ್ಷಗಳನ್ನು ಕಳೆದಿರಬೇಕು. ಊರಲ್ಲಿ ಎಲ್ಲರೂ ಅವನ ಗುರುತಿನವರೇ. ಅವನೊಬ್ಬ ಭಂಡ, ನಾಚಿಕೆಗೇಡಿ, ನಿಷ್ಪ್ರಯೋಜಕ ಎಂದು ಎಲ್ಲರೂ ಅವನಿಗೆ ಅನ್ನುವವರೇ. ಆದರೂ ಅವನ ಭೆಟ್ಟಿಯಾಗಿ ನಿಮ್ಮ ಸುಖ ದುಃಖ ಕೇಳಿ, ನಿಮ್ಮ ಮನಸ್ಸನ್ನು ಹಾಸ್ಯದ ಮಾತಿನಿಂದ ಪ್ರಸನ್ನಗೊಳಿಸಿ, ನಿಮ್ಮ ಕೆಲಸದ ವಿಚಾರದಲ್ಲಿ ಆಸಕ್ತಿ ತೋರಿಸಿ, ಕೊನೆಗೆ ಒಂದೋ, ಐದೋ, ಐವತ್ತೋ ನಿಮ್ಮ ಯೋಗ್ಯತೆಯನ್ನು ನೋಡಿಕೊಂಡು ರೂಪಾಯಿಗಳನ್ನು ಕೇಳಿದರೆ ಇಲ್ಲವೆನ್ನುವುದು ಕಠಿಣ ಹೋಗುತ್ತಿತ್ತು.

ಡಾಕ್ಟರರು ಮಾತ್ರ ಪ್ರಾಮಾಣಿಕ ರೀತಿಯಿಂದ ದುಡಿದು ಯಾರ ಹಂಗೂ ಇಲ್ಲದೆ, ಯಾರ ನಿಷ್ಠುರವನ್ನೂ ಕಟ್ಟಿಕೊಳ್ಳದೆ ನಿಷ್ಕಲಂಕ ಜೀವನವನ್ನು ಸಾಗಿಸಿದ್ದರು. ಔಷಧೋಪಚಾರಕ್ಕಾಗಿ ಬಂದವರನ್ನು ಮನೆಯಲ್ಲಿ ಸಹಿತ, ಆದರಿಸಿ, ವರುಷಕ್ಕೆ ೮-೧೦ ದಿನಗಳ ವಿಶ್ರಾಂತಿಯನ್ನು ಕೂಡ ಪಡೆಯದೆ ಒಂದಷ್ಟು ದುಡ್ಡನ್ನು ಗಳಿಸಿ ಸ್ಥಿರ ಆಸ್ತಿಯನ್ನೂ ಮಾಡಿಕೊಂಡಿದ್ದರು. ಹೆಂಡತಿ ಮಕ್ಕಳನ್ನು ನೆಮ್ಮದಿಯಲ್ಲಿ ಇಟ್ಟಿದ್ದರು. ಮುಪ್ಪು ಅಲ್ಲದಿದ್ದರೂ ಇಳಿಮುಖ ವಯಸ್ಸಿಗೆ ಬಂದು ಮುಟ್ಟಿದ್ದರು. 'ಅಂತೂ ದುಡಿದೇ ಗಳಿಸಿದ್ದೇನೆ' ಎಂಬ ಆತ್ಮ ತೃಪ್ತಿ ಅವರಿಗಿತ್ತು. ವಿಠ್ಠಲರಾಯ ಅವರನ್ನು ಇಷ್ಟು ಶೋಷಿಸಿ ತಾಪ ಕೊಟ್ಟಿದ್ದರೂ 'ಮುಗಿಯಿತಲ್ಲ ನಾಲ್ಕು ಜನಕ್ಕೆ ಅವನು ಎಂತಹವನೆಂಬುದು ಗೊತ್ತಾಗಿದೆ. ಅವನಿಗೂ ೪೭-೪೮ ವರ್ಷ ವಯಸ್ಸು ಈಗ. ಇನ್ನೆಷ್ಟು ದಿನ ಅವನ ಈ ಹಾರಾಟ ನಡೆದೀತು. ಕೆಲವೇ ವರ್ಷಗಳಲ್ಲಿ ತಾ ಮಾಡಿದ ಧರ್ಮದ,

ಉದ್ಯೋಗಹೀನತೆಯ ಬಗ್ಗೆ ಪಶ್ಚಾತ್ತಾಪ ಪಡಲೇಬೇಕು' ಎಂಬ ಮಾತನ್ನು ಇದಕ್ಕೂ ಹಿಂದೆ ಆಡಿ ತೋರಿಸಿದ್ದರು.

ಆದರೆ ಆ ದಿನ ಅವರು ಭೆಟ್ಟಿಯಾದಾಗ ಅತೀವ ತ್ರಸ್ತರಾಗಿ ಕಂಡದ್ದರಿಂದ, ಇನ್ನೇನು ವಿಶೇಷವಾಯಿತೋ ಎಂದು ಯೋಚಿಸುತ್ತಿದ್ದೆ. ಅವರ ತಮ್ಮನ ಬಗ್ಗೆ ನಾನಾಗಿ ಕೇಳಿದಾಗ—

''ಈಗ ವಿಠ್ಠಲನ ಸ್ಥಿತಿ ಏನಾಗಿದೆಯೆಂಬುದನ್ನು ಕೇಳಿಲ್ಲವೆಂದು ತೋರುತ್ತದೆ'' ಎಂದರು.

ಏನೆಂದರೇನು? ಈ ಸಲ ಜೇಲಿಗೇ ಹೋಗಿರಬೇಕು ಎಂದು ಧೇನಿಸಿಕೊಂಡು, ಅವರ ಮುಂದಿನ ಮಾತಿಗೆ ಸಿದ್ಧನಾದೆ.

''ನನ್ನ ೧೫-೨೦ ವರ್ಷದ ದಂಧೆಯಲ್ಲಿ ನಿರಂತರವಾಗಿ ದುಡಿದು, ಯಾರಿಗೂ ಕೆಡಕು ಮಾಡದೇ, ಮರ್ಯಾದೆಯ ಜೀವನವನ್ನು ನಡೆಸಿದೆ. ಇನ್ನು ನನ್ನ ಗಳಿಕೆಯ ಹಣದ ಮೇಲೆ ಮುಪ್ಪಿನ ಕಾಲದ ಜೀವನವನ್ನು ಹಕ್ಕಿನಿಂದ ಸುಖವಾಗಿ ಕಳೆಯಬೇಕು ಎಂದು ನನಗನಿಸಿದರೆ ತಪ್ಪೇನು?''

''ಇಲ್ಲ, ಖಂಡಿತವಾಗಿ ಇಲ್ಲ.''

''ಆದೇ ಆ ನೀಚನು ನಿರುದ್ಯೋಗಿಯಾಗಿ, ಮಾನಗೇಡಿಯಾಗಿ ಸುಖ ಲೋಲುಪ್ತನಾಗಿ ಕಳೆದದ್ದಕ್ಕಾಗಿ ತನ್ನ ಮುಪ್ಪಿನ ಕಾಲದಲ್ಲಿ ನಿರ್ಗತಿಕನಾಗಬೇಕಾಗು ವುದರಲ್ಲಿ ಜಗತ್ತಿನ ನ್ಯಾಯವಿದೆಯೆಂದೂ ನೀವು ಒಪ್ಪುತ್ತೀರಿ?''

''ಸಂಶಯವೇನಿದೆ?''

''ಊಂ, ಬೆಳಗಾವಿಯ ಪ್ರಸಿದ್ಧ ಸರಾಫೀ ವ್ಯಾಪಾರಸ್ಥರಾದ ನವಲಗುಂದಕರರ ಹೆಸರು ಕೇಳಿಯೇ ಇದ್ದೀರಿ, ಅವರಿಗೆ ಒಬ್ಬಳೇ ಮಗಳಿದ್ದಾಳೆ.''

''ಆ ಹುಡುಗಿ? ಕಾಲು ಎಳೆದು ಹಾಕುತ್ತಿತ್ತೆಂದು ಮದುವೆಯಾಗಿದ್ದಿಲ್ಲ.''

''ಈಗ ಆಗಿದೆ. ನಮ್ಮ ವಿಠ್ಠಲನ ಕೂಡ! ಮಾವನಿಗೆ ಅರ್ಧಾಂಗ ವಾಯು. ಹೀಗಾಗಿ ಆತ ಮನೆಯ ಅಳಿಯನಾಗಿ ಒಂದು ಲಕ್ಷ ರೂಪಾಯಿ ಆಸ್ತಿಯ ವಹಿವಾಟನ್ನೂ, ಅಂಗಡಿಯನ್ನೂ ನೋಡಿಕೊಳ್ಳುವವನಾಗಿ, ಜೀವನ ನಡೆಸಿದ್ದಾನೆ.''

ನನಗೆ ಏನು ಹೇಳಬೇಕೆಂದೇ ತೋಚಲಿಲ್ಲ.

''ಶುದ್ಧ ಅನ್ಯಾಯವೇ ಇದು! ಜಗತ್ತಿನಲ್ಲಿ ನ್ಯಾಯವೆಂಬುದೇ ಇಲ್ಲ'' ಎಂದು ತಮ್ಮ ಸಿಟ್ಟಿನಲ್ಲಿ, ಡಾಕ್ಟರರು ಮೇಜನ್ನು ಗುದ್ದಿದರು.

ನನಗೋ, ಹುಚ್ಚು ನಗೆಯ ಅಲೆಯೊಂದು ಚಿಮ್ಮಿ ಬಂದಿತು. ಜೋರಾಗಿ ನಗತೊಡಗಿದೆ. ಡಾಕ್ಟರರ ಸಿಟ್ಟಿನ ಮುಖ ಕಾಣಿಸಿತು. ಅದನ್ನು ಕಂಡೂ ನನ್ನ ನಗೆ ನಿಲ್ಲಲಿಲ್ಲ. ಇನ್ನು ತರವಲ್ಲೆಂದು ಅಲ್ಲಿಂದ ಎದ್ದು ರಸ್ತೆಗೆ ಬಂದು ನಿಂತೆ.

ಇದಾದ ಮೇಲೆ, ಬೆಳಗಾಂವಿಗೆ ಮೊನ್ನೆ ಹೋಗಿದ್ದೆ. ವಿಠ್ಠಲರಾಯನನ್ನು ಭೆಟ್ಟಿಯಾಗಿದ್ದೆ. ಅವನ ಮುಂದಿದ್ದ ಐಶ್ವರ್ಯದ ಜೀವನ ನನ್ನನ್ನು ವಿಸ್ಮಿತಗೊಳಿಸಿತು. ಮನೆಗೆ ಊಟಕ್ಕೂ ಕರೆದಿದ್ದ. ಸಂಜೆ ಅವನ ಅಂಗಡಿಗೆ ಬಂದಾಗ ಸಿಗರೇಟ್ ಪ್ಯಾಕ್ ಇದೆಯೇ? ಎಂದ. ನನ್ನ ಕಡೆ ಇರಲಿಲ್ಲ. ಒಂದು ಪ್ಯಾಕನ್ನು ತರಿಸಿದಾಗ, 'ಚಿಲ್ಲರೆ ಇದ್ದರೆ ಕೊಡಿರಿ' ಎಂದ. 'ನಿನ್ನ ಅಂಗಡಿಗೆ ಬಂದು, ನಾನು ಯಾಕೆ ಕೊಡಬೇಕು?' ಎಂದು ಗದರಿಸಿದೆ ಸಲಿಗೆಯಿಂದ.

''ಇರಲಿ ಕೊಡಿರಿ. ಕೈಯೆತ್ತಿ ನಾನಾಗಿ ಖರ್ಚು ಮಾಡುವ ಪ್ರವೃತ್ತಿ ಇನ್ನೂ ಬಂದಿಲ್ಲ. ಹಳೆಯ ಚಟ ಒಮ್ಮೆಲೇ ಹೇಗೆ ಹೋಗಬೇಕು?'' ಎಂದು ಉತ್ತರಿಸಿದ.

ಆಧಾರ : ಸೋಮರೆಸೆಟ್‌ಮಾಮ್

ಜೊತೆಗಾರ್ತಿ

ಅಂದು ಸಂಜೆ ನಾನು ಮುಂಬಯಿಯ ವಿ.ಟಿ. ಸ್ಟೇಷನ್ನಿನಲ್ಲಿ ಡೆಕ್ಕನ್‌ಕ್ವೀನ್ ಗಾಡಿಯಲ್ಲಿ ಕುಳಿತಿದ್ದೆ. ನನ್ನ ಪತ್ನಿ ತನ್ನ ಕೈಗಡಿಯಾರವನ್ನು ನೋಡಿಕೊಳ್ಳುತ್ತ, ''ಹಾಗಿದ್ದರೆ ಬುಧವಾರ ಬೆಳಿಗ್ಗೆ ನಾನು ಸ್ಟೇಷನ್ನಿಗೆ ಬಂದಿರುತ್ತೇನೆ'' ಎಂದಳು.

ಗಾಡಿ ಹೊರಟಿತು. ನನ್ನ ಪತ್ನಿ ನಿಂತಲ್ಲಿಯೇ ಕರವಸ್ತ್ರವನ್ನು ಬೀಸುತ್ತಲಿದ್ದಳು. ಒಂದೂವರೆ ದಿನ ಬಿಟ್ಟಿರುವ ಭಾವನೆಯಿಂದ ಯುಕ್ತವಾದ ಅವಳ ಮುಖವು ಸುಂದರವಾಗಿಯೇ ಕಂಡಿತು. ಆಕೆ ಹಸನ್ಮುಖಿಯಾಗಿದ್ದು, ಅದಕ್ಕೆ ಪ್ರತಿಯಾಗಿ ನಾನೂ ನಗಬೇಕೆಂದು ನಕ್ಕೆ. ಒಳಗೆ ಬಂದು ನನ್ನ ಆಸನದಲ್ಲಿ ಕುಳಿತುಕೊಂಡೆ.

''ಹಾಗಾದರೆ ಬುಧವಾರ ಬೆಳಿಗ್ಗೆ ನಾನು ಇದೇ ಗಾಡಿಯಿಂದ ಪುಣೆಯಿಂದ ಹಿಂತಿರುಗಬೇಕು. ಯಾವ ಹೆಚ್ಚು ಕಡಿಮೆಯೂ ಇಲ್ಲದ ನನ್ನ ದೈನಂದಿನ ಜೀವನದಲ್ಲಿ ಈ ಪುಣೆಯ ಯಾತ್ರೆಯೊಂದು ಬದಲಾವಣೆಯಾಗಿದ್ದಿತು. ಆದರೆ ಇದೇನೂ ಅಪೂರ್ವವಲ್ಲ. ರೇಲ್ವೆಯಲ್ಲಿ ಲೆಕ್ಕ ತಪಾಸಣೆಯ ಕಾರ್ಯಕ್ಕಾಗಿ ತಿಂಗಳೆರಡು ತಿಂಗಳಿಗೊಮ್ಮೆ ಹೀಗೆ ಒಂದೆರಡು ದಿನ ಹೋಗಿ ಬರಬೇಕಾಗುತ್ತಿತ್ತು. ಇದೇ ಸಂಜೆಯ ಗಾಡಿ ಹಿಡಿಯುವುದು ದಿನದ ವಾಸ್ತವ್ಯ. ಅದೇ 'ಹೋಟೆಲ್ ಇಲೈಟ್'ನಲ್ಲಿ ಕಳೆಯುವುದು ಮರುದಿನ ಬೆಳಿಗ್ಗೆ ಮತ್ತೆ ಹೊರಡುವುದು. ಬದಲಾಗದ ಈ ಬದಲಾವಣೆಯಲ್ಲಿ ಹೆಚ್ಚು ಕಡಿಮೆಯೆಂದರೆ, ಒಮ್ಮೊಮ್ಮೆ ನನ್ನ ಜೊತೆಗೆ ನನ್ನ ಹೆಂಡತಿ ಬಂದಿರುತ್ತಿದ್ದಳು.

ಈ ವಿಚಾರಗಳನ್ನು ಬದಿಗಿರಿಸಿ, ಕೈಯಲ್ಲಿ ಹಿಡಿದಿದ್ದ 'ಇಲಸ್ಟ್ರೇಟೆಡ್ ವೀಕ್ಲಿ'ಯ ಪುಟಗಳನ್ನು ತಿರುವಿ ಹಾಕತೊಡಗಿದೆ. ಬುಧವಾರ ಬೆಳಿಗ್ಗೆ ಬಂದರೆ ಸುಖಾವಹವಾದ ನನ್ನ ಮನೆಯ ವಾತಾವರಣವಿದೆಯೆಂಬ ಮಂದಗಾಳಿ ಮನದ ತುಂಬ ಆವರಿಸಿದ್ದಾಗ ಗವಿಗಳಲ್ಲಿ ಗಾಡಿಯು ಹಾಯ್ದು ಹೋಗುತ್ತಿದ್ದ ಮಬ್ಬುಗತ್ತಲೆಯಲ್ಲಿ ನನಗೆ ಸಣ್ಣ ಜಂಪು ಹತ್ತಿತ್ತು. ಕುಳಿತಲ್ಲಿಯೆ ತುಸು ನಿದ್ರೆಯನ್ನೂ ಮುಗಿಸಿದೆ.

ಪುಣೆ ಸ್ಟೇಷನ್ ಬಂತು. ಹಮಾಲನು ಬಂದು ನನ್ನ ಸಾಮಾನನ್ನು ಒಂದು ಸೂಟ್‌ಕೇಸ್ ಕೈಗೆತ್ತಿಕೊಂಡನು. ಅವನಿಗೂ ನಾನು ಹೊಸಬನಲ್ಲ. ಹಿಂದೆ ಒಂದಿಲ್ಲೊಂದು ಬಾರಿ ಹೀಗೆ ನನ್ನ ಸೂಟ್‌ಕೇಸನ್ನು ಎತ್ತಿ ರಿಕ್ಷಾದಲ್ಲಿ ತಂದು ಇಟ್ಟಿದ್ದ. ನಾನು ನಿಶ್ಚಿಂತೆಯಿಂದ ಹೊರಗೆ ಬಂದೆ. ಒಂದೈದು ನಿಮಿಷ ಅವನಿಗಾಗಿ

ಕಾಯಬೇಕಾಯಿತು. ಇತರ ಸಾಮಾನುಗಳಿಂದ ತುಂಬಿದ ತನ್ನ ಕೈಗಾಡಿಯನ್ನು ದೂಡಿಕೊಂಡು ಬಂದವನೇ ಒಬ್ಬ ರಿಕ್ಷಾವನನ್ನು ತಾನಾಗಿ ಕರೆದು, ನನ್ನ ಸೂಟ್‌ಕೇಸನ್ನು ಅದರಲ್ಲಿ ಇಟ್ಟನು.

ಅದೇ ಇಲೈಟ್ ಹೋಟೆಲ್. ಅಲ್ಲಿಗೆ ನಾನು ಯಾವಾಗೇ ಹೋಗಲಿ ಡಬಲ್ ರೂಮ್ ಹಿಡಿಯುತ್ತಿದ್ದೆ. ಅದರಿಂದ ನನ್ನ ಹೆಂಡತಿ ಬಂದಿದ್ದಾಗ ತೊಂದರೆ ಯಾಗುತ್ತಿರಲಿಲ್ಲ. ಹೋಟೆಲ್ಲಿನ ಒಳಗೆ ಹೋದ ಕೂಡಲೇ ಮ್ಯಾನೇಜರನು ನಗುಮೊಗದಿಂದ ಸ್ವಾಗತಿಸಿದನು. ಕೆಲಸದಾಳು ನನ್ನ ಸೂಟ್‌ಕೇಸನ್ನು ಕೈಗೆತ್ತಿ ಕೊಂಡನು. ಮಹಡಿಯ ಮೇಲಿನ ನನ್ನ ದೊಡ್ಡ ಕೋಣೆ ನನಗಾಗಿ ಕಾದಿತ್ತು.

ಗಂಟೆ ಆಗಲೇ ೮-೩೦ ಆಗಿದ್ದಿತು. ಕೋಟನ್ನು ಬಿಚ್ಚಿ ನನ್ನ ಸೂಟ್‌ಕೇಸನ್ನು ತೆರೆದೆ. ಅನರ್ಥ! ಅದು ನನ್ನದಾಗಿರಲಿಲ್ಲ. ಅನ್ಯರದಿತ್ತು. ನನ್ನ ಸೂಟ್‌ಕೇಸಿನಲ್ಲಿ ಮೇಲ್ಗಡೆ ನನ್ನ ನೈಟ್ ಪಾಯಿಜಮಾ ಇಟ್ಟಿದ್ದೆ. ಆದರೆ ಬದಲಾಗಿ ಒಂದು ಮಡಿಚಿಟ್ಟ ಜಾರ್ಜೆಟ್ ಸೀರೆ ಅದರಲ್ಲಿ ಕಾಣಿಸಿತು.

ಕೂಡಲೇ ಅದನ್ನು ಮುಚ್ಚಿ ಸೂಟ್‌ಕೇಸಿನ ಹೊರಮೈಯ ಬಣ್ಣವನ್ನು ನೋಡಿದೆ. ಕಂದುಬಣ್ಣದ ತೊಗಲಿನ ಚೀಲ. ನನ್ನದರ ಬಣ್ಣವೂ ಅದೇ ಆಗಿದ್ದಿತು. ಆಕಾರವೂ ಒಂದೇ! ಈ ಅದಲುಬದಲಿಗೆ ಸ್ಟೇಷನ್ನಿನ ಪೋರ್ಟರನನ್ನು ಬೈಯುವುದರ ಅಗತ್ಯವುಳಿಯಲಿಲ್ಲ.

ಮುಂದೇನು? ವಿಶೇಷವೇನೂ ಅನರ್ಥವಾಗಿರಲಿಲ್ಲ. ನನ್ನದರ ಮೇಲಂತೂ ನನ್ನ ಹೆಸರಿದ್ದಿತು. ಅದನ್ನು ಒಯ್ದಿದ್ದ ಮಹಿಳೆ ನಾಳೆಗೆ ಸ್ಟೇಷನ್ನಿನಲ್ಲಿ ಒಯ್ದು ಕೊಡುವಳು. ನಾನೂ ಇದನ್ನು ಪರತು ಮುಟ್ಟಿಸಬೇಕಾಗುವುದು. ಇಷ್ಟೇ.

ಆದರೆ ಇದಾರ ಚೀಲವಿರಬಹುದು? ನಾನು ಮತ್ತೆ ಅದರ ಬಾಯಿ ತೆರೆದೆ. ದಟ್ಟವಾದ ನೀಲಿ ಬಣ್ಣದ ಆ ಜಾರ್ಜೆಟ್ ಸೀರೆಯನ್ನು ಕೈಗೆತ್ತಿಕೊಂಡೆ. ಅದರ ಮಡಿಕೆಯು ನನ್ನ ಕೈಯಿಂದ ಇಳಿದು ಬೀಳುತ್ತಿರುವುದನ್ನು ಕಂಡು, ಅದನ್ನು ಹಾಗೆಯೇ ಹಾಸಿಗೆಯ ಮೇಲಿರಿಸಿದೆ.

ಆ ಬ್ಯಾಗಿನಲ್ಲಿ ಏನೇನು ಇದೆಯೊ ನೋಡುವ ಆಸೆಯಾಯಿತು. ಛೇ, ಇದು ಸಭ್ಯತನದ ಲಕ್ಷಣವಲ್ಲ ಎಂದು ಮರುದನಿ ಒಳಗೆ ನುಡಿಯಿತು. ಊಂಹು, ಅವಳ ಹೆಸರು ದೆಸೆಗಳು ತಿಳಿಯುವಂತಿದ್ದರೆ, ಇದನ್ನೇಕೆ ಪೂರ್ಣ ತೆಗೆದು ನೋಡಬಾರದು? ಆ ಹೆಣ್ಣು ಮಗಳೇ ಸ್ಟೇಷನ್ನಿಗೆ ಬಂದು ತನ್ನ ಚೀಲಕ್ಕಾಗಿ ಕಾಯುವುದಕ್ಕಿಂತ ಅವಳಿಗೇ ಇದನ್ನು ಕಳಿಸಲು ಬರುವಂತಿದ್ದರೆ ಹೆಚ್ಚು ಉತ್ತಮವಲ್ಲವೆ? ಏನಿದ್ದರೂ ಚೀಲದಲ್ಲಿ ಏನೇನು ಇವೆಯೆಂದು ನೋಡಬೇಕೆನ್ನುವ ಅಸಂಸ್ಕೃತ ಆತುರ ಹೆಚ್ಚೆಚ್ಚಾಗಿ ಪುಟಿಯುತ್ತಿರುವಾಗ ನನ್ನ ಲಕ್ಷ್ಯಕ್ಕೆ ಬಂತು—ಕೋಣೆಯ ಬಾಗಿಲಿಗೆ ಕೊಂಡಿಯನ್ನು ಹಾಕಿಲ್ಲವೆಂದು.

ಮೇಲೆದ್ದು ಬಾಗಿಲನ್ನು ಭದ್ರಪಡಿಸಿ ಬಂದು ಆ ಸೂಟ್‌ಕೇಸ್‌ದಲ್ಲಿಯ ಸಾಮಾನುಗಳನ್ನು ಒಂದೊಂದಾಗಿ ಹೊರತೆಗೆದೆ. ಮೊದಲಿಗೆ ಕಾಣಿಸಿದ್ದು ಒಂದು ತಗಡಿನ ಸುಂದರವಾದ ಪೆಟ್ಟಿಗೆ. ಅದನ್ನು ನೋಡಿ, ನನ್ನ ದಾಡಿಯ ತಗಡಿನ ಪೆಟ್ಟಿಗೆ ನೆನಪಾಯಿತು. ಅವಳೂ ನನ್ನದನ್ನು ತೆರೆದಾಗ, ಅದರಲ್ಲಿಯ ಅರ್ಧ ಸವೆದ ಬ್ರಶ್ಶು, ಸಾಬೂನಿನ ಕಲೆಬಿದ್ದ ಡಬ್ಬಿಯ ತಳ, ಇವನ್ನೆಲ್ಲ ನೋಡಿ ನನ್ನ ಬಗ್ಗೆ, ನಾನು ಅಷ್ಟು ಅಚ್ಚುಕಟ್ಟಿನ ಸೊಗಸುಗಾರನಲ್ಲವೆಂದು ಭಾವನೆ ತಳೆಯಬಹುದು. ಹೌದು, ಖಂಡಿತ ಹಾಗೇ ಭಾವಿಸುವಳು. ಊರಿಗೆ ಹೋದ ಕೂಡಲೇ ಮೊದಲು ಹೊಸ ಬ್ರಶ್ ಒಂದನ್ನು ಕೊಳ್ಳಬೇಕು. ಇಷ್ಟು ದಿನ ಬಿಟ್ಟಿದ್ದೇ ತಪ್ಪಾಯಿತು.

ಅವಳ ಡಬ್ಬಿಯಲ್ಲಿ ಮುತ್ತಿನ ಬೆಂಡೋಲೆಯ ಒಂದು ಜೊತೆಯೂ ಗಾಜಿನ ಬಳೆಗಳೂ ಇದ್ದುವಲ್ಲದೆ, ಚಿಕ್ಕದಾದ ಕುಟಿಕುರಾ ಪೌಡರ್ ಡಬ್ಬಿ, ಉತ್ತಮ ದರ್ಜೆಯ ಹಣಿಗೆ, ಉಗುರಿನ ಲೇಪ, ಇವೆಲ್ಲ ಕಂಡವು. ಬಟ್ಟೆ ಬರೆಗಳನ್ನು ಬಿಟ್ಟರೆ, 'ಸ್ತ್ರೀ' ಮಾಸಿಕವೂ ಒಂದು ಕಾದಂಬರಿಯೂ ಇದ್ದಿತು. ಬಟ್ಟೆಗಳಲ್ಲಿ ಒಂದು ಸೊಗಸಾದ ಕಾಶ್ಮೀರಿ ಶಾಲು ಕಾಣಿಸಿತು. ನನ್ನ ಲಗ್ನದ ಮರು ತಿಂಗಳಲ್ಲಿ ನನ್ನ ಹೆಂಡತಿ ಹಾಗೂ ನಾನು ಆಗ್ರಾ, ದಿಲ್ಲಿಗಳನ್ನು ಸಂದರ್ಶಿಸಲು ಹೋದಾಗ, ದಿಲ್ಲಿಯಲ್ಲಿ ನಾನು ಅಂಥದೇ ಶಾಲನ್ನು ಕೊಂಡಿದ್ದ ನೆನಪು. ಸಾಮಾನನನ್ನು ತಂದಿರದೇ, ಆ ಸೂಟ್‌ಕೇಸ್ ಒಂದರ ಮೇಲೆಯೇ ಪುಣೆಗೆ ಬಂದಿರಬೇಕೆಂದೂ ಕಂಡಿತು. ಬಾಗಿಲಿನ ಕೊಂಡಿಯನ್ನು ಹಾಕಿದ್ದುದು ಖಾತ್ರಿ ಎಂಬುದನ್ನು ಮನಗಂಡು ಆ ಚೀಲದಲ್ಲಿಯ ಅವಳ ಇತರ ಬಟ್ಟೆ ಬರೆಗಳನ್ನೂ ಒಂದೊಂದಾಗಿ ಹೊರತೆಗೆದೆ. ಅವುಗಳ ಮೇಲಿಂದ ಆಕೆ ಸಿರಿವಂತರ ಮಗಳೆಂದೂ ಹೊಸದಾಗಿ ಮದುವೆಯಾದ ಮಹಿಳೆಯಾಗಿರಬಹುದಲ್ಲದೆ ಕುಮಾರಿ ಯೇನಲ್ಲವೆಂದೂ ಥೇನಿಸಿದೆ. ಅವಳ ಆಕೃತಿಯು ಸ್ಥೂಲವೆಂದರೂ ಅತಿ ತೆಳ್ಳಗಿರುವ ನನ್ನ ಹೆಂಡತಿಗಿಂತ ತುಸುವಾದರೂ ಮೈಕೈ ತುಂಬಿಕೊಂಡಿರುವಳೆಂದೂ ಅವಳ ಮೈಮಾಟವನ್ನು ನನ್ನ ಮನದಲ್ಲಿ ಮೂರ್ತೀಕರಿಸಿಕೊಂಡೆ. ಸೀರೆಯನ್ನುಳಿದು ಧರಿಸುವ ಇತರ ಬಟ್ಟೆಗಳಲ್ಲಿ ಕೆಲವು ಬಳಸಿದ್ದುವೆಂದು ಕಂಡರೂ ಸ್ವಲ್ಪವೂ ಹೊಲಸಾಗಿರಲಿಲ್ಲ. ಆಗ ನನ್ನ ಸ್ಲೀಪಿಂಗ್ ಪಾಯಿಜಮಾ ನೆನಪಾಯಿತು. ಒಗೆದು ಇಟ್ಟಿದ್ದರೂ ಅದರ ಮಾಸಲು ಬಣ್ಣವನ್ನು ನೋಡಿ ಆಕೆ ನಾನೊಬ್ಬ ಬಡ ಮಧ್ಯಮ ವರ್ಗದ ಕಾರಕೂನನೆಂದು ಖಂಡಿತ ತಿಳಿಯುವಂತಾಯಿತಲ್ಲ ಎಂದು ಕಳವಳಿಸಿದೆ. ನಾಲ್ಕೇ ಜನರಿರುವ ಸಂಸಾರಕ್ಕೆ ನಾಲ್ಕಂಕಿಯ ಸಂಬಳ ಬರುವಾಗ ನನಗೇನು ಹಣದ ಕೊರತೆಯೆ? ಸಂಸಾರದಲ್ಲಿ ಸಹಜ ಬೇಸರ ಬಂದುದರ ಲಕ್ಷಣವಿದು. ಊಹುಂ ಹಾಗೆ ಮಾಡಬಾರದು. ಜೀವನದಿಂದ ಶಕ್ಯವಿದ್ದಷ್ಟು ಸುಖ, ಸೊಗಸುಗಳನ್ನು ಹೀರಿಕೊಳ್ಳುವ ತೃಪ್ತಿ ನಮಗೆ ಬರಬೇಕು...

''ಟ್ರಣ್, ಟ್ರಣ್'' ಬಾಗಿಲು ಗಂಟೆಯು ಸದ್ದಾಯಿತು. ಗಡಬಡಿಸಿ, ''ಯಾರವನು?'' ಎಂದು ನಾನು ಕೇಳುವಾಗಲೇ, ''ಸಾಹೇಬ, ಜೇವಣ?'' ಎಂಬ ವೇಟರನ ಧ್ವನಿ ಕೇಳಿ ಬಂತು. ''ಆಲೋ'' ಎಂದವನೇ ಹೊರಟೆ. ಸ್ಲೀಪಿಂಗ್

ಪಾಯಿಜಮಾ ಇರಲಿಲ್ಲ. ಅದೇ ಪ್ಯಾಂಟಿನ ಮೇಲೆ ಊಟದ ಮನೆಗೆ ಹೋದೆ. ಊಟಕ್ಕೆ ಕುಳಿತಾಗ ನನಗೆ ಅದೇ ಚಿಂತೆ. ನನ್ನೆಲ್ಲ ಸಾಮಾನುಗಳನ್ನು ನೋಡಿ, ನಾನೊಬ್ಬ ಅಚ್ಚುಕಟ್ಟುತನವಿಲ್ಲದ, ಸೊಗಸುಗಾರನಲ್ಲದ ಸಾದಾ 'ಮುದುಕ' ಎಂದೇ ಆಕೆ ಭಾವಿಸುವಂತಾಯಿತಲ್ಲ, ಎಂಬ ಕಳವಳವೇ ತುಂಬಿದ್ದಿತು.

ಊಟ ಮುಗಿಸಿ ಮೇಲೆ ಬಂದೆ. ಆದೆಲ್ಲ ಸರಿ. ಅವಳೇ ಒಬ್ಬ ಮಧ್ಯ ವಯಸ್ಸಿನ ಹೆಣ್ಣು ಮಗಳೇಕೆ ಇರಬಾರದು? ಬರಿಯ ಬಟ್ಟೆಗಳ ಮೇಲಿಂದ ಇನ್ನೊಬ್ಬರ ಆಕಾರ, ವಯಸ್ಸು, ಜೀವನದ ರೀತಿಗಳನ್ನು ಹೇಳಲು ಸಾಧ್ಯವೆ?

ಅವಳ ಸೂಟ್‌ಕೇಸಿನ ಬಾಯಿ ತೆರೆದೇ ಇದ್ದಿತು. ಅವಳ ಎಲ್ಲ ವಸ್ತುಗಳನ್ನೂ ಹಾಸಿಗೆಯ ಮೇಲೆ ಇಟ್ಟಿದ್ದೆ. ಅರ್ಧ ಗಂಟೆಯ ಅವಧಿಯಲ್ಲಿ ಅದರೊಳಗಿಂದ ಸುವಾಸಿತ ಪರಿಮಳು ಹೊರಹೊಮ್ಮಿ ಶೀತಲ ಗಾಳಿಯಿಂದಾಗಿ, ಕೋಣೆಯನ್ನೆಲ್ಲ ವ್ಯಾಪಿಸಿದ್ದಿತು. ಒಂದು ಕ್ಷಣದಲ್ಲಿ ಅವಳೇ ಆ ಕೋಣೆಯಲ್ಲಿ ಸಜೀವವಾಗಿ, ಸಾಕಾರ ಮೂರ್ತಿಯಾಗಿ ಇದ್ದಂತೆ ಭಾಸವಾಯಿತು. ಆ ಪರಿಮಳದಂತೆ ಅವಳೂ ಹರಿದಾಡುತ್ತಿದ್ದಳು.

ಎಂದೂ ಕಂಡಿರದ ಹೆಣ್ಣಿನ ಕಲ್ಪನೆಯಲ್ಲಿ, ಸ್ವಂತದ ನಿಸ್ಸಾರ ಜೀವನದ ಬಗೆಗೆ ಆತ್ಮನಿರ್ಭರ್ತ್ಸನೆಯಿಂದ ಕೂಡಿದವನಾಗಿ ನಾನು ಬಲು ಹೊತ್ತು ಎಚ್ಚೆತ್ತು ಇದ್ದೆ. ಮಲಗಿದ್ದು ನಸುಕಿನಲ್ಲಿ—ಮೂರರ ಸುಮಾರಿಗೆ.

ಬೆಳಗಿನಲ್ಲಿ ಎದ್ದಾಗ ಮೈ ಜಡವಾಗಿದ್ದಿತು. ಕಣ್ಣು ಉರಿಯುತ್ತಿದ್ದವು. ಬ್ರೇಕ್ ಫಾಸ್ಟ್ ಎಂದು ಕಾಯದೆ, ಮಗ್ಗುಲಿನ ಸೆಲೂನಿನಲ್ಲಿ ದಾಡಿಯನ್ನು ಮುಗಿಸಿದೆನು. ಸ್ನಾನ ಮಾಡಬೇಕೆಂದರೆ ಸಾಬೂನು, ಟವಲ್ ಇರಲಿಲ್ಲ. ಹಲ್ಲುಜ್ಜುವ ಸಾಧನಗಳನ್ನೂ ಕೊಳ್ಳಬೇಕಾಯಿತು. ಇವೆಲ್ಲ ಸಾಮಾನುಗಳು ಅವಳ ಸೂಟ್‌ಕೇಸಿನಲ್ಲಿಯೂ ಇದ್ದವು. ಆದರೆ ಅವಳಿಗೇನು ತನ್ನಂತೆ ಅವನ್ನು ಕೊಳ್ಳುವ ಪ್ರಸಂಗ ಬಂದಿರಲಾರದು. ಯಾರ ಮನೆಯಲ್ಲಿ (ತನ್ನದೇ ಇದ್ದರೂ ಇರಬಹುದು) ಆಕೆ ಉಳಿದುಕೊಂಡಿದ್ದಳೊ, ಅಲ್ಲಿ ಎಲ್ಲವೂ ಅವಳಿಗೆ ದೊರೆತಿರಬಹುದು. ಅಥವಾ ಅನ್ಯರ ಮನೆಯಾಗಿದ್ದರೆ, ಆಕೆ ತನ್ನ ಸೂಟ್‌ಕೇಸ್ ಅದಲುಬದಲು ಆದುದನ್ನು ಹೇಳಿರಬಹುದೇ? ಸಂಕೋಚದಿಂದ ಬಿಟ್ಟಿರಲೂಬಹುದು. ಹಾಗಿದ್ದರೆ ಇಂದು ಆಕೆ ಖಂಡಿತ ರೇಲ್ವೆ ಆಫೀಸಿಗೆ ಬರುವಳು. ಅವಳು ಎಂತಹವಳೆಂಬುದನ್ನು ನಾನು ಕಣ್ಣಾರೆ ನೋಡಬಹುದು. ಈ ಉಲ್ಲಾಸ ದಲ್ಲಿಯೇ ಪ್ರಾತರ್ವಿಧಿಗಳನ್ನು ಮುಗಿಸಿದೆ.

ನಾನು ಸ್ನಾನ ಮುಗಿಸಿಕೊಂಡು ಮೇಲೆ ಬಂದಾಗ, ನನ್ನ ಕೋಣೆಯ ಸ್ವರೂಪವೇ ಬದಲಾಗಿದ್ದಿತು! ಹೋಟೆಲ್ಲಿನ ಸೇವಕನು, ಕಸಗುಡಿಸಿ ಎರಡು ಹಾಸಿಗೆಗಳನ್ನು ಸಿದ್ಧಪಡಿಸಿದನು. ಇನ್ನೊಂದು ಹಾಸಿಗೆಯ ಮೇಲೆ ನಾನು ಹರಡಿದ್ದ ಸಾಮಾನುಗಳನ್ನು ವ್ಯವಸ್ಥಿತವಾಗಿ ಹೊಂದಿಸಿ ಇಟ್ಟಿದ್ದನು. ಅವಳ ಎರಡು ಸೀರೆಗಳಲ್ಲಿ ಜಾರ್ಜೆಟ್ಟಿನದು ಹ್ಯಾಂಗಿರಿನಲ್ಲಿ ನೇತಾಡುತ್ತಿತ್ತು. ಇನ್ನೊಂದು ಮಂಚದ ಮೇಲ್ಪಟ್ಟಿಗೆ

ಇದ್ದಿತು. ಅವಳ ಶೃಂಗಾರದ ಸಾಧನಗಳೆಲ್ಲವೂ ಮೇಜಿನ ಮೇಲೆ ಕನ್ನಡಿಗೆ ಒರಗಿ ನಿಂತಿದ್ದುವು. ಮನೆಯೆಲ್ಲ ಉಪಯೋಗಿಸುವ ಅವಳ ರಬ್ಬರಿನ ಚಿಕ್ಕ ಸ್ಲಿಪರ್ಸ್ ಮಂಚದ ಕೆಳಗೆ ಅವಳ ಬರವನ್ನು ಕಾಯುತ್ತಿದ್ದವು. ಯಾರು ಅವನಿಗೆ ಇದನ್ನೆಲ್ಲ ಮಾಡ ಹೇಳಿದ್ದರು? ಓಹೋ, ಬಹುಶಃ ನನ್ನ ಹೆಂಡತಿಯೂ ನನ್ನ ಸಂಗಡ ಬಂದಿರ ಬೇಕೆಂದೂ, ನಾವಿಬ್ಬರೂ ತಿರುಗಾಡಲು ಹೋಗಿರಬೇಕೆಂದೂ ತಿಳಿದು ಆಷ್ಟರಲ್ಲಿ ತನ್ನ ಕೆಲಸವನ್ನು ಪೂರೈಸಿದ್ದ.

ಅದೆಲ್ಲ ಸರಿ. ಆ ಹೆಣ್ಣುಮಗಳು ತನ್ನ ಸೂಟ್‌ಕೇಸನ್ನು ಕೇಳಲು ಬಂದರೆ, ಅವಳ ಸಲಕರಣೆಗಳನ್ನೆಲ್ಲ ಈ ರೀತಿ ಹರಡಿ ಇಟ್ಟಿದ್ದನ್ನು ಕಂಡರೆ ಆಕೆ ಏನೆಂದು ತಿಳಿಯಬಹುದು? ನಾನು ಅಸಭ್ಯನೂ ಅಹುದು ಎಂಬ ಭಾವನೆ ಬಂದುಗಿಂದೀತು! ಇವನ್ನೆಲ್ಲ ಎತ್ತಿ ಇಡಲೇ ಎಂಬ ವಿಚಾರ ಬಂತು.

ಆ ಸೂಟ್‌ಕೇಸ್, ಆ ಸೀರೆಗಳು, ಕುಪ್ಪಸ ಮೊದಲಾದ ಅರಿವೆಗಳು, ಸ್ಲಿಪರ್ಸ್, ಚಂಡೋಲೆಗಳು ಓರ್ವ ಮೋಹಕ ಸ್ತ್ರೀಯ ಅಸ್ತಿತ್ವವನ್ನು ಅದೂ ಆ ನನ್ನ ಕೋಣೆ ಯಲ್ಲಿ ಸೂಚಿಸುತ್ತಿದ್ದವು. ಆಕೆ ಬಂದರೆ ಬರಲಿ ಎಂದು ಹಾಗೇ ಬಿಟ್ಟೆ, ನನ್ನ ಹಾಸಿಗೆಯ ಮೇಲೆ ಒರಗಿಕೊಂಡೆ. ೯-೩೦ ಗಂಟೆಗೆ ನಾನು ನನ್ನ ಆಫೀಸ್ ಕೆಲಸಕ್ಕೆಂದು ಹೊರಡಬೇಕು. ಆದರೂ ನನಗೆ ಏಳುವ ಮನಸ್ಸಾಗಲಿಲ್ಲ, ನಿರ್ವಾಹ ವಿಲ್ಲದೇ ಹೋದೆ.

ಎರಡೂವರೆ ಗಂಟೆಯವರೆಗೂ ನಾನು ಅಲ್ಲಿಯೇ ಇದ್ದೆ. ಯಾರಾದರೂ ನನ್ನನ್ನು ಕೇಳುತ್ತ ಬಂದಿದ್ದರೇ—ಎಂದು ವಿಚಾರಿಸಿದೆ. ಯಾರೂ ಬಂದಿದ್ದಿಲ್ಲ. ಊಟ ಅಲ್ಲಿಯೇ ಮುಗಿದ್ದಿದ್ದಿತು. ಸಂಜೆಯವರೆಗೂ ಇಲ್ಲಿಯೇ ಅವಳ ದಾರಿಯನ್ನು ಕಾಯುವ; ಟ್ಯಾಕ್ಸಿಯಲ್ಲಿ ಅವಳನ್ನು ಕರೆದೊಯ್ಯುವ.

ಆದರೆ ಅವಳ ಬದಲಿಗೆ, ನನ್ನದಾದ ಸೂಟ್‌ಕೇಸನ್ನು ಹಿಡಿದುಕೊಂಡು, ಅವಳ ಸಂಬಂಧಿಕರಾದ ಗಂಡಸರಾರಾದರೂ ಬಂದರೆ? ಛೇ, ಛೇ, ಕೂಡಲೇ ಕೋಣೆಗೆ ಹೋಗಿ, ಅವೆಲ್ಲ ವಸ್ತುಗಳನ್ನು ಅವಳ ಚೀಲದಲ್ಲಿ ಹಾಕಿ ಇಡಬೇಕು... ಇಷ್ಟಕ್ಕೂ ಅವಳು ಇಲ್ಲಿ, ರೇಲ್ವೆ ಆಫೀಸಿನಲ್ಲಿ ನನ್ನನ್ನು ಕೇಳಿಕೊಂಡು, ಅಲ್ಲಿಂದ ನೇರವಾಗಿ ಆ ಕೋಣೆಗೇ ಬಂದರೆ ಅದೆಷ್ಟು ಸೊಗಸಾಗಬಹುದು?

ನಾನು ಮೂರು ಗಂಟೆಗೆ ಆಫೀಸಿನ ಕೆಲಸ ತೀರಿಸಿಕೊಂಡು ಹೋಟೆಲ್ಲಿನ ನನ್ನ ಕೋಣೆಗೆ ಮರಳಿದೆ. ನನ್ನ ಗುರುತಿನ ಸ್ನೇಹಿತರು ಪುಣೆಯಲ್ಲಿ ಇದ್ದರು. ಅವರಲ್ಲಿ ಇಬ್ಬರು-ಮೂವರನ್ನು ಫೋನಿನ ಮೇಲೆ ಕರೆಯಿಸಿಕೊಂಡೋ ಅವರ ಮನೆಗೆ ಹೋಗಿಯೋ ಸಂಜೆಯ ವೇಳೆಯನ್ನು ಕಳೆಯುತ್ತಿದ್ದೆ. ಆ ಸಂಜೆ ನಾನೆಲ್ಲಿಯೂ ಹೋಗಲಿಲ್ಲ.

ನನಗೆ ನನ್ನ ಮೇಲೆಯೆ ಸಿಟ್ಟು ಬಂದಿದ್ದಿತು. ನನ್ನ ಇರುವಿಕೆಯ ಬಗ್ಗೆ ಜುಗುಪ್ಸೆ ಯುಂಟಾಗಿದ್ದಿತು. ಯಾರಿಗಾಗಿ ದಾರಿ ಕಾಯುತ್ತಿದ್ದೇನೊ ಆ ಹೆಣ್ಣು ಮಗಳ ಮೇಲೆ

ನನ್ನ ಹೆಂಡತಿಯ ಮೇಲೆ, ಇಡೀ ಸ್ತ್ರೀ ಸಮಾಜದ ಮೇಲೆ ತಿರಸ್ಕಾರವುಂಟಾಗಿದ್ದಿತು. ನನ್ನ ದೈನಂದಿನ ಜೀವನದಿಂದ ತಪ್ಪಿಸಿಕೊಂಡು ಹೋಗಬೇಕು; ಕೆಲ ತಿಂಗಳುಗಳನ್ನಾದರೂ ಯಾವ ಸಾಮಾಜಿಕ, ಕೌಟುಂಬಿಕ ನಿರ್ಬಂಧವಿಲ್ಲದೇ, ಸ್ವಚ್ಛಂದವಿಲ್ಲದೇ ಸ್ವಚ್ಛಂದವಾಗಿ ಕಳೆಯಬೇಕು ಎಂದು ಮನಸ್ಸು ಒಂದೇ ಸಮನೆ ಹೇಳುತ್ತಿತ್ತು.

ಮರುದಿನ ಬೆಳಿಗ್ಗೆ ನಾನು ಹೊರಡಬೇಕು. ಹೊರಡಬಾರದೆಂದು ನಾನು ಹಿಂದಿನ ರಾತ್ರಿಯೇ ನಿರ್ಧರಿಸಿದ್ದೆ. ನನ್ನ ಹೆಂಡತಿ ಸ್ಟೇಷನ್ನಿನವರೆಗೆ ಬಂದು, ನಿರಾಶಳಾಗಿ ಹೋಗಲಿ. ಮಕ್ಕಳಿಗೂ ಅಚ್ಚರಿಯಾಗಲಿ. ಒಂದು ವಾರದವರೆಗೂ ಅವಳಿಗೂ ಯಾವ ಸುದ್ದಿಯನ್ನೂ ಹತ್ತಗೊಡದೇ, ಉತ್ತರ ಹಿಂದೂಸ್ಥಾನದತ್ತ ಸಂಚಾರಕ್ಕೆ ಹೊರಡಬೇಕು. ಸ್ವಾತಂತ್ರ್ಯ ಸ್ವಚ್ಛಂದತೆ ಇವುಗಳ ಉನ್ಮಾದದಲ್ಲಿ, ತನ್ನ ಸೂಟ್‌ಕೇಸನ್ನು ಕೇಳಲು ಇನ್ನೂ ಬರಲಿರುವ ಆ ಸ್ತ್ರೀಯ ಮಾದಕ ಕಲ್ಪನೆಯಲ್ಲಿ ನಾನು ನನ್ನ ಮುಂಬಯಿ ಮನೆ, ಹೆಂಡತಿ, ಕಚೇರಿ ಎಲ್ಲವನ್ನು ಮರೆತಿದ್ದೆ. ತಿಂಗಳ ಮೇಲಾದರೂ ಏಕೆ ಮನೆಗೆ ಹೋಗಬೇಕು? ಸಂಸಾರದಲ್ಲಿ ಎಲ್ಲವನ್ನೂ ಕಂಡದ್ದಾಯಿತು. ಸರ್ವೀಸು ಇನ್ನೂ ಹತ್ತು-ಹನ್ನೆರಡು ವರ್ಷಗಳಿದ್ದರೂ ಪೆನ್ಷನ್ ಪಡೆಯಬಹುದು. ಮನೆಯಲ್ಲಿ ದುಡ್ಡು ಬೇಕಾದಷ್ಟು ಇದೆ. ಹಳ್ಳಿಯಲ್ಲಿ ಆಸ್ತಿ ಇದೆ. ಎಲ್ಲವನ್ನು ಹೆಂಡತಿ ಮಕ್ಕಳಿಗೆ ಬಿಟ್ಟು ಕೊಡುವೆ. ಮೂರು ನಾಲ್ಕು ವರ್ಷಕ್ಕೆ ಹಿರಿಯ ಮಗನ ಶಿಕ್ಷಣ ಮುಗಿದು ಅವನು ಕೈಗೆ ಬಂದನೆಂದರೆ ಹೆಂಡತಿಗೆ ಯಾವ ತೊಂದರೆಯೂ ಇಲ್ಲ. ನನಗೋ ನನ್ನ ಪೆನ್ಷನ್, ೫-೬ ಸಾವಿರದ ರೋಖು ಹಣ ಸಾಕಲ್ಲ...

ಮತ್ತೊಂದು ದಿನ ಉರುಳಿತು. ಅದರ ಮರುದಿನ ಬೆಳಿಗ್ಗೆ ಊಟ ಮುಗಿಸಿ ತಿರುಗಾಡಲು ಹೋದೆ ಬಿಸಿಲಲ್ಲಿ! ತಿರುಗಿ ನಾನು ಹೋಟೆಲಿಗೆ ಬಂದದ್ದು ಸಂಜೆಗೇನೆ. ಕಾಲು ಸೋತಿದ್ದುವು. ಮನಸ್ಸು ದಣಿದಿದ್ದಿತು. ನನ್ನ ಕೋಣೆಯ ಬಾಗಿಲನ್ನು ತೆರೆಯ ಹೋದೆ. ಈಗಾಗಲೇ ಅದನ್ನು ತೆರೆಯಲಾಗಿದ್ದಿತು. ಆಳು ಇರಬಹುದೆಂದು ತಿಳಿದು ಬಾಗಿಲನ್ನು ದೂಡಿದೆ.

ಆ ಮಬ್ಬುಗತ್ತಲಿನಲ್ಲಿ, ಬದಿಯಲ್ಲಿನ ಪಲ್ಲಂಗದ ಮೇಲೆ ಓರ್ವ ಸ್ತ್ರೀಯ ಆಕೃತಿ ಕಂಡಿತು. ಬಂದಳು! ಜೊತೆಗೆ ನೀರವವಾಗಿ ಅಳುವ ಸದ್ದು? ದೀಪ ಹಚ್ಚಿದೆ.

ಬಂದವಳು ನನ್ನ ಹೆಂಡತಿ! ನಾನು ಬಂದದ್ದನ್ನು ಕಂಡುಕೊಂಡಿರಬೇಕು. ಆದರೂ ಮುಖ ಮುಚ್ಚಿ ಅಳುವುದನ್ನು ನಿಲ್ಲಿಸಿರಲಿಲ್ಲ. ನಾನು ಹತ್ತಿರ ಹೋದೆ. ''ಯಾವಾಗ ಬಂದಿ?'' ಎಂದು ಕೇಳಬೇಕೆನ್ನುವ ನಾಲಿಗೆ ತೊದಲಿತು.

ಅವಳು ಬಂದಿರುವ ಉದ್ದೇಶ ಸ್ಪಷ್ಟವಿತ್ತು. ಮರುದಿನ ಬರಬೇಕಾದ ತಾನು, ಎರಡು ದಿನಗಳು ಕಳೆದರೂ ಬಂದಿರಲಿಲ್ಲ. ಅದಕ್ಕಾಗಿ ಆಕೆ ತಪ್ಪು ತಿಳಿದಿರುವ ಸಂಭವವೂ ಇರಲಿಲ್ಲ. ಕಚೇರಿಯ ಕೆಲಸದ ಮೇಲೆ ನಿಂತಿರಬೇಕು. ತಾನು ಆಕಸ್ಮಿಕವಾಗಿ ಹೋಗಿ ಗಂಡನನ್ನು ಅಚ್ಚರಿಗೊಳಿಸಿ ಅವನೊಂದಿಗೆ ಮರಳಿ ಬರಬೇಕು ಎಂದು ಅವಳು ಆಶಿಸಿದ್ದಳೆಂದು ಸರಿಯಾಗಿಯೆ ಊಹಿಸಿದೆ.

ಆದರೆ ಆಕೆ ಇಲ್ಲಿ ಕಂಡದ್ದೇನು? ಕೋಣೆಯಲ್ಲಿನ ವಿಶೇಷ ವ್ಯವಸ್ಥೆ ಮೇಜಿನ ಮೇಲಿನ ಸೌಂದರ್ಯ ಸಾಧನಗಳು ಅವಳಿಗೆ ಆಘಾತವನ್ನುಂಟು ಮಾಡಿರಬೇಕು. ಅಷ್ಟು ಹೊತ್ತಿನವರೆಗೆ ಆಕೆ ಅಳುತ್ತಿದ್ದಿರಬೇಕು ಎಂಬ ವಿಚಾರ ನನ್ನನ್ನು ಬಹಳ ಗಾಸಿಗೊಳಿಸಿತು. ಆಕೆ ಸೇವಕನನ್ನು ವಿಚಾರಿಸಿರಬಹುದೆ? ವಿಚಾರಿಸಿದ್ರೆ ನಿಜ ಸಂಗತಿ ತಿಳಿಯಬಹುದು. ಆದರೆ ಇಲ್ಲಿ ''ಇನ್ನಾವ ಸ್ತ್ರೀ ಬಂದು ಇದ್ದಳೆಂದು'' ಆಕೆ ಅದೆಂತು ಕೇಳಿಯಾಳು?

''ಅಂತೂ ಓರ್ವ ಹೆಣ್ಣಿನೊಡನೆ ಇಲ್ಲಿ ಚಕ್ಕಂದವಾಡಿದ್ದೀರಿ. ಅದಕ್ಕೆ ನಿಮಗೆ ಊರು ನೆನಪಾಗಲಿಲ್ಲ ಅಲ್ಲವೆ?''

ಎಷ್ಟೋ ಹೊತ್ತಿನ ಮೇಲೆ ಅವಳು ಮಾತನಾಡಿದ್ದಳು. ಅದರಲ್ಲಿ ಸಿಟ್ಟಂತೂ ಇರಲಿಲ್ಲ. ಗಂಡನ ವಿಶ್ವಾಸಘಾತಕತನದ ಪ್ರಜ್ಞೆ ಮಾತ್ರ ಇದ್ದಿತು.

ವಿಶ್ವಾಸಘಾತ? ಹೌದು! ಬೇರೊಬ್ಬ ಸ್ತ್ರೀಯ ಸಂಗವನ್ನು ಮಾನಸಿಕವಾಗಿಯಾದರೂ ಬಯಸಿದ್ದು ವಿಶ್ವಾಸಘಾತದ ಒಂದು ಪ್ರಸಂಗವೇ ಆಗಿತ್ತು. ಈ ಸೂಟ್‌ಕೇಸ್ ಇನ್ನೊಬ್ಬರದಿತ್ತು ಎಂದು ಉತ್ತರ ಹೇಳಬಹುದಾದರೂ, ಅವನ್ನೆಲ್ಲ ಈ ರೀತಿಯಾಗಿ ಇರಿಸಿಕೊಂಡದ್ದಕ್ಕೆ ಯಾವ ಅನ್ಯ ವಿವರಣೆಯೂ ಸಮರ್ಪಕವಾಗುತ್ತಿರಲಿಲ್ಲ, ಅದಕ್ಕಿಂತ ಹೆಚ್ಚಿನ ವಿಶ್ವಾಸಘಾತವನ್ನು ನಾನು ಮಾಡಿದ್ದೆ. ನನ್ನನ್ನೇ ನಂಬಿದ ಹೆಂಡತಿಯನ್ನು ತೊರೆದು ಹೋಗುವ ವಿಚಾರವನ್ನು ಒಂದೇ ಸಮನೆ ಬೆಳೆಸಿಕೊಂಡಿದ್ದೆ.

''ನೀವು ನನಗೆ ಅದೆಂಥ ಮೋಸ ಮಾಡಿದಿರಿ! ವಿಶ್ವಾಸಘಾತ ಮಾಡಿದಿರಿ!'' ಎಂದು ನನ್ನ ಹೆಂಡತಿ ನುಡಿದಿದ್ದರೆ ನನಗೆ ಉತ್ತರಿಸುವ ಬಾಯಿ ಉಳಿಯುತ್ತಿರಲಿಲ್ಲವೇನೋ, ಬದಲಾಗಿ, ''ಇನ್ನೊಬ್ಬ ಹೆಣ್ಣಿನೊಡನೆ ಸುಖವಾಗಿ ಇದ್ದೀರಿ'' ಎಂದಿದ್ದಳಾದ್ದರಿಂದ ನನಗೆ ಮಾತಾಡುವ ಅವಕಾಶವೊದಗಿ ಬಂತು.

ಆಕೆಯೂ ನನ್ನ ಉತ್ತರಕ್ಕಾಗಿ ಕಾಯುತ್ತಿದ್ದಳೆಂದು ಕಾಣುತ್ತದೆ. ಮುಖವೆತ್ತಿದ್ದಳು. ನಿಃಶೂನ್ಯ ಭವಿತವ್ಯದ ಕಲ್ಪನೆಯಿಂದ ಕುಗ್ಗಿ ಅಳುತ್ತಿರುವ ಹೆಂಗಸು ಯಾವ ಕಾಲಕ್ಕೂ ಚೆಲುವೆಯಲ್ಲ. ಅವಳ ಮುಖವು ವಿಕಾರಗೊಂಡಿತ್ತು. ಕೂದಲು ಕೆದರಿದ್ದವು.

''ಇಲ್ಲಿ ಯಾವ ಹೆಣ್ಣೂ ಬಂದು ನನ್ನ ಜೊತೆ ವಾಸವಾಗಿಲ್ಲ. ಆಣೆ ಮಾಡಿ ಹೇಳುವೆ ಬೇಕಾದರೆ'' ಎಂದೆ.

''ನಿಮ್ಮ ಜೊತೆಗೆ ಯಾರೂ ಇದ್ದಿಲ್ಲವೆ?''

''ಇಲ್ಲ. ಈ ಸಾಮಾನುಗಳು ಯಾರವೂ ಆಕೆಯ ಮುಖವನ್ನೂ ನಾನು ಕಂಡಿಲ್ಲ. ಹೆಸರೂ ಗೊತ್ತಿಲ್ಲ.''

''ಹೌದೆ? ನಿಜವೆ?''

''ಹೌದು.''

"ಓ... ಹಾಗಿದ್ದರೆ ನಾನು ಸುಮ್ಮನೆ ಅತ್ತೆ, ಮೊದಲೇ ಹೇಳಬಾರದಿತ್ತೆ?"

ಆಕೆ ನನ್ನ ಬಳಿಗೆ ದ್ರುತ-ಗತಿಯಿಂದ ಸರಿದಳು. ನನ್ನ ಬಲದೆಡೆಗೆ ಆತುಕೊಂಡು ನಿಂತಳು. ಮದುವೆಯ ಹೊಸತರಲ್ಲಿ ಇಂಥ ಘಟನೆ ನಡೆದಿದ್ದರೆ ಆಕೆಯೇ ನನ್ನನ್ನು ಅಪ್ಪಿಕೊಂಡು, ಮುತ್ತಿಡುತ್ತಿದ್ದಳೇನೋ. ನಾವು ಆ ವಯಸ್ಸನ್ನು ದಾಟಿದ್ದೆವು. ಆದರೆ ವಿಕಾರಗೊಂಡಿದ್ದ ಅವಳ ಮುಖದಲ್ಲಾದ ಮಾರ್ಪಾಟಿನ ಚೆಲುವನ್ನು ಮಾತ್ರ ಕಾಣುವವನಾಗಿದ್ದೆ. ನಾನು ಅಷ್ಟು ಹೇಳಿದ ಮೇಲೆ ಆವಳ ಸಂದೇಹವನ್ನೂ ಅವಳು ಇಟ್ಟುಕೊಳ್ಳಲಿಲ್ಲ! ಅದ್ಭುತವೇ ಸರಿ. ಅದೇ ೧೫ ವರ್ಷದ ಹಿಂದಿನ ಮಾತಾಗಿದ್ದರೆ, ಇಷ್ಟು ಬೇಗ ಸಂಪೂರ್ಣವಾಗಿ ನಂಬಿದಳು. ಮೂರು ನಾಲ್ಕು ತಾಸಿನವರೆಗೆ ಆ ಕೋಣೆಯಲ್ಲಿ ಅನ್ಯ ಸ್ತ್ರೀಯ ಅಸ್ತಿತ್ವವನ್ನು ಅವಳು ಊಹಿಸಿದ್ದಳು. ಆ ಸೂಟ್‌ಕೇಸಿನ ವಸ್ತುಗಳಿಂದ ಖಾತ್ರಿ ಹಿಡಿದಿದ್ದಳು. ಆದರೆ ನನ್ನ ಮಾತಿನ ಮೇಲಿನ ವಿಶ್ವಾಸದಲ್ಲಿ ಅವೆಲ್ಲ ತೇಲಿಹೋದವು. ಅವಳು ಅದೇ ಭಾವದ ನಗೆಯಿಂದ ನನ್ನ ಕಡೆ ನೋಡಿದಾಗ ನನ್ನ ಜೀವನದಲ್ಲಿಯೇ ಹೊಸದೊಂದು ಅನುಭವವನ್ನು ಪಡೆದಂತಾಯಿತು.

(ಬ್ರನೊ ಫ್ರ್ಯಾಂಕ್ ಎಂಬ ಜರ್ಮನ್ ಸಾಹಿತಿಯ ಕತೆಯ ಆಧಾರದಿಂದ)

ವಿಷಾರಿ

'ಕೆಮಿಸ್ಟ್ ಎಂಡ್ ಡ್ರಗಿಸ್ಟ್' ಎಂದು ಬೋರ್ಡನ್ನು ಹಾಕಿದ್ದ ಒಂದು ಹಳೆಯ ಮಾದರಿಯ ಅಂಗಡಿಯೊಳಗೆ ಅವನು ಪ್ರವೇಶಿಸಿ—

''ನಾನೊಂದು ಸುದ್ದಿ ಕೇಳಿದ್ದೆ. ಏನಂದ್ರೆ ನಿಮ್ಮ ಹತ್ತಿರ—''

ಮುಂದುವರಿಸುವ ಮುನ್ನ ಆಗಂತುಕನು ಆ ಅಂಗಡಿಯಲ್ಲಿ ತಾವಿಬ್ಬರೇ ಇರುವುದನ್ನು ಖಾತ್ರಿ ಮಾಡಿಕೊಂಡಿದ್ದರೂ, ದನಿ ಇಳಿಸಿ ಹೇಳತೊಡಗಿದನು.

''ನಿಮ್ಮ ಹತ್ತಿರ, ಯಾರಿಗೂ ಗೊತ್ತಾಗದ ಹಾಗೆ ಪ್ರಾಣವನ್ನು ಹೀರಬಲ್ಲ ವಿಷ ಮಾರಲಿಕ್ಕೆ ಸಿಕ್ಕುತ್ತದಂತೆ. ನಿಜವೆ?''

ಮಾಲೀಕನು ಆಗಂತುಕನನ್ನು ನೋಡಿದನು. ಎತ್ತರವಾದ ಆಳು. ವಯಸ್ಸು ೩೫ ಇದ್ದಿರಬಹುದು. ಆದರೆ ಮುಖವು ಆ ವಯೋಮಾನಕ್ಕಿಂತ ಹೆಚ್ಚೇ ಇಳಿತರವಾಗಿತ್ತು. ಕಣ್ಣುಗಳು ಕೆಂಪಗಿದ್ದು, ಯಾವಾಗಲೂ ಹೀಗೆಯೇ ಎಂಬ ಭಾವನೆ ಬರುವಂತಿದ್ದಿತು.

''ಒಳಗೇ ಬನ್ನಿರಿ, ನಾನೀಗ ಚಹ ತೆಗೆದುಕೊಳ್ಳುವವನಿದ್ದೆ. ಅಲ್ಲಿಯೇ ಮಾತನಾಡುವಾ'' ಎಂದು ಅಂಗಡಿಯುವನು ಅವನನ್ನು ಕರೆದನು.

ಆ ಕೋಣೆಯೂ ಅಂಗಡಿಯ ಒಂದು ಭಾಗವೇ. ಆದರೆ ಹೊರಗಿನದಕ್ಕಿಂತ ಚಿಕ್ಕದ್ದು, ಅಲ್ಲಿಯ ಷೆಲ್ಫುಗಳ ಮೇಲೆಲ್ಲ ಔಷಧ ಬಾಟಲಿಗಳು ತುಂಬಿದ್ದವು. ಕೋಣೆಯ ಮಧ್ಯದಲ್ಲಿ ಒಂದು ಚಿಕ್ಕ ಮೇಜು. ಅದಕ್ಕೆ ಎದುರು ಬದುರಾಗಿ ಎರಡು ಕುರ್ಚಿಗಳು ಆ ಮೇಜಿನ ಮೇಲೆಯೂ ಹಲವಾರು ಔಷಧಿ ಸೀಸೆಗಳು ಅಲ್ಲಿ, ಆ ಗಳಿಗೆಗೆ ಚಹದ ಟ್ರೇ ತಂದಿರಿಸಿಯಾಗಿತ್ತು.

ಆಗಂತುಕನನ್ನು ಕೂಡಗೊಳಿಸುತ್ತ, ''ನೀವು ಯಾರು? ಎಲ್ಲಿ ಕೆಲಸಕ್ಕಿದ್ದೀರಿ?'' ಎಂದು ಕೇಳಿದನು.

ಅಂಗಡಿಯುವನ ದನಿಯಲ್ಲಿ ಒಂದು ಬಗೆಯ ಆತ್ಮೀಯತೆ ಅನಿಸಿತಾದರೂ ''ಈ ವ್ಯಕ್ತಿಗೆ ಹೇಳಬೇಕೊ ಬೇಡವೊ'' ಎಂದು ಯೋಚಿಸುತ್ತ ಅವನು ನೋಡಿದನು. ತನಗಿಂತ ವಯಸ್ಸಾದವನೂ, ಜೀವನದಲ್ಲಿ ಕಷ್ಟ-ಸುಖಗಳನ್ನು ಕಂಡವನೂ ಆಗಿ ಮಾಲೀಕನು ತೋರಿದ್ದರಿಂದಲೂ, ತನ್ನ ಹೆಸರು-ದೆಸೆ ತಿಳಿಯದೇ ಆತ ಔಷಧ ಕೊಡಲಿಕ್ಕಿಲ್ಲವೆಂದೂ ಯೋಚಿಸಿ, ''ನಾನು ನೇವ್ಹಿಯಲ್ಲಿ ಇದ್ದೇನೆ'' ಎನ್ನುತ್ತ ತನ್ನ ವಿಸಿಟಿಂಗ್ ಕಾರ್ಡ್ ಕೊಟ್ಟನು.

"ಸರಿ, ಇನ್ನು ಹೇಳಿ. ಈ ಔಷಧ ಯಾರಿಗಾಗಿ? ಅಂಥ ಪ್ರಸಂಗವೇನು ಬಂದಿದೆ?"

"ಅದನ್ನೆಲ್ಲ ಹೇಳಲೇಬೇಕೇನು? ನೀವು ಬೇಡಿದಷ್ಟು ಹಣ ಕೊಟ್ಟರೆ ಸಾಲದೆ?"

"ಹಾಗಲ್ಲ. ಇಂಥ ಕೆಲಸದಲ್ಲಿ ಪಾಲುಗಾರನಾಗಲಿಕ್ಕೆ ನನಗೂ ಒಂದು ನೈತಿಕ ಧೈರ್ಯ ಬೇಕಲ್ಲ?"

"ಸರಿ, ಅದು ನನ್ನ ಹೆಂಡತಿಗೆಂದು."

"ಕಾರಣ?"

"ಯಾಕೆಂದರೆ ಆಕೆ ನಮ್ಮ ನೆರೆ ಮನೆಯ—" ಎಂಬುದಾಗಿ ಅವನು ತನ್ನ ನಿರ್ಧಾರದ ಕಾರಣ ವಿವರಿಸತೊಡಗಿದ. ಜೊತೆಗೆ ಆಕೆ Nagging ಸ್ವಭಾವದ ರಗಳೆ-ರಕ್ಕಸಿಯೆಂದೂ ಹೇಳಿದ. ಅದನ್ನೆಲ್ಲ ಕೇಳಿಕೊಳ್ಳುತ್ತಲೇ ಮಾಲೀಕನು ಚಹವನ್ನು ಸಜ್ಜುಗೊಳಿಸಿ ಅವನ ಮುಂದೆಯೂ ಒಂದು ಕಪ್ ನೀಡಿದ. ಚಹ ಕುಡಿಯುತ್ತಿದ್ದಾಗಲೂ ಅವನ ಕತೆ ಮುಂದುವರಿದು ಒಮ್ಮೆ ಮುಗಿಯಿತು.

"ಸರಿ, ನಾನು ವಿಷವನ್ನು ಮಾರುವುದು ನಿಜ. ಅದಕ್ಕಾಗಿ ನಾನು ಹಣವನ್ನು ತಗೊಳ್ಳುವುದಿಲ್ಲ. ಯಾರೊಬ್ಬರ ಕೊಲೆಯು ಸಮರ್ಥನೀಯವೆಂದು ಕಂಡುಬಂದರೆ ನಾನು ಪುಕ್ಕಟೆಯಾಗಿಯೆ ಕೊಟ್ಟು ಬಿಡುವೆ. ಹಾಗೆ ನಾನು ಹಲವಾರು ಜನರಿಗೆ ನೆರವಾದದ್ದಿದೆ."

"ಹೀಗೊ? ಒಳ್ಳೆಯದಾಯಿತು. ನನಗೂ ಕೊಟ್ಟುಬಿಡಿರಿ."

"ನಿಮಗೆ ಈಗಾಗಲೇ ಕೊಟ್ಟಾಗಿದೆ."

"ಅಂದರೆ? ನನಗೇ?"

"ಹೌದು."

"ಯಾವಾಗ?"

"ನೀವು ಚಹ ಕುಡಿದಾಗ! ನಿಮ್ಮ ಕತೆ ಕೇಳುವಾಗ ನೀವೇ ಕೊಲೆಗೆ ಯೋಗ್ಯರು —ಎಂದು ನನಗೆ ಕಂಡಿತು. ಈಗ ಹೇಳಿದಂತೆ ಪುಕ್ಕಟೆಯಾಗೇ ಕೊಟ್ಟಿದ್ದೇನೆ. ಹಾಂ, ವಿಷದ ಪ್ರತ್ಯೌಷಧವೂ ನನ್ನಲ್ಲಿ ಉಂಟು. ಅದಕ್ಕಾಗಿ ಮಾತ್ರ ಹಣ ತೆಗೆದುಕೊಳ್ಳುತ್ತೇನೆ."

ಆ ಅಧಿಕಾರಿಯ ಮುಖವು ವಿವರ್ಣವಾಯಿತು. 'ಎಂಥ ಮೋಸ! ಇವನು ಹೇಳಿಕೇಳಿ ವ್ಯಾಪಾರಿ. ಬಹಳವಾದರೆ ತನ್ನಿಂದ ಹೆಚ್ಚು ಹಣ ಸುಲಿಯಬಹುದು—ವಿಷದ ಔಷಧಕ್ಕೆ. ಯಾರಿಗೂ ಗೊತ್ತಾಗದಂತೆ-ವಿಷಪ್ರಯೋಗ ಮಾಡುವರೆ, ಇದು ಅನಿವಾರ್ಯವೇ?' ಎಂದು ಮಾತ್ರ ಎಣಿಸಿದ್ದ. ಆದರೆ ಈತ ತನ್ನ ಮೇಲೆಯೇ ತಿರುಗಿ ಬಿದ್ದನಲ್ಲ? ಅವನ ತಲೆ ದಿಮ್ಮೆಂದಿತು. ಕೂಡಲೇ ಪಿಸ್ತೂಲನ್ನು ಹೊರತೆಗೆದ.

ಆಗ ಆ ಕೆಮಿಸ್ಟನು ಗಲಿಬಿಲಿಗೊಳ್ಳದೆ, "ನೀವು ನೇವ್ಹಿ ಆಫೀಸರರೆಂದಾಗಲೇ ನಿಮ್ಮಲ್ಲಿ ಪಿಸ್ತೂಲು ಇರಬಹುದೆಂದು ಅನಿಸಿತು! ಆದರೆ ನನ್ನನ್ನು ಗುಂಡಿಕ್ಕಿದರೆ ಏನು ಪ್ರಯೋಜನ? ನಿಮ್ಮ ಜೀವ ಉಳಿದೀತೆ? ಅದು ಉಳಿಯಬೇಕಾದರೆ, ಇಲ್ಲಿರುವ ನೂರಾರು ಔಷಧ ಬಾಟಲಿಗಳಲ್ಲಿ ಪ್ರತ್ಯೌಷಧಿ ಯಾವುದೆಂದು ನೀವು ಹೇಗೆ ತಾನೇ ಕಂಡುಹಿಡಿಯುವಿರಿ?"

"..........."

"ಯಾಕೆ? ನಾನು ಹೇಳುವುದು ನಿಜವೆನಿಸುವುದಿಲ್ಲವೆ? ಬಿಡಿರಿ, ಹಾಗಿದ್ದರೆ! ಇನ್ನೊಂದು ಮೂರು ತಾಸು ತಡೆಯಿರಿ. ವಿಷವು ಕ್ರಮೇಣ ಏರಿತೆಂದರೆ ಗೊತ್ತಾಗುತ್ತದೆ. ಈ ವಿಷದಿಂದ ಪಾರಾಗಿ ಬದುಕಬೇಕೆನಿಸಿದರೆ, ನನ್ನನ್ನು ಕೊಲ್ಲುವಿರಂತೆ."

"ಎಲ್ಲಿದೆ? ಆ ಪ್ರತ್ಯೌಷಧ? ಏನದರ ಬೆಲೆ?"

"ಹೆಚ್ಚಿಲ್ಲ ೫೦೦ರೂ. ಮಾತ್ರ. ನಿಮ್ಮ ಜೀವದ ಬೆಲೆ ಅದಕ್ಕೂ ಹೆಚ್ಚೆಂಬುದನ್ನು ಬಲ್ಲೆ. ವಿಚಾರ ಮಾಡಿ ನೋಡಿರಿ."

ತಾನು ಆ ಕ್ಷಣಕ್ಕೆ ಒಪ್ಪದೇ ಅನ್ಯಗತಿಯಿಲ್ಲ ಎಂದು ಆ ಅಧಿಕಾರಿಗೆ ತೋಚಿತು. ಪಿಸ್ತೂಲನ್ನು ಒಳಗಿರಿಸಿ, ತನ್ನ ಪಾಕೇಟಿನಿಂದ ಹಣ ತೆಗೆದು, ಮೇಜಿನ ಮೇಲೆ ಇರಿಸಿದ. 'ಚಿಂತೆಯಿಲ್ಲ, ಆ ಪ್ರತ್ಯೌಷಧಿ ಮೊದಲು ದೊರೆಯಲಿ. ಆಮೇಲೆ ಒಂದು ಕೈ ನೋಡುವೆ' ಎಂದುಕೊಂಡನು.

ಆದರೆ ಕೆಮಿಸ್ಟನು ಆ ಹಣ ತಗೊಳ್ಳುವುದಕ್ಕೆ ಆತುರ ತೋರಿಸದೇ "ನಿಮಗೀಗ ಪ್ರತ್ಯೌಷಧಿ ಕೊಡೋ ಮುಂಚೆ ಇನ್ನೊಂದು ಕೆಲಸವಾಗಬೇಕಲ್ಲ? ನೀವು ಒಂದು ಕಾಗದ ಬರೆದುಕೊಡಬೇಕು."

"ಏನೆಂದು?"

"ಏನಿಲ್ಲ, ಒಂದು ಸಣ್ಣ ಹೇಳಿಕೆ. ಅದೇ... ನೀವು ನಿಮ್ಮ ಹೆಂಡತಿಯನ್ನು ವಿಷಕೊಟ್ಟು ಮುಗಿಸಬೇಕೆಂಬ ಮಾತು ಇಕೊಳ್ಳಿ. ಕಾಗದ, ಪೆನ್ನು."

"ನಾನ್‌ಸೆನ್ಸ್" ಎನ್ನುತ್ತ ಆತ ಎದ್ದು ನಿಂತ.

"ನೀವು ಸಿಟ್ಟಿಗೆದ್ದು ಪ್ರಯೋಜನವಿಲ್ಲ. ಅದು ಆಗತ್ಯ, ನಾಳೆ ಪ್ರತ್ಯೌಷಧಿ ತಗೊಂಡು, ನೀವು ಪಾರಾದ ಮೇಲೆ ಇದೇ ಪಿಸ್ತೂಲಿನಿಂದ ನನ್ನನ್ನು ಕೊಲ್ಲಲಿಕ್ಕಿಲ್ಲೆಂದು ಏನು ಭರವಸೆ ಇದೆ? ನಿಮ್ಮ ಹೇಳಿಕೆಯನ್ನು ನಾನೇನು ಇಟ್ಟುಕೊಳ್ಳುವುದಿಲ್ಲ. ಸಿ.ಆಯ್.ಡಿ. ಆಫೀಸಿನಲ್ಲಿ ನನ್ನೊಬ್ಬ ಮಿತ್ರನಿದ್ದಾನೆ. ನಿಮ್ಮ ಕೈಯಿಂದ ನನ್ನ ಜೀವ ಹೋದರೆ, ಈ ಪತ್ರವೊಂದು ಪುರಾವೆಯಾಗಿ ನನ್ನ ಮಿತ್ರನ ಬಳಿ ಇರುತ್ತದೆ. ಯಾರೇ ಆಗಲಿ, ಕೊಲೆಗಡುಕರಿಗೆ ಶಿಕ್ಷೆಯಾಗಲೇಬೇಕಲ್ಲ—ಕಾನೂನು ರೀತ್ಯಾ."

ಆ ಬೇಡದ ಹೆಂಡತಿಯ ಗಂಡ, ಕೆಮಿಸ್ಟನನ್ನು ದುರುಗುಟ್ಟಿ ನೋಡುವುದನ್ನು ಬಿಟ್ಟು ಏನನ್ನೂ ಮಾಡಲಾರದವನಾಗಿದ್ದ.

"ವಿಚಾರ ಮಾಡಿರಿ. ನಿಮಗೆ ಇನ್ನೊಬ್ಬರ ಜೀವ ತೆಗೆಯುವುದು ಹೆಚ್ಚೊ? ನಿಮ್ಮ ಸ್ವಂತದ ಜೀವವನ್ನು ಉಳಿಸಿಕೊಳ್ಳುವುದು ಹೆಚ್ಚೋ? ಇನ್ನು ನೀವು ಕೊಡುವ ೫೦೦ರೂ. ಗಳಿಗೆ ನನ್ನ ಪ್ರಾಣ ತೆರಲೆ? ಹಣ ಕೊಟ್ಟ ಮಾತ್ರಕ್ಕೆ ನನ್ನ ಜೀವ ನಿಮ್ಮ ಅಧೀನವಾಗಿಬಿಡಬೇಕೆ? ಮಿಸ್ಟರ್, ಇನ್ನೊಬ್ಬರ ಜೀವ ತೆಗೆಯೋದಕ್ಕೆ ನನಗೇ ಆಗಲಿ, ನಿಮಗೇ ಆಗಲಿ ಏನಧಿಕಾರವಿದೆ, ಹೇಳಿರಿ! ಅದಕ್ಕೆ ಅಲ್ಲವೆ ನಾನೀಗ ನಿಮಗೆ ಪ್ರತ್ಯೌಷಧಿ ಕೊಡಲು ಮುಂದಾದದ್ದು! ಹೂಂ, ಬೇಗ ಬರೆದುಕೊಡಿರಿ. ನಾ ಏನೂ ನಿಮಗೆ ಅನ್ಯಾಯ ಮಾಡೋದಿಲ್ಲ. ನಮ್ಮ ಅಂಗಡಿಯ ಎದುರಿಗೇ ಪೋಸ್ಟಿನ ಡಬ್ಬಿ ಇದೆ. ಬೇಗ ಹಾಕಿ ಬಂದು ಬಿಡುವೆ. ಇನ್ನೊಂದು ಸಣ್ಣ ವಿಷಯ ಅದೇನು ಕರಾರಲ್ಲ... ವಿಷಾರಿಯ ಅಗತ್ಯವಿದ್ದ ನಿಮ್ಮ ಸ್ನೇಹಿತರಾರಾದರೂ ಸಿಕ್ಕರೆ ಅವರಿಗೂ ಹೇಳುವಿರ? ನನ್ನ ಸಲುವಾಗಿ ಪ್ರಚಾರ ಮಾಡಬೇಕೆಂದೇನಿಲ್ಲ...!"

(ಫ್ರೆಡ್ರಿಕ್ ಬ್ರೌನ್ ಎಂಬ ಅಮೇರಿಕನ್ನರ ಕತೆಯ ರೂಪಾಂತರ)

ತನಿಖೆಯ ನಾಯಿ

ನಮ್ಮ ಜಿಲ್ಲೆಯಲ್ಲಿ ಕಳ್ಳರು, ಕೊಲೆಗಾರರು ಮತ್ತು ಭ್ರಷ್ಟಾಚಾರಿಗಳ ಹಾವಳಿ ಹೆಚ್ಚಾಗತೊಡಗಿದ್ದರಿಂದ, ಜಿಲ್ಲೆಯ ಪೊಲೀಸ್ ಅಧಿಕಾರಿಗಳಾದ ಡಿ.ಎಸ್.ಪಿ. ಸಾಹೇಬರು ಅದಕ್ಕೆ ಒಂದು ಉಪಾಯವನ್ನು ಮಾಡಿದರು. ನಮ್ಮ ನೆರೆಯ ರಾಜ್ಯದ ಪೊಲೀಸ್ ಖಾತೆಯಿಂದ ೪೨೦ರ ಸದರಿನಲ್ಲಿ ಬರುವ ಮನುಷ್ಯರನ್ನು ಬೇಟೆ ಮಾಡುವ ನಾಯಿಯೊಂದನ್ನು ಎರವಲಾಗಿ ಪಡೆದು ತಂದರು.

ಗುನ್ಹೆಯು ನಡೆವ ಸ್ಥಳದಲ್ಲಿ ಅದನ್ನು ಒಮ್ಮೆ ಸುತ್ತಾಡಿಸಿದರೆ ಸಾಕು; ಅದು ಅಲ್ಲಿಯ ಎಲ್ಲ ಸಂದು ಮೂಲೆಗಳನ್ನು ಮೂಸಿ ನೋಡುತ್ತಿತ್ತು ಮತ್ತು ಆ ವಾಸನೆಯ ಕಿಂಚಿದಂಶವನ್ನು ಹೊಂದಿದ್ದ ಯಾರನ್ನೂ ಅದು ಹಿಡಿದುಬಿಡುತ್ತಿತ್ತು. ಅಷ್ಟು ತೀಕ್ಷ್ಣವಾಗಿತ್ತು ಅದರ ಮೂಗು. ಕಳ್ಳನನ್ನು ಹಿಡಿಯುವುದು ಅದೆಷ್ಟು ಸುಲಭ!

ಒಮ್ಮೆ ಪೊಲೀಸ್ ಕಾಲೋನಿಯಲ್ಲಿಯೇ ಒಂದು ಕಳವು ಸಂಭವಿಸಿತು. ಕಳೆದು ಹೋದುದು ಕಾನ್‌ಸ್ಟೇಬಲ್ ನಂ. ೧೧೪ರವನ ಹೆಂಡತಿಯ ಸೀರೆ. ಹೊಸತು; ತೀರ ಹೊಸದಲ್ಲವಾದರೂ, 'ಟೆರಲಿನ್' ಜಾತಿಯದಾದ್ದರಿಂದ ಹೊಸತಾಗಿಯೇ ಕಾಣುತ್ತಿತ್ತು. ಅವಳು ಅದನ್ನು ಹೊರಗೆ ಒಣಹಾಕಿದ್ದಳಂತೆ, ಕೇವಲ ಒಂದು ತಾಸಿನ ಮಟ್ಟಿಗೆ. ಅಷ್ಟರಲ್ಲಿ ಅದನ್ನು ಯಾರೋ ಎಬ್ಬಿಸಿ ಬಿಟ್ಟಿದ್ದರು.

ಕಾನ್‌ಸ್ಟೇಬಲ್ ನಂ. ೧೧೪ ಸ್ವಲ್ಪ ದರ್ಪದ ಮನುಷ್ಯ. ತಾನು ಚಂದ ಹೆಂಡತಿಯ ಗಂಡ ಎಂಬ ಅಭಿಮಾನವೂ ಬಹಳ. ಅಂತಹವನ ಹೊಸ ಹೆಂಡತಿಯ ಹೊಸ ಸೀರೆ ಹೋಗಬೇಕೆಂದರೆ? ಮೇಲಾಗಿ ಪೊಲೀಸರದೇ ಹದ್ದಿನಲ್ಲಿ! ಅದೂ ಪೊಲೀಸ್ ವರ್ಗದವರಿಂದಲೇ ಕಳುವಾಗುವುದೇ?

ಸೀರೆ ಕದ್ದವರಿಗೆ ತಕ್ಕ ಶಾಸ್ತಿ ಮಾಡಬೇಕೆಂದು ಅವನು ಒಂದು ಉಪಾಯ ಮಾಡಿದನು. ದೊಡ್ಡ ಸಾಹೇಬರಿಗೆ ಹೇಳಿಕೊಂಡು, ಆ ಪೊಲೀಸ್ ನಾಯಿಯನ್ನು ಒಂದರ್ಧ ಗಂಟೆಯ ಮಟ್ಟಿಗೆ ತಮ್ಮ ಕಾಲೋನಿಗೆ ಕಳಿಸಿಕೊಡಬೇಕೆಂದು ವಿನಂತಿಸಿದನು. ಅವರು ಮಾನ್ಯ ಮಾಡಿದ್ದರ ಫಲವಾಗಿ, ಅಂದೇ ಸಂಜೆಗೆ, ಅದರ ಯೋಗಕ್ಷೇಮವನ್ನು ನೋಡಿಕೊಳ್ಳುವುದರ ಸಲುವಾಗಿ ನಿಯಮಿತವಾಗಿದ್ದ ಜಮಾದಾರರ ಸಂಗಡ ಆ ನಾಯಿಯು ಪೊಲೀಸ್ ಕಾಲೋನಿಗೆ ಆಗಮಿಸಿತು. ನೋಡುವುದಕ್ಕೆ ಆ ನಾಯಿ ಏನೂ ಚೆನ್ನಾಗಿರಲಿಲ್ಲ. ಆದರ ಎತ್ತರವಾಗಿತ್ತಾದ್ದರಿಂದ ಬೀದಾಡಿ ನಾಯಿಗಳ ಹಾಗೇನೂ ಕಾಣುತ್ತಿರಲಿಲ್ಲ.

ಸರಿ; ಜಮಾದಾರ ಸಾಹೇಬರು ಆ ನಾಯಿಯನ್ನು ಕಾನ್‌ಸ್ಟೇಬಲ್ ನಂ. ೧೧೪ರವನ ಮನೆಯ ಹೊರಗಿನ ಬಾಗಿಲು, ಕಂಬ ಇತ್ಯಾದಿಗಳ ಹತ್ತಿರ ಅದನ್ನು ಓಡಾಡಿಸಿದರು. ಕಾಲೋನಿಯಲ್ಲಿರುವವರನ್ನೆಲ್ಲ ಒಂದೆಡೆ ಕರೆಯಿಸಬೇಕೆನ್ನುವಷ್ಟರಲ್ಲಿ ಅವರೇ ತಾವಾಗಿ ಸೇರಿಬಿಟ್ಟರು.

ಆ ಕಾಲೋನಿಯಲ್ಲಿ ಓರ್ವ ರಿಟೈರ್ಡ್ ಫೌಜುದಾರ್ ಸಾಹೇಬರೂ ವಾಸವಾಗಿ ಇದ್ದರು. ಹಾಗೆಂದು ಅವರಿಗೆ ೫೫ ವರ್ಷಗಳೇನಾಗಿರಲಿಲ್ಲ. ಯಾವುದೋ ಒಂದು ಖೂನಿಯ ತನಿಖೆಯಲ್ಲಿ ಓರ್ವ ಭಂಡನು ಅವರ ಬಲಗೈಯನ್ನೇ ಕಡಿದು ಹಾಕಿದ್ದನಾದ್ದರಿಂದ, ವೃದ್ಧಾಪ್ಯಪೂರ್ವದಲ್ಲಿಯೆ ಅವರಿಗೆ ನಿವೃತ್ತಿಯನ್ನು ದಯಪಾಲಿಸಲಾಗಿದ್ದಿತು. ಅಂತೂ ಅವರ ಅನಾಮಂತ್ರಿತ ಹಿರಿತನದಲ್ಲಿ ಈ ವಿಚಾರಣೆ ತಪಾಸಣೆ ಆರಂಭವಾಯಿತು.

ಆ ನಾಯಿಯು ನೆರೆದವರನ್ನೆಲ್ಲ ಒಮ್ಮೆ ನೋಡಿತು. ಅಲ್ಲ; ಅವರೇ ಅದನ್ನು ನೋಡಿದರು. ಎಲ್ಲರಿಗೂ ಕುತೂಹಲ ಇದು ಯಾರನ್ನು ಹಿಡಿಯುತ್ತದೆ ಎಂದು.

ಜಮಾದಾರ್ ಸಾಹೇಬರು ಅದರ ಬೆನ್ನಮೇಲೆ ಇರಿಸಿದ್ದ ತಮ್ಮ ಕೈಯನ್ನು ತೆಗೆದ ಕೂಡಲೇ, ಅದು ಜನಸಂದಣಿಯಲ್ಲಿ ಹೊಕ್ಕಿತು. ಓರ್ವ ಮುದುಕಿಯ ಸೆರಗನ್ನು ಹಿಡಿಯಿತು!

ಆಕೆ ಕಾನ್‌ಸ್ಟೇಬಲ್ ನಂ. ೩೪ರವನ ಸಂಬಂಧಿಕಳು. ಕಾಲೋನಿಯಲ್ಲಿ ಸಣ್ಣಪುಟ್ಟ ಕಳವುಗಳನ್ನು ಆಕೆ ಮಾಡುತ್ತಾಳೆಂದು ಜನರಲ್ಲಿ ಸಾಮಾನ್ಯ ವಂದತಿಯೆ ಇದ್ದಿತು. "ಹಾಂ, ಹೌದು, ಅವಳೇ ಕದ್ದವಳು." "ನನಗನಿಸಿತ್ತು ಅವಳೇ ಇರಬೇಕು" ಎಂದು ಇತ್ಯಾದಿಯಾಗಿ ನೆರೆದವರು ಉದ್ಗಾರವೆತ್ತಿದ್ದರು.

ಆ ಮುದುಕಿ 'ಹಚ್, ಹಚ್' ಎಂದು ನಾಯಿಯನ್ನು ಗದರಿಸಹೋದಳು. ಹಾಗೆ ಗದ್ದರಿಸಿದರೆ ಹೋಗಲಿಕ್ಕೆ ಅದೇನು ಬಿಡಾಡಿ ನಾಯಿಯೆ? ಅಲ್ಲದೆ ಜನರೇ ಅವಳನ್ನು ನಾಯಿ ಸಹಿತವಾಗಿ ಮುಂದೆ ದೂಡಿದರು. ತಾನು ಸಿಕ್ಕಿಬಿದ್ದೆ ಎಂದು ಅವಳಿಗೆ ಗೊತ್ತಾಯಿತು. ಕೂಡಲೇ ಜಮಾದಾರರ ಕಾಲಿಗೆ ಬಿದ್ದಳು.

"ಸಾಹೇಬರೇ, ನನ್ನನ್ನು ಕ್ಷಮಿಸಿರಿ. ನಾನು ಕಳವು ಮಾಡಿದ್ದು ನಿಜ. ಆದರೆ ಅದು ಬಹಳ ಸಣ್ಣ."

"ಹಾ, ಹೇಳು. ಎಲ್ಲಿಟ್ಟಿರುವಿ, ಆ ಸೀರೆಯನ್ನು?" ಎಂದು ಮೊಂಡಗೈ ಫೌಜುದಾರನು ಜಬ್ಬರಿಸಿದನು.

"ನಾನು ಸೀರೆಯನ್ನು ಕದ್ದಿಲ್ಲರಿ. ಅದರ ಮೇಲೆ ಹಾಕಿದ್ದ ಬಾಡೀಸ್ ಮಾತ್ರ ತೆಗೆದಿದ್ದೇನೆ" ಎಂದಳಾಕೆ.

ನೆರೆದವರಿಗೆಲ್ಲ ಬಹಳ ಅಚ್ಚರಿ. "ಅಬ್ಬಾ ಎಂಥ ಚಾಣಾಕ್ಷ ನಾಯಿಯದು! ಕಳ್ಳರನ್ನು ಎಷ್ಟು ಬೇಗ ಹಿಡಿಯುತ್ತದೆ!" ಎಂದು ಉದ್ಗಾರವೆತ್ತಿದರು. ನಂತರ ಅವರಲ್ಲಿ

ಕೆಲವರು, "ಮುದುಕಿಯಾಗಿದ್ದಾಳೆ. ಆ ಫ್ಯಾಶನ್ನಿನ ಬಾಡೀಸ್ ಇವಳಿಗೇಕೆ ಬೇಕಾಯಿತೋ!" ಎಂದು ಮುಸಿ ಮುಸಿ ನಗ ಹತ್ತಿದರು.

"ಖರೇ ಹೇಳತೀರಿ. ನಾ ಸೀರೀ ಕದ್ದಿಲ್ಲರೀ" ಎಂದು ಅವಳು ಗೋಗರೆಯುತ್ತಲೂ ಜಮಾದಾರರು ಆಕೆಯನ್ನು ಹೋಗಗೊಟ್ಟರು.

ಆದರೆ ಸೀರೆ ಕದ್ದವರು ಸಿಕ್ಕಲೇ ಇಲ್ಲವಲ್ಲ?

ಜಮಾದಾರ ಸಾಹೇಬರು ಮತ್ತೆ ತಮ್ಮ ನಾಯಿಯ ಬೆನ್ನನ್ನು ಚಪ್ಪರಿಸಿ, ಕುತ್ತಿಗೆಯನ್ನು ನೇವರಿಸಿ, ಸಂದಣಿಯಲ್ಲಿ ಅದನ್ನು ಕೈಬಿಟ್ಟರು. ಅದು ಈ ಸಲ ಕಾನ್‌ಸ್ಟೇಬಲ್ ನಂ. ೧೮೨ರವನನ್ನು ಹಿಡಿಯಬೇಕೆ? ಆ ನಾಯಿಯು ತನ್ನ ಶರ್ಟನ್ನು ಹಿಡಿಯುವ ಮುಂಚೆಯೇ ಜಾರಿ ಹೋಗಬೇಕೆಂದು ಅವನೇನೊ ಬೇತು ಹಾಕಿದ್ದನು. ಆದರೆ ಆ ನಾಯಿ ಕೇಳಬೇಕಲ್ಲ, ಎಳೆದೇ ಬಿಟ್ಟಿತು.

"ನಾನೇನಾದೂ ಸೀರೆಯನ್ನು ಉಟ್ಟುಕೊಳ್ಳುವವನೆ? ನಾನೇಕೆ ಕಳವು ಮಾಡಲಿ?" ಎಂದು ಅವನು ನುಡಿಯುತ್ತ ಜಮಾದಾರ-ಫೌಜದಾರರ ಎದುರು ಧೈರ್ಯದಿಂದ ಹೋಗಿ ನಿಂತನು. ಮತ್ತು—

"ಬೆಳಿಗ್ಗೆ ನಾನು ಕಾನ್‌ಸ್ಟೇಬಲ್ ನಂ. ೧೧ಳನ್ನು ಮಾತಾಡಿಸಹೋಗಿದ್ದೆ ಅಷ್ಟೆ ದೇವರಾಣೆ ಮಾಡಿ ಖರೇ ಹೇಳತೇನಿ. ನಾ ಕದ್ದಿಲ್ಲ" ಎಂದು ಹೇಳಿದನು.

ಆ ನಾಯಿಗೆ ಮನುಷ್ಯರ ವಾಸನೆ ತಿಳಿಯುತ್ತಿತ್ತು. ಮಾತು ಅರ್ಥ ಆಗುತ್ತಿದ್ದಿಲ್ಲವೇನೊ! ಕೋರ್ಟಿನಲ್ಲಿ ಹೇಳುವಂತೆ 'ದೇವರಾಣೆ' ಮಾಡಿದರೂ ಅದು ಅವನ ಶರ್ಟಿನ ಚುಂಗನ್ನು ಬಿಡಲೇ ಇಲ್ಲ. ಆಗ ನಮ್ಮ ಫೌಜದಾರನು,

"ನೀನು ಏನೂ ಕದ್ದಿಲ್ಲ ಎನ್ನುತ್ತಿ, ಒಪ್ಪುವೆ. ಆದರೆ ಇನ್ನಾವುದೋ ತಪ್ಪು ನೀ ಮಾಡಿರಲಿಕ್ಕೆ ಬೇಕು. ಹೇಳು. ನಿನ್ನೆ ರಾತ್ರಿ ನೀನು ಎಲ್ಲಿ ಇದ್ದೆ?" ಎಂದು ಕೇಳಿದನು.

"ಡ್ಯೂಟಿಯ ಮೇಲೆ ಹೋಗಿದ್ದೆ."

"ಆವಾಗ ಏನಾದರೂ ಲಂಚ-ಗಿಂಚ ತಗೊಂಡೆಯಾ?"

"ಛೇ, ಛೇ, ಹೀಗೆ ಬಹಿರಂಗವಾಗಿ ಕೇಳುವುದೆ?" ನೆರೆದವರೆಲ್ಲರೂ ಮೊಂಡಗೈ ಸಾಹೇಬರನ್ನು ತಮ್ಮೊಳಗೆಯೆ ಬೈದರು. ಅವರ ಪ್ರಶ್ನೆಗಿಂತ ನಾಯಿಗೇ ಹೆಚ್ಚು ಹೆದರಿ ಕಾನ್‌ಸ್ಟೇಬಲ್ ನಂ. ೧೮೨ ಬಾಯಿಬಿಟ್ಟನು.

"ನಿನ್ನೆ ರಾತ್ರಿ 'ಬಹುರಂಜನ ಕ್ಲಬ್'ನ ಮ್ಯಾನೇಜರರಿಂದ ೫೦ರೂ. ಸಾಲ ಇಸಕೊಂಡು ಬಂದಿದ್ದೆ. ನಾ ಏನು ಲಂಚ ತಗೊಂಡಿಲ್ಲ."

'ತಂದದ್ದು ಲಂಚವಲ್ಲ ಸಾಲ' ಎಂಬ ನಿಲುಮೆಯನ್ನು ಒಪ್ಪಬೇಕೆಂದು ಜಮಾದಾರ ಸಾಹೇಬರು ನಿರ್ಧರಿಸಿ, ನಾಯಿಯನ್ನು ತಮ್ಮ ಬಳಿಗೆ ಕರೆದರು. ಆ ಕೂಡಲೇ, ಸೀರೆಯನ್ನು ಕಳೆದುಕೊಂಡಿದ್ದವಳ ಗಂಡ ಕಾನ್‌ಸ್ಟೇಬಲ್ ನಂ. ೧೧ಳ ಜಮಾದಾರರ ಹತ್ತಿರ ಬಂದು—

ಈ ಸಲ ನಾಯಿಯು ಆ ಕಾಲೋನಿಯ ೪-೫ ಮನೆಗಳಲ್ಲಿ ಕೆಲಸ ಮಾಡುವ ಒಬ್ಬ ಒಕ್ಕಲಗಿತ್ತಿಯನ್ನು ಹಿಡಿಯಿತು. ಅವಳ ಬಗೆಗೆ ಒಳ್ಳೆಯವಳೆಂಬ ಪ್ರತೀತಿ ಇದ್ದಿತಾದ್ದರಿಂದ, ಆ ನಾಯಿಯು ಅವಳ ಸೆರಗನ್ನು ಹಿಡಿದದ್ದು ಕೆಲವರಿಗೆ ಸರಿಬರಲಿಲ್ಲ. ''ಯಾರು ಬಲ್ಲರು? ಜಾತಿಗುಣವೊಂದು ಬಿಡಬೇಕಲ್ಲ?'' ಎಂದು ನುಡಿದು ಮತ್ತೊಬ್ಬರು ನಾಯಿಯ ಮಾನ ಕಾಯ ಬಯಸಿದರು.

ಆ ಒಕ್ಕಲಗಿತ್ತಿಯು ಗದಗದ ನಡುಗುತ್ತಾ, ''ನಾನು ಕದ್ದವಳಲ್ಲ, ನಾನೆಂದೂ ಅಂಥ ಕೆಲಸ ಮಾಡಿದವಳಲ್ಲ'' ಎಂದು ಹಲುಬಿದಳು.

''ನಾಯಿಯು ಹಿಡಿದಿದೆಯೆಂದ ಮೇಲೆ ನೀನು ಆ ಮನೆಯ ಕಡೆ ಹೋಗಿದ್ದಿ ಹೌದಲ್ಲೊ?'' ಎಂದರು ಜಮಾದಾರ ಸಾಹೇಬರು.

''ಹೌದರಿ. ನಾ ಹೋಗಿದ್ದು ಕರೇನ್ರೈತಿ. ನಾ... ನು ಅಲ್ಲೆ ಮೇಲೆ ಗೂಡಿನೊಳಗಿದ್ದ ಒಂದು ಬಾಟಲಿಯಿಂದ ಒಂದೀಟು ತೆಗೆದು ಕುಡದೇನ್ರಿ, ಅದೂ ಸ್ವಲ್ಪರೀ'' ಎಂದು ಅಳತೊಡಗಿದಳು.

ಫೌಜುದಾರರಿಗೇ ಕರುಣೆ ಹುಟ್ಟಿ ''ಜಮಾದಾರ್, ಆಕಿನ್ನ ಬಿಟ್ಟು ಬಿಡಿ, ಹೋಗಲಿ'' ಎಂದರು.

ಇಷ್ಟರಲ್ಲಿ ಜನಸಂದಣಿಯಿಂದ ಒಬ್ಬೊಬ್ಬರೇ ಮಾಯವಾಗತೊಡಗಿದರು. ಇತ್ತ ಸೀರೆಯ ಒಡತಿ, ''ತನ್ನ ಸೀರೆಯನ್ನು ಪತ್ತೆ ಮಾಡದ ನೀವು ಎಂಥ ಪೊಲೀಸರು?'' ಎಂದು ಗಂಡನ ಮೇಲೆ ಹಾಕಿ ಎಲ್ಲರನ್ನೂ ಹೀನಾಯವಾಗಿ ಬೈಯತೊಡಗಿದಳು. ಆಗ ಫೌಜುದಾರರು ಹೇಳಿದರು,

''ಜಮಾದಾರ್ ನಾನು ಇಲ್ಲಿಯೇ ಓಡಾಡಿಕೊಂಡು ಇರುವವ, ನಾನೆಲ್ಲಾ ಇದರ ತಪಾಸು ತೆಗೆಯುತ್ತೇನೆ. ಈ ನಾಯಿಯು ಮಾತ್ರ ಇಲ್ಲಿ ಬೇಡ.''

ಅವರು ಕೊನೆಯ ವಾಕ್ಯವನ್ನು ಮುಗಿಸುವಷ್ಟರಲ್ಲಿಯೇ ನಾಯಿಯು ಆ ಫೌಜುದಾರರ ಮೊಂಡುಗೈಯನ್ನು ಹಿಡಿಯಬೇಕೆ? ಅವರು ಕಣ್ಣು ಕೆಂಪಗೆ ಮಾಡಿ ನೋಡಿದರು. ಎಡಗೈಯಲ್ಲಿ ಹಿಡಿದಿದ್ದ ಕಿರುಕೋಲನ್ನು ಅಲುಗಾಡಿಸಿದರು. ತಮ್ಮ ಹಳೆಯ ಬೂಟನ್ನು ಅಪ್ಪಳಿಸಿದರು. ಊಂಹು. ನಾಯಿ ಬಿಡಲಿಲ್ಲ.

ಸೂಕ್ಷ್ಮವನ್ನರಿತ ಜಮಾದಾರರು ಕೇಳಿದರು, ''ನೀವೂ ಇವತ್ತು ಆ ಮನೆಯ ಕಡೆಗೆ ಹೋಗಿದ್ದಿರೇನು?''

''ಊಂಹು. ನಾ ಹೋದದ್ದು ನಿನ್ನೆ ಮಧ್ಯಾಹ್ನ.''

''ಆದರೆ ಆಗ ನಾ ಡ್ಯೂಟಿಯ ಮೇಲಿದ್ದೆನಲ್ಲ?'' ಎಂದನು ಕಾನ್‌ಸ್ಟೇಬಲ್ ನಂ. ೧೧೪.

ಆದರೆ ಹೆಂಡತಿಯು, ''ಹೌದು, ನೀವಿಲ್ಲದಾಗೇ ಆಗಾಗ್ಗೆ ಬಂದು ಪ್ರಯೋಜನಕ್ಕೆ ಬಾರದ ಮಾತನ್ನಾಡಿ ಹೋಗುತ್ತಾನೆ—ಮಂಗ'' ಎಂದು ತನ್ನ ಗಂಡನ ಬದಿಯಲ್ಲಿ ನಿಂತು ಅಕ್ಕಸತನದಿಂದ ನುಡಿದಳು.

ಆ ಮಾತು ತನಗೆ ಕೇಳಿಸಿಯೇ ಇಲ್ಲ ಎನ್ನುವಂತೆ, ಫೌಜದಾರರು (ನಿವೃತ್ತ) "ನನಗೆ ಕೆಲಸವಿದೆ. ನಾ ಹೋಗತೇನಿ. ನೀವೇ ಇದರ ವಿಚಾರಣೆ ಮಾಡಿರಿ." ಎಂದವರೇ ಹೋಗಿಬಿಟ್ಟರು.

"ಎಂಥಾ ಹೊಸ ಸೀರೀ! ಕಳೆದುಬಿಟ್ಟಿತು. ಅದನ್ನ ನೀವು ಹುಡುಕಿ ಕೊಡಲಿಕ್ಕೇ ಬೇಕು" ಎಂದು ಆಕೆ ಜಮಾದಾರರೆದುರು ಹಟ ಹಿಡಿದಳು. ಯಾರನ್ನು ಹಿಡಿಯುವುದು? ಜನವೆಲ್ಲ ಚದರಿ ಹೋಗಿದ್ದಿತು.

ಇತ್ತ ನಾಯಿಯು ಜಮಾದಾರರ ಕೈಯನ್ನು ಕೊಸರಿಕೊಂಡು, ಕಾನ್‌ಸ್ಟೇಬಲ್ ನಂ. ೧೧೪ನೆಯವನ ರಟ್ಟೆಯನ್ನೇ ಹಿಡಿದುಬಿಟ್ಟಿತು.

ಇದೇನೋ ಗಂಡ-ಹೆಂಡತಿಯ ಸಂಚು ಇರಬೇಕೆಂದು ಭಾವಿಸಿ, ಜಮಾದಾರರು ಕಾನ್‌ಸ್ಟೇಬಲ್ ನಂ. ೧೧೪ರವರ ಇನ್ನೊಂದು ರಟ್ಟೆಯನ್ನು ಹಿಡಿದು—

"ನಿಜ ಸಂಗತಿ ಏನೆಂಬುದನ್ನು ಹೇಳಿಬಿಡಯ್ಯ" ಎಂದರು.

"ಸಾಹೇಬ್, ನೀವು ಎಷ್ಟೆಂದರೂ ನನ್ನ ಹಿತಚಿಂತಕರು, ನಿಜ ಸಂಗತಿ ಹೇಳುತ್ತೇನೆ. ಸೀರೆ ಕಳೆದುಹೋಗಿದ್ದೇನೋ ನಿಜ. ಆದರೆ ಅದನ್ನು ನಾನು ಹಣ ಕೊಟ್ಟು ಕೊಂಡದ್ದಲ್ಲ. ಹೋದ ತಿಂಗಳು ನಾವು ಕಿನ್ನಾರ ಓಣಿಯಲ್ಲಿ ಒಬ್ಬನ ಮನೆಗೆ ನುಗ್ಗಿ ಅವನಿಂದ ಕಳವಿನ ಮಾಲನ್ನ ಜಪ್ತಿ ಮಾಡಿದ್ದೆವಷ್ಟೆ. ಅವುಗಳ ಯಾದಿಯನ್ನು ಮಾಡುವಾಗ ಈ ಸೀರೆಯನ್ನು ಉಳಿಸಿಕೊಂಡಿದ್ದೆ. ಹೋಗಲಿ ಬಿಡಿರಿ ಕಳುವಿನ ಮಾಲು ಕಳವಿಗೇ ಹೋಯಿತು. ಮುಖ್ಯವಾಗಿ ಈ ನಾಯಿಯ ಪರೀಕ್ಷೆಯಾದಂತಾಯಿತು. ನಿಜವಾಗಿಯೂ ಅದ್ಭುತ ಪ್ರಾಣಿಯಿದು! ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿಯೂ ಇಂಥ ನಾಯಿ ಇರಬೇಕು ನೋಡಿರಿ! ಸಾಹೇಬ್, ಅಂದಹಾಗೆ ಈ ನಾಯಿಯ ಆರೈಕೆ ಜವಾಬುದಾರಿ ಎಲ್ಲವನ್ನೂ ನಿಮಗೆ ಒಪ್ಪಿಸಿದ್ದಾರಂತಲ್ಲ?"

ಜಮಾದಾರ ಸಾಹೇಬರು ತಮ್ಮ ಬಿಡಿಬಿಡಿ ಮೀಸೆಯ ಮೇಲೆ ಕೈ ಎಳೆದುಕೊಳ್ಳುತ್ತ ಹೌದೆಂದರು.

"ಸಾಹೇಬ್ ನೀವು ದೊಡ್ಡವರು. ಇದಕ್ಕೆ ನೀವು ಚೆನ್ನಾಗಿ ತರಬೇತಿಯನ್ನು ಕೊಡಿರಿ. ಇದನ್ನು ಇಲ್ಲಿಯೇ ಕಾಯಂ ಆಗಿ ಉಳಿಸಿಕೊಂಡು ಬಿಡಿರಿ... ಹ್ಞೆ ಹ್ಞೇ... ನಾನು ಬರುತ್ತೇನೆ. ಠಾಣೆಯಲ್ಲಿ ನಿಮಗೆ ಭೆಟ್ಟಿಯಾಗುವೆ" ಎನ್ನುತ್ತ ಕಾನ್‌ಸ್ಟೇಬಲ್ ನಂ. ೧೧೪ ತನ್ನ ಹೆಂಡತಿಯನ್ನು ಮುಂದಿಟ್ಟುಕೊಂಡು ಹೊರಟೇಬಿಟ್ಟನು.

ಜಮಾದಾರು ನಾಯಿಯ ಕೊರಳಿಗೆ ಪಟ್ಟಿ ಹಾಕಿ ಠಾಣೆಗೆ ಕರೆದುಕೊಂಡು ಮರಳಿ ಹೋಗಬೇಕೆನ್ನುವುದರಲ್ಲಿ ಆ ನಾಯಿಯು ಅವರನ್ನೇ ಹಿಡಿಮುಕೊಂಡಿತು! ಎಲ್ಲೆಲ್ಲಿಯೂ ಬಿಡಲೊಲ್ಲದು. ಅನ್ನ ಹಾಕುತ್ತಿದ್ದ ಸಲಿಗೆಯಿಂದ ಹಾಗೆ ಮಾಡುತ್ತಿದೆಯೇ ಎಂಬ ಯೋಚನೆ ಬಂತು. ಆದರೆ ನಾಯಿಯು ಬಾಲವನ್ನು ಅಲುಗಾಡಿಸದೆ ಟೊಂಕವನ್ನು ಎತ್ತಿ ಕೆಕ್ಕರಗಣ್ಣಿಂದ ಅವರನ್ನೇ ನೋಡುತ್ತಲಿತ್ತು.

ಅಲ್ಲಿ ಯಾರೂ ಇಲ್ಲದಿದ್ದುದನ್ನು ಮನಗಂಡು ಜಮಾದಾರರು ನೆಲದ ಮೇಲೆ ಮಂಡಿಯೂರಿದರು. ದೇವರೆದುರು ಕುಳಿತು ಭಕ್ತನಂತೆ - ಆ ನಾಯಿಗೆ ಹೇಳ ತೊಡಗಿದರು.

''ನನ್ನದು ನಿಜಕ್ಕೂ ತಪ್ಪಾಗಿದೆ. ನಿನ್ನ ಹೊಟ್ಟೆ ನೆತ್ತಿಗೆಂದು ಕೊಡುವ ಹಣದಲ್ಲಿ ಅರ್ಧ ಹಣವನ್ನು ನಾನೇ ಬಳಸಿಕೊಂಡಿದ್ದೇನೆ. ಕ್ಷಮಿಸು. ಈ ಹಿಂದೆ ಬಳಸಿದ್ದನ್ನೆಲ್ಲಾ ನಿನ್ನ ಮುಂದಿನ ಆಹಾರಕ್ಕೆ, ಆರೈಕೆಗೆ ಮೀಸಲಿರಿಸುತ್ತೇನೆ. ನಾಳೆಗೆ ಸಾಬೂನು ತಂದು ಸ್ನಾನ ಮಾಡಿಸುತ್ತೇನೆ.''

ಈ ನಾಯಿಯ ಖ್ಯಾತಿಯು ಬಲುಬೇಗ ಎಲ್ಲ ಕಡೆಗೂ ಹಬ್ಬಿತು.

ಇದು ಜಿಲ್ಲೆಯಂತಹ ಸಣ್ಣ ಕ್ಷೇತ್ರದಲ್ಲಿರದೇ ರಾಜ್ಯ ಮಟ್ಟದಲ್ಲಿದ್ದರೆ ಹೆಚ್ಚು ಪ್ರಯೋಜನವಾಗುವುದೆಂದು ಅಧಿಕಾರಿಗಳಿಗೆ ಅನಿಸಿದ್ದರಿಂದ ಈ ನಾಯಿಯನ್ನು ನಮ್ಮ ರಾಜ್ಯದ ರಾಜಧಾನಿಗೇ ಕಳಿಸಿಕೊಡುವವರಿದ್ದಾರೆಂದು ಸುದ್ದಿ ಹಬ್ಬಿದೆ.

(ಮೂಲ ಕಲ್ಪನೆ: ರಷ್ಯನ್ ಲೇಖಕ ಝೋಶ್ಚೆಂಕೊ ಅವರದು)

ಕಾಮ ‘ದಹನ’

ಮಿಂಗ್ ರಾಜಮನೆತನದ ಐದನೆಯ ತಲೆಮಾರಿನವನ ಕಾಲದಲ್ಲಿ ನಡೆದ ಕಥೆಯಿದು. ರಾಜಸಭೆಗೆ ಸಂಬಂಧಿಸಿದವನಾಗಿ ಹೋ ತಾ-ಚಿಂಗ್ ಎಂಬ ಯುವಕನಿದ್ದ. ಅವನಿಗೆ ವಂಶಪರಂಪರೆಯಾಗಿ ಬಂದ ಹೇರಳ ಆಸ್ತಿಯಿತ್ತು. ಮಾಡಲು ಮಹತ್ವದ ರಾಜಕಾರ್ಯವೇನೂ ಇರಲಿಲ್ಲ. ಸ್ತ್ರೀಸಂಗ ಮತ್ತು ಸಂಗೀತಗಳೆಂದರೆ ಅವನಿಗೆ ಬಲು ಮೋಹ. ಅವನ್ನು ಅರಸಿಕೊಂಡು ಹೋಗುವುದೇ ತನ್ನ ಪುರಾಷಾರ್ಥವೆಂದು ಭಾವಿಸಿದನು. ಹೀಗಿರುವಾಗ ಮನೆಯಲ್ಲಿಯ ಹೆಂಡತಿ ಅವನಿಗೆ ಕಾಲುಕಸ.

ಆಕೆಯು ಅವನನ್ನು ಈ ದುರ್ಮಾರ್ಗದಿಂದ ತಡೆಯಬೇಕೆಂದಳು. ಆಸ್ತಿಪಾಸ್ತಿ ಹಾಳಾಗುತ್ತಿದೆ ಎಂದು ಎಚ್ಚರಿಸಿದಳು. ಅವಳ ಹಿತನುಡಿಯನ್ನು ಕೇಳುವುದಂತಿರಲಿ, ‘‘ಇದ್ದುದರಲ್ಲಿಯೆ ತೃಪ್ತಿ ಪಡದ ಅವಿಧೇಯ ಹೆಣ್ಣು ನೀನು’’ ಎಂದು ಅವಳನ್ನೇ ಜರೆದನು.

ಸ್ವೇಚ್ಛಾ ಪ್ರವೃತ್ತಿಯನ್ನು ಜನ್ಮಜಾತವಾಗಿ ಮಾಡಿಕೊಂಡ ಗಂಡನೊಡನೆ ಅವಳು ಎಷ್ಟೆಂದು ಜಗಳ ಕಾಯಬಲ್ಲಳು? ತಮ್ಮ ಮೂರು ವರ್ಷದ ಮಗು ಇಲ್ಲದಿದ್ದರೆ ಎಂದೋ ಬೌದ್ಧ ಸಂಘವನ್ನು ಸೇರುತ್ತಿದ್ದಳು. ಈಗ ಮನೆಯಲ್ಲಿಯೆ ಮಂತ್ರಧ್ಯಾನಗಳಲ್ಲಿ, ಧರ್ಮ ಸೂತ್ರಗಳನ್ನು ಪ್ರತಿ ಮಾಡುವ ಕಾರ್ಯದಲ್ಲಿ ಹೆಚ್ಚೆಚ್ಚು ಮಗ್ನಳಾದಳು.

ಚೈತ್ರ ಮಾಸದ ಒಂದು ಸಂಜೆ, ನಗರದ ಜನವೆಲ್ಲ ವಸಂತೋತ್ಸವದಲ್ಲಿ ತೊಡಗಿದ್ದಾಗ, ನಮ್ಮ ಹೋ ತಾ-ಚಿಂಗ್ ಸೊಗಸಾದ ವೇಷ ಧರಿಸಿ ಮನೆಯಿಂದ ಹೊರಬಿದ್ದನು. ಅತ್ಯಂತ ಸುಂದರ ಚೆಲೆವೆಣ್ಣುಗಳನ್ನು ಅರಸಿಕೊಂಡು ಹೋಗಬೇಕೆನ್ನುವಷ್ಟು ಮನಸ್ಸು ಆ ದಿನ ಉಲ್ಲಸಿತವಾಗಿತ್ತು. ಆದರೇನು, ಅವನ ಮನವೊಪ್ಪುವ ಕನ್ಯೆಯಾವಳೂ ಕಾಣದಾದಳು. ಅಲ್ಲಿ ಇಲ್ಲಿ, ಸಿಕ್ಕತ್ತ ತಿರುಗಾಡುತ್ತ ಊರ ಹೊರಗೆ ಬಂದನು.

ಗೊತ್ತು ಗುರಿಯಿಲ್ಲದ ಈ ಸಂಚಾರದಲ್ಲಿ ಅವನಿಗೆ ಚಹದ ನೆನಪಾಯಿತು. ಆದರೆ ಊರ ಹೊರಗಿನ ತೋಪುಗಳಲ್ಲಿ ಅವನಿಗೆ ಚಹ ದೊರೆಯುವ ಬಗೆ ಎಂತು? ಅನತಿ ದೂರದಲ್ಲಿ ಒಂದು ಬೌದ್ಧ ಚೈತ್ಯಾಲಯ ಕಂಡಿತು. ಮುಂದಡಿ ಇಟ್ಟನು.

ಸಂಧ್ಯಾಕಾಲದ ಹೊಂಗಿರಣಗಳು ಆ ಮಂದಿರದ ಬದಿಯಲ್ಲಿಯ ವೃಕ್ಷಗಳ ಮೇಲೂ ಮಂದಿರದ ಮೇಲೂ ಪಸರಿಸಿ ಅಪೂರ್ವ ಶೋಭೆಯನ್ನು ತಂದು ಕೊಟ್ಟಿದ್ದವು. ಎಲ್ಲೆಲ್ಲೂ ಚೆಲುವೇ ಚೆಲುವು.

''ಆಹಾ! ಈ ಫೇ ಕುಂಗ್ ಚೈತ್ರಾಲಯದ ಹೆಸರು ಕೇಳಿದ್ದೆ. ಇಲ್ಲಿ ಹೊಚ್ಚ ಹೊಸ ಭಿಕ್ಷುಣಿಯರು ಇದ್ದಿರಬೇಕು. ಅದನ್ನು ಪರೀಕ್ಷಿಸುವ ಅವಕಾಶವೇ ಒದಗಿರಲಿಲ್ಲ. ದೇವರೇ ಇಲ್ಲಿಗೆ ಬರಲು ಪ್ರೇರಣೆ ಇತ್ತನೆನ್ನಬೇಕು'' ಎಂದು ಲಗುಬಗೆಯಿಂದ ಹೆಜ್ಜೆ ಹಾಕಿದನು.

ಅದೊಂದು ವಿಶಾಲವಾದ ಚೈತ್ಯಾಲಯ. ಅಲ್ಲಿ ಗಗನಚುಂಬಿಯಾದ ವೃಕ್ಷಗಳ ಮಧ್ಯೆ ಎರಡು ವಿಹಾರಗಳು ಕಂಡವು. ಒಂದು ಪೂರ್ವ ಬದಿಗೆ ಇದ್ದರೆ ಇನ್ನೊಂದು ಪಶ್ಚಿಮಕ್ಕೆ ಹೋ ತಾ-ಚಿಂಗ್ ಪ್ರಾಂಗಣದ ದೊಡ್ಡ ಬಾಗಿಲು ತೆರೆದು, ಪೂರ್ವ ದಿಕ್ಕಿಗಿರುವ ವಿಹಾರದತ್ತ ಸಾಗಿದನು. ಅಲ್ಲಿಯ ಮೊಗಸಾಲೆಗೆ ಬಂದನು. ಮುಂದುಗಡೆ ಸೊಗಸಾದ ಕೈದೋಟವಿದ್ದಿತು. ಮಂದಮಾರುತನು ಅಲ್ಲಿಯ ವಿವಿಧ ಪುಷ್ಪಗಳ ಪರಿಮಳವನ್ನು ಹರಡುತ್ತಲಿದ್ದನು. ಅದನ್ನು ಆಘ್ರಾಣಿಸುತ್ತ ತಾ-ಚಿಂಗ್ ಬಾಗಿಲನ್ನು ಬಡಿದನು.

ಯಾರೂ ಬರಲಿಲ್ಲ. ಇನ್ನೊಮ್ಮೆ ಬಡಿದನು. ಆಗ ದಾಸಿಯೊಬ್ಬಳು ಬಾಗಿಲನ್ನು ತೆರೆದು ಬಂದಳು. ಅವನನ್ನು ಪಡಸಾಲೆಗೆ ಕರೆತಂದು, ಒಂದು ಆಸನವನ್ನು ತೋರಿದಳು. ಅವನ ಕೋರಿಕೆಯ ಮೇರೆಗೆ ವಿಹಾರದ ಒಡತಿಯನ್ನು ಕರೆಯ ಹೋದಳು.

ಬೌದ್ಧ ವಿಹಾರಕ್ಕೆ ಪುರುಷರು ಯಾರಾದರೂ ಬಂದರೆ, ಸಾಕಷ್ಟು ವಯಸ್ಸಾದ ಭಿಕ್ಷುಣಿಯು ಅವರನ್ನು ಮಾತನಾಡಿಸುವುದು ವಾಡಿಕೆ. ಹರೆಯದ ಭಿಕ್ಷುಣಿಯು ಹೊರಬರುವುದೇ ಇಲ್ಲ; ಕೇವಲ ಅವಳ ಆಪ್ತ ಜನರು ಇಲ್ಲವೆ ಬೋಧಕರು ಮಾತ್ರ ಅವಳನ್ನು ಕಾಣಬಹುದಾಗಿದ್ದಿತು. ಹೋ ತಾ-ಚಿಂಗ್ ಮುದಿವಯದ ಒಡತಿಯು ಬರುವಳೆಂದು ತಿಳಿದಿದ್ದನು. ಆದರೆ ಬಂದವಳು ಎಳೆವರೆಯದ ಸುಕೋಮಲೆ. ಆಹಾ! ಅವಳ ನಡಿಗೆಯಲ್ಲಿ ಅದೆಂಥ ಗಾಂಭೀರ್ಯ! ಇವನ ಸ್ವಾಗತಕ್ಕೆಂದು ಅವಳು ಬಾಗಿದಾಗ, ಅವಳ ಸಮಸ್ತ ಅಂಗಾಂಗವನ್ನು ನುಂಗುವಂತೆ ನೋಡಿದ. ತಾನೂ ಪ್ರತಿಯಾಗಿ ಬಾಗಿದ. ಅವನ ಮನಸ್ಸು ಅವಳ ರೂಪಾತಿಶಯದಲ್ಲಿ ಸಂಪೂರ್ಣ ಲೀನವಾಗಿಬಿಟ್ಟಿದ್ದಿತು. 'ಇಡೀ ದಿನ ಹುಚ್ಚನ ಹಾಗೆ ಅಲ್ಲಲ್ಲಿ ಅಲೆದಾಡಿದೆ ಇಂಥ ನಿರ್ಜನ ಅಡವಿಯಲ್ಲಿ ಸೌಂದರ್ಯದ ಖಣಿಯೇ ದೊರೆತೀತೆಂಬ ಕಲ್ಪನೆ ಇರಲಿಲ್ಲ. ಇದೊಂದು ಅಚ್ಚಳಿಯದ ಮೀಸಲು ಹೂವು! ತುಂಬಾ ಸಹನೆಯಿಂದ ಮುಂದು ವರಿಯಬೇಕು. ನನ್ನೆಲ್ಲ ಪ್ರೇಮ ಚಾತುರ್ಯವನ್ನು ಪ್ರಯೋಗಿಸಬೇಕು. ಕೆಲಸ ಕೈಗೊಡಲಾರದೆ? ನೋಡುವ, ಸ್ತ್ರೀ ಸಂಗದ ನನ್ನ ಹಿಂದಿನ ಅನುಭವ ವ್ಯರ್ಥ ಹೋಗಲಾರದು.'

ಅವಳನ್ನು ಹೇಗೆ ಒಲಿಸಿಕೊಳ್ಳುವುದು ಎಂಬ ಬಗ್ಗೆ ತಾ-ಚಿಂಗ್ ಧೇನಿಸುತ್ತಿದ್ದರೆ, ಅವಳೋ, ಒಳಬರುವುದಕ್ಕೆ ಮುಂಚೆಯೇ ಬಾಗಿಲು ಸಂದಿಯಿಂದ ಅವರನ್ನು ಕಣ್ತುಂಬ ನೋಡಿ, ಸಂಭ್ರಮಗೊಂಡಿದ್ದಳು. ಅವಳಿಗೆ ಏಕಾಂತವಾಸ ಬೇಸರ ತಂದಿತ್ತು. ಆಕೆಯೇ ಮಾತನಾಡಿಸಿದಳು.

''ತಾವು ಯಾರೆಂದು ಕೇಳಿ ತಿಳಿಯಬಹುದೆ?''

''ನನ್ನ ಹೆಸರು ಹೋ ತಾ-ಚಿಂಗ್. ಬದಿಯ ನಗರದಲ್ಲಿ ವಾಸಿಸುವೆ. ತಮ್ಮ ದರ್ಶನ ತೆಗೆದುಕೊಳ್ಳಬೇಕೆಂದು ಯೋಚಿಸಿ ಬಂದೆ. ಈ ಪವಿತ್ರ ಸ್ಥಳದ, ಇಲ್ಲಿಯ ಭಿಕ್ಷುಣಿಯರ ಗುಣಾತಿಶಯದ ಬಗ್ಗೆ ತುಂಬಾ ಕೇಳಿದ್ದೆ.''

''ಛೇ, ನಿಮ್ಮ ಹೊಗಳಿಕೆಗೆ ನಾವು ಯೋಗ್ಯರಲ್ಲ. ಎಷ್ಟೆಂದರೂ ನಗರದಿಂದ ದೂರವಿದ್ದು ಸಾದಾ ಜೀವನ ನಡೆಸುವ ಸಾಮಾನ್ಯ ಭಿಕ್ಷುಣಿಯರು, ಒಳಗೆ ಬನ್ನಿ. ತುಸು ಚಾ ಕುಡಿಯುವಿರಾ?''

ಎಳೆ ಸಿಕ್ಕರೆ ಹಚ್ಚಡವನ್ನೆ ನುಂಗುವ ತಾ-ಚಿಂಗ್, ಚಿಂತೆಯಿಲ್ಲ ನಾನು ನಿರಾಶನಾಗಬೇಕಿಲ್ಲ ಎಂದುಕೊಂಡು ಒಳಗೆ ಕಾಲಿಟ್ಟನು. ಅದೊಂದು ವಿಶಾಲವಾದ ನಡುಮನೆ. ಎರಡೂ ಬದಿಗೆ ಬೇರೆ ಬೇರೆ ಕೋಣೆಗಳಿಗೆ ಹೋಗುವ ಬಾಗಿಲುಗಳು. ಹಲವಾರು ಸುಖಾಸನಗಳು ಕಂಗೊಳಿಸಿದವು. ಮಧ್ಯದಲ್ಲಿ ಸುಂದರವಾದ 'ತಾ ಮೋನ' (ಬೋಧಿ ಧರ್ಮನ) ಮೂರ್ತಿ. ಇನ್ನೊಂದೆಡೆ ಮೂಲೆಯಲ್ಲಿ ಚಿತ್ರಗಳನ್ನು ಕೆತ್ತಲಾದ ಕಟ್ಟಿಗೆಯ ಕಪಾಟು. ಅದರಲ್ಲಿ ಬಹುಶಃ ಬೌದ್ಧ ಸೂತ್ರಗಳ ಪ್ರತಿಗಳಿರಬೇಕು ಎಂದು ತಾ-ಚಿಂಗ್ ಊಹಿಸಿದ. ಏಕೆಂದರೆ ಮೇಲ್ಗಡೆ ಒಂದು ಭೂರ್ಜಪತ್ರದ ಹಸ್ತಪ್ರತಿ ಕಂಡಿತು. ಅದನ್ನು ಕೈಗೆತ್ತಿಕೊಂಡು ನೋಡಿದ. 'ಕುಂಗ್-ಚೋ ಇವಳ ಭಕ್ತಿ ಪೂರ್ವಕ ನಮನಗಳು' ಎಂಬುದಾಗಿ ಅದರ ಕೆಳಗಡೆ ಬರೆದಿದ್ದಿತು.

''ಯಾರು ಈ ಕುಂಗ್-ಚೋ?''

''ನಾನೇ'' ಎಂದಳಾಕೆ.

''ಮುತ್ತಿನಂತಹ ಅಕ್ಷರಗಳು! ನಿಮ್ಮ ಹಾಗೆಯೇ ಮುದ್ದು ಮುದ್ದಾಗಿದೆ'' ಎಂದು ಹೊಗಳುತ್ತ ಪುರಾತನ ಪ್ರತಿಕಾರರ ಕೆಲವು ಹೆಸರನ್ನು ಹೇಳಿದ.

ಒಬ್ಬ ಸೇವಕಿ ಚಾ ತಂದಿಟ್ಟಳು. ಅವಳೆಡೆಗೆ ನೋಡುತ್ತ ತಾ-ಚಿಂಗ್ ಭಿಕ್ಷುಣಿಯನ್ನು ಕೇಳಿದ: ''ಈ ವಿಹಾರದಲ್ಲಿ ನೀವೆಷ್ಟು ಜನ ವಾಸಿಸುತ್ತಿದ್ದೀರಿ? ನಿಮ್ಮ ಒಡತಿ ಎಲ್ಲಿ?''

''ಒಡತಿಯನ್ನು ಸೇರಿ, ನಾವು ನಾಲ್ಕು ಜನ. ಒಡತಿಗೆ ಪಾರ್ಶ್ವವಾಯುವಿನ ಬೇನೆ. ನಾನೇ ಅವರ ಸ್ಥಾನದಲ್ಲಿದ್ದೇನೆ. ಆಕೆ ಮತ್ತು ಇನ್ನೊಬ್ಬಳು ಪರಿಚಾರಿಕೆಯರು. ಇವರಿನ್ನೂ ಭಿಕ್ಷುಣಿಯರಾಗಿಲ್ಲ.''

''ನೀವು ಯಾವಾಗ ಈ ದೀಕ್ಷೆಯನ್ನು ಕೈಕೊಂಡದ್ದು?''

"ನಾನು ೯ ವರ್ಷದವಳಿದ್ದಾಗ ನನ್ನ ತಂದೆ ತೀರಿಕೊಂಡ ಮೇಲೆ ಇಲ್ಲಿಗೆ ನನ್ನನ್ನು ಕರೆತರಲಾಯಿತು. ಆ ಮಾತಿಗೆ ೧೦ ವರ್ಷಗಳೇ ಸಂದುವು."

"ಓ, ಇಂಥ ತರುಣ ವಯಸ್ಸಿನಲ್ಲಿಯೇ ಈ ರುಕ್ಷ ಜೀವನ ನಡೆಸಬೇಕಾಯಿತೆ? ಎಂಥ ದುರ್ದೈವ!"

"ಹಾಗೆ ಹೇಳಬೇಡಿರಿ. ನನಗೆ ನಗರದ ಸಂಸಾರೀ ಹೆಣ್ಣಿನ ಜೀವನಕ್ಕಿಂತ ಇದೇ ಹೆಚ್ಚು ಹಿಡಿಸುತ್ತದೆ."

"ಯಾಕೆಂದು ಕೇಳಬಹುದೆ?"

"ಯಾಕೆಂದ್ರೆ. ಅಂದರೆ-ಹೀಗೆ, ನಮಗೆ ಸಂಸಾರದ, ಮಕ್ಕಳ ಜವಾಬ್ದಾರಿ ಇಲ್ಲ. ಇಡೀ ದಿನ ಸ್ತೋತ್ರ ಅಂತೇವೆ. ಸೂತ್ರಗಳ ಪ್ರತಿ ಮಾಡ್ತೇವೆ. ವಿಶ್ರಾಂತಿ ಬೇಕಾದರೆ ಆ ತಂತಿ ಪರದೆಯ ಹಿಂದೆ ಒರಗುತ್ತೇವೆ. ಬೇಸರ ಬಂದರೆ ಈ ವಾದ್ಯವನ್ನು ನುಡಿಸುತ್ತೇವೆ. ಯಾವ ಬಂಧನವೂ ಇಲ್ಲದ ನಿಶ್ಚಿಂತ ಜೀವನ ನಮ್ಮದು."

ಆ ವಾದ್ಯವನ್ನು ಎದೆಗೆ ಒತ್ತಿ ಹಿಡಿದು ತಾ-ಚಿಂಗ್ ಹೇಳಿದ: "ಅದೇನೊ ಸರಿ. ಜೀವನದಲ್ಲಿ ಜೊತೆಗಾರ ಬೇಕು ಎಂದು ನಿಮಗೆ ಅನಿಸೋದೆ ಇಲ್ಲವೆ? ಹಾಗೇಂತ ನಾ ನಂಬುವದಿಲ್ಲ. ಈಗ ನೋಡಿ, ಈ ನಿರ್ಜನ ಪ್ರದೇಶದಲ್ಲಿ ರಾತ್ರಿ ಒಬ್ಬರೇ ಮಲಗಿದ್ದಾಗ ನಿಮ್ಮಂತಹ ಅಬಲೆಯರಿಗೆ ಹೆದರಿಕೆ ಆಯಿತೆಂದರೆ..."

ಅವನ ಮಾತಿನ ಇಂಗಿತವನ್ನು ಆಕೆ ತಿಳಿದುಕೊಳ್ಳದಿರಲಿಲ್ಲ.

"ಹಾಗೆ ಹೆದರಿದ್ದಾದರೆ ನಿಮಗೇನು ಅದರಿಂದ ಬಾಧೆ?"

"ಯಾರಿಗಾದರೂ ಹಾಗಾದರೆ ನನಗೇನಂತೆ! ಆದರೆ ಅಂಥ ಪ್ರಸಂಗ ನಿಮಗೆ ಸರ್ವಥಾ ಬರಬಾರದೆಂದು ನಾನು ಮನಸಾ ಹಾರೈಸುತ್ತೇನೆ."

ಹೀಗೆಯೇ ಅವರು ಹರಟುತ್ತ ತುಸು ಸಮಯ ಕಳೆದರು. ತಾ-ಚಿಂಗ್ ಹೇಳಿದ: "ನೀವು ಕೊಟ್ಟ ಚಾ ತುಂಬ ರುಚಿಕರವಾಗಿತ್ತು. ಇನ್ನೊಂದು ಬಟ್ಟಲು ಸಿಗಬಹುದೆ?"

ಕುಂಗ್-ಚೋ ಅವನ ಮಾತಿನ ಅರ್ಥವನ್ನು ಮಾಡಿಕೊಳ್ಳದಿರಲಿಲ್ಲ. ಸೇವಕಿಯನ್ನು ಹೊರಕಳಿಸಿದಳು, ಚಾ ತರಲೆಂದು ತಾ-ಚಿಂಗ್ ಗುಣಗುಟ್ಟಿದ: "ನೀವು ಹೇಳಿದ ತಂತಿಯ ಪರದೆಯ ಹಿಂದಿನ ನಿಮ್ಮ ವಿಶ್ರಾಮ ಸ್ಥಳವನ್ನು ನೋಡ ಬೇಕೆನ್ನುತ್ತೇನೆ ತೋರಿಸುವಿರಾ?"

"ಅದ್ಯಾಕೆ ಬೇಕು?" ಎಂದು ಕೇಳಿದವಳು ತಾನೇ ಮೇಲೆದ್ದಳು. ತನ್ನ ಮಲಗುವ ಕೋಣೆಯ ಬಾಗಿಲನ್ನು ಆಕೆ ತೆರೆಯುವುದಕ್ಕೆ ಮುಂಚೆಯೇ ಅವಳನ್ನು ಮೃದುವಾಗಿ ಆಲಂಗಿಸಿದ. ಅವಳು, "ಇಕೋ, ನೋಡಿ" ಎಂದು ಶಯ್ಯಾಗಾರವನ್ನು ತೋರಿಸುವುದಕ್ಕೆ ಬಿಡದೇ ಮುದ್ದಿಸಿದ. ಅವರಿಬ್ಬರೂ ಹೀಗೆ ತನ್ಮಯರಾದಾಗ, ವೇಳೆ ಗತಿಸಿದುದರ ಕಲ್ಪನೆಯೇ ಅವರಿಗೆ ಬರಲಿಲ್ಲ. ಪರಿಚಾರಿಕೆಯು, "ಚಹ

ತಣ್ಣಗಾಗುತ್ತದೆ,'' ಎಂದು ನುಡಿದಾಗ ಕುಂಗ್-ಚೋ ತನ್ನ ಮುಖ ತುಟಿಗಳನ್ನು ಒರೆಸಿಕೊಳ್ಳುತ್ತ ಹೊರಬಂದಳು.

ಮೇಜಿನ ಮೇಲೆ ಚಹ ಮಾತ್ರವಲ್ಲದೆ, ಹಣ್ಣು ಹಂಪಲುಗಳು ಮತ್ತು ದ್ರಾಕ್ಷಾರಸ ಇವನ್ನೂ ತಂದಿರಿಸಲಾಗಿತ್ತು. ಪರಿಚಾರಿಕೆಯರು ವಿಶೇಷ ಬಾಯ್ಬಿಡ ಬಾರದೆಂದು ಕುಂಗ್-ಚೊ ಅವರನ್ನೂ ಅಲ್ಲಿ ಕುಳ್ಳಿರಿಸಿದಳು ಮತ್ತು ತಾ-ಚಿಂಗ್‌ನನ್ನು ಕುರಿತು, ''ಕ್ಷಮಿಸಬೇಕು. ನಾವು ಶುದ್ಧ ಶಾಕಾಹಾರಿಗಳು. ತಮಗೆ ಇದಕ್ಕೂ ಹೆಚ್ಚು ಆತಿಥ್ಯ ಮಾಡದವರಾಗಿದ್ದೇವೆ. ತಮ್ಮಂತಹ ಮಹಾನ್ ಅತಿಥಿಗಳು ಬರುವಿರೆಂಬ ಕಲ್ಪನೆ ನಮಗಿರಲಿಲ್ಲ'' ಎಂದಳು.

ಆದರೆ ಮದ್ಯ ಯಥೇಚ್ಛವಾಗಿದ್ದಿತು. ತಾ-ಚಿಂಗ್ ತನ್ನೆದುರು ಕುಳಿತ ಕುಂಗ್-ಚೋಳ ಬಿಳಿಯ ಮೃದುವಾದ ಕುತ್ತಿಗೆಯನ್ನು ನೀವುತ್ತ ತನ್ನ ಬಟ್ಟಲನ್ನು ಅವಳ ಬಾಯಿಗೆ ಹಿಡಿದನು. ಅದನ್ನು ಅವಳು ಕ್ಷಣದಲ್ಲಿ ಕುಡಿದು ತೀರಿಸಿದಳು. ಈ ಇಬ್ಬರು ದಾಸಿಯರಿಗಂತೂ ದಿಗ್ಭ್ರಮೆಯೇ ಆಗಿಬಿಟ್ಟಿತು. ಅವರ ಮುಂದಿನ ಮುದ್ದಾಟವನ್ನು ನೋಡಲು ನಾಚಿ ಅವರು ಏಳಬೇಕೆನ್ನುವಾಗ ಚೊ ಅವರನ್ನು ತಡೆದಳು. ತಾ-ಚಿಂಗ್ ಅವರಿಬ್ಬರನ್ನೂ ಬದಿಗೆ ನಿಲ್ಲಿಸಿಕೊಂಡು ಇಬ್ಬರಿಗೂ ಒಂದೊಂದು ಮುದ್ದು ಕೊಟ್ಟಾಗ ಅವರಿಗೆ ಹೇಗೆ ಹೇಗೋ ಆಯಿತು.

ಆಗ ಆ ನಾಲ್ವರು ಕಾಮುಕರು, ವಿಶಾಲವಾದ ಆ ಮಂಚದ ಮೇಲೆ ಅರೆನಗ್ನರಾಗಿ ಹೊರಳಾಡುತ್ತ, ಒಬ್ಬರನ್ನೊಬ್ಬರು ಅಪ್ಪಿಕೊಂಡು, ಕೇಕೆ ಹಾಕುತ್ತ ರಾತ್ರಿಯ ಬಹು ಭಾಗವನ್ನು ಹಾಗೇ ಕಳೆದರು. ತಾ-ಚಿಂಗ್ ಎಲ್ಲ ಕಾಮಚೇಷ್ಟೆಗಳನ್ನೂ ಪ್ರಯೋಗಿಸಿ ಆ ಮೂವರನ್ನೂ ತೃಪ್ತಿಪಡಿಸಿದನು. ಅವರಿಗೋ ಆ ಪ್ರಥಮ ಅನುಭವ ಮದ್ಯ ಸೇವನೆಗಿಂತ ಹೆಚ್ಚಿನ ಮತ್ತನ್ನು ಬರಿಸಿತ್ತು. ಅವನು ಅಲ್ಲಿಯೇ ಉಳಿದುಕೊಂಡನು.

ಮರುದಿನ ಬೆಳಿಗ್ಗೆ ಕುಂಗ್-ಚೋ ತನ್ನ ವಿಹಾರದ ದ್ವಾರಪಾಲಕನನ್ನು ಕರೆದಳು. ಅವನನ್ನು ಸಮಜಾಯಿಸಿ ಒಲಿಸಿಕೊಳ್ಳದೆ ಬೇರೆ ದಾರಿಯಿರಲಿಲ್ಲ. ಅವನಿಗೆ ಹಣವನ್ನಿತ್ತುದೇ ಅಲ್ಲದೆ, ಮೀನು, ಮಾಂಸ, ಹಣ್ಣು, ಮದ್ಯಗಳನ್ನು ಪ್ರತಿದಿನ ಗುಟ್ಟಾಗಿ ಪೇಟೆಯಿಂದ ತರಬೇಕೆಂದು ಅಣತಿಯಿತ್ತಳು. ಅವನು ಈ ವಿಹಾರದಲ್ಲಿ ಕೆಲಸಕ್ಕೆ ಸೇರಿದಂದಿನಿಂದ ಮದ್ಯ, ಮಾಂಸಾಹಾರಗಳ ಸವಿಯನ್ನೆ ಮರೆತಂತಾಗಿತ್ತು. ತನಗೂ ಅದರಲ್ಲಿ ಪಾಲು ದೊರೆಯುವುದೆಂದು ಹಿಗ್ಗಿದನು.

ಫೇ-ಕುಂಗ್ ಚೈತ್ಯಾಲಯದಲ್ಲಿ ಎರಡು ವಿಹಾರಗಳಿದ್ದುವಷ್ಟೆ. ಪೂರ್ವ ಬದಿಗೆ ಇದ್ದುದು ಚಿಂಗ್-ಚೆನ್ ಎಂಬುವಳದ್ದು. ಅವಳಿಗೂ ಒಬ್ಬ ದಾಸಿ ಮತ್ತು ಓರ್ವ ಮೇಲ್ಗೆಲಸದ ಆಳು ಇದ್ದರು. ಚಿಂಗ್-ಚೆನ್‌ಳ ದಾಸಿಗೆ, ಎದುರಿನ ವಿಹಾರದವರು ಹಲವಾರು ದಿನಗಳಿಂದ ಮದ್ಯ, ಮಾಂಸಗಳನ್ನು ತರಿಸುತ್ತಿದ್ದುದು ಹೇಗೂ ಗೊತ್ತಾಗಿ ತನ್ನ ಒಡತಿಗೆ ಅದನ್ನು ಅರುಹಿದಳು. ಬೌದ್ಧ ಸಂಘಕ್ಕೆ ಸಂಬಂಧ ಪಡದ ಒಬ್ಬ ವ್ಯಕ್ತಿ

ಬಂದಿರಬೇಕು. ಮತ್ತೆ ಇಷ್ಟು ದಿನ ಅವನು ಎಲ್ಲೂ ಕಣ್ಣಿಗೆ ಬಿದ್ದಿಲ್ಲವಾದ್ದರಿಂದ ಇದರಲ್ಲಿ ಏನೋ ಗುಟ್ಟು ಇರಬೇಕು ಎಂದುಕೊಂಡಳು. ತಕ್ಷಣವೇ ಕುಂಗ್-ಚೋಳ ವಿಹಾರಕ್ಕೆ ಹೊರಟಳು.

ಆ ವಿಹಾರದಿಂದ ಅದೇ ತಾನೇ ದ್ವಾರಪಾಲಕನು ಕೈಯಲ್ಲಿ ಒಂದು ಬುಟ್ಟಿಯನ್ನೂ, ದೊಡ್ಡ ಸೀಸೆಯನ್ನು ತೆಗೆದುಕೊಂಡು ಹೊರಟಿದ್ದ. ''ಅಕ್ಕನವರಿಗೆ ಏನು ಬೇಕಿತ್ತು?'' ಎಂದ.

''ನನ್ನ ಗೆಳತಿಯನ್ನು ಭೆಟ್ಟಿಯಾಗಬೇಕು'' ಎಂದು ಚಿಂಗ್-ಚೆನ್ ನುಡಿದಳು.

''ನಿಲ್ಲಿ. ನೀವು ಬಂದ ವಿಷಯವನ್ನು ಒಡತಿಗೆ ತಿಳಿಸುವೆ,'' ಎಂದು ಅವನೆಂದರೆ, ''ಹೋಗೊ, ಮಧ್ಯಸ್ಥಿಕೆಯೇನೂ ಬೇಡ'' ಎಂದು ಮನೆಯೊಳಗೆ ಹೊರಟಳು.

ದ್ವಾರಪಾಲಕನು ಕೂಡಲೇ ತನ್ನ ಒಡತಿಯ ಕೋಣೆಯ ಹಿಂದಿನ ಕಿಟಕಿಯತ್ತ ಬಂದು, ಚಿನ್-ಚೆಂಗ್‌ಳ ಆಗಮನದ ಸುದ್ದಿಯನ್ನು ಅರುಹಿದನು. ಗಾಬರಿಗೊಂಡ ಕುಂಗ್-ಚೊ ತನ್ನ ಇನಿಯನನ್ನು ಮಂಚದ ಕೆಳಗೆ ಅಡಗಿಸುವುದಕ್ಕೂ ಇವಳು ಒಳ ಬರುವುದಕ್ಕೂ ಸರಿಹೋಯಿತು.

''ಏ ಚದುರೀ. ಭಿಕ್ಷುಣಿಯಾಗಿ ಇದೇ ಏನು ನೀನು ಮಾಡೋದು? ನಮ್ಮ ವೃತ್ತಿಗೇ ಕಳಂಕ ತಂದೆಯಲ್ಲ? ನಡೆ ಸಂಘದ ಗುರಿಕಾರನಲ್ಲಿಗೆ ನಿನ್ನನ್ನು ಕರೆದೊಯ್ಯುವೆ'' ಎಂದು ಅವಳನ್ನು ಎಳೆಯತೊಡಗಿದಳು!

ಕುಂಗ್-ಚೋಳ ಮುಖ ಭೀತಿಯಿಂದ ಬೆಳ್ಳಂಬೆಳ್ಳಗಾಯಿತು. ಗರ ಹೊಡೆದವಳಂತೆ ನಿಂತುಬಿಟ್ಟಳು. ತನ್ನ ಎಳೆಯ ಸ್ನೇಹಿತೆಯ ಆ ಸ್ಥಿತಿಯನ್ನು ನೋಡಿ ಚಿಂಗ್-ಚೆನ್ ಜೋರಾಗಿ ನಗತೊಡಗಿದಳು.

''ಹೆದರಬೇಡ ತಂಗೀ. ನಾನು ಮೋಜಿಗೆ ಹೇಳಿದ್ದು. ಎಲ್ಲಿ ಆ ನಿನ್ನ ಮನುಷ್ಯ? ನಮಗೂ ಸ್ವಲ್ಪ ತೋರಿಸಲ್ಲ? ಎಲ್ಲಿ ಆತ?'' ಎಂದಳು.

ಅವಳು ಹಾಗೆ ಹೇಳದಿದ್ದರೂ ತಾ-ಚಿಂಗ್ ತಾನೇ ಹೊರ ಬರಬೇಕೆನ್ನುವ ವಿಚಾರದಲ್ಲಿದ್ದ! ಮಂಚದ ಕೆಳಗಿನ ಮರೆಯಲ್ಲಿಯೇ ಅವಳನ್ನು ನೋಡಿದ್ದ ತಾ-ಚಿಂಗ್‌ನಿಗೆ ಈ ಹೊಸ ಭಿಕ್ಷುಣಿ ವಿಶೇಷ ಮೋಹಕಳಾಗಿ ತೋರಿದ್ದಳು. ಅವಳ ವಯಸ್ಸು ಸುಮಾರು ಇಪ್ಪತ್ತೈದು ಇರಬೇಕು. ಕುಂಗ್-ಚೋಳ ಎಳಹರೆಯ ಅವಳದಾಗಿರದಿದ್ದರೂ, ಅವಳ ರೂಪ, ಮೈಮಾಟಗಳು ಹೆಚ್ಚು ಮಾದಕವಾಗಿದ್ದವು. ದುಂಬಿಯಂತೆ ಹೊಸ ಹೊಸ ಹೂಗಳನ್ನು ಅರಸುತ್ತ ಹೊರಟಿದ್ದ ತಾ-ಚಿಂಗ್‌ನಿಗೆ ಹೊಸಬಳು ಸ್ವಾಭಾವಿಕವಾಗಿಯೇ ತುಂಬಾ ಹಿಡಿಸಿದಳು.

''ನಿಮ್ಮ ವಿಹಾರ ಎಲ್ಲಿದೆ?'' ಎಂದು ತಾ-ಚಿಂಗ್ ಅವಳಿಗೆ ಸಂಧಿಸಿಯಾದ ಮೇಲೆ ಕೇಳಿದ. ಔಪಚಾರಿಕವಾಗಿ ಅದು, ಇದು ಮಾತಾಡುತ್ತಿದ್ದಾಗ ಚಿಂಗ್-ಚೆನ್

ಅವನ ನಾಗರೀಕ ನಯ-ನಾಜೂಕುಗಳಿಗೆ, ಉತ್ಸಾಹಪೂರ್ಣ ವಚೋವಿಲಾಸಕ್ಕೆ ತುಂಬಾ ಮನಸೋತಳು.

"ಇಂಥ ಅತಿಥಿಯನ್ನು ಮೀಸಲಾಗಿ ಪಡೆದ ನೀನೇ ಧನ್ಯಳು. ಆದರೆ ಇದು ಒಳ್ಳೆಯದಲ್ಲ!" ಎಂದು ತನ್ನ ಗೆಳತಿಗೆ ಹೇಳಿದಳು.

"ಮತ್ಸರಿಸಬೇಡ, ಅಕ್ಕ. ಬೇಕಿದ್ದರೆ ನೀನೂ ಅವರನ್ನು ಕರೆದೊಯ್ಯಬಹುದು," ಎಂದಳು ಕುಂಗ್-ಚೊ.

"ಹಾಗೇ ಆಗಲಂತೆ. ಇಂದು ಸಂಜೆ ಅವರನ್ನು ತಪ್ಪದೇ ಕರೆದು ತಾ," ಎಂದು ಹೇಳಿ, ಆಹ್ವಾನದ ನೋಟದಿಂದ ತಾ-ಚಿಂಗ್‌ನನ್ನು ನೋಡುತ್ತ ತನ್ನ ನಿವಾಸಕ್ಕೆ ಹಿಂತಿರುಗಿದಳು.

ಸಂಜೆ ತಾ-ಚಿಂಗ್ ಮತ್ತು ಕುಂಗ್ ಚೊ ಜೊತೆಯಾಗಿ ಎದುರಿಗಿನ ವಿಹಾರಕ್ಕೆ ಹೊರಟರು. ಅಲ್ಲಿ ಅವರಿಗೆ ಭರ್ಜರಿ ಭೋಜನವೇ ಕಾದಿತ್ತು. ಚಹಾದಿಂದ ಆರಂಭವಾಗಿ ಒಂದು ಹೊರೆ ಮದ್ಯ ಸೇವನೆಯವರೆಗೂ ಈ ಸಂತೋಷ ಕೂಟ ಮುಂದುವರಿಯಿತು. ತಾ-ಚಿಂಗ್ ತನ್ನ ಹೊಸ ಕನ್ಯೆಯನ್ನು ತೊಡೆಯ ಮೇಲೆಯೂ, ಹಳಬಳನ್ನು ಬದಿಯಲ್ಲಿಯೂ ಕೂಡ್ರಿಸಿಕೊಂಡು ಲಲ್ಲೆಗೈದ. ಅಲ್ಲಿಯೂ ಒಬ್ಬ ಪರಿಚಾರಿಕೆ ಇದ್ದಳಲ್ಲವೆ? ಬೆರಳು ಹಿಸುಕುತ್ತ ನಿಂತಿದ್ದ ಅವಳೆಡೆಗೆ ಇವರ ಪರಿವೆ ಇರಲಿಲ್ಲ.

ತುಸು ಹೊತ್ತಾದ ಮೇಲೆ ಕುಂಗ್-ಚೊ ಹೊರಟು ನಿಂತಳು. ತಾ-ಚಿಂಗ್‌ನನ್ನು ಕುರಿತು, "ನಾಳೆ ಬೆಳಿಗ್ಗೆ ಬಂದು ನಿಮ್ಮನ್ನು ಕರೆದೊಯ್ಯುವೆ. ಅಂ!" ಎಂದು ಹೇಳಿ ಪರಿಚಾರಿಕೆಯಿಂದ ದೀಪವನ್ನು ಹಿಡಿಸಿಕೊಂಡು ತನ್ನ ವಿಹಾರಕ್ಕೆ ಹಿಂತಿರುಗಿದಳು.

ಮೈಕೈಯಲ್ಲಿ ಹೆಚ್ಚು ತುಂಬಿಕೊಂಡಿದ್ದ ಚಿಂಗ್ ಚೆನ್‌ಳ ಅಂಗಸುಖದಲ್ಲಿ ಈ ವಿಟ ಪುರುಷನು ಹೆಚ್ಚಿನ ಆಮೋದವನ್ನು ಕಂಡು ಪಶುಗಳಂತೆ ರಾತ್ರಿಯೆಲ್ಲ ಪರಸ್ಪರರ ತೆಕ್ಕೆಯಲ್ಲಿ ಹೋರಾಡಿ, ಅದಾವಾಗಲೋ ದಣಿದು ಬಿದ್ದಿದ್ದರು, ಕುಂಗ್ ಚೊ ಬೆಳಿಗ್ಗೆ ಬಂದು ನೋಡಿದಾಗ.

ತಾ-ಚಿಂಗ್‌ನ ಜಾರಕರ್ಮವು ಹೀಗೆಯೇ ಸಾಗಿತು. ಒಬ್ಬರಲ್ಲ, ನಾಲ್ವರು ಕಾಮಿನಿಯರು ನಾ ಮೊದಲು, ತಾ ಮುಂದೆ—ಎಂದು ಮುಗಿಬಿದ್ದು ಬರುತ್ತಿದ್ದಾಗ ಅವನಿಗೆ ತನ್ನಂತಹ ಸುಖಿಗಳೇ ಇಲ್ಲವೆನಿಸಿತು. ಅವರಾರಿಗೂ ಹೊಟ್ಟೆಯ, ದುಡಿಮೆಯ ಪ್ರಶ್ನೆ ಇರಲಿಲ್ಲ. ಯಾರಾದರೂ ನೋಡಿದರೆ ಏನೆಂದಾರು ಎಂಬ ಹೆದರಿಕೆ ಇರಲಿಲ್ಲ. ವಾರಕ್ಕೊಮ್ಮೆ ಬಂದು ಹೋಗುವ ಗುರಿಕಾರನ ಪರಿವೆಯಿರಲಿಲ್ಲ. ಹಗಲು, ರಾತ್ರಿಯೆಂಬ ಭೇದವೂ ಇಲ್ಲದೆ ಸರತಿಯ ಮೇಲೆ ರತಿಕ್ರೀಡೆಯಲ್ಲಿ ನಿರತರಾಗಿದ್ದರು. ಹೀಗೆ ದಿನಗಳಲ್ಲ, ಎರಡು ತಿಂಗಳುಗಳೇ ಸಂದುವು.

ಅಷ್ಟರವರೆಗೆ ತಾ-ಚಿಂಗ್‌ನಿಗೆ ಮನೆಯ, ಮಡದಿ-ಮಕ್ಕಳ ನೆನಪೆಂಬುದೇ ಆಗಿಲಿಲ್ಲ. ಆಗ ಅದೇಕೊ ಮನೆಗೆ ಹಿಂತಿರುಗಬೇಕೆಂದು ಅನಿಸಿತು!

ಒಂದು ದಿನ ಹಾಗೆ ಹೇಳಿ ನೋಡಿದ. ಅವರೋ ನರಮಾಂಸದ ರುಚಿಯನ್ನು ಕಂಡ ಹೆಣ್ಣು ಹುಲಿಗಳಂತಿದ್ದರು! ''ಊಂಹು, ಇನ್ನು ಕೆಲವು ದಿನ ನಮ್ಮಲ್ಲಿಯೇ ಇರುವ ಕೃಪೆ ಮಾಡಿರಿ. ನಿಮ್ಮ ಪರಾಮರಿಕೆಯಲ್ಲಿ ನಮ್ಮಿಂದ ಏನಾದರೂ ತಪ್ಪಾಗಿದ್ದರೆ ಹೇಳಿರಿ. ನಮಗೆ ನಗರದ ಹೆಣ್ಣು ಮಕ್ಕಳ ರೀತಿ-ನೀತಿ ತಿಳಿಯವು'' ಎಂದು ಸೋಗಿನ ಮಾತನಾಡಿದರು.

ಮತ್ತೆ ಕೆಲವು ದಿನಗಳು ಉರುಳಿದುವು. ತಾ-ಚಿಂಗ್‌ನಿಗೆ ಈಗ ಅವರ ಅಂಗ ಸುಖ ಬೇಸರ ಬರಿಸುತ್ತಿತ್ತು. ಆದರೆ ಅವರು ಬಿಡಬೇಕಲ್ಲ! ಹಾಗಾಗಿ ಮೇಲಿಂದ ಮೇಲೆ ಮನೆಗೆ ಹಿಂತಿರುಗುವ ಮಾತನಾಡುತ್ತಲಿದ್ದ.

''ನಾನು ನಿಮ್ಮನ್ನು ಬಿಟ್ಟೇ ಹೋಗುವೆನೆಂದು ದಯವಿಟ್ಟು ತಿಳಿಯಬೇಡಿರಿ. ನೀವು ತೋರಿದ ಆದರ, ಅನುರಾಗಗಳನ್ನು ನಾನು ಎಂದೂ ಮರೆಯಲಾರೆ. ಕೆಲವೇ ದಿನ ಮನೆಗೆ ಹೋಗಿ, ಮತ್ತೆ ಖಂಡಿತ ಬರುವೆ. ೪-೫ ದಿನ ಮಾತ್ರ'' ಎಂದು ಹೇಳಿಕೊಂಡನು. ಪರಿಣಾಮ ಆಗದಿದ್ದಾಗ, ಹಟ ಹಿಡಿದನು.

ಕುಂಗ್-ಚೊ ತನ್ನ ಜೊತೆಗಾತಿಯ ವಿಹಾರಕ್ಕೆ ಹೋಗಿ, ''ಅಕ್ಕಾ, ಏನು ಮಾಡೋಣ. ಅವರನ್ನು ಕೆಲವು ದಿನದ ಮಟ್ಟಿಗೆ ಕಳಿಸೋಣವೆ?'' ಎದು ಕೇಳಿದಳು.

ಈ 'ಅಕ್ಕ' ಬಲು ಧೂರ್ತೆ. ''ಅವನೇನೊ ತಿರುಗಿ ಬರುವ ವಿಚಾರವನ್ನು ನಿಜವಾಗಿಯೆ ಇಟ್ಟುಕೊಂಡಿರಬಹುದು. ಆದರೂ ಎರಡೂವರೆ ತಿಂಗಳು ಕಳೆದ ಮೇಲೆ ತನ್ನ ಗಂಡನನ್ನು ಪಡೆದ ಅವನ ಹೆಂಡತಿಯು ಹಾಗೆ ಬಿಟ್ಟುಕೊಡಲಿಕ್ಕಿಲ್ಲ'' ಎಂದಳು.

''ಹಾಗಾದರೆ ಏನು ಮಾಡೋಣ?'' ಎಳೆಯಳ ಪ್ರಶ್ನೆಯಿದು.

''ನನಗೊಂದು ಉಪಾಯ ಹೊಳೆದಿದೆ. ಹಾಗೆ ಮಾಡಿದ್ದಾದರೆ ಕೊನೆವರೆಗೂ ಆತ ನಮ್ಮಲ್ಲಿಯೇ ಉಳಿಯುಂತಾಗುವುದು.''

''ಏನದು ಉಪಾಯ?''

''ಅವನನ್ನೂ ಭಿಕ್ಷುಣಿಯನ್ನಾಗಿ ಮಾಡಿಬಿಡೋಣ. ಹೇಗೂ ನೋಡುವುದಕ್ಕೆ ಮುಂಡು ಮುಖದವನಾಗಿದ್ದಾನೆ!'' ತನ್ನ ಧೂರ್ತ ಉಪಾಯದ ಫಲಶ್ರುತಿಯನ್ನು ನೆನೆದು ಅವಳಿಗೇ ನಗೆ ಬಂದಿತು. ಇಬ್ಬರೂ ಅವರ ವಿವರಗಳನ್ನು ಗೊತ್ತು ಪಡಿಸಿ ಕೊಂಡರು.

ಕುಂಗ್-ಚೊ ಮನೆಗೆ ಬಂದವಳೇ, ''ನಿಮ್ಮ ಇಷ್ಟದಂತೆಯೇ ಆಗಲಿ, ಆದರೆ ವಾಪಸು ಬರುವಿರಿ, ತಾನೇ? ಮುಗ್ಧ ಸ್ವಭಾವದ ನಮ್ಮನ್ನು ಮೋಸಗೊಳಿಸು ವುದಿಲ್ಲವಷ್ಟೆ? ನೀವು ಅಂಥವರಲ್ಲ ಎಂದು ಬಾರಿಬಾರಿಗೂ ಹೇಳಿ, ಅಕ್ಕನನ್ನು ಹೇಗೋ ಒಪ್ಪಿಸಿದ್ದೇನೆ. ಇಂದು ರಾತ್ರಿ ನಾವು ನಿಮಗೆ ವಿದಾಯ ಭೋಜನ ಕೂಟವನ್ನು ಏರ್ಪಡಿಸಿದ್ದೇವೆ. ನಾಳೆ ಬೆಳಿಗ್ಗೆ ನೀವು ಹೋಗುವಿರಂತೆ,'' ಎಂದು ನುಡಿದಳು.

ಆ ರಾತ್ರಿ ಅತ್ಯಂತ ಸಮೃದ್ಧಿಯ ಭೋಜನದ ವ್ಯವಸ್ಥೆಯಾಗಿದ್ದಿತು. ಇಬ್ಬರೂ ಭಿಕ್ಷುಣಿಯರು ಅವನ ಗುಣಾತಿಶಯಗಳನ್ನು ಹೊಗಳಿದರು. ಮರಳಿ ಬರಲೇಬೇಕು—ಎಂದು ಅಂಗಲಾಚಿದರು. ಊಟ ಮುಗಿದ ಮೇಲೆ ಅವನಿಗೆ ಕಂಠಪೂರ್ತಿ ಮದ್ಯ ಕುಡಿಸಿದರು. ಕಣ್ಣು ತೆರೆದಿದ್ದರೂ ಅವನ ಮತಿ ಸಂಪೂರ್ಣ ಮಂದವಾಗಿದ್ದಿತು. ಅವನನ್ನು ಚಿಂಗ್-ಚೆನ್ ಕೂಡ್ರಿಸಿ, ಹಿಡಿದುಕೊಂಡಳು. ಕುಂಗ್-ಚೊ ಅವನ ಕಪ್ಪಾದ ತಲೆಗೂದಲನ್ನೆಲ್ಲ ಕತ್ತಿಯಿಂದ ತರಿದು ಹಾಕಿದಳು! ಆಮೇಲೆ ಅವನನ್ನು ಬಳಿಯಲ್ಲಿಯ ಹಾಸಿಗೆಯ ಮೇಲೆ ಮಲಗಿಸಿದರು.

ಮರುದಿನ ಬೆಳಿಗ್ಗೆ ಸೂರ್ಯ ಉದಯನಾಗಿ ಸಾಕಷ್ಟು ಸಮಯವಾಗಿರಬೇಕು. ಹೋ ತಾ-ಚಿಂಗ್ ನಿದ್ದೆಯಿಂದ ಎದ್ದು ಕಣ್ಣು ತೆರೆದ. ಬಳಿಯಲ್ಲಿ ಕುಂಗ್-ಚೊ ಕಂಡಳು. ಪ್ರಸನ್ನಭಾವದಿಂದ ಅವಳೆಡೆಗೆ ನೋಡುತ್ತ, ಹಾಸಿಗೆಯ ಮೇಲೆಯೇ ಎದ್ದು ಕುಳಿತ. ತಲೆಯ ಮೇಲಿನ ಭಾರ ಕಡಿಮೆಯಾದ ಹಾಗೆ ಫಕ್ಕನೆ ಅನಿಸಿತು. ತಲೆಗೆ ಕೈಯಿರಿಸಿ, ಬದಿಯ ಕನ್ನಡಿಯಲ್ಲಿ ನೋಡುತ್ತಾನೆ; ಬೋಳು ತಲೆ! ಅವಸರದ ಕೆರೆತದಲ್ಲಿ ಒಂದೆರಡು ಕೂದಲು ಉಳಿದಿರಬಹುದಿತ್ತು ಅಷ್ಟೇ.

''ಇದೇನು ಮಾಡಿಬಿಟ್ಟಿರಿ!'' ಎಂದು ಬೇಸರದಿಂದ ಕೇಳಿದ. ''ಇಂಥ ತಲೆಯಿಟ್ಟುಕೊಂಡು ನಾನು ನಗರದಲ್ಲಿ ಹೋಗುವುದಾದರೂ ಹೇಗೆ?''

ಅವನ ಕೊರಳಿಗೆ ಜೋತು ಬಿದ್ದು ಕುಂಗ್-ಚೊ, ''ನಮ್ಮನ್ನು ಕ್ಷಮಿಸಿರಿ. ನಮಗೆ ನಿಮ್ಮನ್ನು ಬಿಟ್ಟಿರುವುದು ಅಸಾಧ್ಯವೇ ಎನಿಸಿತು. ಅದರ ವಿಚಾರವೇ ನಿನ್ನೆ ನಮಗೆ ದುಸ್ವಪ್ನವಾಯಿತು. ನೀವು ಏನು ಶಿಕ್ಷೆ ವಿಧಿಸಿದರೂ ಅದಕ್ಕೆ ನಾವು ಸಿದ್ಧ. ಇನ್ನು ಕೆಲವಾದರೂ ದಿನ ನಮ್ಮಲ್ಲಿಯೆ ಇರಿ'' ಎಂದೆಲ್ಲ ಗೋಗರೆದಳು.

''ನನ್ನನ್ನು ನೀವು ಇಲ್ಲಿ ನಿಲ್ಲಿಸಿಕೊಳ್ಳಬೇಕೆನ್ನುವ ನಿಮ್ಮ ಅಪೇಕ್ಷೆ ಸಹಜವೇ ಆದರೂ, ನೀವು ನನ್ನನ್ನು ವಂಚಿಸಿದಿರಿ!''

ತಾ-ಚಿಂಗ್ ಹಾಗೆಂದು ಸಿಟ್ಟಿನಿಂದ ಹೇಳಿದನೇನು? ಇಲ್ಲ, ನಿಸ್ಸಹಾಯನಾಗಿ ನುಡಿದಿದ್ದ. ಆದದ್ದಾಯಿತು. ಇನ್ನು ಕೆಲವು ದಿನ ಹೇಗೂ ದೂಡುವೆ ಎಂದುಕೊಂಡನು. ತುಸು ಸಮಯದ ನಂತರ ಚಿಂಗ್-ಚೆನ್ ಬಂದಳು. ಮತ್ತದೇ ಪಲ್ಲವಿ. ಅವನನ್ನು ತನ್ನಲ್ಲಿಗೆ ಕರೆದೊಯ್ದು ರಂಜಿಸಿ, ತನ್ನ ಸರದಿ ಮುಗಿದ ಮೇಲೆ, ಪೂರ್ವ ವಿಹಾರಕ್ಕೆ ಸಾಗ ಹಾಕಿದಳು.

ಈ ರೀತಿಯಾಗಿ ಒಂದು ಅಂಗಣದಿಂದ ಇನ್ನೊಂದು ಅಂಗಣಕ್ಕೆ ಒಗೆಯುವ ಚೆಂಡಿನಂತೆ ಅವರಿಬ್ಬರೂ ಅವನನ್ನು ನಡೆಸಿಕೊಂಡರು. ಮಧ್ಯೆ ಪೂರ್ವ ವಿಹಾರದ ದಾಸಿಯರೂ ಆಗೀಗ ಪಾಲು ಬೇಡುವವರು. ಇದೆಲ್ಲ ಅವನ ಹೊಸ ಭಿಕ್ಷುಣಿಯ ವೇಗದಲ್ಲಿಯೇ! ತಾ-ಚಿಂಗ್‌ನಿಗೆ ಕ್ರಮೇಣ ಸ್ತ್ರೀ ಸಂಗವೇ ವಾಕರಿಕೆ ಬರುವಂತಾಯಿತು. ಯೋಧನು ಎಷ್ಟೇ ಪರಾಕ್ರಮಿಯಿದ್ದರೂ ದಣಿದು ಹೋಗಿದ್ದರೆ, ವೈರಿಗಳನ್ನು ಎದುರಿಸಲು ಸಾಧ್ಯವೆ? ಅದೂ ನಾಲ್ವರನ್ನು ! ತಾ-ಚಿಂಗ್‌ನ ಸ್ಥಿತಿ

ಹಾಗೆಯೇ ಆಯಿತು. ಆ ರಕ್ಕಸಿಯರು ಅವನ ಸತ್ವನ್ನೆಲ್ಲ ಹೀರಿಬಿಟ್ಟರು. ದೈಹಿಕ ಬಲವೆಲ್ಲ ಉಡುಗಿ, ಅವನು ಸೊರಗಿ ಹೋದ. 'ಇವರು ಸ್ವಾರ್ಥಪರರು. ನನ್ನನ್ನು ವಂಚಿಸಿದರು' ಎಂಬುದು ತಿಳಿದಿದ್ದರೂ, ಅದರ ತೀವ್ರತೆ ಇರದಷ್ಟು ಅವನು ಮಾನಸಿಕವಾಗಿಯೂ ನಿರ್ವಿಣ್ಣನಾಗಿದ್ದ.

ಕೆಲವೇ ದಿನಗಳಲ್ಲಿ ಅವನು ಹಾಸಿಗೆ ಹಿಡಿದ. ತನ್ನ 'ಕರ್ತವ್ಯ'ದಿಂದ ತಪ್ಪಿಸಿಕೊಳ್ಳಲು ಹೀಗೆ ಮಾಡುತ್ತಿದ್ದಾನೆ ಎಂದು ಆ ಭಿಕ್ಷುಣಿಯರು ಮೊದಮೊದಲು ತಿಳಿದರು! ಆದರೆ ಜ್ವರದಿಂದ ಅವನ ಮೈ ಕೆಂಡವಾದಾಗ ಮೇಲಿಂದ ಮೇಲೆ ಅವನ ಮೈ ಸೆಟೆದು ನಡುಗುತ್ತಿದ್ದಾಗ ನಿಜಕ್ಕೂ ಅವರಿಗೆ ವಿವಂಚನೆಯಾಯಿತು. ತಮ್ಮೊಳಗೆ ಯೋಚಿಸಿದರು.

ಮನೆಗೆ ಕಳಿಸೋಣವೆ? ಬೇಡ. ಅವನ ಬೋಳು ತಲೆಯ ಬಗ್ಗೆ ಹೆಂಡತಿ ವಿಚಾರಿಸಿದರೆ ಈ ಸ್ಥಿತಿಯಲ್ಲಿ ಅವನು ನಿಜಸಂಗತಿಯನ್ನು ಅರುಹಬಹುದು. ಆಗ ತಮ್ಮ ಗುಟ್ಟು ಹೊರಬಿದ್ದು, ಬೌದ್ಧ ಸಂಘದಿಂದಲೇ ಹೊರಹಾಕಲ್ಪಡಬಹುದು. ಇನ್ನು ಇಲ್ಲಿಯೇ ಇರಿಸಿಕೊಂಡದ್ದಾದರೆ, ಇನ್ನೆಷ್ಟು ದುಃಸ್ಥಿತಿ ಪ್ರಾಪ್ತವಾದೀತು. ಅವನು ಸತ್ತು ಹೋದರೆ, ಹೆಣವನ್ನು ಎಲ್ಲಿ ಸಾಗಿಸುವುದು? ಗುರಿಕಾರನ ಮೂಲಕ ಧರ್ಮದರ್ಶಿಗಳಿಗೆ ಗೊತ್ತಾದರೆ ತಮ್ಮ ಜೀವಕ್ಕೇ ಸಂಚಕಾರ...

ಕೊನೆಗೆ ತುಸುವಾದರೂ ಗುಣಪಡಿಸಿ ಅವನನ್ನು ಸಾಗಹಾಕಬೇಕೆಂದು ಕೊಂಡರು. ಆದರೆ ವೈದ್ಯನನ್ನು ಕರೆತರುವುದು ಶಕ್ಯವೇ ಇರಲಿಲ್ಲ. ದ್ವಾರಪಾಲಕರನ್ನು ಕರೆದು, ರೋಗದ ಲಕ್ಷಣ ಹೇಳಿ, ಒಬ್ಬ ಅಡ್ಡ ಕಸಬಿನ ವೈದ್ಯನಿಂದ ಔಷಧ ತರ ಹೇಳಿದರು. ಹಾಗೆ ತಂದ ಮೂಲಿಕೆಗಳನ್ನು ಈ ಭಿಕ್ಷುಣಿಯರು ಮುತವರ್ಜಿಯಿಂದ ಕುದಿಸಿ ಔಷಧ ತಯಾರಿಸಿದರು. ತುಂಬಾ ಆರೈಕೆ ಮಾಡಿದರು.

ಆದರೇನು, ತಾ-ಚಿಂಗ್‌ನ ಬೇನೆ ಹೆಚ್ಚುತ್ತಲೇ ಹೋಯಿತು. ಕುಂಗ್-ಚೊ, "ನಿಮಗೆ ಬೇಗ ಖಂಡಿತ ಗುಣವಾಗುವುದು. ಗುರು ಧರ್ಮ ಬೋಧನಿಗೆ ಹರಕೆ ಹೊತ್ತಿದ್ದೇನೆ," ಎಂಬುದಾಗಿ ಸಮಾಧಾನ ಹೇಳುವಳು. ನಿಜವಾಗಿ ದುಃಖಿಸುವಳು.

ಇತ್ತ ಅವನಿಗೆ ಮನೆಯ ಗೀಳು ಅತಿಯಾಯಿತು. ಅವನು ಕುಂಗ್-ಚೋಳ ಕೈಹಿಡಿದು ಹೇಳಿದನು: "ನನ್ನದೊಂದು ಮಾತು ನಡಿಸುವಿಯಾ? ಇಕೋ, ನನ್ನ ಡಾಬು, ಮದುವೆಯ ಕಾಲಕ್ಕೆ ನಾವು ಗಂಡ ಹೆಂಡತಿ ಮಾಡಿಸಿಕೊಂಡದ್ದು. ಇದನ್ನು ನನ್ನ ಪತ್ನಿಗೆ ಮುಟ್ಟಿಸುವಿಯಾ? ಅಂದರೆ ಅವಳು ಇದ್ದಲ್ಲಿಂದ ಬಂದು ಭೆಟ್ಟಿಯಾಗು ವಳು. ಸಾಯುವ ಮುಂಚೆ ಅವಳನ್ನೂ, ಮಗುವನ್ನೂ ನೋಡಬೇಕೆನ್ನುತ್ತೇನೆ. ಹೇಳು ಕುಂಗ್, ಇದೊಂದು ಮಾತನ್ನು ನಡೆಸಿಕೊಡುವಿಯಾ?" ಎಂದು ಹೇಳುತ್ತ ತಾ-ಚಿಂಗ್ ಅದನ್ನು ತೆಗೆದುಕೊಟ್ಟ.

"ಅವಶ್ಯವಾಗಿ ಕಳುಹಿಸುತ್ತೇನೆ," ಎಂದು ಹೇಳುತ್ತ ಕುಂಗ್-ಚೊ ಅದನ್ನು ತೆಗೆದುಕೊಂಡು ಹೊರಬಂದಳು. ಚಿಂಗ್-ಚೆನ್‌ಳನ್ನು ಕರೆಯಿಸಿ ಅವಳ ಸಲಹೆ ಕೇಳಿದಳು.

''ಛೇ, ಸರ್ವಥಾ ಕೂಡದು. ಒಂದು ಹೋಗಿ ಇನ್ನೊಂದಾದೀತು.''

''ಹಾಗಿದ್ದರೆ ಇದನ್ನೇನು ಮಾಡೋಣ?''

ಚಿಂಗ್-ಚೆನ್ ಅದನ್ನು ಇಸಿದುಕೊಂಡು ಮೇಲ್ಭಾವಣಿಯ ಮೇಲೆ ಒಗೆದು ಬಿಟ್ಟಳು.

''ನಿನ್ನ ಹೆಂಡತಿಗೆ ಡಾಬನ್ನು ಕಳಿಸಿದ್ದೆವು. ಅವಳು ಬರಲು ಒಪ್ಪಲಿಲ್ಲ ಎಂದು ಹೇಳು. ಹೆಚ್ಚು ವಿಚಾರಿಸಿದರೆ, ನಾವೇನು ಅವಳನ್ನು ಎಳೆದು ತರುವುದಕ್ಕಾಗುತ್ತದೆಯೆ? ಎಂದು ಕೇಳು.''

ತಾ-ಚಿಂಗ್ ನಿತ್ಯವೂ ತನ್ನ ಹೆಂಡತಿಯ ಬಗ್ಗೆ ವಿಚಾರಿಸುತ್ತಿದ್ದ. ಆಮೇಲೆ ಅದರ ಆಸೆ ಬಿಟ್ಟ. ತಾನು ಅವಳನ್ನು ಅಲಕ್ಷ್ಯ ಮಾಡಿದ್ದಕ್ಕಾಗಿ ಅವಳು ತಿರಸ್ಕಾರ ಹೊಂದಿರಬೇಕು ಎಂದು ತಿಳಿದ. ಸಣ್ಣ ಮಕ್ಕಳಂತೆ ಗಳಗಳನೆ ಅತ್ತ.

ಅವನ ಅಂತ್ಯದ ಗಳಿಗೆಯ ದಿನದ ಲೆಕ್ಕದಿಂದ ತಾಸಿಗೆ ಇಳಿಯಿತು. ಕೊನೆಗೊಮ್ಮೆ ಪ್ರಾಣಪಕ್ಷಿ ಹಾರಿಹೋದಾಗ, ಇಬ್ಬರೂ ಭಿಕ್ಷುಣಿಯರು ಉಕ್ಕಿ ಬರುವ ಬಿಕ್ಕಳಿಕೆಯನ್ನು ಬಿಗಿಯಾಗಿ ಒತ್ತಿ ಹಿಡಿದರು. ಅಳುತ್ತ ಕೂಡ್ರುವ ಸಮಯ ಅದಾಗಿರಲಿಲ್ಲ. ಎಲ್ಲರೂ ಸೇರಿ ಶವವನ್ನು ಪನ್ನೀರಿನಿಂದ ತೊಳೆದರು. ಹೊಸ ಬಟ್ಟೆ ತೊಡಿಸಿದರು. ಕತ್ತಲಾಗುತ್ತಲೂ ದ್ವಾರಪಾಲಕರಿಬ್ಬರೂ ಪೂರ್ವ ವಿಹಾರದ ಹಿತ್ತಲಲ್ಲಿದ್ದ ಸೈಪ್ರಸ್ ಗಿಡದ ಹಿಂದೆ ತಗ್ಗು ತೋಡಿ, ಅಂಟು ಸುಣ್ಣವನ್ನು ಸುರಿದರು. ಶವ ಪೆಟ್ಟಿಗೆಗಾಗಿ ಅವರು ಯೋಚಿಸಬೇಕಾಗಿರಲಿಲ್ಲ. ವಿಹಾರದ ಹಿರಿಯೊಡತಿಗಾಗಿ ಮಾಡಿದುದು ಇದ್ದೇ ಇತ್ತು! ಅದರಲ್ಲಿ ಆ ಶವವನ್ನು ಮಲಗಿಸಿ, ಮೊಳೆ ಹೊಡೆದು, ಅವಸರವಸರವಾಗಿ ಹೊತ್ತುಕೊಂಡು ನಡೆದರು. ತಗ್ಗಿನಲ್ಲಿ ಅದನ್ನಿರಿಸಿದ ಮೇಲೆ ಪುನಃ ಅಂಟು ಸುಣ್ಣವನ್ನು ಅದರ ಮೇಲೆ ಸುರಿಯಲಾಯಿತು. ಮಣ್ಣು ಹಾಕಿ ಆ ಭಾಗವನ್ನು ಸಮನೆಲವನ್ನಾಗಿ ಮಾಡಲಾಯಿತು. ತಾ-ಚಿಂಗ್‌ನೊಡನಿದ್ದ ತಮ್ಮ ಮೂರು ತಿಂಗಳ ಸಂಬಂಧ ಅಲ್ಲಿಗೆ ಮುಗಿದು, ತಾವು ನಿಶ್ಚಿಂತರಾದೆವೆಂದು ಭಾವಿಸಿ ಅವರು ತಮ್ಮ ನಿವಾಸಗಳಿಗೆ ಹಿಂತಿರುಗಿದರು. ತಾ-ಚಿಂಗ್‌ನು ಎಷ್ಟೇ ಸ್ತ್ರೈಣನಾಗಿದ್ದರೂ, ತನ್ನ ಮನೆಯಲ್ಲೇ ಸತ್ತಿದ್ದರೆ ಒಳ್ಳೆಯ ರೀತಿಯಲ್ಲಿ ಉತ್ತರಕ್ರಿಯೆ ನಡೆಯಬಹುದಿತ್ತು. ಅವನ ದುರ್ದೈವವೆನ್ನಬೇಕು, ಗತಿಗಾಣದೇ ಸತ್ತುಹೋದ.

ಇಲ್ಲಿಗೆ ಹೋ ತಾ-ಚಿಂಗ್‌ನ ಕತೆ ಮುಗಿಯಿತೆನ್ನೋಣವೆ? ಇಲ್ಲ! ಮುಂದಿನದೇ ಬಹಳಷ್ಟಿದೆ. ಆ ವಸಂತೋತ್ಸವದ ದಿನ, ತಾ-ಚಿಂಗ್‌ನ ಹೆಂಡತಿ ಅವನ ಬರವನ್ನು ಕಾಯ್ದಳು. ಮೂರು ದಿನಗಳವರೆಗೆ ಕಾಯ್ದಳು. ತುಂಬಾ ಹುಡುಕಿದಳು. ವಾರಗಳುರುಳಿದರೂ ಮರಳಿ ಬಾರದಿದ್ದಾಗ ಬಹಳಷ್ಟು ದುಃಖಿಸಿದಳು.

ಮಳೆಗಾಲ ಬಂದಿತು. ಹಿಂದಿನ ವರ್ಷ ಹೋ ತಾ-ಚಿಂಗ್‌ನ ಅಲಕ್ಷ್ಯದಿಂದ ಸೋರುವ ಜಾಗಗಳ ರಿಪೇರಿ ಮಾಡಿಸಿರಲಿಲ್ಲ. ಈ ವರ್ಷ ಮಳೆಗಾಲ ಕಳೆದ ಮೇಲೆ ಶ್ರೀಮತಿ ಹೋ ಆ ಕೆಲಸಕ್ಕೆ ಆಳುಗಳನ್ನು ಹಚ್ಚಿದಳು.

ಅವರಲ್ಲಿ ಒಬ್ಬ ತನ್ನ ಗಂಡ ಹಾಕುತ್ತಿದ್ದಂತಹ ಡಾಬು ಧರಿಸಿದ್ದನ್ನು ಕಂಡಳು. ಅವನು ಕುವಾಯಿ ಎಂಬೊಬ್ಬ ಬಡಿಗ. ಅವನಿಗೆ ಹೇಳಿ ಕಳುಹಿಸಿ ತನ್ನ ಕೋಣೆಗೆ ಕರೆಯಿಸಿಕೊಂಡಳು.

ಆ ಡಾಬನ್ನು ಕೈಗೆತ್ತಿಕೊಂಡಾಗ ಅದು ತನ್ನ ಗಂಡನದೇ ಎಂದು ಗೊತ್ತಾಯಿತು.

ಫೇ-ಕುಂಗ್ ಚೈತ್ಯಾಲಯದ ಪೂರ್ವ ವಿಹಾರದಲ್ಲಿ ೧೫ ದಿನಗಳ ಹಿಂದೆ ಅದು ದೊರೆತ ಸುದ್ದಿಯನ್ನು ಬಡಿಗ ಹೇಳಿದಾಗ ಶ್ರೀಮತಿ ತಾ-ಚಿಂಗ್‌ಳಿಗೆ ತುಂಬಾ ಅಚ್ಚರಿ. ತನ್ನ ಗಂಡನಿಗೆ ಧಾರ್ಮಿಕ ಮನೋವೃತ್ತಿ ಅದೆಂದು ತಲೆದೋರಿದೆ? ಎಂದು.

"ಅಲ್ಲಿಯ ಒಡತಿ ಯಾರು?"

"ಚಿಂಗ್-ಚೆನ್ ಹಾಗೂ ಕುಂಗ್-ಚೋ."

"ಅವರ ವಯಸ್ಸೆಷ್ಟು?"

"ಇಪ್ಪತ್ತರ ಒಳ-ಹೊರಗಿರಬಹುದು."

"ಆ ವಿಹಾರದಲ್ಲಿ ನಿನಗೆ ಎಲ್ಲಿ ದೊರಕಿತು?"

"ನಾನು ಪಶ್ಚಿಮ ವಿಹಾರದ ರಿಪೇರಿಗೆಂದು ಹೋಗಿದ್ದೆ. ಪೂರ್ವ ವಿಹಾರದ ಮಾಳಿಗೆಯ ಮೇಲೆ ಏನೋ ಹೊಳೆಯುತ್ತಿದ್ದುದನ್ನು ಕಂಡು ಇದನ್ನು ತಗೊಂಡು ಬಂದೆ. ಅಮ್ಮಾ, ಇದರ ಬಗ್ಗೆ ಇಷ್ಟೊಂದು ವಿಚಾರಿಸುತ್ತಿದ್ದೀರಿ?"

"ಏನು ಹೇಳಲಪ್ಪ! ಇದು ನನ್ನ ಗಂಡನ ಡಾಬು. ಅವರ ದುಂಬಿಯಂತಹ ಸ್ವಭಾವ ಗೊತ್ತಿದ್ದದ್ದೇ ಇದೆ. ಆ ಭಿಕ್ಷುಣಿಯರು ಅವರನ್ನು ಅಡಗಿಸಿಟ್ಟಿರಬೇಕು. ನಡೆ, ಬರುವೆ. ಆ ಹುಡುಗಿಯರನ್ನು ಕೇಳುತ್ತೇನೆ."

"ಚೈತ್ಯಾಲಯದಲ್ಲಿ ನಾನು ೮-೧೦ ದಿನ ಕೆಲಸ ಮಾಡ್ತಾ ಇದ್ದೆ. ನಿಮ್ಮ ಒಡೆಯರ ಸುದ್ದಿಯನ್ನೇ ನಾನು ಕೇಳಿಲ್ಲವಲ್ಲ."

ಶ್ರೀಮತಿ ತಾ-ಚಿಂಗ್‌ಗಳಿಗೆ ದಿಗಿಲಾಯಿತು. ತನ್ನ ಆಪ್ತ ಜನರನ್ನು ಜೊತೆಗೆ ಕರೆದುಕೊಂಡು ಹೋಗಿ, ಗಂಡನನ್ನು ಹುಡುಕಿಸಬೇಕೆಂಬ ಯೋಚನೆಯೂ ಸುಳಿದು ಹೋಯಿತು. ಆದರೆ ಒಂದು ವೇಳೆ ಆತ ಅಲ್ಲಿ ಸಿಕ್ಕದೆ ಹೋದರೆ, ನಿರಪರಾಧಿ ಭಿಕ್ಷುಣಿಯರ ಮೇಲೆ ವೃಥಾಪವಾದ ಹೊರಿಸಿದಂತಾಗುವುದಲ್ಲವೆ? ಆಗ ಕುವಾಯಿಯನ್ನು ಕುರಿತು ಹೇಳಿದಳು: "ಅಪ್ಪಾ, ಹೇಗಾದರೂ ಮಾಡಿ ನನ್ನ ಗಂಡನ ವರ್ತಮಾನವೇನಾದರೂ ಸಿಕ್ಕರೆ ತರುತ್ತೀಯಾ? ನಿನಗೆ ಕೈತುಂಬಾ ಉಡುಗೊರೆಯನ್ನು ಕೊಡುವೆ. ನನ್ನ ಮುತ್ತೈದೆತನವನ್ನು ಉಳಿಸಿದ ಪುಣ್ಯ ಬರುತ್ತದೆ."

ಕುವಾಯಿಯು ಅನೇಕ ವರುಷಗಳಿಂದ ಹೋ ಕುಟುಂಬದವರ ವಿಶ್ವಾಸಿಕ ಬಡಿಗನಾಗಿದ್ದ. ಶ್ರೀಮತಿ ಹೋಳ ಧರ್ಮಬುದ್ಧಿ ಹಾಗೂ ಧಾರಾಳತನದ ಅರಿವೂ ಅವನಿಗಿದ್ದಿತು.

"ತಾಯೀ, ಅವಶ್ಯ ಮಾಡುವೆ. ಹೇಗೂ ಆ ಪಶ್ಚಿಮ ವಿಹಾರದ ಒಡತಿಯಿಂದ ನನ್ನ ಸಂಬಳವನ್ನು ತಂದಿಲ್ಲ. ಅಲ್ಲಿಗೆ ಮತ್ತೆ ಹೋಗುವೆ."

ಮರುದಿನವೇ ಕುವಾಯಿ ಆ ಚೈತ್ಯಾಲಯಕ್ಕೆ ಬಂದು ಮೊದಲು ಪೂರ್ವ ವಿಹಾರದಲ್ಲಿ ಕಾಲಿಟ್ಟನು. ಅದರ ಮೇಲ್ಚಾವಣಿಯಲ್ಲಿ ತಾನೇ ಅವನು ಡಾಬನ್ನು ಕಂಡಿದ್ದುದು. ಆದರೆ ಅಲ್ಲಿರುವ ಕೋಣೆಗಳಿಗೆಲ್ಲ ಬೀಗ ಹಾಕಿದ್ದಿತು. ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಅಡಿಗೆಯ ಮನೆಯಿಂದ ಕಿಲಕಿಲ ಧ್ವನಿ ಕೇಳಿತು. ಕಿಡಕಿಯಲ್ಲಿ ತುಸು ಹಣಕಿ ನೋಡಿದ. ಆಗ ಅವನು ಕಂಡ ದೃಶ್ಯವೇ ವಿಚಿತ್ರ. ಒಬ್ಬ ಹುಡುಗಿಯನ್ನು ಇನ್ನೊಬ್ಬಳು ತಬ್ಬಿಕೊಂಡು ಗಂಡಸಿನಂತೆ ಪ್ರೇಮಚೇಷ್ಟೆಗಳಲ್ಲಿ ತೊಡಗಿದ್ದಾಳೆ! "ಯಾಕೆ ಹಾಗೆ ಕೂಗುತ್ತೀಯೆ? ಹೇಗೂ ಒಬ್ಬ ಗಂಡಸಿನ ರುಚಿ-ನೋಡಿದ್ದೀಯಲ್ಲ?" ಎಂದು ವಯಸ್ಸಿನಿಂದ ತುಸು ದೊಡ್ಡವಳಾದವಳು ಹೇಳುತ್ತಿದ್ದಾಳೆ.

ಕುವಾಯಿ ಇನ್ನೂ ತುಸು ಮೋಜು ನೋಡುತ್ತಲಿದ್ದ. ಆದರೆ ಒಮ್ಮೆಲೆ ಸೀನು ಬಂತು! ಅವನ ಒಂಟಿ ಸೀನು ಅವರಿಬ್ಬರು ದಾಸಿಯರನ್ನು ಬಡಿದೆಬ್ಬಿಸಿತು. ಅವರು ಕೂಡಲೇ ಅಗಲಿದರು. ಕುವಾಯಿಯು, "ಏನಿಲ್ಲ, ಕುಂಗ್ ಜೊ ಎಲ್ಲಿಯೂ ಕಾಣಲಿಲ್ಲಾಂತ ಬಂದೆ" ಎಂದು ಹೇಳುತ್ತ ಅವರ ಬೈಗುಳನ್ನು ಲೆಕ್ಕಿಸದೆ ಪಶ್ಚಿಮದ ವಿಹಾರಕ್ಕೆ ಬಂದ.

"ಬಂದೆಯಾ ಕುವಾಯಿ? ನಮ್ಮ ಒಡತಿ ನಿನ್ನನ್ನು ಕರೆತರಲು ಹೇಳಿದ್ದಳು. ನೀನಾಗಿ ಬಂದು ನನ್ನ ಶ್ರಮ ಉಳಿಸಿದ್ದಿ. ಇನ್ನೇನೊ ಕೆಲಸ ಮಾಡಿಸುವದಿದೆಯಂತೆ" ಎಂದು ದ್ವಾರಪಾಲಕನು ಅವನನ್ನು ಸ್ವಾಗತಿಸಿದನು.

"ಬೋಧಿಸತ್ವನ ಈ ಪ್ರತಿಮೆಗೆ ಒಂದು ಸುಂದರವಾದ ಪೀಠವನ್ನು ಸಿದ್ಧಪಡಿಸ ಬೇಕಾಗಿದೆ. ಹೇಗೂ ಒಬ್ಬರು ಅದಕ್ಕೆ ಬೇಕಾದ ಕಟ್ಟಿಗೆಯನ್ನು ಕೊಟ್ಟಿದ್ದಾರೆ." ಎಂದು ಚಿಂಗ್-ಚೆನ್ ಕೆಲಸ ಹೇಳಿದಾಗ ಕುವಾಯಿಗೆ ಸಂತೋಷವೇ ಆಯಿತು. ತಾ-ಚಿಂಗ್‌ನ ಬಗ್ಗೆ ಸುಳುಹು ದೊರೆಯಬಹುದಲ್ಲ?

ಅವನು ಕೆಲಸವನ್ನು ಆರಂಭಿಸಿದ ಎರಡನೆಯ ದಿನ ಚಿಂಗ್-ಚೆನ್ ಸಹಜವಾಗಿ ನೋಡುವುದಕ್ಕೆಂದು ಬಂದಳು. ಬುದ್ಧನ ಪ್ರತಿಮೆಯ ಮುಂದೆ ಇರಿಸಿದ ನಂದಾ ದೀಪದ ಎಣ್ಣೆ ತೀರುತ್ತ ಬಂದದ್ದು ಕಂಡಿತು. ತನ್ನ ದಾಸಿಯನ್ನು ಕರೆದು ತೈಲವನ್ನು ತರ ಹೇಳಿದಳು. ಆದರೆ ಆಕೆ ಪ್ರತಿಮೆಗೆ ತಾಕದಂತೆ ಎಚ್ಚರದಿಂದ, ಸಮೆಯಲ್ಲಿ ಎಣ್ಣೆ ಸುರುವ ಹೋದಾಗ, ಇನ್ನೇನೊ ಕೈಗೆ ತಾಗಿ ತುಂಬಿದ ಎಣ್ಣೆಯ ಪಾತ್ರೆಯು ದಾಸಿಯ ಕೈಯಿಂದ ಉರುಳಿ, ಕೆಳಗೇ ಕುಳಿತಿದ್ದ ಚಿಂಗ್-ಚೆನ್‌ಳ ಮೈಮೇಲೆ ಬಿದ್ದಿತು. ಭುಜದಿಂದ ಕಾಲ್ಗನಕ ಅವಳಿಗೆ ಎಣ್ಣೆಯ ಸ್ನಾನ! ಚಿಂಗ್-ಚೆನ್‌ಳಿಗೆ ಕೋಪ ಒಮ್ಮೆಲೆ ಭುಗಿಲ್ಲೆಂದು ಚಿಮ್ಮಿತು. ಆ ದಾಸಿಯ ಕೂದಲನ್ನು ಹಿಡಿದವಳೇ, "ಮುಂಡೇ, ಎಷ್ಟು ಅಲಕ್ಷ್ಯ!" ಎಂದು ಒಂದೇ ಸಮನೆ ಹೊಡೆಯತೊಡಗಿದಳು. ಆ ದಾಸಿಯು

ಆರ್ತನಾದವನನ್ನು ಕೇಳಲಾಗದೇ ಕುವಾಯಿ ತನ್ನ ಉಳಿಯನ್ನು ಕೆಳಗೆ ಎಸೆದವನೆ, ಬಿಡಿಸಹೋದ. ಆದರೆ ಚಿಂಗ್-ಚೆನ್‌ಳ ರೋಷ ಹೆಚ್ಚುತ್ತಲೇ ಹೋಯಿತು. ಹೊಡೆ ಹೊಡೆದು ಸುಸ್ತಾದ ಮೇಲೆಯೇ ಅವಳು ದಾಸಿಯ ಕೂದಲನ್ನು ಕೈಬಿಟ್ಟದ್ದು.

ಚಿಂಗ್-ಚೆನ್ ಬಟ್ಟೆ ಬದಲಿಸಲು ಒಳಗೆ ಹೋದ ಮೇಲೆ, ದಾಸಿಯು ನರಳುತ್ತಲೇ ಇದ್ದಳು. ಹೊಡೆತಕ್ಕಿಂತ ಕೂದಲೆಳೆತದ ನೋವು ಹೆಚ್ಚಾಗಿದ್ದಿತು. ನೆಲಕ್ಕೆ ಚೆಲ್ಲಿದ ಎಣ್ಣೆಯನ್ನು ತನ್ನ ನೆತ್ತಿಗೆ ಮೃದುವಾಗಿ ಹಚ್ಚಿಕೊಳ್ಳುತ್ತಲೆ ಆಕೆ ನುಡಿದಳು: ''ನಾನು ಕೈತಪ್ಪಿ ಎಣ್ಣೆ ಚೆಲ್ಲಿದ್ದಕ್ಕೆ ಇಷ್ಟು ಹೊಡೆಯೋದೆ? ಬೇಕೆಂದೇ ಕೊಲೆ ಮಾಡಿಸಿದ ಇವಳಿಗೆ ಶಿಕ್ಷೆಯಾಗದೇ ಇದ್ದೀತೆ? ದೇವರು ನೋಡಿಕೊಳ್ಳುವ.''

ಕುವಾಯಿ ಚಕಿತನಾದ. ಅವಳಿಗೆ ಎದ್ದು ಕೂಡಲು ಸಹಾಯ ಮಾಡುತ್ತ ಅವಳ ಬಾಯಿ ಬಿಡಿಸಿದ.

ನಿಜ ಸಂಗತಿಯೆಂದರೆ ಕುಂಗ್-ಚೋಳ ದಾಸಿಯರಿಗೆ ದೊರೆತ ಪುರುಷ ಸಂಗ ಇವಳಿಗೆ ದೊರೆತಿರಲಿಲ್ಲ! ಇವಳೂ ಹರೆಯದ ವಯಸ್ಸಿನವಳೇ. ತಾನು ಇದ್ದುದರ ಪರಿವೆಯೇ ಇಲ್ಲದೇ ತನ್ನ ಒಡತಿ ಚಿಂಗ್-ಚೆನ್ ಹತ್ತಾರು ಸಲ ನೂರಾರು ರೀತಿಯಲ್ಲಿ ತನ್ನ ವಿಟನೊಡನೆ ಪ್ರೇಮವಿಲಾಸಗಳಲ್ಲಿ ತೊಡಗಿದ್ದನ್ನು ನೋಡಿದ್ದಳು. ಆದರೆ ಚಿಂಗ್-ಚೆನ್ ತಾ-ಚಿಂಗ್‌ನನ್ನು ತನ್ನ ದಾಸಿಯೆಡೆಗೆ ಹರಿದಾಡಬಿಟ್ಟಿರಲಿಲ್ಲ. ತನ್ನೊಡನೆಯೇ ನಿಲ್ಲಿಸಿಕೊಳ್ಳುತ್ತಿದ್ದಳು.

ಈ ದಾಸಿಗೆ ಆ ಸಿಟ್ಟು ಇದ್ದೇ ಇತ್ತು. ಅದರ ಭರದಲ್ಲಿ ಎಲ್ಲ ಸಂಗತಿಯನ್ನೂ ಕುವಾಯಿಗೆ ಹೇಳಿಬಿಟ್ಟಳು. ಅವನು ಇನ್ನೂ ಕೇಳುವವನಿದ್ದ. ಅನಿತದಲ್ಲಿ ದ್ವಾರಪಾಲಕ ಬಂದನಾದ್ದರಿಂದ ಅವರ ಮಾತು ನಿಂತಿತು. ದಾಸಿಯು ದುಸುಮುಸುಗುಟ್ಟುತ್ತ ಒಳಗೆ ಹೋದಳು.

ಪೂರ್ವ ವಿಹಾರದ ದಾಸಿಯರ ಪ್ರೇಮ ಸಲ್ಲಾಪದ ಅರ್ಥ ಕುವಾಯಿಗೆ ಆಗ ಹೊಳೆಯಿತು. ಅವಸರವಸರದಲ್ಲಿ ಆ ದಿನದ ಕೆಲ ಮುಗಿಸಿ ಕುವಾಯಿ ತಾ-ಚಿಂಗ್‌ನ ಮನೆಗೆ ಧಾವಿಸಿ ಬಂದ.

ಮರುದಿನ ನಸುಕಿನಲ್ಲಿ ಶ್ರೀಮತಿ ತಾ-ಚಿಂಗ್ ಕುವಾಯಿಯನ್ನು ಮುಂದಿಟ್ಟು ಕೊಂಡು ೧೦-೧೫ ಜನ ಪರಿವಾರದೊಡನೆ ಅಲ್ಲಿಗೆ ಬಂದಳು. ದ್ವಾರಪಾಲಕನಿಗೆ ಅವರು ಯಾತ್ರಿಕರಂತೆ ಕಂಡರು. ಅರ್ಧದಷ್ಟು ಜನ ಅಲ್ಲಿಯೇ ತಡೆದು ನಿಂತರು. ಉಳಿದವರು ತನ್ನ ವಿಹಾರದ ಬಳಿಗೆ ಬರುತ್ತಿದ್ದುದನ್ನು ಕುಂಗ್-ಚೊ ನೋಡಿದಳು. ಬಂದವರು ಕುವಾಯಿ ಬಡಿಗನ ಮನೆ ಜನ, ಪೂಜೆಗಾಗಿ ಬಂದಿದ್ದಾರೆ ಎಂದು ತಿಳಿದಳು. 'ಭಕ್ತ'ರನ್ನು ಇದಿರುಗೊಳ್ಳಲು ಆಕೆ ಸಜ್ಜಾಗುವಷ್ಟರಲ್ಲಿ ಅವರೆಲ್ಲ ಹಿತ್ತಲಿನತ್ತ ಸಾಗಿದ್ದರು. ನೇರವಾಗಿ ಸೈಪ್ರಸ್ ಗಿಡದತ್ತ! ಅವರಲ್ಲಿ ಕೆಲವರು ಹಾರೆ, ಸಲಿಕೆ, ಗುದ್ದಲಿಗಳನ್ನು ಹಿಡಿದಿದ್ದನ್ನು ಕಂಡ ಮೇಲೆಯೇ ಕುಂಗ್-ಚೋಳಿಗೆ ಅವರ ಆಗಮನದ ಕಾರಣ ತಿಳಿದುದು. ಕುಂಗ್-ಚೋ ಥರ ಥರ ನಡುಗಿದಳು.

ಕೂಡಲೇ ಧಾವಿಸಿದಳು—ತನ್ನ ವಾಲುಗಾರ್ತಿಯ ವಿಹಾರಕ್ಕೆ. ಅವಳ ದಾಸಿಯರೂ ಗಾಬರಿಗೊಂಡು ಹಿಂಬಾಲಿಸಿದರು. ಹೌಹಾರಿದವರಾಗಿ ಚಿಂಗ್-ಚೆನ್‌ಳ ಕೋಣೆಯಲ್ಲಿ ಎಲ್ಲರೂ ಕಲೆತಿದ್ದಾಗ ದ್ವಾರಪಾಲಕ ಬಂದು ಹೊರಗಿನ ದ್ವಾರವನ್ನು ಖಡ್ಗ ಪಾಣಿಗಳಾಗಿ ಹಲವಾರು ಜನರು ಕಾಯುತ್ತಿದ್ದುದಾಗಿ ತಿಳಿಸಿದ; ಮುಂದೇನು ಮಾಡುವುದೆಂದು ಕೇಳಿದ. ಇನ್ನೊಬ್ಬ ದ್ವಾರಪಾಲಕನು ಸೈಪ್ರಸ್ ಗಿಡದಡಿಯಲ್ಲಿ ಜನರು ಜೋರಿನಿಂದ ತಗ್ಗು ನೋಡುತ್ತಿದ್ದುದನ್ನು ವರದಿ ಮಾಡಿದನು.

''ಅಯ್ಯೋ ಇನ್ನೇನು ಗತಿ?''

''ಹೇಗೆ ಗುಟ್ಟು ಗೊತ್ತಾಯಿತು.''

''ಕುವಾಯಿ ಮಹಾ ನೀಚ. ಅವನೇ ಎಲ್ಲರನ್ನೂ ಕರೆತಂದವ.''

''ಅವನಿಗಾದರೂ ಹೇಗೆ ಗೊತ್ತಾಯಿತು?''

''ಯಾರೋ ನಮ್ಮಲ್ಲಿಯವರೇ ಹೇಳಿರಬೇಕು.''

''ಅಂತೂ ನಮ್ಮೆಲ್ಲರ ಕುತ್ತಿಗೆ ಕೊಯ್ದರು.''

ಆಗ ಚಿಂಗ್-ಚೆನ್ ಹೇಳಿದಳು: ''ಅದೆಲ್ಲ ಯೋಚಿಸುವುದಕ್ಕೆ ಸಮಯವಿಲ್ಲ. ಹೇಗಾದರೂ ಮಾಡಿ ಇಲ್ಲಿಂದ ಕಾಲ್ತೆಗೆಯಬೇಕು.''

''ಎಲ್ಲಿಗೆ ಹೋಗೋದು?''

''ಎಲ್ಲಿಗಾದರೂ! ಸುಡುಗಾಡಿಗೆ!! ಮೊದಲು ಇಲ್ಲಿಂದ ಹೊರಡಬೇಕು'' ಎಂದಳು.

ಪಶ್ಚಿಮ ವಿಹಾರದ ಹಿಂದಿನ ಬೇಲಿಯು ಒಂದೆಡೆ ಬಿಚ್ಚಿ ಹೋಗಿದ್ದುದು ಇವರಿಗೆ ಮಾತ್ರ ಗೊತ್ತು. ಆ ನಾಲ್ವರೂ ಹೆಂಗಳೆಯರು ಅದರ ಮೂಲಕ ಹೊರಬಿದ್ದು ಅಡವಿಯನ್ನು ಹೊಕ್ಕರು. ತುಸು ದೂರ ಹೋದ ಮೇಲೆ ಸದ್ಯದ ಕುತ್ತಿನಿಂದ ತುಸುವಾದರೂ ಪಾರಾದೆವೆಂದು ತಿಳಿದು ಮುನ್ನಡೆದರು.

ಇತ್ತ ನಮ್ಮ ಶೋಧಕ ತಂಡದವರೇನು ಮಾಡಿದರೆಂಬುದನ್ನು ನೋಡೋಣ. ಅವರಿಗೆ ನಿರ್ದಿಷ್ಟ ಸ್ಥಳವೇನೊ ಸಿಕ್ಕಿತು. ಆದರೆ ಒಂದು ಹೊರೆ ಅಂಟು ಸುಣ್ಣವನ್ನು ಸುರಿದಿದ್ದರಿಂದ ಹಾರೆ-ಗುದ್ದಲಿಗಳು ಸರಾಗವಾಗಿ ಕೆಲಸ ಮಾಡದಾದವು. ಹೀಗೆಯೇ ನಾಲ್ಕು ತಾಸು ಶ್ರಮಿಸಿದ ನಂತರ ಶವ ಪೆಟ್ಟಿಗೆ ತೋರಿಬಂತು. ಆದರೆ ಅದರ ಮೇಲೆಯೂ ಅಂಟು ಸುಣ್ಣವಿದ್ದುದರಿಂದ ಒಡೆಯುವುದಕ್ಕೆ ಕಷ್ಟವಾಯಿತು. ಇತ್ತ ಶ್ರೀಮತಿ ತಾ-ಚಿಂಗ್‌ಳಿಗೆ ಅತಿಯಾದ ಆತುರ, ಸಂಕಟ.

ಕೊನೆಗೊಮ್ಮೆ ಅದನ್ನು ಒಡೆಯಲಾಯಿತು. ಅವರೆಲ್ಲ ಶವವನ್ನು ನೋಡಲು ಮುಗಿಬಿದ್ದರು. ಆದರೆ ಅವರಿಗೆ ಅಲ್ಲಿ ಕಂಡದ್ದೇ ಬೇರೆ. ಅದೊಂದು ಭಿಕ್ಷುಣಿಯ ಶವವಾಗಿತ್ತು! ಆಗ ಅವರಿಗಾದ ದಿಗಿಲು ಎಷ್ಟೆಂದರೆ, ಹೆಚ್ಚಿನ ಪರೀಕ್ಷೆ ಮಾಡಲು ಸಹ ಅವರು ಯತ್ನಿಸಲಿಲ್ಲ.. ಶ್ರೀಮತಿ ತಾ-ಚಿಂಗ್ ಮಾತ್ರ ಮತ್ತೆ ಮತ್ತೆ ನೋಡಿದಳು. ಆದರೆ ಅವಳಿಗೂ ಅದು ತನ್ನ ಗಂಡನದೆಂಬ ಗುರುತು ಹತ್ತಲೇ ಇಲ್ಲ!

ಕೊನೆಯ ಬಾರಿಗೆ ತನ್ನ ಗಂಡನನ್ನು ಕಂಡಾಗಿನದಕ್ಕಿಂತ ತಲೆ ಬೋಳಿಸಿಕೊಂಡ, ರೋಗದಿಂದ ಜರ್ಜರಿತವಾಗಿದ್ದ ಮತ್ತು ಆರೇಳು ತಿಂಗಳು ನೆಲದಲ್ಲಿ ಹೂತಿದ್ದ ಆ ಶರೀರವು ಬೇರೆಯೇ ಆಗಿ ಕಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಆದರೆ ಇಷ್ಟಕ್ಕೇ ಆ ಪ್ರಕರಣ ಮುಗಿಯಲಿಲ್ಲ. ಒಮ್ಮೆ ಹೂತ ಶವವನ್ನು ಹೊರದೆಗೆದಂಥ ಅಪರಾಧವನ್ನು ಅವರು ಮಾಡಿದ್ದರು—ಅದೂ ಒಬ್ಬ ಭಿಕ್ಷುಣಿಯದು. ಚೀನದ ಆಗಿನ ಕಾನೂನು ಪ್ರಕಾರ ಇದಕ್ಕೆ ಶಿಕ್ಷೆ ಮರಣ ದಂಡನೆ!

ಎಲ್ಲರೂ ಆಗ ಕುವಾಯಿಯನ್ನು ಬೈಯುವವರೇ. ಅವನಾದರೂ ಏನು ಮಾಡಿಯಾನು? ''ಜಾಗ ಸ್ವಲ್ಪದರಲ್ಲಿ ತಪ್ಪಿರಬಹುದು. ತುಸು ಬದಿಯಲ್ಲಿ ಅಗಿದು ನೋಡೋಣ'' ಎಂದನು.

''ಸರ್ವಥಾ ಸಾಧ್ಯವಿಲ್ಲ'' ಎಂದು ಇತರರು ಒದರಿದರು. ಈಗಾಗಲೇ ಅವರು ಬೆಳಗಿನಿಂದ ಬಿಸಿಲೇರುವವರೆಗೆ ಒದ್ದಾಡಿದ್ದರಲ್ಲದೆ, ಇನ್ನೊಂದು ಜಾಗದಲ್ಲಿ ತಾ-ಚೆಂಗ್‌ನ ಶವ ಹೊರಡದೇ, ಬೇರೊಬ್ಬರ ದೇಹ ಕಂಡುಬಂದದ್ದಾದರೆ? ಇಮ್ಮಡಿ ಅಪರಾಧಕ್ಕೆ ಎಡೆಗೊಟ್ಟಂತೆ!

ಶ್ರೀಮತಿ ತಾ-ಚೆಂಗ್‌ಳ ದೊಡ್ಡಪ್ಪ ಹೇಳಿದ— ''ಈಗಾಗಲೇ ಒಂದು ಅಪರಾಧ ಮಾಡಿದ್ದೇವೆ. ಆದರೆ ಬುದ್ಧಿಪೂರ್ವಕ ಅಲ್ಲ. ಇಲ್ಲಿಯ ದಾಸಿಯ ಹೇಳಿಕೆಯಂತೆ ತಾನೇ ನಾವು ಹಾಗೆ ಮಾಡಿದ್ದು. ಈಗ ನಾವೇ ಹೋಗಿ ನಗರದ ನ್ಯಾಯಾಧೀಶರಿಗೆ ವರದಿ ಮಾಡೋಣ. ಅವರು ಆ ದಾಸಿಯನ್ನು ಹಿಡಿದು ಶಿಕ್ಷಿಸಿಯಾರು, ನಮ್ಮ ತನಕ ಬರಲಿಕ್ಕಿಲ್ಲ.''

ಈ ಸಲಹೆ ಎಲ್ಲರಿಗೂ ಒಪ್ಪಿತವಾಯ್ತು. ಆ ಚೈತ್ಯಾಲಯದ ಸ್ತ್ರೀಪರಿವಾರವನ್ನು ಕಾಣಬೇಕೆಂದು ಹೋದಾಗ ಒಬ್ಬಳಾದರೂ ಭಿಕ್ಷುಣಿ ಅಥವಾ ದಾಸಿಯು ಕಾಣಿಸಬಾರದೆ? ಹೊಸತೊಂದು ತೊಡಕು ಅದು! ಎಲ್ಲಿಗೆ ಹೋಗಿರಬೇಕು? ''ಓ! ನಿಷ್ಪಾಪದ ಅವರು ಸಂಘದ ಗುರಿಕಾರನಿಗೆ ವರದಿ ಮಾಡಲಿಕ್ಕೆಂದೇ ಹೋಗಿದ್ದಾರೆ.'' ಎಂದು ಒಬ್ಬನು ನುಡಿದ. ಉಳಿದವರ ಗಾಬರಿಗೆ ಮಿತಿಯುಂಟೆ? ಕೂಡಲೇ ಅವರೆಲ್ಲ ನಗರದತ್ತ ಓಡಿದರು.

ಎಲ್ಲರೂ ಅಲ್ಲ! ಒಬ್ಬ ಮಾತ್ರ ಅಲ್ಲಿಯೇ ಶವಪೆಟ್ಟಿಗೆಯ ಹತ್ತಿರ ಉಳಿದ. ಮಾವೊ ಎಂದವನ ಹೆಸರು. ಶವದ ಮೇಲೆ ಆಭರಣಗಳೇನಾದರೂ ಇದ್ದರೆ ಕದಿಯುವ ಆಸೆ ಅವನದು. ಅಂಥದೇನೂ ಕಾಣಲಿಲ್ಲವೆಂದು ತುಸು ನಿರಾಸೆ ಯಾಯಿತು. ಆದರೆ ಬಟ್ಟೆಗಳನ್ನು ಸರಿಸುವಾಗ ಮಾವೋನಿಗೆ ಕಂಡುಬಂತು—ಆ ಶವ ಭಿಕ್ಷುಣಿಯದಲ್ಲ, ಒಬ್ಬ ಪುರುಷನದು, ಭಿಕ್ಷುವಿನದು ಎಂದು! ನಗರಕ್ಕೆ ಧಾವಿಸಿದ.

ಇತ್ತ ಶ್ರೀಮತಿ ತಾ-ಚೆಂಗ್ ಹೌಹಾರಿದವಳಂತೆ ಕುಳಿತಿದ್ದಳು. ಸಂಜೆಯಾಗಿ ಬಿಟ್ಟಿದ್ದರಿಂದ ನ್ಯಾಯಾಧೀಶನೆಡೆಗೆ ಹೋಗಿರಲಿಲ್ಲ. ಬದಲಾಗಿ ನಡೆದ ಘಟನೆಯನ್ನೆಲ್ಲ ತಮತಮಗೆ ತಿಳಿದಂತೆ ವಿಶ್ಲೇಷಿಸುತ್ತ ಇದ್ದರು. ಊರವರು ಸಾಕಷ್ಟು ಸಂಖ್ಯೆಯಲ್ಲಿ ಸಂದಣಿಗೂಡಿದ್ದರು.

ಆ ವೇಳೆಗೆ ಮಾವೊ ಬಂದು, ''ಯಾರೂ ಗಾಬರಿಯಾಗಬೇಕಿಲ್ಲ! ಸತ್ತದ್ದು ಒಬ್ಬ ಭಿಕ್ಷು, ಸ್ತ್ರೀಯಲ್ಲ. ತಿಳಿಯಿತೆ? ಸಂಶಯವಿದ್ದರೆ ಬನ್ನಿ... ತೋರಿಸುವೆ'' ಎಂದು ಸಾರಿದ.

''ಆಗಿದ್ದರೆ, ನಮ್ಮನ್ನು ಕಠಿಣ ಶಿಕ್ಷೆಗೇನು ಗುರಿಪಡಿಸಲಿಕ್ಕಿಲ್ಲ'' ಎಂದು ಕೆಲವರು ಸಮಾಧಾನದ ಉಸಿರೆಳೆದರು.

ಆಗ ಒಬ್ಬ ಮುದುಕ ಭಿಕ್ಷು ಉಳಿದವರನ್ನು ಸರಿಸುತ್ತ ಮಾವೋನ ಬಳಿ ಬಂದ.

''ಏನಂದೆ? ಸತ್ತವನು ಒಬ್ಬ ಭಿಕ್ಷುವೆ? ಎಷ್ಟು ದಿನವಾಯಿತು, ತೀರಿಕೊಂಡು?''

''ಬಹಳ ಹಿಂದೆ ಏನಲ್ಲ. ಆರೇಳು ತಿಂಗಳಾಗಿರಬೇಕು?''

''ಹೇಗಿದ್ದಾನೆ-ನೋಡಲು.''

ಮಾವೊ ತುಸು ವಿವರಿಸಿದ.

''ಹಾಗಿದ್ದರೆ ಆತ ನನ್ನ ಶಿಷ್ಯ. ಅದರಲ್ಲಿ ಸಂಶಯವಿಲ್ಲ,'' ಎಂದು ಆ ದೀಕ್ಷಾ ಗುರು ಹೇಳಿದ.

''ಏನಂದಿರಿ?'' ಎಂದು ನೆರೆದವರು ಕೇಳಿದರು.

''ಹೌದು, ಅವನ ಹೆಸರು ಚೌ-ಫೇ ಎಂದು. ಆತ ೨೫-೨೬ ವರ್ಷದ ತರುಣ. ನನ್ನ ಚೈತ್ಯಾಲಯವನ್ನು ಬಿಟ್ಟು ಓಡಿಹೋಗಿ ೭-೮ ತಿಂಗಳಾಗಿವೆ. ಬಹಳ ಉಡಾಳ! ನನ್ನಿಂದ ಬೈಸಿಕೊಳ್ಳುತ್ತಿದ್ದ. ನನಗೇ ಒಮ್ಮೆ ಹೊಡೆಯ ಬಂದಿದ್ದ. ಆ ಮಾತಿರಲಿ. ಅದನ್ನೇ ತಪ್ಪು ತಿಳಿದು ಅವನ ತಂದೆ-ತಾಯಿಗಳು ಅವನನ್ನು ನಾನು ಕೊಲೆಗೈಸಿದೆನೆಂದು ನ್ಯಾಯಾಧೀಶರೆದುರು ದೂರು ಕೊಟ್ಟಿದ್ದಾರೆ. ಸೈಪ್ರಸ್ ಗಿಡದಡಿ ಹೂಳಲ್ಪಟ್ಟಿರುವ ಆ ಭಿಕ್ಷುವು ಚೌ-ಫೇ ಎಂದಾದರೆ, ನಾನು ಬಿಡುಗಡೆ ಆದಂತೆಯೇ. ತಮ್ಮಾ, ನಡಿ. ನನಗೆ ಆ ಜಾಗ ತೋರಿಸು. ತುಂಬಾ ಉಪಕಾರವಾಗುವುದು.''

ಹಣದ ಮೇಲಂತೂ ಏನೂ ಸಿಕ್ಕಲಿಲ್ಲ. ಈ ಮುದುಕನಿಂದಾದರೂ ಅಷ್ಟು ಗಿಟ್ಟಿಸಬಹುದೆಂದು ಮಾವೋನ ಯೋಚನೆ!

ಅವರಿಬ್ಬರೂ ಊರ ಹೊರಗೆ ಅದೇ ಬಂದಿದ್ದರು. ಅಷ್ಟರಲ್ಲಿ ಒಬ್ಬ ಮುದುಕನೂ ಜೊತೆಗೆ ಒಬ್ಬ ಧಾಂಡಿಗನೂ ಧಾವಿಸುತ್ತ ಅವರನ್ನು ಹಿಂಬಾಲಿಸಿದರು. ಹತ್ತಿರ ಬಂದವರೇ ಆ ಭಿಕ್ಷು-ಗುರುವಿಗೆ ಎರಡೇಟು ಬಿಗಿದರು! ಆ ಮುದುಕನು, ''ನನ್ನ ಮಗನ ಸುದ್ದಿ ಹತ್ತಿದೆಯಂತಲ್ಲ? ಏನು ಮಾಡಿದೆಯ ನೀನು, ಅವನಿಗೆ?'' ಎಂದು ಕೇಳಿದನು.

ಭಿಕ್ಷುವು ನರಳುತ್ತ ಹೇಳಿದ : ''ನಾನೇನೂ ಮಾಡಿಲ್ಲ. ನಿನ್ನ ಲಫಂಗ ಮಗ ಫೇ ಕುಂಗ್ ಚೈತ್ಯಾಲಯದ ಭಿಕ್ಷುಣಿಯರ ಬೆನ್ನು ಹಿಡಿದ! ಅವರು ಅವನನ್ನು ಕೊಂದು ಹಾಕಿರಬೇಕು. ನೀವೂ ನಮ್ಮ ಸಂಗಡ ನಡೆಯಿರಿ. ಒಮ್ಮೆ ಆ ಪ್ರಕರಣ ಮುಗಿದುಬಿಡಲಿ.''

ಅವರು ಪೂರ್ವ ವಿಹಾರದಿಂದ ಹಾಯ್ದು ಬರುವಾಗ ಒಂದು ಕ್ಷೀಣ ಸ್ವರ ಕೇಳಿಸಿತು. ಅದು ಆ ವಿಹಾರದ ಮುದಿ ಭಿಕ್ಷುಣಿಯದು. ಪಾರ್ಶ್ವವಾಯುವಿನ ನೆಲ ಹಿಡಿದು ಬಿಟ್ಟದ್ದ ಅವಳಿಗೆ ಬೆಳಗಿನಿಂದ ಯಾರೂ ಒಂದು ಹನಿ ನೀರು ಕೊಡುವವರೂ ದಿಕ್ಕಿರಲಿಲ್ಲ. ಪಾತ್ರೆಯನ್ನು ಬಡಿದು ಬಾಯಿಸನ್ನೇ ಮಾಡಿ ತನ್ನ ಅಳಲನ್ನು ಹೇಳಿಕೊಂಡಳು.

ಮೃತ್ಯು ಮುಖದಲ್ಲಿದ್ದ ಆ ಜೀವಿಯ ಕಡೆಗೆ ಅವರಾರೂ ಗಮನ ಕೊಡಲಿಲ್ಲ. ಸತ್ತು ಹೋದವನ ಮೇಲೆಯೇ ಅವರೆಲ್ಲರ ಲಕ್ಷ್ಯ.

ಶವಪೆಟ್ಟಿಗೆಯನ್ನು ತೆರೆದು ನೋಡಿದಾಗ ಪುತ್ರ ವಿರಹದ ಆ ಮುದುಕನಿಗೆ ಅದು ತನ್ನ ಮಗನನೇ ಎಂಬ ಭಾವನೆಯುಂಟಾಯಿತು. ದಳದಳನೇ ಕಣ್ಣೀರು ಸುರಿಸಿದನು. ಇತ್ತ ಆ ಭಿಕ್ಷುವು ಬೇಗನೆ ತನ್ನ ಬಿಡುಗಡೆಯಾಗುವುದೆಂದು ಸಂತೋಷಪಟ್ಟನು.

ಮರುದಿನ ಆ ಭಿಕ್ಷುಣಿಯರನ್ನು ಹಿಡಿತರಿಸಲಾಗದಿದ್ದಾಗ ನ್ಯಾಯಾಧೀಶರು ಫೇ ಕುಂಗ್ ಚೈತ್ಯಾಲಯದ ಗುರಿಕಾರನನ್ನು ಕರೆಯಿಸಿ, ''ನೀವು ನಿಮ್ಮ ಕೆಲಸ ಸರಿಯಾಗಿ ಮಾಡುತ್ತಿಲ್ಲ. ಭಿಕ್ಷು ಭಿಕ್ಷುಣಿಯರು ವಿಷಯಲಂಪಟರಾಗಿದ್ದಾರೆ. ಧರ್ಮ ಹಾಳಾಗುತ್ತಿದೆ. ನಿಮ್ಮ ಚೈತ್ಯಾಲಯದ ಭಿಕ್ಷುಣಿಯರು ವ್ಯಭಿಚಾರಕ್ಕೆ ನಿಂತದೇ ಅಲ್ಲದೆ ಒಬ್ಬನನ್ನು ಕೊಂದು ಹಾಕಿದ್ದಾರೆ. ನಿಮಗೆ ಇವನ ಸುಳಿವೇ ಹತ್ತಲಿಲ್ಲ. ಈಗ ಅವರು ಎಲ್ಲಿದ್ದಾರೆಂಬುದು ನಿಮಗೆ ತಿಳಿಯದಲ್ಲವೆ?'' ಎಂದೆಲ್ಲ ಒಳಿತಾಗಿ ಛೀಮಾರಿ ಹಾಕಿದರು.

ಇತ್ತ ಚಿಂಗ್-ಚೆನ್ ಮೊದಲಾದವರು ರಾತ್ರಿಯನ್ನು ಅಡವಿಯಲ್ಲೇ ಕಳೆದು ಹೇಗೊ ಅವನ ಪೂರ್ವ ಪರಿಚಯದ ಬೇರೊಂದು ಚೈತ್ಯಾಲಯಕ್ಕೆ ಬಂದರು. ಇಲ್ಲಿಯ ಒಡತಿಯ ಹೆಸರು ಲಿಯೋ ಯೆನ್. ಅವರ ವೃತ್ತಾಂತವನ್ನು ಆಕೆ ಕೇಳಿಕೊಂಡಳು. ಅವರ ದಾರುಣ ಸ್ಥಿತಿಗೆ ಸಹಾನುಭೂತಿಯನ್ನು ತೋರಿದಳು. ಬಂದವರಿಗೆ ಬೇಕಾದದ್ದು ಆಶ್ರಯ ತಾನೇ ಅದಕ್ಕೆ ಅವಳು, ''ನಿಮಗೆ ಯಾವ ರೀತಿಯ ಆಶ್ರಯವನ್ನು ಕೊಡಲು ಸಾಧ್ಯ ಎಂಬುದನ್ನು ಯೋಚಿಸಿದ್ದೇನೆ. ನೋಡಿ ನಿಮ್ಮ ಹಾಗೆ ನಮ್ಮದು ವಿಶಾಲ ಸ್ಥಳವಲ್ಲ. ಅಲ್ಲದೇ ಊರಿಗೆ ನಾವು ತೀರ ಹತ್ತಿರದಲ್ಲಿದ್ದೇವಾದ್ದರಿಂದ ಬರಹೋಗುವುವವರು ಬಹಳ ಜನ. ನಮಗೆ ಆಗದವರೂ ಇದ್ದಾರೆ. ನೀವಿಲ್ಲಿ ಇರುವುದು ಗೊತ್ತಾದರೆ ನಮ್ಮನ್ನೂ ಈ 'ಭಾನಗಡಿ'ಯಲ್ಲಿ ಸಿಕ್ಕಿಸಬಹುದು'' ಎಂದು ಹೇಳಿದಳು.

ಲಿಯೋ ಯೆನ್ ಏಕೆ ಹಾಗೆ ಹೇಳಿದಳು? ಅವಳು ನಡೆಸುತ್ತಿದ್ದ ಭಿಕ್ಷುಣಿಯ ಜೀವನವೂ ಇವರ ಮಾದರಿಯದೇ! ತನಗಿಂತ ಚಿಕ್ಕ ವಯಸ್ಸಿನ ಒಬ್ಬ ಭಿಕ್ಷುವಿನೊಡನೆ ಹಲವಾರು ತಿಂಗಳಿಂದ ಕೂಡಿಕೊಂಡು ಇದ್ದಳು. ಅವನಿಗೆ ಯಥಾಪ್ರಕಾರ ಭಿಕ್ಷುಣಿಯ ವೇಷ ತೊಡಿಸಲಾಗಿತ್ತು. ಸದ್ಯ ಅವನು ಅಲ್ಲಿಯೇ ಇದ್ದ. ಫೇ ಕುಂಗ್

ಚೈತ್ಯಾಲಯದವರು ತನ್ನೊಡನಿದ್ದರೆ, ಇವರ ಪ್ರಕರಣದ ಹೆಚ್ಚಿನ ತನಿಖೆ ನಡೆದದ್ದಾದರೆ ತನಗೂ ಶಿಕ್ಷೆ ಗುಟ್ಟು ಬಯಲಾಗಿ ಪಲಾಯಿತರು ಒಬ್ಬರೊಬ್ಬರ ಮುಖ ನೋಡಿಕೊಂಡರು. ಚಿಂಗ್ ಚೆನ್‌ಳ ಬುದ್ಧಿ ಓಡಿತು. ಹೆಣ್ಣು-ಹೊನ್ನು-ಮಣ್ಣುಗಳ ಮೋಹವೆಂಬಂತೆ ಅನೇಕ ಭಿಕ್ಷುಣಿಯರಿಗೆ ಗಂಡು-ಹೊನ್ನುಗಳ ಮೋಹವಿರುತ್ತದೆಂಬುದನ್ನು ಅರಿತಿದ್ದ ಆಕೆ ತನ್ನ ಕಿರುಪೆಟ್ಟಿಗೆಯಿಂದ, ಬೊಗಸೆ ತುಂಬ ತಾಲನಾಣ್ಯಗಳನ್ನು (ಚೀನೀ ನಾಣ್ಯ) ಹೊರ ತೆಗೆದಳು.

"ಅಕ್ಕಾ, ಸಧ್ಯ ನಮಗೆ ಆಶ್ರಯವಂತೂ ಬೇಕೇಬೇಕು. ನಾವೇನೂ ಇಲ್ಲಿ ಬಹಳ ದಿನ ಉಳಿಯುವವರಲ್ಲ. ದೂರ ದೇಶಕ್ಕೆ ಹೋಗುವ ಯೋಚನೆಯಲ್ಲಿದ್ದೇವೆ. ಅಲ್ಲಿಯವರೆಗೆ ಹೇಗಾದರೂ ಅನುವು ಮಾಡಿಕೊಡು. ಇಕೋ ಈ ನಾಣ್ಯಗಳನ್ನು ಓಡಿ. ನಗರದ ಕೊತವಾಲನಿಂದ ಏನಾದರೂ ತೊಂದರೆ ಆದರೆ ಇವು ಕೆಲಸ ಮಾಡುತ್ತವೆ."

ಕೊತವಾಲನಿಗೆ ಒಂದೆರಡು ನಾಣ್ಯ ಸಾಕಿತ್ತು. ಉಳಿದುದೆಲ್ಲ ತನಗೇ ಎಂಬುದೂ ಅವಳಿಗೆ ಗೊತ್ತು. ನಾಣ್ಯದ ಹೊಳಪು ಲಿಯೋ ಯೆನ್‌ಳ ಕಣ್ಣನ್ನು ಕೋರೈಸಿತು. ಆದರೂ, "ಬಹಳ ದಿನ" ಎಂಬ ಚಿಂಗ್-ಯೆನ್‌ಳ ಕಾಲಾವಧಿಯನ್ನು ಕಿರಿದುಗೊಳಿಸುತ್ತ, "ನೀವು ಎರಡು-ಮೂರು ದಿನ ಮಾತ್ರ ಇರುವುದಾದರೆ ಆಗಲಂತೆ" ಎಂದವಳು, "ಒಲ್ಲೆ ಒಲ್ಲೆ" ಎನ್ನುತ್ತ ಹಣ ಇಸಿದುಕೊಂಡಳು.

ಇತ್ತ ಒಬ್ಬ ಸೇವಕನು ಲಿಯೊ ಯೆನ್‌ಳ ಪ್ರಿಯಕರನಿಗೆ, ಅತಿಥಿಗಳ ಬಗ್ಗೆ ವರದಿ ಮಾಡಿದನು. ಒಬ್ಬರಲ್ಲ ಐವರು ಹೊಸ, ಚೆಲುವಿನ ಹೆಂಗಳೆಯರು! ಸರದಿಯ ಮೇಲೆ ಸುಖಿಸಬಂದೀತು? ಅವನಿಗೆ ತಡೆಯಲಾಗದೇ ಅವರಿದ್ದಲ್ಲಿಗೆ ಬಂದನು.

ಈ ಹೊಸ 'ಭಿಕ್ಷುಣಿ' ಯಾರೆಂದು ಕುಂಗ್-ಚೊ ವಿಚಾರಿಸಿದಾಗ, "ಇವಳನ್ನು ಈಚೆಗೆ ಇಲ್ಲಿ ಕಳಿಸಿಕೊಟ್ಟಿದ್ದಾರೆ. ಆದ್ದರಿಂದಲೇ ನೀವು ಅವಳನ್ನು ಈ ಹಿಂದೆ ನೋಡಿರಲಿಲ್ಲ" ಎಂದು ಲಿಯೊ ಯೆನ್ ಉತ್ತರಿಸಿದಳು. ಅವನ ನಿಜ ವೇಷ ಗೊತ್ತಾದೀತೆಂದು ಏನೊ ಕೆಲಸ ಹೇಳಿ ಅವನನ್ನು ಕಳಿಸಿಕೊಟ್ಟಳು.

ಶಾಕಾಹಾರದ ಸಾದಾ ಭೋಜನ ಸಿದ್ಧವಾಯಿತು. ಅತಿಥಿಗಳಿಗೆ ದುಗುಡದಿಂದಾಗಿ ಊಟ ರುಚಿಸಲಿಲ್ಲ. ಮತ್ತೆ ಮತ್ತೆ ಅದೇ ಮಾತು. ಅವರ ಸ್ತ್ರೀ ಸಹಜ ಚಿಕಿತ್ಸಕ ಬುದ್ಧಿಯಿಂದಾಗಿ ತಮ್ಮ ಚೈತ್ಯಾಲಯದಲ್ಲಿ ಏನು ನಡೆದಿದೆಯೆಂದು ತಿಳಿಯುವ ತವಕವನ್ನು ತೋರಿದರು. ಅವರ ಕೋರಿಕೆಯ ಮೇರೆಗೆ ಯೆನ್‌ಳು ತನ್ನ ಸೇವಕನನ್ನು ಊಟವಾದೊಡನೆ ಅಲ್ಲಿಗೆ ಕಳಿಸಿಕೊಟ್ಟಳು.

ಅವನೋ ಒಬ್ಬ ಹೆಡ್ಡ. ಫೇ ಕುಂಗ್ ಚೈತ್ಯಾಲಯಕ್ಕೆ ಬಂದಾಗ, ನ್ಯಾಯಾಧೀಶನ ಆಜ್ಞೆಯ ಮೇರೆಗೆ ಅದಕ್ಕೆ ಸೀಲ್ ಮಾಡಲು ಗುರಿಕಾರನು ಕೆಲ ಪೇದೆಗಳೊಡನೆ ಬಂದಿದ್ದನು. ಈ ಸೇವಕನು ಮೆಲ್ಲಗೆ ಒಳಗೆ ನುಸುಳಲು ಯತ್ನಿಸುತ್ತಿದ್ದಾಗ ಅವರು ಅವನನ್ನು ಹಿಡಿದರು. ತಮ್ಮ ವ್ಯಕ್ತಿ ಸಹಜವಾದ ಬಿರುಸು ದನಿಯಲ್ಲಿ, "ಯಾರೋ

ನೀನು? ಕಳ್ಳನ ಹಾಗೆ ಒಳಗೇಕೆ ಹೋಗುತ್ತಿದ್ದೀ? ಅವರೆಲ್ಲ ಎಲ್ಲಿದಾರೆಂದು ಹೇಳುವಿಯೊ? ಇಲ್ಲ, ಬಿಗಿಯೋಣವೊ?'' ಎಂದು ಗದರಿಸುತ್ತಲೇ ಅವನು ನಡುಗುತ್ತ ಬಾಯಿಬಿಟ್ಟನು. ತಮ್ಮ ವಿಹಾರದಲ್ಲಿ ಅವರು ಬಂದುದನ್ನು ವಿವರಿಸಿದನು.

ಪೇದೆಗಳ ಮುಖ್ಯಾಧಿಕಾರಿಯೂ ಗುರಿಕಾರನೂ ಇನ್ನಷ್ಟು ಜನರನ್ನು ತಮ್ಮ ಸಂಗಡ ಕರೆತಂದು ಆ ಸೇವಕನೊಂದಿಗೆ ಲಿಯೊ ಯೆನ್‌ಳ ಚೈತ್ಯಾಲಯಕ್ಕೆ ಬಂದರು. ಆಗ ಕತ್ತಲೆಯಾಗಿತ್ತು. ಬಾಗಿಲನ್ನು ಬಡಿದಾಗ, ಲಿಯೊ ತನ್ನ ಸೇವಕನೇ ಬಂದನೆಂದು ತೆರೆಯಹೋದಳು. ಸುದ್ದಿ ತಿಳಿಯುವ ಆತುರದಲ್ಲಿ ಫೇ ಕುಂಗ್‌ದ ಪರಿವಾರವೂ ಅಲ್ಲಿ ಬಂದಿತು.

ಬಾಗಿಲು ತೆರೆದೊಡನೆ ತಮ್ಮ ಮಡ್ಡ ಸೇವಕ ಕಂಡದ್ದೇನೊ ನಿಜ. ಅವನ ಹಿಂದೆ ಇನ್ನೂ ಹತ್ತು ಜನ! ''ಖಬರ್‌ದಾರ್!'' ಎಂದು ಪೇದೆಯವರು ಅವರ ಕೈಗಳನ್ನು ಹಗ್ಗದಿಂದ ಕಟ್ಟಿಹಾಕಿದರು. ಇಡೀ ಮನೆಯನ್ನು ಶೋಧ ಮಾಡಿದಾಗ, ಹೊಸ ಭಿಕ್ಷುಣಿಯು ಮಂಚದ ಬುಡದಲ್ಲಿ ಅಡಗಿದ್ದುದು ಕಂಡಿತು! ಅವಳನ್ನೂ—ಅಲ್ಲ ಅವನನ್ನೂ ಹಿಡಿದು ಹೊರತೆಗೆದರು.

ತಾನು ಆಶ್ರಯ ಕೊಟ್ಟಿದ್ದರ ತಪ್ಪು ಅಂಥ ದೊಡ್ಡದಲ್ಲ, ತಮ್ಮ ಬಿಡುಗಡೆ ಯಾಗುವುದೆಂದು ಲಿಯೊ ಭರವಸೆ ತಾಳಿದ್ದಳು. ಆಕೆಗೆ ಕೇವಲ ತನ್ನ ಪ್ರಿಯಕರನದೇ ಒಂದು ಯೋಚನೆಯಾಗಿದ್ದಿತು. ಆಗ ಪೇದೆಗಳನ್ನು ಕುರಿತು, ''ಫೇ ಕುಂಗ್ ಚೈತ್ಯಾಲಯದವರು ತಪ್ಪು ಮಾಡಿದ್ದರೆ, ಅವರನ್ನು ಕರೆದೊಯ್ಯಿರಿ. ನಮ್ಮನ್ನು ಬಿಟ್ಟು ಬಿಡಿರಿ. ನಿಮಗೆ 'ಉಡುಗೊರೆ' ಕೊಡುವೆ,'' ಎಂದಳು. ಗುರಿಕಾರ ಬೇರೆ ಇದ್ದನಲ್ಲ! ಹೀಗಾಗಿ ಲಂಚವು ಸುಲಭದಲ್ಲಿ ಕೆಲಸ ಮಾಡುವಂತಿರಲಿಲ್ಲ. ಆಗ ಲಿಯೊ ಹೇಳಿದಳು: ''ಆಗಲಿ, ನಾನು ನಿಮ್ಮೊಡನೆ ಬರುತ್ತೇನೆ. ಆದರೆ ಈ ಹೊಸ ಭಿಕ್ಷುಣಿಯನ್ನಾದರೂ ಬಿಟ್ಟುಬಿಡಿರಲ್ಲ? ಆಕೆ ಅಲ್ಲಿಗೆ ಬಂದು ೧೦-೧೫ ದಿನ ಗಳಾದುವು. ಅವಳು ನಿರಪರಾಧಿ. ಅವಳ ತಂದೆ-ತಾಯಿಗಳು ಏನೆಂದು ಕೊಂಡಾರು?'' ಎಂದು ಹೇಳಿ ತಾಲ ನಾಣ್ಯಗಳನ್ನು ಕೊಡಹೋದಳು. ಅದಕ್ಕೆ ಅವರು ಒಪ್ಪುವ ಸಂಭವವೂ ಇದ್ದಿತು. ಆದರೆ ನ್ಯಾಯಾಧೀಶರ ಮುಂದೆ ನಿನ್ನೆ ತಾನೆ ಮರ್ಯಾದೆ ಕಳೆದುಕೊಂಡಿದ್ದ ಫೇ ಕುಂಗ್ ಚೈತ್ಯಾಲಯದ ಗುರಿಕಾರ ಹೇಳಿದ: ''ಅದಾಗದು. ಅವಳು ನಿರಪರಾಧಿನಿ ಇದ್ದರೆ, ಮಂಚದ ಬುಡದಲ್ಲಿ ಅಡಗಿದುದೇಕೆ? ತನ್ನ ನಿರಾಪರಾಧಿತ್ವವನ್ನು ಬೇಕಿದ್ದರೆ ನ್ಯಾಯಾಧೀಶರೆದುರು ಹೇಳಿ ಬಿಡುಗಡೆ ಹೊಂದಲಿ'' ಎಂದು ನುಡಿದನು. ಅಂತೂ ಅವರೆಲ್ಲರನ್ನೂ ಬಂಧಿಸಿ, ನಗರಕ್ಕೆ ತರಲಾಯಿತು.

ಮರುದಿನ ನ್ಯಾಯಾಸ್ಥಾನದಲ್ಲಿ ಜನ ಕಿಕ್ಕಿರಿದು ತುಂಬಿತ್ತು. ಸಂಬಂಧ ಪಟ್ಟ ಎಲ್ಲರನ್ನೂ ಕರೆಯಿಸಲಾಗಿದ್ದಿತು. ಆ ಗದ್ದಲದಲ್ಲಿಯೇ ಲಿಯೊ ತನ್ನ ಪ್ರಿಯಕರನ ಕಿವಿಯಲ್ಲಿ ಉಸುರಿದಳು: ''ನೀನೇನೂ ಯೋಚಿಸುವುದು ಬೇಡ. ಅವರು ಏನು

ಕೇಳಿದರೂ 'ನನಗೆ ಗೊತ್ತಿಲ್ಲ; ನಾನು ಹೊಸಬಳು' —ಎಂದು ಹೇಳು. ಹೇಗಾದರೂ ಮಾಡಿ, ನಾನು ಸಹ ಇದರಿಂದ ಪಾರಾಗುವೆ.''

ಆ ಭಿಕ್ಷು(ಣಿ) ಇನ್ನಾರೂ ಅಲ್ಲ, ಚೌ-ಫೇ! ಅವನಿಗೆ ಆಗ ತನ್ನ ತಂದೆ-ತಾಯಿಗಳೂ ದೀಕ್ಷಾ ಗುರುವೂ ಏಕೆ ಬಂದಿದ್ದಾರೆ, ವಾದಿಯ ಪಕ್ಷದವರೊಡನೆ ಅದೇಕೆ ಜೊತೆಗೂಡಿದ್ದಾರೆ ಎಂಬ ಚಿಂತೆ!

ನ್ಯಾಯಾಲಯದ ಔಪಚಾರಿಕ ಪ್ರಾರಂಭದ ಕಲಾಪಗಳೆಲ್ಲ ಮುಗಿಯುತ್ತ ಬಂದಾಗ, ಅವನ ತಾಯಿಯು ಸಭಾ ಮರ್ಯಾದೆಯನ್ನು ಗಣನೆಗೆ ತಾರದೇ, ತನ್ನೆದುರಿಗೆ ಅಪಾದಿತರಾಗಿ ನಿಂತಿದ್ದ ಭಿಕ್ಷುಣಿಯರನ್ನು ಕುರಿತು, ''ಹುಚ್ಚು ಮುಂಡೆಯೇ, ಜಾರತನಕ್ಕೆ ಬಿದ್ದು ನನ್ನ ಮಗನನ್ನು ಕೊಂದು ಹಾಕಿದಿರಿ!'' ಎಂದು ಬಿಕ್ಕಿಸತೊಡಗಿದಳು.

''ಅರೇ, ನನ್ನ ಕೊಲೆಯಾಗಿದೆಯೆಂದು ನನ್ನ ತಾಯಿ ತಿಳಿದದ್ದೇಕೆ? ನಾನೋ ಗಟ್ಟಿಮುಟ್ಟಾಗಿ ಜೀವಂತವಿದ್ದೇನೆ,'' ಎಂದು ಚೌ-ಫೇ ಚಿಂತಿಸಿದ ಇತ್ತ ಚಿಂಗ್-ಚೆನ್ ಮತ್ತು ಕುಂಗ್-ಚೊ ಇವರು ಆ ಮುದುಕಿಯ ಸತ್ತು ಹೋದ ತಾ-ಚಿಂಗ್‌ನ ತಾಯಿ ಇರಬೇಕು ಎಂದು ತಿಳಿದರು!

ಆಗ ನ್ಯಾಯಾಧೀಶನು ಆ ಮುದುಕಿಯನ್ನು ಜಬರಿಸಿದನು. ಮುಖ್ಯ ತಪ್ಪಿತಸ್ಥರಾದ ಚಿಂಗ್-ಚೆನ್, ಕುಂಗ್-ಚೊ ಇವರನ್ನು ಮುಂದೆ ಕರೆದು, ''ನೀವು ಓರ್ವ ಭಿಕ್ಷುವಿನೊಡನೆ ಅನೈತಿಕ ಸಂಬಂಧ ಬೆಳೆಸಿದಿರಲ್ಲದೆ ಭಿಕ್ಷುಹತ್ಯಾ ಪಾತಕವನ್ನು ಮಾಡಿದ್ದೀರಿ—ಎಂಬ ಆಪಾದನೆ ನಿಮ್ಮ ಮೇಲಿದೆ. ನಿಜ ಸಂಗತಿಯೆಲ್ಲವನ್ನು ಹೇಳಿರಿ. ಇಲ್ಲವಾದರೆ ಚಿತ್ರಹಿಂಸೆಗೆ ಗುರಿಪಡಿಸಿಯೇನು!'' ಎಂದು ಅಬ್ಬರಿಸಿದನು.

ಆ ಭಿಕ್ಷುಣಿಯರಿಬ್ಬರೂ ಥರಥರ ನಡುಗತೊಡಗಿದರು. ಅವರ ಬುದ್ಧಿಗೆ ಏನೂ ತೋಚದಂತಾಗಿತ್ತು. ದಿಗ್ಭ್ರಮೆಗೊಂಡ ಅವರ ಬಾಯಿಯಿಂದ ಮಾತೇ ಹೊರಡಲೊಲ್ಲದು. ನ್ಯಾಯಾಧೀಶರು ಮೂರು ಬಾರಿ ಕೂಗಿದರು. ''ಭಿಕ್ಷುವಿನ ಕೊಲೆಗೈದರೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಲಾಗುವುದು. ನೆನಪಿರಲಿ'' ಎಂದಾಗ ಕುಂಗ್ ಚೊ ತೊದಲುತ್ತ, ''ನಾವು ಕೊಲ್ಲಲಿಲ್ಲ. ಅವನೇ ಸತ್ತದ್ದು'' ಎಂದು ಹೇಳಿದಳು.

''ಇಷ್ಟಕ್ಕೂ ಅವನು ಭಿಕ್ಷುವಾಗಿರಲಿಲ್ಲ,'' ಎಂದು ಚಿಂಗ್-ಚೆನ್ ಒಣಗಿದ ಗಂಟಲಿನಿಂದ ಒರಲಿದಳು.

''ಸುಳ್ಳು ಹೇಳುತ್ತಿದ್ದೀರಿ! ಭಿಕ್ಷು ಚೌ-ಫೇನನ್ನು ಕೊಂದು ನಿಮ್ಮ ಹಿತ್ತಲಲ್ಲಿ ಹೂಳಿದ್ದೀರಿ. ಮತ್ತೆ ಇಲ್ಲವೆಂದು ವಾದಿಸುವ ನಿಮ್ಮ ಧೈರ್ಯ ಎಷ್ಟು! ಎಲೊ! ಇವರನ್ನು ಕಂಬಕ್ಕೆ ಬಿಗಿದು, ಸಲಾಕೆಯ ಶಿಕ್ಷೆ ಕೊಡಿರೊ!''

ಕ್ಷಣದಲ್ಲಿ ಅವರನ್ನು ಕಂಬಕ್ಕೆ ಕಟ್ಟಲಾಯಿತು. ನಿಗಿನಿಗಿ ಕಾಯ್ದು ಕೆಂಪಗಾದ ಸಲಾಕೆಯು ಕಣ್ಣಿಗೆ ಬಿದ್ದೊಡನೆಯೇ ಅವರ ಮೈಯಲ್ಲಿ ಮಿಂಚು ಛೇದಿಸಿದಂತಾಯ್ತು.

ಕಣ್ಣಿಗೆ ಕತ್ತಲೆ ಬಂದಿತು. ಎಷ್ಟೆಂದರೂ ಆ ಕೋಮಲೆಯರು ದೈಹಿಕ ವೇದನೆಯನ್ನು ಎಂತು ಸಹಿಸಿಯಾರು? ''ನಿಮ್ಮ ಕಾಲು ಬೀಳುವೆವು ಹಿಂಸಿಸಬೇಡಿರಿ ಹೇಳುತ್ತೇವೆ. ನಿಜ ಹೇಳ್ತೇವೆ,'' ಎಂದರು.

ಆಮೇಲೆ ಅವರು ತಾ-ಚಿಂಗ್ ತಮ್ಮಲ್ಲಿ ಬಂದ ದಿನದಿಂದ ಹಿಂದಿನ ದಿನದವರೆಗಿನ ಸಾದ್ಯಂತ ವೃತ್ತಾಂತವನ್ನು ನಿವೇದಿಸಿದರು. ಚಿಂಗ್-ಚೆನ್, ''ತಾ-ಚಿಂಗ್‌ನನ್ನು ನಾವು ಕೊಲ್ಲಲಿಲ್ಲ. ಅವನನ್ನು ಬಚ್ಚಿಟ್ಟಿದ್ದು ನಿಜ. ಸತ್ತ ಮೇಲೆ ಹುಗಿದದ್ದು ಹೌದು. ಆದರೆ ನಾವು ಭಿಕ್ಷು ಚೌ-ಫೇನ ಬಗ್ಗೆ ಏನೂ ಅರಿಯೆವು. ಬೋಧಿಸತ್ವನ ಆಣೆಯಾಗಿ ಹೇಳುತ್ತೇನೆ. ನೀವು ನಮ್ಮನ್ನು ಬೇಕಾದಷ್ಟು ಚಿತ್ರಹಿಂಸೆ ಮಾಡಿದರೂ ಸರಿ. ನಮಗೆ ನಿಜಕ್ಕೂ ಗೊತ್ತಿಲ್ಲ'' ಎಂದಳು. ಲಿಯೋಳ ಬದಿಯಲ್ಲಿಯೇ ಆತ ಭಿಕ್ಷುಣಿಯ ವೇಷದಲ್ಲಿ ನಿಂತಿದ್ದುದು ಗೊತ್ತಿಲ್ಲದೇನೇ!

ನ್ಯಾಯಾಧೀಶರು ಆಮೇಲೆ ಲಿಯೋ-ಯೆನ್‌ಳನ್ನೂ, ಅವಳ ಸಂಗಾತಿಯನ್ನೂ ಮುಂದೆ ಕರೆದರು. ಅವಳು ಆಪಾದಿತರಿಗೆ ಆಶ್ರಯ ಕೊಟ್ಟದ್ದು ಬಿಟ್ಟರೆ, ತಾ-ಚಿಂಗ್ ಪ್ರಕರಣದಲ್ಲಿ ಬೇರಾವ ಅಂಗವೂ ಇರಲಿಲ್ಲ. ಅದೂ ತನ್ನ ಸ್ವಧರ್ಮಿಯರಿಗೆ ನೆರವಾಗಬೇಕೆಂದು ಸದ್ಬುದ್ಧಿಯಿಂದ ಮಾಡಿದುದೆಂಬ ಅವಳ ವಾದವು ನ್ಯಾಯಾಧೀಶರಿಗೆ ಸಮಂಜಸವೆಂದು ತೋರಿತು.

ಅದರ ತೀರ್ಪು ಅವಳೆಣಿಸಿದಂತೆಯೇ ಆಯಿತು. ನ್ಯಾಯಾಧೀಶರು ಅವರಿಬ್ಬರನ್ನೂ ಕ್ಷಮಿಸಿಬಿಟ್ಟಾಗ ಆ ಪ್ರಣಯಿಗಳು ತಮ್ಮ ಗುಟ್ಟು ಬಯಲಾಗಲಿಲ್ಲವೆಂದು ಒಳಗೊಳಗೆ ಓಗ್ಗಿದರು. ಕುಂಗ್-ಚೊ ಮತ್ತು ಚಿಂಗ್-ಚೆನ್‌ರಿಗೆ ಎಲ್ಲರೂ ಊಹಿಸಿದಂತೆ ಮರಣದಂಡನೆ ವಿಧಿಸಲಾಯಿತು. ಅಷ್ಟೇ ಅಲ್ಲ, ಸಾರ್ವಜನಿಕರಿಗೆ ಅವರ ಮಹಾಪಾತಕದ ಪರಿಣಾಮ ಗೊತ್ತಾಗುವ ದೃಷ್ಟಿಯಿಂದ, ಕಂಬಕ್ಕೆ ಕಟ್ಟಿ ಹಾಕಲ್ಪಟ್ಟಿದ್ದ ಅವರಿಬ್ಬರಿಗೂ ತಲಾ ಐವತ್ತರಂತೆ ಛಟಿಗ ಶಿಕ್ಷೆ ವಿಧಿಸಲಾಯಿತು! ಆಮೇಲೆ ಬಾಸುಂಡೆಗಳೆದ್ದವು. ಅವರ ಕುಯ್ಯೊ, ಮರ್‍ರ್ಯೋ ಒದರಾಟವನ್ನು ದಾದು ಮಾಡುವವರಾರೂ ಇರಲಿಲ್ಲ. ಇತ್ತ ಅವರ ಮೂವರು ಸೇವಕಿಯರಿಗೆ ತಲಾ ಇಪ್ಪತ್ತರಂತೆ ಚಿಮ್ಮಟಿಗೆಯ ಏಟು ಸಂದಿತು. ಅದರಂತೆ ದ್ವಾರಪಾಲಕರಿಗೆ ಕೂಡ. ಕುಂಗ್-ಚೊ, ಚಿಂಗ್ ಚೆನ್‌ರನ್ನು ಮರುದಿನ ಗಲ್ಲಿಗೇರಿಸಲೆಂದು ಸೆರೆಮನೆಗೆ ಕರೆದೊಯ್ದರು.

ಸಭೆ ಚದುರಿತು. ಜನಜಂಗುಳಿ ಬೀದಿಗೆ ಬಂತು. ಲಿಯೊ ಯೆನ್ ಹಾಗೂ ಚೌ-ಫೇ ಜೊತೆಯಾಗಿಯೇ ಇತರರೊಡನೆ ಸೇರಿಕೊಂಡು ಲಗುಬಗೆಯಿಂದ ಪಾರಾಗಬೇಕೆಂದು ಯೋಚಿಸುತ್ತ ಸಾಗಿದ್ದರು. ಆಗಲೂ ತನ್ನನ್ನು ಯಾರಾದರೂ ನೋಡಿಯಾರೆಂದು ಚೌ-ಫೇ ತಲೆತಗ್ಗಿಸಿ, ಆಗೀಗ ತನ್ನ ಪ್ರಣಯಿನಿಯ ಕಡೆ ನೋಡುತ್ತ ಸಾಗಿದ್ದ.

ಇತ್ತ ಅವನ ಮುದಿ ತಂದೆ-ತಾಯಿಗಳಿಗೆ ಚೌ-ಫೇ ಏನಾದನೆಂಬ ಸಮಸ್ಯೆ ಹಾಗೇ ಉಳಿಯಿತಲ್ಲ? ಹೆಚ್ಚಿನ ಪುರಾವೆ ತಂದ ಮೇಲೆಯೇ ತನ್ನ ಮಗನ ಗುರುವಿನ ಮೇಲೆ ಕ್ರಮಕೈಕೊಳ್ಳಬಹುದೆಂದು ನ್ಯಾಯಾಧೀಶರು ಹೇಳಿದ್ದರು. ಇದೊಂದು ಪುರಾವೆಯ ಆಸೆ ಇದ್ದಿತು. ಅದೂ ತಪ್ಪಿಹೋಯಿತು. ಈಗಂತೂ ಆ ಮುದುಕಿಗೆ ಮಗನ ನೆನಪನ್ನು ಮರಳಿ ಕೆದಕಿದಂತಾಗಿ, ಒಂದೇ ಸಮನೆ ಹಾಡಿಕೊಂಡು ಒರಲತೊಡಗಿದಳು. ಮುದುಕನ ದುಃಖಾಗ್ನಿಗೆ ಅದು ತುಪ್ಪ ಹೊಯ್ದಂತಾಯಿತು. ಕೂಡಲೇ ತನ್ನ ಮಗನ ಗುರುವನ್ನು ಅಮುಕಿ ಹಿಡಿದು ಬಡಿಯತೊಡಗಿದನು. ಈ ಮೊದಲು ಅವನ ಸಂಗಡ ಇದ್ದ ಧಾಂಡಿಗನೂ ಜೊತೆಗೂಡಿದನು.

ಆದರೆ ಆ ಜನಸಂದಣಿಯಲ್ಲಿ ಆ ಗುರುವಿನ ಪರವಾಗಿಯೂ ಕೆಲ ಜನ ಇದ್ದರು! ಅವರು ಸುಮ್ಮನಿರದೇ ಚೌ-ಫೇನ ತಂದೆಯನ್ನು ದೂಡಿ ಅವನಿಗೆ ಮುಷ್ಟಿ ಪ್ರಹಾರ ಮಾಡಿದರು. ಅವನನ್ನು ಉಳಿಸಹೋದ ಆ ಮುದುಕಿಗೂ ಪೆಟ್ಟು ಬಿದ್ದವು. ತಾಯಿಯ ಆಕ್ರೋಶದ ಹಿನ್ನೆಲೆಯಲ್ಲಿ ತನ್ನ ತಂದೆ ನುಗ್ಗಾಗಿ ನೆಲಕ್ಕುರುಳಿದುದನ್ನು ನೋಡಿ ಚೌ ಫೇಗೆ ತಡೆಯಲಾಗಲಿಲ್ಲ. ಕೂಡಲೇ ಅವನೂ ಆ ಜಗಳದಲ್ಲಿ ಭಾಗವಹಿಸಿ, ಎದುರಾಳಿಗಳೊಡನೆ ಹಣಾಹಣಿಯಾಗಿ ಕಾದಾಡಿದ!

ಯಾವುದು ಇದುವರೆಗೆ ಗುಟ್ಟಾಗಿದ್ದಿತೊ ಅದು ಬಯಲಾಗಿ ಬಿಟ್ಟಿತು. ಆತ ಪುರುಷ ಎಂಬುದು ತಿಳಿದು ಬಂದಾಗ, ಜನವೆಲ್ಲ ಖೊಳ್ಳೆಂದು ನಗತೊಡಗಿತು. ಲಿಯೊ ಯೆನ್ ಹಣೆಯನ್ನು ಜಜ್ಜಿಕೊಂಡಳು.

ಅವನ ದೀಕ್ಷಾಗುರು, "ಎಲೈ ಭಂಡ ಶಿರೋಮಣಿಯೇ, ನೀನು ಸ್ತ್ರೀ ವೇಷ ಧರಿಸಿ ಮಜ ಮಾಡುತ್ತ ಕೂತೆ, ನನ್ನನ್ನು ಮಾತ್ರ ಅನೇಕ ಸಂಕಟಗಳಿಗೆ ಗುರಿಪಡಿಸಿದೆ ಯಲ್ಲವೇ? ನಡೆ, ನಿನ್ನನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸುವೆ," ಎಂಬುದಾಗಿ ಹೇಳುತ್ತ ಅವನನ್ನು ಅಮುಕಿ ಹಿಡಿದನು. ಪೇದೆಗಳ ಸಹಾಯದಿಂದ ಲಿಯೊ ಯೆನ್‌ಳನ್ನೂ ಬಂಧಿಸಲಾಯಿತು.

ಕೇವಲ ಎರಡು ತಾಸಿನ ಹಿಂದೆ ಹೊರಟುಹೋಗಿದ್ದ ಈ ಜನ ಮತ್ತೇಕೆ ನ್ಯಾಯಾಸ್ಥಾನಕ್ಕೆ ಬಂದರೆಂಬುದು ನ್ಯಾಯಾಧೀಶರಿಗೆ ತಿಳಿಯಲಿಲ್ಲ. ಮೇಲಾಗಿ ಆ ದೀಕ್ಷಾ ಗುರುವು ಭಿಕ್ಷುಣಿಯನ್ನು ತಬ್ಬಿಕೊಂಡು ಬರುತ್ತಿರುವ ದೃಶ್ಯ ಮೋಜಿನದಾಗಿ ಕಂಡಿತು.

ಇನ್ನು ಬಚ್ಚಿಡುವುದು ಸಾಧ್ಯವಿಲ್ಲವೆಂದು ಗೊತ್ತಾದ ಚೌ-ಫೇ ನಿಜ ಸಂಗತಿ ಯನ್ನು ಹೇಳಿದನು. ಅವನಿಗೂ, ಅವನ ಪ್ರಿಯತಮೆಗೂ ೪೦ ಛಟಿಗೆ ಏಟುಗಳು ಸಂದವು. ಆಮೇಲೆ, "ಅವನನ್ನು ಸೀಮೆ ಬಿಟ್ಟು ಹೊರಗೆ ಹಾಕಬೇಕು; ಲಿಯೊ ಯೆನ್‌ಳನ್ನು ವೇಶ್ಯಾಗೃಹಕ್ಕೆ ಮಾರಾಟಮಾಡಬೇಕು," ಎಂದು ನ್ಯಾಯಾಧೀಶರು ತೀರ್ಪು ಕೊಟ್ಟರು!

ಶ್ರೀಮತಿ ತಾ-ಚಿಂಗ್ ಮರುದಿನ ತನ್ನ ಪತಿಯ ಶವವನ್ನು ಮರಳಿ ತರಿಸಿ ವಿಧ್ಯುಕ್ತವಾಗಿ ಸಂಸ್ಕಾರ ಮಾಡಿದಳು. ತಾನು ಸಂಪೂರ್ಣ ವಿರಕ್ತಿಯನ್ನು ತಾಳಿದ್ದರೂ ಮಗನಿಗೆ ಉತ್ತಮ ಶಿಕ್ಷಣ ಕೊಡುವ ವಿಷಯದಲ್ಲಿ ಹೆಚ್ಚು ಗಮನ ಕೊಡ ತೊಡಗಿದಳು. ಮುಂದೆ ಅವನು ತನ್ನ ತಂದೆಯ ಹಾದಿಯನ್ನೇ ಹಿಡಿಯ ಲಾಗದಲ್ಲವೆ!

(ಹಳೆಯ ಚೀನೀ ಕಥಾನಕವೊಂದರ ರೂಪಾಂತರ)

★



ಡಾ. ಶ್ರೀನಿವಾಸ ಹಾವನೂರರು (೧೯೨೯-೨೦೧೦) ಗಂಭೀರ ನಿಲುಮೆಯ ಸಂಶೋಧಕರಲ್ಲದೆ ಅಪ್ರತಿಮ ವಿದ್ವಾಂಸರಾದವರು. ಇವರು ಕುಚೋದ್ಯದ ಕಥೆಗಳನ್ನು ಹೇಗೆ ಬರೆದರು? ಈ ಪ್ರಶ್ನೆ ಸರಿಯೇ.

ವಾಸ್ತವವಾಗಿ ಅವರ ಬರವಣಿಗೆ ಆರಂಭವಾದುದೇ ಲಲಿತ ಸಾಹಿತ್ಯದೊಂದಿಗೆ. ತಾರುಣ್ಯದಲ್ಲಿ ಅವರು ಬರೆದ 'ಅವರು ಮತ್ತು ದೇವಕ್ಕ' (೧೯೪೮) ಮತ್ತು 'ಕಾಗೆಗೆ ಹೇಳಿದ ಕಥೆ' (೧೯೫೧) ಎರಡೂ ಅವರ ಕಥನ ಕಲೆಗೆ ಕನ್ನಡಿ ಹಿಡಿಯುತ್ತವೆ. ಮುಂದೆ ಅವರ ಗಮನ ವಿಶ್ವ ಸಾಹಿತ್ಯದ ವಿವಿಧ ಮುಖಗಳನ್ನು ಓದುಗರಿಗೆ ಪರಿಚಯ ಮಾಡುವತ್ತ ಹರಿಯಿತು. ಅಂತೆಯೇ ಅವರು ಇಂಗ್ಲಿಷ್, ರಶಿಯನ್, ಜರ್ಮನ್, ಚೀನಿ ಇತ್ಯಾದಿ ಸಾಹಿತ್ಯದ ಕಥಾನಕಗಳನ್ನು ಕನ್ನಡಕ್ಕೆ ರೂಪಾಂತರ ಮಾಡಿದರು.

ಪ್ರಸ್ತುತ ಸಂಕಲನದಲ್ಲಿ ಇಂಥ ಏಳು ಕಥೆಗಳನ್ನು ನೋಡಬಹುದಾಗಿದೆ. ಇವುಗಳ ಮೂಲ ವಿದೇಶಿಯಾದರೂ ನಿರೂಪಣೆ ಅಪ್ಪಟ ಸ್ವದೇಶಿಯಾಗಿದೆ. ಇವುಗಳಲ್ಲಿ ಕಾಣುವ ಸಮಾನ ಗುಣಧರ್ಮವೆಂದರೆ ವ್ಯಂಗ್ಯ. ಮನಸ್ಸೆಂಬುದೇ ಮಾಯೆ. ವಿಧಿಯೆಂಬುದೂ ಮಾಯೆ. ಇವೆರಡರ ವ್ಯಂಗ್ಯ ನಾಟಕವನ್ನು ಇಲ್ಲಿ ನೋಡಬಹುದು.

ಹೇಮಂತ ಸಾಹಿತ್ಯ
ರಾಜಾಜಿನಗರ, ಬೆಂಗಳೂರು-10